ಪಾರ್ಧಿ ಬುಡಕಟ್ಟು : ಒಂದು ಮಾನವಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಲಕ್ಷ್ಮಿಪೃಥ್ವಿರಾಜ್ ಸುದರ್ಶನ್

ಮಾರ್ಗದರ್ಶಕರು

ಡಾ. ಕೆ.ಎಂ. ಮೈತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಡಿಸೆಂಬರ್ ೨೦೦೩

ಪಾರ್ಧಿ ಬುಡಕಟ್ಟು : ಒಂದು ಮಾನವಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್ ಡಿ ಮಹಾಪ್ರಬಂಧ

ಸಂಶೋಧಕ

ಲಕ್ಕಿ ಪೃಥ್ವಿರಾಜ್ ಸುದರ್ಶನ್

ಮಾರ್ಗದರ್ಶಕರು

ಡಾ ಕೆ ಎಂ ಮೈತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಡಿಸೆಂಬರ್ ೨೦೦೩

ದೃಢೀಕರಣ ಪತ್ರ

ಪಾರ್ಧಿ ಬುಡಕಟ್ಟು : ಒಂದು ಮಾನವಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ನಿಬಂಧವನ್ನು ಶ್ರೀ ಲಕ್ಕಿ ಪೃಥ್ವಿರಾಜ್ ಸುದರ್ಶನ್ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

5.10.04

ದಿನಾಂಕ : 5.10.2004
ಸ್ಥಳ : ವಿದ್ಯಾರಣ್ಯ

(ಡಾ ಕೆ ಎಂ ಮೈತ್ರಿ)
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಪಾರ್ಧಿ ಬುಡಕಟ್ಟು : ಒಂದು ಮಾನವಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೩-೦೪ನೇ ಶೈಕ್ಷಣಿಕ ಸಾಲಿನಲ್ಲಿ ಡಾ ಕೆ ಎಂ ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಲಕ್ಕಿ ಪೃಥ್ವಿರಾಜ್ ಸುದರ್ಶನ್)
ಪಿಎಚ್ ಡಿ ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

<u>ಪರಿವಿಡಿ</u>

- ದೃಢೀಕರಣ ಪತ್ರ i
- ಪ್ರಮಾಣ ಪತ್ರ ii

೧. ವಿಷಯ ಪ್ರವೇಶ ೦೧

೨. ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಬುಡಕಟ್ಟಿನ ಪರಿಚಯ ೨೧

೩. ಪಾರ್ಧಿಯರ ಸಂಸ್ಕೃತಿ ಮತ್ತು ಆಚರಣೆಗಳು ೪೦

೪. ಪಾರ್ಧಿಯರ ಭಾಷೆ ಮತ್ತು ಸಾಹಿತ್ಯ ೭೯

೫. ಪಾರ್ಧಿಯರ ಜೀವನ ಮತ್ತು ಕಸುಬುಗಳು ೧೦೪

೬. ಪಾರ್ಧಿಯರ ಶಿಕ್ಷಣ, ಉದ್ಯೋಗ ಮತ್ತು ಕ್ರೀಡೆಗಳು ೧೪೦

೭. ಇಂದಿನ ದಿನಗಳಲ್ಲಿ ಪಾರ್ಧಿಯರು ೧೫೮

೮. ಸಮಾರೋಪ ೧೬೭

ಅನುಬಂಧಗಳು ೧೭೩

೧. ಕರ್ನಾಟಕ ರಾಜ್ಯದಲ್ಲಿಯ ಪಾರ್ಧಿ ಬುಡಕಟ್ಟಿನ ಸಮೀಕ್ಷಾ ನೆಲೆಗಳು ೧೭೪

೨. ಸರ್ಕಾರದ ಸುತ್ತೋಲೆ ೧೭೫

೩. ಕರ್ನಾಟಕದ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿ ೧೭೭

೪. ಪರಮಾರ್ಶನ ಗ್ರಂಥಗಳು ೧೭೯

೫. ಪ್ರಶ್ನಾವಳಿ ೧೮೩

೬. ವಕ್ತೃಗಳು ಪಟ್ಟಿ ೧೮೪

ಪರಿಶಿಷ್ಟಗಳು ೧೯೪

೧. ಅಂಕಿ-ಅಂಶಗಳ ಪಟ್ಟಿ ೧೯೫

೨. ಛಾಯಾಚಿತ್ರಗಳು ೨೪೯

ಪರಿಶಿಷ್ಟಗಳು

I : ಭೂಪಟ

೧. ಕರ್ನಾಟಕ ರಾಜ್ಯದಲ್ಲಿಯ ಪಾರ್ಧಿಬುಡಕಟ್ಟಿನ ನೆಲೆಗಳು ೧೭೪

II : ಕೋಷ್ಟಕಗಳು

೧. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಕಸುಬುಗಳ ಅಂಕಿ-ಅಂಶಗಳ ಪಟ್ಟಿ ೧೨೬

೨. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಭೂಹಿಡುವಳಿ ಅಂಕಿ-ಅಂಶಗಳ ಪಟ್ಟಿ ೧೨೯

೩. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಶೈಕ್ಷಣಿಕ ಸ್ಥಾನಮಾನ ೧೪೩

೪. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಶೈಕ್ಷಣಿಕ ಸ್ಥಾನಮಾನ ೧೪೪

III : ಅಂಕಿಅಂಶಗಳು

೧.೧ ಬಾಗಲಕೋಟೆ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೧೯೫

೧.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೧೯೬

೧.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೧೯೭

೧.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೧೯೮

೧.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೧೯೯

೧.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೦೦

೨.೧ ಬಳ್ಳಾರಿ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೦೧

೨.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೦೨

೨.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೦೩

೨.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೦೪

೨.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೦೫

೨.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೦೬

೩.೧ ಬೀದರ್ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೦೭

೩.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೦೮

೩.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೦೯

೩.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೧೦

೩.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೧೧

೩.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೧೨

೪.೧ ಬಿಜಾಪುರ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೧೩

೪.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೧೪

೪.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೧೫

೪.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೧೬

೪.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೧೭
೪.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೧೮

೫.೧ ಧಾರವಾಡ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೧೯
೫.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೨೦
೫.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೨೧
೫.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೨೨
೫.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೨೩
೫.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೨೪

೬.೧ ಗದಗ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೨೫
೬.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೨೬
೬.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೨೭
೬.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೨೮
೬.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೨೯
೬.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೩೦

೭.೧ ಗುಲ್ಬರ್ಗಾ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೩೧
೭.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೩೨
೭.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೩೩
೭.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೩೪
೭.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೩೫
೭.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೩೬

೮.೧ ಕೊಪ್ಪಳ ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೩೭
೮.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೩೮
೮.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೩೯
೮.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೪೦
೮.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೪೧
೮.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೪೨

೯.೧ ಮೈಸೂರು ಜಿಲ್ಲೆಯ ಪಾರ್ಧಿಯರ ಗ್ರಾಮವಾರು ಜನಸಂಖ್ಯೆ ಮತ್ತು ವಯೋಗುಂಪು ೨೪೩
೯.೨. ಪಾರ್ಧಿಯರ ಗ್ರಾಮವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು ೨೪೪
೯.೩. ಪಾರ್ಧಿಯರ ಗ್ರಾಮವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು ೨೪೫
೯.೪. ಪಾರ್ಧಿಯರ ಗ್ರಾಮವಾರು ಲಿಂಗವಾರು ಕಸಬುಗಳು ೨೪೬

೯.೫. ಪಾರ್ಧಿಯರ ಗ್ರಾಮವಾರು, ಪಶು ಸಂಪತ್ತು, ಮನೆಗಳು ಮತ್ತು ಸರಕಾರಿ ಸೌಲಭ್ಯಗಳು ೨೪೭
೯.೬. ಪಾರ್ಧಿಯರ ಗ್ರಾಮವಾರು, ಭೂ ಹಿಡುವಳಿ (ಎಕರೆಗಳಲ್ಲಿ) ೨೪೮

IV : ಛಾಯಾಚಿತ್ರಗಳು

೨.೧ ವಿಮಾನದಲ್ಲಿ ಪ್ರಯಾಣಿಸುತ್ತಿರುವ ಹಕ್ಕಿಪಿಕ್ಕಿಯರು (ಪಕ್ಷಿರಾಜಪುರ, ಹುಣಸೂರು) ೨೫೦
೨.೨ ವಿದೇಶಿಯರೊಂದಿಗೆ ಹಕ್ಕಿಪಿಕ್ಕಿಯರು (ನಿರ್ಮಲ, ರೂಪ, ಬಿಜ್ಲಿ ಮತ್ತು ರಾಜೇಶ) ೨೫೦
೨.೩ ಪಾರ್ಧಿಯರ ಬೇಟೆಯ ಆಯುಧಗಳೊಂದಿಗೆ ಸಂಶೋಧಕ (ಹರಿಶ್ಚಂದ್ರ ಕಾಲೋನಿ, ಬಳ್ಳಾರಿ) ೨೫೧
೨.೪ ಬೇಟೆನಿರತ ಪಾರ್ಧಿ (ಕೃಪೆ : The Week Weekly) ೨೫೧
೩.೧ ಮದುಮಗಳ ಬಳೆಶಾಸ್ತ್ರ ೨೫೨
೩.೨ ಪಾರ್ಧಿಯರ ವಿವಾಹ ೨೫೨
೩.೩ ಮದುಮಗಳನ್ನು ಗಂಡನ ಮನೆಗೆ ತುಂಬಿಸಿಕೊಳ್ಳುತ್ತಿರುವುದು ೨೫೩
೩.೪ ಉತ್ಸವಕ್ಕೆ ಸಿದ್ಧರಾದ ಪಾರ್ಧಿಯರು ೨೫೩
೩.೫ ದಂಡಿದುರ್ಗಮ್ಮನ ಗುಡಿಯ ಪೂಜಾರಿಯರು ೨೫೪
೩.೬ ತುಳಜಾಭವಾನಿ ದರ್ಶನ ಪಡೆದು ಮರಳುತ್ತಿರುವ ಪಾರ್ಧಿಯರು (ಕೊಲ್ಹಾರ್, ಬಿಜಾಪೂರ) ೨೫೪
೩.೭ ದುರ್ಗಾದೇವಿಯ ದರ್ಶನಕ್ಕಾಗಿ ಕಾದ ಪಾರ್ಧಿಯರು ೨೫೫
೩.೮ ದೇವರ ಕಟ್ಟೆಗೆ ದೂಪಲೋಬಾನಗಳಿಂದ ಪೂಜೆಸಲ್ಲಿಸುತ್ತಿರುವುದು ೨೫೫
೩.೯ ದೇವಿಗೆ ಅರ್ಪಿಸಿದ ಬಲಿ (ಹೊಂಬಳ, ಗದಗ) ೨೫೬
೩.೧೦ ವ್ಯಾಪಾರಕ್ಕೆ ಮುಂಚೆ ಮಮ್ಮಾಯಿದೇವಿಗೆ ಪೂಜೆ (ಕಲ್ಕತ್ತ) ೨೫೬
೩.೧೧ ದುರ್ಗಮ್ಮ ದೇವಿಯ ಗುಡಿ ಮತ್ತು ಪೂಜಾರಿ ೨೫೭
೩.೧೨ ಮೋಹರಂ ಹಬ್ಬದಲ್ಲಿ ಹುಲಿ ಕುಣಿತ ೨೫೭
೩.೧೩ ದುರ್ಗಾದೇವಿಗೆ ಕೋಳಿ ಬಲಿ ೨೫೮
೩.೧೪ ಮೋಹರಂ ಹಬ್ಬದಂದು ಎತ್ತುಗಳ ಪೂಜೆ ೨೫೮
೩.೧೫ ಟಗರಿನ ಬಲಿ (ಆರ್ಯಕುರಹಟ್ಟಿ, ಧಾರವಾಡ) ೨೫೯
೩.೧೬ ಕಂಪ್ಲಿ ಪಟ್ಟಣದ ತುಳಜಾಭವಾನಿ ದೇವಸ್ಥಾನ ೨೫೯
೩.೧೭ ದೇವರಿಗೆ ಕುರಿಬಲಿ ಕೊಡುವ ಮುಂಚೆ (ಕೊಪ್ಪಳ) ೨೬೦
೩.೧೮ ಸಾಂಪ್ರದಾಯಿಕ ದೇವರ್‌ಗಾಗರಿನಲ್ಲಿ (ಕೃಷ್ಣಪ್ಪ ಅಣ್ಣಿಗೇರಿ) ೨೬೦
೫.೧ ಪಾರ್ಧಿಯರ ವೇಷಭೂಷಣ (ಸವದತ್ತಿ) ೨೬೧
೫.೨ ಪಾರ್ಧಿಯರ ವೇಷಭೂಷಣ (ಅಂಗಡಿಹಳ್ಳಿ, ಹಾಸನ) ೨೬೧
೫.೩ ಪಾರ್ಧಿಯರಿಂದ ಪ್ಲಾಸ್ಟಿಕ್ ಹೂಗಳ ತಯಾರಿಕೆ (ಅಂಗಡಿಹಳ್ಳಿ) ೨೬೨

೫.೪ ಪಾರ್ಧಿಯರ ಗುಡಿಸಲುಗಳು (ಅಂಗಡಿಹಳ್ಳಿ) ೨೬೨
೫.೫ ಪಾರ್ಧಿ ಮಹಿಳೆ ಕೈಯಲ್ಲಿ ಅರಳಿದ ಹುಲಿಚರ್ಮ (ಕೃಪೆ, ಪ್ರಜಾವಾಣಿ) ೨೬೩
೫.೬ ಕಸ್ತೂರಿ ಗೋರಂಜನ ಮಾರಾಟ ನಿರತ ಪಾರ್ಧಿಯರು (ಚಿಕ್ಕಮಟ್ಟಿ, ಶಿವಮೊಗ್ಗ) ೨೬೩
೫.೭ ಹಂದಿ ಸಾಕಾಣಿಕೆಯಲ್ಲಿ ಪಾರ್ಧಿಯರು (ಅಣ್ಣಿಗೇರಿ, ಗದಗ) ೨೬೪
೫.೮ ಕರಕುಶಲ ಹುಲಿಚರ್ಮದ ವ್ಯಾಪಾರ (ಶ್ರೀಧರ್, ದಾವಣಗೆರೆ) ೨೬೪
೬.೧ ನಿವೃತ್ತ ಮಹಿಳಾ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ (ಯಶೋಧಾಬಾಯಿ, ಬೀದರ್) ೨೬೫
೬.೨ ಜಯದ ಉತ್ಸವದಲ್ಲಿ ದುರ್ಗಾದೇವಿ ಕಬ್ಬಡಿ ತಂಡ (ಮುಮ್ಮಟಗೇರಿ, ಬಾದಾಮಿ) ೨೬೫

ಅಧ್ಯಾಯ - ೧

ವಿಷಯ ಪ್ರವೇಶ

೧. ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶ

೨. ಬುಡಕಟ್ಟುಗಳ ಅಧ್ಯಯನದ ಕ್ರಮ

೩. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

೪. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

೫. ಅಧ್ಯಯನದ ವಿಧಾನ

೧. ವಿಷಯ ಪ್ರವೇಶ

ಮಾನವನು ಪೃಥ್ವಿಯ ಮೇಲೆ ವಾಸಿಸಲು ಆರಂಭಿಸಿ ಸುಮಾರು ೧೦ ಲಕ್ಷಕ್ಕೂ ಹೆಚ್ಚು ವರ್ಷಗಳು ಗತಿಸಿರಬಹುದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಜೀವನೋಪಾಯಕ್ಕಾಗಿ ಪ್ರಾಣಿ ಪಕ್ಷಿಗಳ ಹಸಿಮಾಂಸ, ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದನು. ಆಹಾರ ಹುಡುಕುವುದರ ಸಲುವಾಗಿ ಕಾಡಿನಿಂದ ಕಾಡಿಗೆ, ವಲಸೆ ಹೋಗಬೇಕಾಗುತ್ತಿತ್ತು. ವಲಸೆ ಹೋಗುವುದು ಅವರಿಗೆ ಅಂದು ಅನಿವಾರ್ಯ ಕೂಡಾ ಆಗಿತ್ತು. ಗಿಡ ಮರಗಳ ತೊಗಟೆ, ಪ್ರಾಣಿಗಳ ಚರ್ಮವನ್ನು ಉಡುಗೆ ತೊಡುಗೆಗಳನ್ನಾಗಿ ಬಳಸಿಕೊಂಡು, ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯುವ ಕೃಷಿ ವಿಧಾನಗಳನ್ನು ಕರಗತ ಮಾಡಿಕೊಂಡ ಬಳಿಕ ನೀರು ನೆಲ ಸಮೃದ್ಧವಾದೆಡೆಯಲ್ಲಿ ನೆಲೆ ನಿಂತನು. ಹಣ್ಣು ಹಂಪಲ, ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸುವುದು. ಪ್ರಾಣಿ ಪಕ್ಷಿಗಳನ್ನು ಸಾಕುವುದನ್ನು ರೂಢಿಸಿಕೊಂಡ ಮೇಲೆ ಅಲೆಮಾರಿ ಜೀವನ ನಿಧಾನವಾಗಿ ಕೊನೆಗೊಳ್ಳುತ್ತಾ ಬಂದಿತು. ಈ ಹಂತದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳಿಗೆ ಒಂದು ಅಡಿಪಾಯ ರೂಪಗೊಳ್ಳತೊಡಗಿತು.

ಶತಶತಮಾನಗಳು ಗತಿಸಿದರೂ ಮನುಷ್ಯ ಕುಲದ ಕೆಲವು ಬುಡಕಟ್ಟುಗಳ ಜನರು ಇನ್ನು ಅಲೆಮಾರಿ ಬದುಕನ್ನೇ, ಮುಂದುವರೆಸಿಕೊಂಡು ಬಂದಿರುತ್ತಾರೆ. ಇವರ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು, ಹಬ್ಬ ಹರಿದಿನಗಳು, ಜನಪದ ಕಲೆಗಳು, ಉಡುಗೆ ತೊಡುಗೆಗಳು, ಜನಪದ ವೈದ್ಯ, ಮಾಟ ಮಂತ್ರಗಳು, ಗಾದೆಗಳು, ನುಡಿಕಟ್ಟುಗಳು ಇತ್ಯಾದಿ ವಿಷಯಗಳನ್ನು ಎತ್ತಿಕೊಂಡು ಕ್ಷೇತ್ರ ಕಾರ್ಯ ಆಧರಿಸಿ ತಲಸ್ಪರ್ಶಿಯಾದ ಅಧ್ಯಯನ ಮಾಡುವ ಸಲುವಾಗಿ ಸಾಗರದಲ್ಲಿ ಮುಳುಗಿದಾಗ ಆಳ ಮತ್ತಷ್ಟು ಆಳವೆನಿಸುವಂತೆ ಇವರಲ್ಲಿ ಹುದುಗಿಕೊಂಡಿರುವ 'ಬುಡಕಟ್ಟುಗಳ ಭಂಡಾರ' ಅಪಾರ ಎನ್ನುವ ವಿಸ್ಮಯ ಉಂಟಾಗುತ್ತದೆ.

ಮಾನವ ಸಮಾಜದಷ್ಟು ಜಟಿಲವಾದ ಸಮಾಜ ಬೇರೊಂದಿಲ್ಲ. ಕ್ಲಿಷ್ಟವಾದ ಈ ಸಮಾಜವನ್ನು ಅಧ್ಯಯನ ಮಾಡುವುದು ಅಷ್ಟೇನು ಸುಲಭವಲ್ಲ. ಆಧುನಿಕ ಮಾನವಶಾಸ್ತ್ರದ ಅಥವಾ ಸಂಸ್ಕೃತಿ ಶಬ್ದದ ಪಿತಾಮಹರಾದ ಈ.ಬಿ.ಟೇಲರ್, ಮ್ಯಾಥಿವ್ ಅರ್‌ನಾಲ್ಡ್, ಫ್ರಾಂಜ್ ಬೋವಸ್ ಹಾಗೂ ಇತರೆ ಮಾನವಶಾಸ್ತ್ರದ ವಿದ್ವಾಂಸರು ಈ ಕ್ಷೇತ್ರದಲ್ಲಿ ಅಧ್ಯಯನ ಮಾಡಿದ್ದಾರೆ. ಬುಡಕಟ್ಟು ಸಮಾಜಗಳ ಪ್ರತಿ ವಿಚಾರಗಳು, [illegible] ಮತ್ತು ವೈವಿಧ್ಯಪೂರ್ಣವಾಗಿರುವುದರಿಂದ ಅವುಗಳನ್ನು ಕೂಲಂಕಷವಾಗಿ ಅರಿತುಕೊಳ್ಳುವುದರ ಅವಶ್ಯಕತೆ ಇದೆ. ಬುಡಕಟ್ಟು ಸಮುದಾಯಗಳಲ್ಲಿ ಪಾರ್ಧಿ ಪ್ರಮುಖ ಬುಡಕಟ್ಟಾಗಿದೆ.

ಬ್ರಿಟಿಷರು ಭಾರತದಲ್ಲಿ ತಮ್ಮ ಆಳ್ವಿಕೆಯ ಕಾಲದಲ್ಲಿ ಪಾರ್ಧಿ ಬುಡಕಟ್ಟನ್ನು ಗುರುತಿಸಿ, ಅವರನ್ನು ಅಪರಾಧಿ ವರ್ಗ (Criminal Tribe)ಕ್ಕೆ ಸೇರಿಸಿದರು.

ಈ ಬುಡಕಟ್ಟಿನ ಬಗ್ಗೆ ಅಲ್ಲೊಂದು ಇಲ್ಲೊಂದು ಬಿಡಿ ಲೇಖನಗಳು ಪ್ರಕಟವಾಗಿಯೆಯಾದರೂ ಸಮಗ್ರವಾದ ಅಧ್ಯಯನ ಈವರೆಗೆ ನಡೆದಿಲ್ಲ. ಬುಡಕಟ್ಟು ಸಮುದಾಯಗಳು ಇಂದು ತಮ್ಮ ಮೂಲಿಕೆಗಳನ್ನು ಕಳೆದುಕೊಂಡು ನಾಗರಿಕತೆಯ ಪ್ರವಾಹದಲ್ಲಿ ತೇಲಿ ಹೋಗುತ್ತಿರುವುದು ಒಂದು ಚಿಂತನಾರ್ಹ ವಿಷಯ.

ಬುಡಕಟ್ಟುಗಳ ಅಧ್ಯಯನಕ್ಕೆ ಈ ಮುಂಚಿನ ಸಂಶೋಧಕರು ಅನುಸರಿಸಿದ ವಿಧಾನಗಳನ್ನು ಅಭ್ಯಸಿಸಿ, ಸೂಕ್ತ ಬದಲಾವಣೆಗಳೊಡನೆ ಒಂದು ಹೊಸ ಅಧ್ಯಯನ ಮಾದರಿಯನ್ನು ರೂಪಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಭಾರತದ ಅನೇಕ ಬುಡಕಟ್ಟುಗಳಲ್ಲೊಂದಾದ ಪಾರ್ಧಿ ಬುಡಕಟ್ಟು ತಮ್ಮ ಬದುಕಿನ ವೈವಿಧ್ಯತೆಯಿಂದಾಗಿ ಅತಿ ಪ್ರಾಚೀನ ಕಾಲದಿಂದಲೂ ಜನಮನವನ್ನು ಸೆಳೆಯುತ್ತಾ ತಮ್ಮದೇ ಆದ ಕಟ್ಟುಪಾಡುಗಳೊಂದಿಗೆ ಬದುಕುತ್ತಾ ಬಂದಿರುವುದು. ಈ ಬುಡಕಟ್ಟಿನ ಮೂಲ ಸ್ವರೂಪದ ಅಂಶಗಳು ಕಾಲಾಂತರದ ಸಾಮಾಜಿಕ ಸ್ಥಿತ್ಯಂತರಗಳಿಂದಾಗಿ ದಿನದಿಂದ ದಿನಕ್ಕೆ ಮರೆಯಾಗುತ್ತಾ ಹೋಗುತ್ತಿವೆ. ಇಂದು ಪ್ರತಿಯೊಂದು ಬುಡಕಟ್ಟಿನಲ್ಲಿಯೂ ಈ ಅಂಶವನ್ನು ಕಾಣಬಹುದಾಗಿದೆ. ಆದ್ದರಿಂದ ಹಿಂದಿಗಿಂತ ಇಂದು ಪ್ರತಿಯೊಂದು ಬುಡಕಟ್ಟಿನ ಮಾನವಶಾಸ್ತ್ರೀಯ ಹಾಗೂ ಸಂಸ್ಕೃತಿಯ ಅಧ್ಯಯನಗಳು ಅಗತ್ಯವಾಗಿವೆ.

ಎಲ್ಲಾ ಬುಡಕಟ್ಟುಗಳ ಸಂಸ್ಕೃತಿಯೂ ಒಂದೇ ರೀತಿಯಾಗಿಲ್ಲ ಎಂಬುದು ಸರ್ವವಿಧಿತ. ಬುಡಕಟ್ಟು ಮತ್ತು ಜನಾಂಗಗಳ ವ್ಯತ್ಯಾಸಗಳನ್ನು ಈಗಾಗಲೇ ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ಜಗತ್ತಿನಾದ್ಯಂತ ಪಟ್ಟಣಗಳಲ್ಲಿ ಹಳ್ಳಿಗಳಲ್ಲಿ ಜನಗಳು ವಾಸಮಾಡುತ್ತಾರೆ. ಇವರ ಸಂಸ್ಕೃತಿಯನ್ನು ಕ್ರಮವಾಗಿ ನಗರ ಮತ್ತು ಗ್ರಾಮೀಣ ಸಂಸ್ಕೃತಿ ಎಂದು ಕರೆಯಬಹುದಾಗಿದೆ. ಇವೆರಡನ್ನು ಬಿಟ್ಟರೆ ಇನ್ನೊಂದು ಸಾಂಸ್ಕೃತಿಕ ವರ್ಗದ ಸಂಸ್ಕೃತಿಯನ್ನು ಗುರ್ತಿಸಬಹುದು. ಗುರ್ತಿಸಲ್ಪಟ್ಟ ಈ ಸಂಸ್ಕೃತಿಯೇ ಬುಡಕಟ್ಟುಗಳ ಸಂಸ್ಕೃತಿ ಆಗಿದೆ. ಪ್ರತಿಯೊಂದು ಬುಡಕಟ್ಟು ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲು ತನ್ನದೇ ಆದ ಭಾಷೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಿರುವುದು ಮೂಲ ಸಂಸ್ಕೃತಿಯ ಸಂದರ್ಭದಲ್ಲಿ ಅವು ದೂರ ಉಳಿದು ಭಿನ್ನ ಸಂಸ್ಕೃತಿಯನ್ನು ರೂಢಿಸಿಕೊಂಡದ್ದೆ ಕಾರಣವಾಗಿದೆ. ನಗರ ಮತ್ತು ಗ್ರಾಮೀಣ ಸಂಸ್ಕೃತಿಗಿಂತ ಬುಡಕಟ್ಟು ಸಂಸ್ಕೃತಿ ಶ್ರೀಮಂತವಾಗಿದೆ ಎಂದರೆ ತಪ್ಪಾಗಲಾರದು. ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಸಮಾಜದ ಬಂಧನಕ್ಕೆ ಪುಷ್ಟಿಕೊಡುವ ಗುಣಗಳು ಇಲ್ಲಿಯೂ ಕಂಡು ಬರುತ್ತವೆ. ಹಿರಿಯರಲ್ಲಿ ವಿನಯ, ದೇವರಲ್ಲಿ ಭಕ್ತಿ, ದುಡಿದು ಊಟಮಾಡುವ ಬುದ್ಧಿ ಪರಿಸರದ ಮೇಲಿನ ಪ್ರೀತಿ, ಒಟ್ಟಾಗಿ ಕೂಡಿ ಬದುಕುವ ಲಕ್ಷಣಗಳು ಇವರಲ್ಲಿ ವಿಶೇಷವಾಗಿ ಕಂಡುಬರುತ್ತವೆ.

೧. ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶ

ಯಾವುದೇ ಬುಡಕಟ್ಟು ಸಂಸ್ಕೃತಿಯನ್ನು ಸರ್ವತೋಮುಖವಾಗಿ ಅಭ್ಯಾಸ ಮಾಡುವಾಗ ಯಾವುದೇ ಜನಾಂಗ ಅಥವಾ ಸಮುದಾಯದ ಜೀವನವಿಧಾನ ಪದ್ಧತಿಯನ್ನು ನಿರ್ಲಕ್ಷಿಸಲಾಗದು. ಜಗತ್ತಿನಲ್ಲಿ ಸಮುದಾಯಗಳು ಉಗಮಗೊಂಡು ತಲೆಯೆತ್ತಿದಂದಿನಿಂದ ಇಂದಿನವರೆಗೆ ಎಲ್ಲಾ ದೇಶಗಳಲ್ಲಿಯೂ ಕಾಲಕಾಲಕ್ಕೆ ಸಮುದಾಯಗಳಲ್ಲಿ

ಪರಿವರ್ತನೆಗಳು ಉಂಟಾಗಿ, ಹೊಸ ಹೊಸ ರೀತಿ-ನೀತಿಗಳನ್ನು ರೂಪಿಸಿ ಅದಕ್ಕೆ ತಕ್ಕಂತೆ ದಿಕ್ಕು ದೆಸೆಗಳನ್ನು ಕಂಡುಕೊಳ್ಳುತ್ತಾ ಬಂದಿವೆ. ಜನ ಸಮುದಾಯಗಳು ಬೆಳೆದು ಅವೇ ಮುಂದೆ ಜನಾಂಗಗಳಾಗಿ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹೋಗಿ ನಿಂತರೂ ಮಾನವತೆ ಒಂದೇ ಎಂಬುದನ್ನು ಯಾರೂ ಮರೆಯುವಂತಿಲ್ಲ. ಅವರ ಆಹಾರ, ವಿಹಾರ, ವೇಷ, ಭೂಷಣಗಳಲ್ಲಿ ವ್ಯತ್ಯಾಸ ಕಂಡುಬಂದರೂ ಮಾನವ ಸಮುದಾಯಗಳ ಆಶಯ, ಒಲವು, ನಿಲವು, ವೃತ್ತಿ ಪ್ರವೃತ್ತಿಗಳಲ್ಲಿ ಸಾಮ್ಯವಿರುವದನ್ನು ಕಾಣಬಹುದಾಗಿದೆ. ಮಾನವ ಸಮುದಾಯಗಳ ಈ ಏಕತೆಯನ್ನು ಎತ್ತಿ ತೋರಿಸುವ ಮಹತ್ವದ ಕಾರ್ಯವನ್ನು ಮಾನವಶಾಸ್ತ್ರದ ಅಧ್ಯಯನಗಳು ಮಾಡುತ್ತಿವೆ.

ಸಮುದಾಯಗಳ ಸಮಸ್ತ ಜೀವನ ಕ್ರಮವನ್ನು ಸಂಪೂರ್ಣವಾಗಿ, ವೈಜ್ಞಾನಿಕವಾಗಿ ಪರಿಚಯ ಮಾಡಿಕೊಡುವ ಕೆಲಸ ಇನ್ನೂ ಹೆಚ್ಚು ಹೆಚ್ಚು ಜನಪದಕ್ಕೂ ನಿಕಟವಾದ ಸಂಬಂಧವಿದ್ದು, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳೆಂದರೆ ತಪ್ಪಾಗದು. ಸಮುದಾಯಗಳ ಸಂಸ್ಕೃತಿಯನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಜನಪದ ಸಾಹಿತ್ಯ, ಜನಪದನುಡಿಗಟ್ಟು, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು, ಜಾನಪದ (ಬುಡಕಟ್ಟು) ವೈದ್ಯ ಪದ್ಧತಿ, ಕಲೆಗಳು, ಹಬ್ಬ ಹರಿದಿನಗಳು ಒಟ್ಟಾರೆ ಜನಪದ ಬದುಕಿನ ಕ್ರಿಯೆ ಪ್ರಕ್ರಿಯೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಸಮಗ್ರವಾಗಿ ಅಧ್ಯಯನ ಮಾಡುವುದರ ಅಗತ್ಯ ಇಂದು ತುಂಬಾ ಇದೆ.

ಯಾವುದೇ ಒಂದು ಬುಡಕಟ್ಟಿನ ಅಧ್ಯಯನವೆಂದರೆ, ಆ ಬುಡಕಟ್ಟಿನ ಜನ, ಅವರು ವಾಸಿಸುವ ಪ್ರದೇಶ, ಅವರ ಮೌಖಿಕ ಪರಂಪರೆ, ಸಂಪ್ರದಾಯ, ಆಚಾರ-ವಿಚಾರಗಳು, ರೀತಿ-ನೀತಿ, ನಂಬಿಕೆ, ಧರ್ಮ, ಕಲೆ, ಜನನ, ಮರಣ, ಮದುವೆ, ಕೌಟುಂಬಿಕ ಜೀವನ, ಸಾಮಾಜಿಕ ಜೀವನ, ಅವರ ನಾಗರಿಕತೆ, ವೇಷ -ಭೂಷಣ, ಅವರು ಅನುಸರಿಸುತ್ತಾ ಬಂದ ವೃತ್ತಿ ವೈವಿಧ್ಯಗಳು, ಆಹಾರ ಪಾನೀಯ, ಕಥೆ, ಗೀತೆ, ಗಾದೆ, ಒಗಟು, ಒಡಪು, ಇತ್ಯಾದಿ ಅಂಶಗಳನ್ನು ಕೂಲಂಕಷವಾಗಿ ಗಮನಿಸಬೇಕಾಗುತ್ತದೆ. ಇಂಥಹ ಅಧ್ಯಯನವು ಒಂದು ಬುಡಕಟ್ಟು ಸಂಪ್ರದಾಯದ ಆಳವಾದ ಅಧ್ಯಯನವಾದುದರಿಂದ ಇವುಗಳಿಗೆ 'ಮಾನವಶಾಸ್ತ್ರೀಯ ಅಧ್ಯಯನ' ಎನ್ನುವುದು ಸೂಕ್ತವೆನಿಸುತ್ತದೆ. ಏಕೆಂದರೆ ಯಾವುದೇ ಒಂದು ಸಮುದಾಯದ ಸಂಸ್ಕೃತಿಯೂ ನಿಂತ ನೀರಲ್ಲ. ಅದು ಯಾವಾಗಲೂ ಹರಿಯುತ್ತಿರುವ ನದಿಯಿದ್ದಂತೆ. ಅದು ನಿತ್ಯ ಪರಿವರ್ತನ ಶೀಲವಾದುದು. ಅನ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗದೇ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವ ಬುಡಕಟ್ಟಿನ ಸಂಸ್ಕೃತಿಯಲ್ಲಿಯೂ ಕಾಲಾಂತರದಲ್ಲಿ ಎಷ್ಟೋ ಬದಲಾವಣೆಯಾಗಿರುವುದನ್ನು ಮನಗಾಣುತ್ತೇವೆ.

ಭಾರತದಲ್ಲಿ ಬುಡಕಟ್ಟುಗಳ ಪರಿಸ್ಥಿತಿ ಕಾಲದಿಂದ ಕಾಲಕ್ಕೆ ನಿರಂತರವಾಗಿ ಬದಲಾವಣೆ ಹೊಂದುತ್ತಲೇ ಬಂದಿವೆ. ಇದು ಅವರ ಬೆಳವಣಿಗೆಗೆ ಅನಿವಾರ್ಯವೂ ಹೌದು. ಮಾನವಶಾಸ್ತ್ರೀಯ ಅಧ್ಯಯನಗಳಲ್ಲಿ ಸಾಂಸ್ಕೃತಿಕ ಪರಿವರ್ತನೆ ಎನ್ನುವುದು ಬಹು ಮುಖ್ಯವಾದ ಅಂಶವಾಗಿದೆ.

ಭಾರತದಲ್ಲಿ ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಯ ಜೊತೆ ಜೊತೆಗೆ ಈ ಯಾವ ಜಾತಿಗಳಿಗೂ ಸೇರದ, ಇವರೆಲ್ಲರಿಂದ ಪ್ರತ್ಯೇಕವಾಗಿ ಗುಡ್ಡಗಾಡು, ಕೊಳ್ಳ, ಕಣಿವೆಗಳಲ್ಲಿ ಉಳಿದಿರುವ ಬುಡ ಕಟ್ಟುಗಳು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯಗಳು, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕುಶಲಕಲೆ ಮುಂತಾದ ಹಲವಾರು ಅಂಶಗಳಿಂದ ಭಾರತದ ಸಂಸ್ಕೃತಿಯನ್ನು ಸಂಕೀರ್ಣಗೊಳಿಸಿವೆ. ಮಾತ್ರವಲ್ಲದೆ ಶ್ರೀಮಂತಗೊಳಿಸಿವೆ.

ಆದರೆ ಶಿಷ್ಟ ಜನರು ಭಾರತೀಯ ಸಂಸ್ಕೃತಿಯ ಬಗ್ಗೆ ವಿಚಾರ ಮಾಡುವಾಗ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬುಡಕಟ್ಟುಗಳ ಸಂಸ್ಕೃತಿಯನ್ನು ಕಡೆಗಣಿಸಿರುವುದು ಕಂಡುಬರುತ್ತದೆ. ಆದಿಕಾಲದಲ್ಲಿ ಆಯಾ ವೃತ್ತಿ ವೈವಿಧ್ಯತೆಗಳ ಆಧಾರದ ಮೇಲೆ ರೂಪಗೊಂಡ ಜಾತಿ ವ್ಯವಸ್ಥೆಯು ಕಾಲಾಂತರದಲ್ಲಿ ವಿವಿಧ ರೂಪಗಳನ್ನು ತಾಳಿ ಸಾಮಾಜಿಕ ಶೋಷಣೆಯ ಸಾಧನವಾಗಿ ಶ್ರಮವಿಭಜನೆಯ ಬದಲಾಗಿ ಸಮಾಜ ವಿಭಜನೆಯಾಗಿ ಬೆಳೆದು ಬಂದಿದೆ.

ಮಾನವಶಾಸ್ತ್ರ ಆಸಕ್ತರು ಕೈಗೊಳ್ಳುವ ಯಾವುದೇ ತನ್ನ ಕಾರ್ಯಕ್ಕೆ ನಿಶ್ಚಿತವಾದ, ಸ್ಪಷ್ಟವಾದ, ಉದ್ದೇಶ ಇಟ್ಟುಕೊಳ್ಳಲೇಬೇಕು. ಆಗ ಮಾತ್ರ ಆ ಪ್ರಯತ್ನಕ್ಕೆ ತೀವ್ರತೆ ಬಂದು ಅದು ಬಹುಬೇಗ ಫಲಪ್ರದವಾಗುವುದು. ಇಲ್ಲಿಯವರೆಗೆ ಪಾರ್ಧಿ ಬುಡಕಟ್ಟಿನ ಸಮಗ್ರವಾದ ಅಧ್ಯಯನವೆ ನಡೆದಿರುವುದಿಲ್ಲ.

ಕರ್ನಾಟಕದಲ್ಲಿ ಎಲ್ಲೆಲ್ಲಿ ಪಾರ್ಧಿ ಬುಡಕಟ್ಟಿನವರು ಇದ್ದಾರೋ ಅಲ್ಲೆಲ್ಲಾ ಕ್ಷೇತ್ರ ಕಾರ್ಯವನ್ನು ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಪಾರ್ಧಿ ಸಮುದಾಯದ ಪ್ರಾಚೀನತೆಯ ಬಗೆಗೆ ಇತರ ಕೆಲವೇ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಆಧಾರ ಸಾಮಗ್ರಿಗಳನ್ನು ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಪಾರ್ಧಿ ಬುಡಕಟ್ಟಿನ ಸಾಂಸ್ಕೃತಿಕ ವಿಷಯಗಳ ಜೊತೆಗೆ ಅವರ ಬುಡಕಟ್ಟಿನ ಮೂಲ ಸ್ವರೂಪದ ಬಗೆಗೆ ಸ್ಪಷ್ಟವಾದ ಒಂದು ನಿಲುವಿಗೆ ಬರಲು ಪ್ರಯತ್ನಿಸಲಾಗಿದೆ. ಈ ಪ್ರಬಂಧದಲ್ಲಿ ಪ್ರಸ್ತಾಪಿಸಿರುವ ವಿಷಯ ಸಾಮಗ್ರಿಗೆ ಹೆಚ್ಚಿನ ಮೆರುಗು ಕೊಡುವಂತೆ ಹಲವಾರು ಪೂರಕ ಭಾವ ಚಿತ್ರಗಳು, ಹಾಗೂ ದಾಖಲಾತಿಗಳನ್ನು ಅಲ್ಲಲ್ಲಿ ಸೇರಿಸಿ ಈ ಅಧ್ಯಯನಕ್ಕೆ ಸಾಧ್ಯವಾದಷ್ಟು ಖಚಿತತೆಯನ್ನು ತಂದುಕೊಡಲಾಗಿದೆ.

ಪಾರ್ಧಿ ಬುಡಕಟ್ಟಿನ ಮಾನವಶಾಸ್ತ್ರೀಯ ಅಧ್ಯಯನಕ್ಕಾಗಿ ಕರ್ನಾಟಕವನ್ನು ಪ್ರಾದೇಶಿಕವಾಗಿ ಹೀಗೆ ವರ್ಗೀಕರಿಸಿಕೊಳ್ಳಲಾಗಿದೆ.

ಕರ್ನಾಟಕ

ಉತ್ತರಕರ್ನಾಟಕ	**ದಕ್ಷಿಣ ಕರ್ನಾಟಕ**
೧. ಬೀದರ್	೧. ಬೆಂಗಳೂರು
೨. ಗುಲ್ಬರ್ಗ	೨. ಬೆಂಗಳೂರು ಗ್ರಾಮಾಂತರ ಜಿಲ್ಲೆ
೩. ಬಳ್ಳಾರಿ	೩. ಮೈಸೂರು
೪. ಕೊಪ್ಪಳ	೪. ಶಿವಮೊಗ್ಗ
೫. ಧಾರವಾಡ	೫. ಹಾಸನ
೬. ಗದಗ	೬. ದಾವಣಗೆರೆ
೭. ಬಾಗಲಕೋಟೆ	
೮. ಬಿಜಾಪುರ್	
೯. ಬೆಳಗಾವಿ	

ಈ ಮೇಲಿನ ಪ್ರಾದೇಶಿಕ ವರ್ಗೀಕರಣದ ಹಿನ್ನೆಲೆಯಲ್ಲಿ ಕರ್ನಾಟಕದ ಇಪ್ಪತ್ತೇಳು ಜಿಲ್ಲೆಗಳ ಪೈಕಿ ಹದಿನೈದು ಜಿಲ್ಲೆಗಳಲ್ಲಿ ಮಾತ್ರ ಈ ಬುಡಕಟ್ಟಿನವರು ಕಂಡು ಬರುವರು. ಈ ಹದಿನೈದು ಜಿಲ್ಲೆಗಳಲ್ಲಿ ಕೇವಲ ಬಿಜಾಪೂರ್, ಬಾಗಲಕೋಟೆ, ಗದಗ್, ಹುಬ್ಬಳ್ಳಿ ಹಾಗೂ ಧಾರವಾಡ ಬಳಿಯಲ್ಲಿಯ ಜೈ ಭಾರತ್ ಕಾಲೋನಿ(ಕಂಬಾರ್‌ಗಣಿ)ಗಳಲ್ಲಿ ಮಾತ್ರ ಈ ಬುಡಕಟ್ಟಿನವರ ಬೃಹತ್ ಪ್ರಮಾಣದ ನೆಲೆಗಳಿವೆ. ಈ ಐದು ನೆಲೆಗಳಿಗೂ ಭೇಟಿಕೊಡುವುದರ ಜೊತೆಗೆ ಮೇಲೆ ತಿಳಿಸಿದ ಎಲ್ಲಾ ಜಿಲ್ಲೆಗಳ ಅವರ ನೆಲೆಗಳಿಗೂ ಭೇಟಿಮಾಡಲಾಗಿದೆ.

ಪಾರ್ಧಿ ಬುಡಕಟ್ಟಿನ ವಿಷಯವನ್ನು ಮಾನವಶಾಸ್ತ್ರೀಯ ಅಧ್ಯಯನಕ್ಕಾಗಿ ಪಿಎಚ್.ಡಿ. ಪದವಿಗೆ ಆಯ್ಕೆ ಮಾಡಿಕೊಂಡು ಕ್ಷೇತ್ರ ಕಾರ್ಯಕೈಗೊಂಡಾಗ ಅವರ ಸಂಪೂರ್ಣ ಮಾಹಿತಿಗೆಂದು ಪ್ರಶ್ನಾವಳಿಯ ಚೌಕಟ್ಟನ್ನು ಹಾಕಿಕೊಂಡು ಕೆಲವು ಹಿರಿಯ ವಕ್ತಿಗಳಿಗೆ ಸಂದರ್ಶಿಸಿ, ಪ್ರಶ್ನಿಸಿ, ಅವರೊಂದಿಗೆ ಚರ್ಚಿಸಿ, ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಈ ಮಹಾಪ್ರಬಂಧಕ್ಕೆ ಅಗತ್ಯವಾದ ವಿಷಯಗಳನ್ನು ಪೂರಕವಾಗಿ ಅಳವಡಿಸಲು ಯತ್ನಿಸಲಾಗಿದೆ.

ಕರ್ನಾಟಕ ರಾಜ್ಯದುದ್ದಕ್ಕೂ ಕೈಗೊಂಡಿರುವ ಕ್ಷೇತ್ರ ಕಾರ್ಯದ ಫಲಶೃತಿಯಿಂದ ಸಿದ್ಧಪಡಿಸಲಾದ ಈ ಮಾನವಶಾಸ್ತ್ರೀಯವಾದ ಪ್ರಬಂಧವನ್ನು ಅಧ್ಯಯನದ ಅನುಕೂಲತೆಗಾಗಿ ಒಟ್ಟು ಎಂಟು ಅಧ್ಯಾಯಗಳಲ್ಲಿ ರೂಪಿಸಿ ಸಂಬಂಧಪಟ್ಟ ವಿಷಯಗಳನ್ನು ಆಯಾ ಅಧ್ಯಯಗಳಲ್ಲಿ ಸೇರಿಸಿ ವಿವರವಾಗಿ ಮಂಡಿಸಲಾಗಿದೆ.

ಕ್ಷೇತ್ರ ಕಾರ್ಯದ ಆಧಾರದ ಮೇಲೆ ಪಾರ್ಧಿ ಬುಡಕಟ್ಟಿನ ವಿವಿಧ ಪಂಗಡಗಳನ್ನು ವಿಂಗಡಿಸಿ ಪ್ರತಿಯೊಂದನ್ನು ಅದರ ಪ್ರದೇಶ, ವೃತ್ತಿ, ಮುಂತಾದವುಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಇದರಿಂದ ಈ ಅಧ್ಯಯನಕ್ಕೆ ಒಂದು ಚೌಕಟ್ಟನ್ನು ದೊರಕಿದೆ. ಮತ್ತು ವಿಷಯ ವಿವೇಚನೆಗೆ ಸಾಧ್ಯವಾದಷ್ಟು ಖಚಿತತೆಯನ್ನು ಒದಗಿಸಲು ಪ್ರಯತ್ನಿಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ ಮಾನವಶಾಸ್ತ್ರವೆಂದರೇನು ಇದರ ಇತರ ಶಾಖೆಗಳು ಯಾವವು ಮತ್ತು ಇದರ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಸಂಶೋಧನೆಯ ಮೂರನೆಯ ಅಧ್ಯಯನದಲ್ಲಿ ಪಾರ್ಧಿಯರ ಸಂಸ್ಕೃತಿ ಮತ್ತು ಆಚರಣೆಗಳನ್ನು ವಿವರಿಸಲಾಗಿದೆ. ಪಾರ್ಧಿ ಬುಡಕಟ್ಟಿಗೆ ಸಮಾನ ವೃತ್ತಿಗಳಿಂದಲೇ ತಮ್ಮ ಹೊಟ್ಟೆ ಪಾಡಿಗಾಗಿ ಮಾಡುವ ಬೇರೆ ಬೇರೆ ವೃತ್ತಿಗಳು ಹಾಗೂ ಬೇರೆ ಬೇರೆ ಉಪಪಂಗಡಗಳಿಂದ ಕರೆಯುವುದನ್ನು ಗುರ್ತಿಸುತ್ತಿರುವದನ್ನು ಕ್ಷೇತ್ರಕಾರ್ಯದ ಅವಧಿಯಲ್ಲಿ ಹೊಸದಾಗಿ ಗುರ್ತಿಸಲಾಗಿದೆ.

ಪಾರ್ಧಿ ಬುಡಕಟ್ಟಿನ ತಮ್ಮ ಸಮಾಜದ ವಿಕಾಸಕ್ಕಾಗಿ ಕೆಲವು ಕಡೆ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ತಮ್ಮ ಬುಡಕಟ್ಟುಗಳಲ್ಲಿ ಮನೆತನ ಮತ್ತು ಹೊಲ ಮನೆಗಳ ಬಗ್ಗೆ ಏನಾದರೂ ತಂಟೆ ತಕರಾರುಗಳು ಅಥವಾ ಜಗಳಗಳಾದರೆ ಅವರುಗಳು ಕೋರ್ಟು ಕಛೇರಿಗಳಿಗೆ ಹೋಗುವದಿಲ್ಲ. ಬದಲಿಗೆ ತಮ್ಮ ಬುಡಕಟ್ಟಿನ ಹಿರಿಯರ ಸಮ್ಮುಖದಲ್ಲಿಯೇ ಎಲ್ಲವನ್ನು ಬಗೆಹರಿಸಿಕೊಳ್ಳುತ್ತಾರೆ. ಆದರೆ ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಇಲ್ಲಿ ಕೋರ್ಟು; ಕಛೇರಿಗಳ ಮೆಟ್ಟಿಲುಗಳನ್ನು ತುಳಿಯುತ್ತಿರುವುದು ಸಾಮಾನ್ಯವಾಗುತ್ತಿದೆ.

ಈ ಎಲ್ಲಾ ಸಂಗತಿಗಳ ವಿವೇಚನೆಯ ಜೊತೆಗೆ ಪಾರ್ಧಿಯರ ಇಂದಿನ ಸಾಮಾಜಿಕ ಸ್ಥಿತಿಗತಿ, ರಾಜಕೀಯ

ಪರಿಚಿತ, ಧಾರ್ಮಿಕ ವಿಧಿ ವಿಧಾನಗಳು, ಅವರುಗಳು ಆಚರಿಸುವ ಸಂಪ್ರದಾಯಗಳು, ಹಾಗೂ ಪ್ರಚಲಿತ ಸಮಸ್ಯೆಗಳನ್ನು ಅಥವಾ ಅವರ ಬದಲಾವಣೆಗಳನ್ನು ಹಂತ ಹಂತವಾಗಿ ವಿವರಿಸಲಾಗಿದೆ.

ನಮ್ಮ ಈ ಅಧ್ಯನದಲ್ಲಿರುವ ಇಂಥ ಅನೇಕ ಇತಿಮಿತಿಗಳನ್ನು ಒಪ್ಪಿಕೊಂಡು, ಇದೇನಿದ್ದರೂ ಮಾನವ ಶಾಸ್ತ್ರೀಯ ವಿಷಯದಲ್ಲಿ ಪಾರ್ಧಿ ಬುಡಕಟ್ಟಿನವರ ಒಳಿತಿಗಾಗಿ ತೋರಿದ ಒಂದು ತೋರುಬೆರಳು ಎಂಬ ಮಾತನ್ನು ಮಾತ್ರ ನಮ್ರತೆಯಿಂದ ಹೇಳಲು ಇಷ್ಟಪಡುತ್ತೇನೆ. ವಾಸ್ತವವಾಗಿ ಇಲ್ಲಿ ಪ್ರಸ್ತಾಪಿಸಲಾಗಿರುವ ಒಂದೊಂದು ಮುಖ್ಯ ವಿಷಯಗಳನ್ನು ಉದಾಹರಣೆಗೆ ಪಾರ್ಧಿಯರ ವಿವಿಧ ಒಳಪಂಗಡಗಳು, ಅವರ ಪ್ರಾಚೀನತೆ, ಮಾನವಶಾಸ್ತ್ರೀಯ ಅಧ್ಯಯನದ ವ್ಯಾಪ್ತಿ, ಜನನ, ಸಂಸ್ಕಾರ, ಮದುವೆ, ಮರಣ, ಸಂಸ್ಕೃತಿ, ನ್ಯಾಯನಿರ್ಣಯ, ಕುಲಗೋತ್ರ ಆಹಾರ ಪಾನೀಯ, ಭಾಷೆ, ಧರ್ಮ, ಸಮಾಜ, ಆಚರಣೆ, ಪದ್ಧತಿ, ಕೌಟುಂಬಿಕ ಜೀವನ, ವೃತ್ತಿ ವಿಶೇಷತೆ, ಹಾಡು ಹಬ್ಬ ಹರಿದಿನಗಳು, ಜಾತ್ರೆ, ಉತ್ಸವ, ಧಾರ್ಮಿಕ ಕೇಂದ್ರಗಳು ಇನ್ನೂ ಮೊದಲಾದ ವಿಷಯಗಳನ್ನು ಎತ್ತಿಕೊಂಡು ಕರ್ನಾಟಕದ ಉದ್ದಗಲಕ್ಕೂ ಕ್ಷೇತ್ರ ಕಾರ್ಯ ಕೈಗೊಂಡಾಗ ಸಾಗರದಲ್ಲಿ ಮುಳುಗಿದಂತೆ ಸಮುದ್ರದ ಆಳ ಮತ್ತಷ್ಟು ಆಳವೆನಿಸುವಂತೆ ವಿಸ್ತಾರದ ಭಯದಿಂದ ಪಾರ್ಧಿ ವೃಂದದ ಎಲ್ಲಾ ವಿಷಯಗಳನ್ನು ಈ ಪ್ರಬಂಧದಲ್ಲಿ ವಿವರವಾಗಿ ಕೊಡಲು ಸಾಧ್ಯವಾಗಿಲ್ಲ. ಇವರಲ್ಲಿಯೇ ಒಂದೊಂದು ವಿಷಯಗಳನ್ನು ಎತ್ತಿಕೊಂಡು ಅಧ್ಯಯನ ಮಾಡಿದರೆ ಅವೇ ಹಲವಾರು ಪ್ರಬಂಧಗಳಾಗುವಷ್ಟಿರುವುದು ಸ್ಪಷ್ಟವಾಗುತ್ತದೆ. ಆದುದರಿಂದ ಈ ಮಹಾ ಪ್ರಬಂಧದಲ್ಲಿ ಪಾರ್ಧಿ ಬುಡಕಟ್ಟಿನ ಬಗ್ಗೆ ಸಾಧ್ಯವಾದಷ್ಟು ಮಾನವಶಾಸ್ತ್ರೀಯವಾಗಿ ಹೇಳಲು ಪ್ರಯತ್ನಿಸಿರುತ್ತೇನೆ.

ನಾವು ನಡೆದಷ್ಟೂ ದಾರಿಯಿರುವಂತೆ, ನೆಲವನ್ನು ಅಗೆದಷ್ಟೂ ಆಳವಿರುವಂತೆ, ಮಾನವಶಾಸ್ತ್ರದ ವ್ಯಾಪಕ ವಿಸ್ತಾರವಿರುವ ಈ ಪ್ರಪಂಚದಲ್ಲಿ ಪಾರ್ಧಿಯರನ್ನು ಕುರಿತು ಈ ಅಧ್ಯಯನವು ಕೇವಲ ಒಂದು ದಿಕ್ಸೂಚಿ ಮಾತ್ರ.

ಪಾರ್ಧಿ ಬುಡಕಟ್ಟಿನ ಮಾನವಶಾಸ್ತ್ರೀಯ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಹೊಂದಿರುವುದು.

೧. ಪಾರ್ಧಿ ಬುಡಕಟ್ಟಿನ ಐತಿಹಾಸಿಕ ಹಿನ್ನೆಲೆಯನ್ನು ಅರಿಯುವುದು.

೨. ಪಾರ್ಧಿ ಬುಡಕಟ್ಟಿನರಾಜ್ಯದ ಸಮಗ್ರ ಸಮೀಕ್ಷೆಯನ್ನು ಕೈಗೊಳ್ಳುವುದು

೩. ಪಾರ್ಧಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಿಸುವುದು.

೪. ಪಾರ್ಧಿ, ಫಾನ್ಸೆ ಪಾರ್ಧಿ, ಹಕ್ಕಿಪಿಕ್ಕಿ, ಹರಣಶಿಕಾರಿಗಳ ರಕ್ತ ಸಂಬಂಧವನ್ನು ಅಧ್ಯಯಿಸುವುದು.

೫. ಪಾರ್ಧಿ ಬುಡಕಟ್ಟಿನ ಮೇಲೆ ಜಾಗತೀಕರಣ, ಉದಾರೀಕರಣ ಮತ್ತು ಆಧುನಿಕತೆಗಳು ಯಾವ ರೀತಿಯ ಪ್ರಭಾವವನ್ನು ಬೀರುತ್ತಿವೆ ಎಂಬುದನ್ನು ವಿಶ್ಲೇಷಿಸುವುದು.

೨. ಬುಡಕಟ್ಟುಗಳ ಅಧ್ಯಯನದ ಕ್ರಮ

ಬುಡಕಟ್ಟುಗಳೆಂದು ಕರೆಯಿಸಿಕೊಳ್ಳುವ ಆದಿವಾಸಿಗಳು ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. ಅದರಂತೆ ಭಾರತದ ಎಲ್ಲಾ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ-ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸುವುದು

ತುಂಬ ಕಷ್ಟ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ ಪದ್ಧತಿಗಳಿಂದ ಅವರೊಂದಿಗೆ ಬೆರೆತು ವಿವರಣಾತ್ಮಕವಾಗಿ ಅಧ್ಯಯನ ಕೈಗೊಳ್ಳುವುದು ಸಂಶೋಧಕರಿಗೆ ಒಂದು ದೊಡ್ಡ ತೊಡಕಾಗಿದೆ. ಸ್ವಾತಂತ್ರ್ಯಪೂರ್ವ ಭಾರತೀಯ ಸಮಾಜಗಳಲ್ಲಿ ದೇಶ-ವಿದೇಶಗಳ ವಿದ್ವಾಂಸರುಗಳಿಂದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ಆದರೆ, ಯಾವುದೇ ಬುಡಕಟ್ಟನ್ನು ಕುರಿತು ಸಮಗ್ರವಾದ ಅಧ್ಯಯನಗಳು ನಡೆಯಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಮುಖ್ಯ ಕಾರಣವಾಗಿತ್ತು. ಆದರೆ ಇತ್ತೀಚಿಗೆ ರಾಜ್ಯ ಸರಕಾರ ಕೇಂದ್ರ ಸರಕಾರ ಹಾಗೂ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳು ಬುಡಕಟ್ಟು ಅಧ್ಯಯನಗಳ ಕುರಿತು ವಿಶೇಷ ಆಸಕ್ತಿವಹಿಸುತ್ತಿವೆ. ಹಲವು ಸಂಘ-ಸಂಸ್ಥೆಗಳು ಕೂಡ ಖಾಸಗಿಯಾಗಿ ಅಧ್ಯಯನ ಕೈಗೊಳ್ಳುತ್ತಿವೆ. ಆದರೆ, ನಾಗರಿಕತೆಯ ಪ್ರಭಾವದಿಂದ ಆದಿವಾಸಿಗಳ ಮೂಲ ಸಂಸ್ಕೃತಿ, ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡು ಬರುವುದರಿಂದ ಅವುಗಳ ಮೂಲ ಸ್ವರೂಪ ಬದಲಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸಿ ದಾಖಲಿಸಿಕೊಳ್ಳುವುದು ತೀರ ಅಗತ್ಯವಾಗಿದೆ.

ದೇಶದ ಉದ್ದಗಲಕ್ಕೂ ಹರಡಿಕೊಂಡಿರುವ ಮತ್ತು ಗುರುತಿಸಲಾಗದಂಥ ಅನೇಕ ಬುಡಕಟ್ಟುಗಳು ಇಂದಿಗೂ ಭಾರತದಲ್ಲಿದ್ದಾರೆ. ಈ ಬುಡಕಟ್ಟು ಜನಾಂಗದ ಅಧ್ಯಯನಕ್ಕೆ ವಿದೇಶಿಯ ವಿದ್ವಾಂಸರು ತೋರಿಸಿದ ಆಸಕ್ತಿಯಂತೆ ನಮ್ಮ ಭಾರತೀಯ ವಿದ್ವಾಂಸರು ತೋರಿಸಲಿಲ್ಲ. ಕಾಲಕ್ರಮೇಣ ಪಾಶ್ಚಾತ್ಯ ವಿದ್ವಾಂಸರುಗಳ ಅಧ್ಯಯನ ಪದ್ಧತಿಗಳ ಜಾಡನ್ನೇ ತುಳಿದ ಭಾರತೀಯ ವಿದ್ವಾಂಸರು ಅಲ್ಪ ಸ್ವಲ್ಪ ಬುಡಕಟ್ಟು ಅಧ್ಯಯನಗಳ ಕುರಿತು ಆಸಕ್ತಿ ಬೆಳೆಸಿಕೊಂಡರು. ಪ್ರಸ್ತುತ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಘ ಸಂಸ್ಥೆಗಳು ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರೋತ್ಸಾಹ ಕೊಡುತ್ತಿವೆ.

ಭಾರತದ ಯಾವುದೇ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಬೇಕಾದರೆ ಸಂಶೋಧಕರು ಕೆಲವೊಂದು ಅಧ್ಯಯನದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದ ಪೂರ್ಣ ಪರಿಚಯ ಮತ್ತು ಯೋಜನೆ ಅತ್ಯವಶ್ಯಕವಾಗಿದೆ. ಸಂಶೋಧನ ಸಾಮಗ್ರಿಗಳಾದ ನಕ್ಷೆ, ಪ್ರಶ್ನಾವಳಿ, ಸಂದರ್ಶನ ಕೈಪಿಡಿ, ಟೇಪರೆಕಾರ್ಡು, ಕ್ಯಾಮರಾ, ಹಣ ಮತ್ತು ಒಂದಿಬ್ಬರು ಸಹಾಯಕರು ಜೊತೆಯಲ್ಲಿರಬೇಕು. ಯಾವುದೇ ಬುಡಕಟ್ಟುಗಳು ಪ್ರಾರಂಭದಲ್ಲಿ ತಮ್ಮ ಜನರನ್ನು ಬಿಟ್ಟು ಉಳಿದವರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ. ಆದ್ದರಿಂದ ಆರಂಭದಲ್ಲಿ ತಾವು ತಿಳಿದುಕೊಂಡಂತೆ ಬುಡಕಟ್ಟು ಜನರಿಂದ ಸಹಕಾರ ಸಿಗುವುದಿಲ್ಲ. ಆಗ ಸಂಶೋಧಕ ನಿರುತ್ಸಾಹಗೊಳ್ಳದೆ ತಾಳ್ಮೆಯಿಂದ ಆ ಜನಾಂಗದ ಮುಖಂಡರ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ತನ್ನ ಗುರಿ ಮತ್ತು ಉದ್ದೇಶಗಳನ್ನು ತಲುಪಬಹುದು. ಬುಡಕಟ್ಟು ಅಧ್ಯಯನ ಕೈಗೊಂಡ ಸಂಶೋಧಕನಿಗೆ ತಾಳ್ಮೆ ಮತ್ತು ಕಠಿಣ ಶ್ರಮ ಅತ್ಯವಶ್ಯಕವಾಗಿದೆ.

ಬುಡಕಟ್ಟು ಅಧ್ಯಯನ ಕೈಗೊಂಡಾಗ ಕೆಲವೊಂದು ಮಹಿಳೆಯರನ್ನು ಸಂದರ್ಶನ ಮಾಡುವಾಗ ಅವರ ಕುಟುಂಬದ ಮುಖ್ಯಸ್ಥರ ಒಪ್ಪಿಗೆ ಪಡೆಯಬೇಕಾಗುತ್ತದೆ. ಅವರ ಧರ್ಮ ಸಂಸ್ಕೃತಿಗೆ ಸಂಬಂಧಿಸಿದ ಕೆಲವೊಂದು ಸಂಪ್ರದಾಯಗಳನ್ನು ಬುಡಕಟ್ಟಿನವರು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಋತುಮತಿಯಾದ ಹೆಣ್ಣುಮಕ್ಕಳು, ಜೇನಿಗೆ ಗುಡ್ಡ, ದೇವರು, ಪವಿತ್ರಸ್ಥಳ, ಹೋಳಿ, ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಛಾಯಾಚಿತ್ರಗಳನ್ನು

ತೆಗೆಯುವಾಗ ಅವರ ಒಪ್ಪಿಗೆ ಇಲ್ಲವೆ ಆ ಗುಂಪಿನ ಮುಖಂಡರನ್ನು ಜೊತೆಗೆ ಕರೆದುಕೊಂಡು ಹೋಗುವುದರಿಂದ ಸಮಸ್ಯೆಗಳು ಉದ್ಭವಿಸುವುದಿಲ್ಲ. ಅಪ್ಪಿ ತಪ್ಪಿಯೂ ಅವರಿಗೆ ಗೊತ್ತಿಲ್ಲದಂತೆ ಛಾಯಾಚಿತ್ರ ತೆಗೆಯುವುದಾಗಲಿ, ಧ್ವನಿಮುದ್ರಣ ಮಾಡಿಕೊಳ್ಳುವುದಾಗಲಿ ಮಾಡಬಾರದು. ಸಂಶೋಧಕ ತನ್ನ ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆಯೇ ಛಾಯಾಚಿತ್ರ ಅಥವಾ ಧ್ವನಿಮುದ್ರಣ ಮಾಡಿಕೊಳ್ಳಬೇಕು.ಸಂದರ್ಶನ ಮಾಡುವಾಗ ಬರೆದುಕೊಳ್ಳುವುದಕ್ಕಿಂತ ಧ್ವನಿಮುದ್ರಣ ಮಾಡಿಕೊಳ್ಳುವುದು ಸಂಶೋಧನೆಗೆ ಹೆಚ್ಚು ಉಪಯುಕ್ತವಾಗುತ್ತದೆ.ಇಲ್ಲವಾದರೆ ಅವರ ಭಾಷೆ, ಶಬ್ದಗಳ ಉಚ್ಚರಣೆ ಬರವಣಿಗೆಗೆ ತೊಡಕಾಗುತ್ತವೆ.

೩. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

ಪರಿಶಿಷ್ಟ ಪಂಗಡವೆಂದು ಕರೆಯಿಸಿಕೊಳ್ಳುವ ಬುಡಕಟ್ಟುಗಳು ಭಾರತದಾದ್ಯಂತ ಹರಡಿಕೊಂಡಿವೆ. ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದ ಇವರು ಬೆಟ್ಟ ಗುಡ್ಡ, ಕಣಿವೆ-ಕಾನನ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆರ್ಯರು ಭಾರತಕ್ಕೆ ಬಂದೊಡನೆ ಭಾರತದಲ್ಲಿದ್ದ ಮೂಲನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ ಹೊಡೆದೋಡಿಸಿದ ನಂತರ ಆ ಮೂಲನಿವಾಸಿಗಳು ಚದುರಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದಾರೆಂದು ಇತಿಹಾಸ ತಜ್ಞರು ಅಭಿಪ್ರಾಯ ಪಡುವರು. ೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟಿನವರು ಶೇಕಡ ೮.೦೮ರಷ್ಟಿದ್ದರೆ, ಕರ್ನಾಟಕದಲ್ಲಿ ಶೇಕಡ ೪.೨೬ರಷ್ಟು ಬುಡಕಟ್ಟಿನವರಿದ್ದರು. ಅತಿ ಹೆಚ್ಚು ಬುಡಕಟ್ಟಿನವರು ಇರುವ ಮಧ್ಯಪ್ರದೇಶದಲ್ಲಿ ಒಂದು ಕೋಟಿಗೂ ಅಧಿಕ ಸಂಖ್ಯೆಯ ಆದಿವಾಸಿಗಳಿದ್ದಾರೆ. ಅತ್ಯಂತ ಕಡಿಮೆ ಆದಿವಾಸಿಗಳಿರುವುದು ಪಂಜಾಬ್ ರಾಜ್ಯದಲ್ಲಿ. ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನದಲ್ಲಿ ಇವರನ್ನು 'ಪರಿಶಿಷ್ಟ ಬುಡಕಟ್ಟು' ಎಂದು ಕರೆದು ಕಾನೂನಿನ ಬೆಂಬಲವನ್ನು ನೀಡಿರುತ್ತದೆ. ಪ್ರಸ್ತುತ ಭಾರತದಲ್ಲಿ ಸುಮಾರು ೬೩೦ ಅಂಗೀಕೃತ ಆದಿವಾಸಿಗಳ ಬುಡಕಟ್ಟುಗಳಿವೆ. ಈ ಬುಡಕಟ್ಟು ಜನಾಂಗವನ್ನು ಭಾರತದ ಬಹುಪಾಲು ರಾಜ್ಯಗಳಲ್ಲಿ 'ಆದಿವಾಸಿಗಳು' ಎಂದೇ ಕರೆಯುತ್ತಾರೆ.

೩.೧. ಆದಿವಾಸಿಗಳ ಅರ್ಥ ವಿವರಣೆ

ಸಾಮಾನ್ಯವಾಗಿ ಒಂದು ದೇಶದ ಮೂಲನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಇವರನ್ನು ಸಂಚಾರಿ ಜನಾಂಗ, ಆದಿಪ್ರಜಾ, ಅನಾಗರಿಕರು, ಬುಡಕಟ್ಟು ಜನಾಂಗ, ಅರಣ್ಯ ವಾಸಿಗಳು, ಜನಜಾತಿ ಪಂಗಡ, ಗಿರಿಜನರು, ಸಂಪ್ರದಾಯ ಪ್ರಿಯರು, ಸರ್ವಚೇತನವಾದಿಗಳು, ಹಿಂದುಳಿದ ಹಿಂದುಗಳು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಹಾತ್ಮಗಾಂಧೀಜಿಯವರು ಆದಿವಾಸಿಗಳನ್ನು 'ಗಿರಿಜನರು' ಎಂದು ಕರೆದಿದ್ದಾರೆ. ಡಾ.ಜಿ.ಎಸ್. ಘೂರ್ಯ ಆದಿವಾಸಿಗಳನ್ನು 'ಹಿಂದುಳಿದ ಹಿಂದುಗಳು' ಎಂದು ಕರೆದಿದ್ದಾರೆ. ಭಾರತದ ಸಂವಿಧಾನದ ೩೪೨ನೇ ಕಲಮಿನಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಬುಡಕಟ್ಟುಗಳು' ಎಂದು ಉಲ್ಲೇಖಿಸಲಾಗಿದೆ. ಸಂವಿಧಾನವು ೫೭೩ ಪರಿಶಿಷ್ಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದ್ದರೂ ಈ ಬುಡಕಟ್ಟುಗಳ ಸಂಖ್ಯೆಯು ಇನ್ನೂ ಅಧಿಕವಾಗಿದೆ. ದೇಶದ ಒಟ್ಟು ೩೨೫ ತಾಲ್ಲೂಕುಗಳಲ್ಲಿ ಬುಡಕಟ್ಟು ಜನಾಂಗಗಳೇ ಬಹುಸಂಖ್ಯಾತರಾಗಿ ವಾಸಿಸುವರು. ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲಪ್ರದೇಶ, ಮಿಜೋರಾಂ, ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಆದಿವಾಸಿಗಳು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಾರೆ.

ಆದಿವಾಸಿ ಸಮುದಾಯಗಳ ಬಗೆಗೆ ಆಳವಾದ ಅಧ್ಯಯನವನ್ನು ನಡೆಸಿ, ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಮಾನವಶಾಸ್ತ್ರಜ್ಞರಿಗೆ ಸಲ್ಲುವದು. ಎಡ್ಗರ್ ಥರ್‌ಸ್ಟನ್, ವೆರಿಯರ್ ಎಲ್ವಿನ್, ಆರ್.ಎಸ್. ಸಕ್ಸೇನಾ, ಡಾ. ಜಿ.ಎಸ್. ಘುರ್ಯೆ, ಫೇರ್‌ಚೈಲ್ಡ್, ಮಿಲ್ಸ್, ಎ.ಎ.ಡಿ ಲೂಯಿಸ್, ಸ್ಮಿಥ್, ಕೆ.ರಂಗಾಚಾರಿ, ಎಲ್.ಕೆ.ಅಯ್ಯರ್, ಎಚ್.ವಿ. ನಂಜುಂಡಯ್ಯ, ಡಾ. ಡಿ.ಎನ್. ಮಜುಮದಾರ ಮುಂತಾದ ಮಾನವಶಾಸ್ತ್ರಜ್ಞರು ಆದಿವಾಸಿ ಸಮುದಾಯ ಹಾಗೂ ಸಂಸ್ಕೃತಿಗಳ ಬಗ್ಗೆ ಅಧ್ಯಯನ ನಡೆಸಿ ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ "Caste and tribes of southern India" ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳು.

ಆದಿವಾಸಿಗಳೆಂದರೆ ಯಾರು ಎಂಬುದಕ್ಕೆ "ಭಾರತದ ಇಂಪೀರಿಯಲ್ ಗೆಜೆಟಿಯರ್ "ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ ಪೂರ್ವದಲ್ಲಿ, ಒಳ-ಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿದ್ದಿರಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಆದಿವಾಸಿ ಸಮಾಜ ಎನ್ನಬಹುದು." ಅದೇ ರೀತಿ ಮಾನವಶಾಸ್ತ್ರದ ನಿಘಂಟಿನ ಪ್ರಕಾರ, "ಒಂದು ಸಾಮಾಜಿಕ ಸಮೂಹವು ನಿರ್ದಿಷ್ಟನೆಲೆ, ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಂಘಟನಾ ಸ್ವರೂಪವನ್ನು ಹೊಂದಿದ್ದರೆ ಅಂತಹ ಸಮೂಹವು ಬುಡಕಟ್ಟು ಎನಿಸಿಕೊಳುತ್ತದೆ." ಡಬ್ಲ್ಯು.ಜೆ.ಪೆರ್ರಿ ಪ್ರಕಾರ "ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನಾಡುವ ಜನಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯಬಹುದು" ಎಂದಿದ್ದಾರೆ. ಬೋಗಾರ್ಡಸ್ ಎಂಬಾತನ ಅಭಿಪ್ರಾಯದಲ್ಲಿ "ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ,ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಆದಿವಾಸಿ ಸಮೂಹ" ಎಂದಿದ್ದಾರೆ. ಒಟ್ಟಾರೆ ಒಂದು ದೇಶದ ಮೂಲನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವಜರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗಿದೆ.

೩.೨. ಬುಡಕಟ್ಟು ಜನಾಂಗದ ಗುಣಲಕ್ಷಣಗಳು

ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಹೊರಗಿರುವ, ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ಬೇರ್ಪಟ್ಟ,ಗುಡ್ಡ ಗಾಡುಗಳಲ್ಲಿ ವಾಸಿಸುವ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದ ಅಸಂಖ್ಯ 'ಬುಡಕಟ್ಟು' ಜನಾಂಗ ಭಾರತದಲ್ಲಿದ್ದಾರೆ. ಒಂದೊಂದು ಬುಡಕಟ್ಟುಗಳು, ಒಂದೊಂದು ಗುಣಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಪರಸ್ಪರ ಹೋಲಿಕೆ ಮತ್ತು ಏಕತೆಗಳು ಕಂಡುಬರುತ್ತವೆ. ಅಂತಹ ಪ್ರಮುಖ ಗುಣಲಕ್ಷಣಗಳೆಂದರೆ.

೧. ನಿರ್ದಿಷ್ಟ ಭೂ ಪ್ರದೇಶ : ಪ್ರತಿಯೊಂದು ಬುಡಕಟ್ಟುಗಳಿಗೆ ತಮ್ಮದೇ ಆದ ನಿಶ್ಚಿತ ನೆಲೆ ಇರುತ್ತದೆ. ಬೇಟೆ, ಪಶುಪಾಲನೆ, ಕೃಷಿ, ವ್ಯಾಪಾರ ಹಾಗೂ ಉಪಜೀವನಕ್ಕಾಗಿ ಅನೇಕ ಕಡೆ ಸಂಚರಿಸುತ್ತಾರೆ. ಆದರೂ ತಾವು ಹುಟ್ಟಿದ ಸ್ಥಳ ಮತ್ತು ಪ್ರದೇಶದ ಬಗೆಗೆ ಸಾಮುದಾಯಿಕ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇವರು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ಪಾಳ್ಯ, ಹಾಡಿ, ರೆಪ್ಪ, ದೊಡ್ಡಿ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ನಾಗಾ, ಖಾಸಿ, ಗಾರೋ ಜನರು ಅಸ್ಸಾಂ ಭಾಗದಲ್ಲಿಯೂ, ತೋಡರು, ಬಡಗರು ನೀಲಗಿರಿ ಬೆಟ್ಟಗಳಲ್ಲಿಯೂ,

ಗೊಂಡರು ಗೊಂಡಾರಣ್ಯದಲ್ಲಿಯೂ; ವೆಡ್ಡ ಜನರು ಸಿಲೋನಿನಲ್ಲಿಯೂ; ಪಾರ್ಧಿ, ಕಾಡುಗೊಲ್ಲ, ಕಾಡುಕುರುಬ ಕರ್ನಾಟಕದಲ್ಲಿಯೂ; ಅಂಗೆ, ಒಂಗೆ ಮತ್ತು ಜಾರವ ಅಂಡಮಾನ್ ಮತ್ತು ನಿಕೋಬಾರ ದ್ವೀಪಗಳಲ್ಲಿಯೂ; ಜಿಪ್ಸಿ, ಜ್ಯೂ ಮತ್ತು ಚೆಂಚರು ಆಂಧ್ರಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಇಂತಹ ನಿರ್ಧಿಷ್ಟ ಭೂ ಪ್ರದೇಶದಲ್ಲಿ ವಾಸಮಾಡುವುದರಿಂದ ಅವರಲ್ಲಿ ಸಹಕಾರ ಒಗ್ಗಟ್ಟು ಮತ್ತು ಸಾಮುದಾಯಿಕ ಭಾವನೆ ಅಧಿಕವಾಗಿರುತ್ತದೆ.

೨. ನಿರ್ಧಿಷ್ಟ ಹೆಸರು : ಭಾರತದಲ್ಲಿ ನೆಲೆಸಿರುವಂತಹ ಪ್ರತಿಯೊಂದು ಬುಡಕಟ್ಟುಗಳಿಗೂ ತಮ್ಮದೇ ಆದ ವಿಶಿಷ್ಟ ಅಥವಾ ನಿರ್ಧಿಷ್ಟ ಹೆಸರುಗಳಿವೆ. ಉದಾ: ಪಾರ್ಧಿ, (ಹರಣಶಿಕಾರಿ) ನಾಗ, ತೋಡ, ಭಿಲ್ಲ, ಚೆಂಚು, ಬೇಡ, ಗೊಂಡ, ಸಬರ, ಕಾಡುಕುರುಬ, ಸಂತಾಲ, ಲಿಂಬು, ಗಾರೋ, ಬಡಗ, ಮುಂಡ ಮುಂತಾದವು ಆದಿವಾಸಿಗಳ ಹೆಸರುಗಳಾಗಿವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.

೩.ಸಾಮಾನ್ಯ ಭಾಷೆ : ಆದಿವಾಸಿಗಳು ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುತ್ತಾರೆ. ಆ ಭಾಷೆಯನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು ಕಷ್ಟ. ಆದಿವಾಸಿ ಭಾಷೆಗೆ ಲಿಪಿಯಿಲ್ಲದೇ ಇರುವುದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದಿವಾಸಿ ಭಾಷೆಗಳ ಮೇಲೆ ನೆರೆಹೊರೆಯ ಪ್ರದೇಶಗಳ ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾಹರಣೆಗೆ ಕರ್ನಾಟಕದ ಪಾರ್ಧಿಯರು ಹಿಂದಿ ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವ ಬಡಗರು ಮತ್ತು ತೋಡರು ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಹಿಂದಿ ಮುಂತಾದ ಭಾಷೆಗಳಲ್ಲಿ ಒಂದೊಂದು ಶಬ್ದಗಳನ್ನು ಮಾತನಾಡುವಾಗ ಬಳಸುತ್ತಾರೆ. ಆದ್ದರಿಂದ ಆದಿವಾಸಿಗಳ ಭಾಷೆಗಳನ್ನು ನಾಡಭಾಷೆಗಳೆಂದು ಕರೆಯುತ್ತಾರೆ.

೪. ಒಂದೇ ರೀತಿಯ ರಾಜಕೀಯ ವ್ಯವಸ್ಥೆ : ಪ್ರತಿಯೊಂದು ಆದಿವಾಸಿ ಪಂಗಡವು ತನ್ನದೇ ಆದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿರುತ್ತವೆ. ಪ್ರತಿಯೊಂದು ಸಮುದಾಯಕ್ಕೂ ಒಬ್ಬ ಮುಖ್ಯಸ್ಥನಿದ್ದು; ಈತ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣವನ್ನು ತರುತ್ತಾನೆ. ತಪ್ಪಿತಸ್ಥರಿಗೆ ದಂಡ, ಶಿಕ್ಷೆ, ಬಹಿಷ್ಕಾರ ಮುಂತಾದ ಕಠಿಣ ಶಿಕ್ಷೆವಿಧಿಸುವ ಅಧಿಕಾರವನ್ನು ಆದಿವಾಸಿ ಸಮುದಾಯದ ಮುಖ್ಯಸ್ಥ ಅಥವಾ ನಾಯಕ ಪಡೆದಿರುತ್ತಾನೆ. ನಾಯಕನನ್ನು ಆಯ್ಕೆಮಾಡುವ ಪದ್ಧತಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಅನುವಂಶೀಯವಾಗಿ ಇಲ್ಲವೇ ಚುನಾವಣೆಯ ಮೂಲಕ ನಡೆಯುತ್ತದೆ. ಕರ್ನಾಟಕದ ಪಾರ್ಧಿಯರಲ್ಲಿ ಕಟ್ಟಿಮನಿ, ಯಜಮಾನ, ಪೂಜಾರಿ ಮೊದಲಾದ ಅಧಿಕಾರಯುತ ಹುದ್ದೆಗಳು ಸಾಮಾನ್ಯವಾಗಿ ಅನುವಂಶೀಯವಾಗಿ ಆಯ್ಕೆ ಮಾಡುತ್ತಾರೆ. ಅಸ್ಸಾಂಮದ ನಾಗಾ ಬುಡಕಟ್ಟಿನಲ್ಲಿ ಯಾವ ವ್ಯಕ್ತಿ ತನ್ನ ಮನೆಯಲ್ಲಿ ಹೆಚ್ಚು ಜನರ ತಲೆ ಬುರುಡೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವನೋ ಅವನನ್ನು ನಾಯಕನೆಂದು ಆಯ್ಕೆ ಮಾಡುತ್ತಾರೆ. ಕೆಲವು ಆದಿವಾಸಿ ಸಮೂಹಗಳಲ್ಲಿ ಪ್ರತಿಯೊಂದು ಪಂಗಡಕ್ಕೂ ಒಂದೊಂದು 'ಪಂಚಾಯಿತಿ' ವ್ಯವಸ್ಥೆ ಇರುತ್ತದೆ. ಅದು ನ್ಯಾಯಗಳನ್ನು ಬಗೆಹರಿಸುವ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ಕಾರ್ಯದಲ್ಲಿ ಮುಖ್ಯಸ್ಥನಿಗೆ ನೆರವು ನೀಡುತ್ತದೆ. ಕಟ್ಟು ನಿಟ್ಟಾದ ರಾಜಕೀಯ ಸಂಘಟನೆ ಮತ್ತು ಅನೌಪಚಾರಿಕ ಸಾಮಾಜಿಕ ನಿಯಂತ್ರಣಗಳು ಬುಡಕಟ್ಟು ಜನರ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ತರುತ್ತವೆ.

೫. ಸರಳ ಮತ್ತು ಸ್ವತಂತ್ರ ಜೀವನ : ಆದಿವಾಸಿ ಪಂಗಡಗಳು ಬಹಳಮಟ್ಟಿಗೆ ಸರಳವೂ, ಸ್ವತಂತ್ರವೂ ಮತ್ತು ಸ್ವಯಂ ಪರಿಪೂರ್ಣವೂ ಆಗಿರುತ್ತವೆ. ನಗರದ ಕೃತಕ ಹಾಗೂ ಆಡಂಬರದಿಂದ ಆದಿವಾಸಿಗಳು ಬಹುದೂರವಿರುತ್ತಾರೆ. ಅವರು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಮುಂದೆ ಬಂದಿಲ್ಲ. ಹಿಂದೆ ಮರದ ತೊಗಟೆ, ಪ್ರಾಣಿಗಳ ಚರ್ಮ, ಕಾಡಿನ ಎಲೆ, ಹುಲ್ಲಿನಿಂದ ಮಾಡಿದ ಉಡುಪುಗಳನ್ನೇ ಧರಿಸುತ್ತಿದ್ದರು. ಅಂಡಮಾನ್ ದ್ವೀಪದ ಒಂಗೆಗಳು ಇಂದಿಗೂ ಬೇಟೆಯಾಡಿ, ಮೀನುಹಿಡಿದು, ಗೆಡ್ಡೆಗೆಣಸುಗಳನ್ನು ತಿಂದು ಬದುಕುತ್ತಾರೆ. ಕೆಲವೊಂದು ಆದಿವಾಸಿಗಳು ಕಲ್ಲನ್ನು ಕುಟ್ಟಿ ಬೆಂಕಿ ಹಚ್ಚಿಸಿಕೊಳ್ಳುವುದು, ಮರದ ಮೇಲೆ ಜೋಕಾಲಿ ಕಟ್ಟಿ ಮಲಗುವುದು,ಸರಳ ಆಹಾರ ಪದ್ಧತಿ, ಸಾಮೂಹಿಕ ನೃತ್ಯ, ಜಾತ್ರೆ, ಉತ್ಸವ, ಹಬ್ಬಗಳಿಂದ ಅವರು ತಮ್ಮ ಕ್ಷೇತ್ರದಲ್ಲಿಯೇ ಮನರಂಜನೆ ಪಡೆಯುತ್ತಾರೆ. ಕಳ್ಳತನ, ಮೋಸ, ಕಪಟ ಇವುಗಳಾವು ತಿಳಿಯುವುದಿಲ್ಲ. ಇಂದಿಗೂ ಕೆಲವೊಂದು ಆದಿವಾಸಿಗಳಲ್ಲಿ "ಅದಲು ಬದಲು ಪದ್ಧತಿ" ಅಸ್ತಿತ್ವದಲ್ಲಿದೆ. ಇವರ ಪ್ರಮುಖ ವೃತ್ತಿ ಬೇಟೆ, ಮೀನು ಹಿಡಿಯುವುದು,ಅರಣ್ಯಗಳಿಂದ ಜೇನು, ಹಣ್ಣು, ಹಂಪಲು, ಗೆಡ್ಡೆಗೆಣಸು, ಕಾಡುಮೆಣಸು, ಔಷಧಿಯ ಗಿಡಮೂಲಿಕೆಗಳು ಮುಂತಾದವುಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಇತ್ತೀಚೆಗೆ ಪಶುಪಾಲನೆ ಮತ್ತು ಕೃಷಿ ಪ್ರಧಾನ ವೃತ್ತಿಯಾಗಿದೆ. ಹೀಗಾಗಿ ಜೀವನದ ಹಲವಾರು ಕ್ಷೇತ್ರಗಳಲ್ಲಿಯೂ ಅವರು ಸಂಪೂರ್ಣವಾಗಿ ಸ್ವತಂತ್ರರೆಂದು ಹೇಳಬಹುದು.

೬. ರಕ್ತ ಸಂಬಂಧದ ಬಾಂಧವ್ಯ : ಬುಡಕಟ್ಟು ಸಮುದಾಯಗಳಲ್ಲಿ 'ಕರುಳುಬಳ್ಳಿಯ' ಸಂಬಂಧ ಅಥವಾ 'ರಕ್ತ ಸಂಬಂಧ'ಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಕುಟುಂಬ, ವಂಶ, ಕುಲ, ಬಳಿ, ಬೆಡಗು ಮುಂತಾದ ಚಿಕ್ಕ ಸಮೂಹಗಳು ರಕ್ತ ಸಂಬಂಧದ ಆಧಾರದ ಮೇಲೆಯೇ ರಚಿತವಾಗಿವೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ಮದುವೆ ಮಂಗಳ ಕಾರ್ಯಗಳಲ್ಲಿ ಸೋದರಮಾವ ಮತ್ತು ಸೋದರತ್ತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಯಾವುದೇ ಕೌಟುಂಬಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಐಕ್ಯತೆ, ಒಗ್ಗಟ್ಟು ಮತ್ತು ಸಹಕಾರ ಭಾವನೆ ಪ್ರಧಾನವಾಗಿರುತ್ತದೆ. ಕೆಲವೊಂದು ಸಲ ಕುಲ, ಬಳಿ, ಬೆಡಗುಗಳು ಬೇರೆ ಬೇರೆಯಿದ್ದರೂ ಸಹೋದರ ಭಾವನೆಯಿಂದ ವರ್ತಿಸುತ್ತಾರೆ. ಉದಾ: ಕರ್ನಾಟಕದಲ್ಲಿ ಪಾರ್ಧಿ, ಹಕ್ಕಿಪಿಕ್ಕಿ, ಅಡವಿಚೆಂಚರು ನಾವು ಸಹೋದರ ಸಂಬಂಧಿಗಳೆಂದೇ ಹೇಳಿಕೊಳ್ಳುತ್ತಾರೆ. ತಾವೆಲ್ಲರು ಒಬ್ಬ ಮೂಲ ಪುರುಷ ಅಥವಾ ಬುಡಕಟ್ಟಿಗೆ ಸೇರಿದವರೆಂದು ಭಾವಿಸುತ್ತಾರೆ.

೭. ಒಂದೇ ಧರ್ಮ ಮತ್ತು ಸಂಸ್ಕೃತಿ : ಸರ್ವಚೇತನ ಪಂಥವು ಆದಿವಾಸಿಗಳ ಧಾರ್ಮಿಕ ಭಾವನೆಯಾಗಿದೆ. ಧಾರ್ಮಿಕ ನಿಷ್ಠೆ, ಸಂಪ್ರದಾಯ ಶರಣತೆ, ಪ್ರಕೃತಿ ಪೂಜೆ, ಮೂರ್ತಿ ಪೂಜೆ ಮತ್ತು ಕುಲದೇವತಾ ಪೂಜೆಗಳನ್ನು ಆಚರಿಸುತ್ತಾರೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಕಲ್ಲು ಬಂಡೆಗಳನ್ನು ಅವರು ಪೂಜಿಸುತ್ತಾರೆ. ಭೂತ-ಪ್ರೇತ, ಮಾಟ-ಮಂತ್ರಗಳ ಬಗೆಗೆ ನಂಬಿಕೆಯುಳ್ಳವರು. ಜೀವನದ ಕಷ್ಟ, ನಷ್ಟ, ರೋಗ ರುಜಿನಗಳು ಬಂದಾಗ ಅವರು ವಿಶೇಷವಾಗಿ ಮಾಟ-ಮಂತ್ರಗಳಿಂದಲೇ ಪರಿಹಾರ ಕಂಡು ಕೊಳ್ಳುತ್ತಾರೆ. ಪ್ರತಿಯೊಂದು ಚಟುವಟಿಕೆಗಳಲ್ಲಿ ಧಾರ್ಮಿಕ ಮನೋಭಾವನೆಗಳು ಅವರಲ್ಲಿ ಎದ್ದು ಕಾಣುತ್ತವೆ. ಭಾರತದ ಜನಗಣತಿಯ ವರದಿಯಲ್ಲಿ ಆದಿವಾಸಿ ಬುಡಕಟ್ಟುಗಳನ್ನು 'ಸರ್ವಚೇತನವಾದಿಗಳು' ಎಂದು ಕರೆದಿದ್ದಾರೆ. "ಆದಿವಾಸಿಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ", "ಅವರ ಇಡೀ ಜೀವನವು ಧರ್ಮದಲ್ಲಿ ಅದ್ದಿ ತೆಗೆದಂತಿದೆ" ಎಂದು ಸರ್. ಜೇಮ್ಸ್ ಫ್ರೇಜರ್

ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.[1] ಆದರೆ ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಬುಡಕಟ್ಟಿನವರಲ್ಲಿಯೂ ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಕಡಿಮೆಯಾಗುತ್ತಿರುವುದು ವಿಪರ್ಯಾಸವೇ ಸರಿ.

೮. ಒಳ ಪಂಗಡ ವಿವಾಹ ಪದ್ಧತಿ : ಬುಡಕಟ್ಟುಗಳಲ್ಲಿ ಒಳಪಂಗಡ ವಿವಾಹಗಳು ಜರುಗುತ್ತವೆ. ಸಮುದಾಯದ ಪವಿತ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದ ಈ ಪದ್ಧತಿಗಳು ಅಸ್ತಿತ್ವಕ್ಕೆ ಬಂದಿವೆ. ವ್ಯಕ್ತಿಯು ತನ್ನ ಬಾಳ ಸಂಗಾತಿಯನ್ನು ತಾನು ಹುಟ್ಟಿದ ಪಂಗಡದಲ್ಲಿಯೇ ಆರಿಸಿಕೊಳ್ಳಬೇಕು. ಅವರವರ ಕುಲಪದ್ಧತಿಗೆ ತಕ್ಕಂತೆ ಗಂಡು ಹೆಣ್ಣುಗಳ ಆಯ್ಕೆ, ವಿವಾಹದ ನಿಯಮಗಳನ್ನು ಪಾಲಿಸುತ್ತಾರೆ. ಬ್ರಾಹ್ಮಣ ಪೌರೋಹಿತ್ಯಕ್ಕೆ ಇವರಲ್ಲಿ ಅವಕಾಶವಿಲ್ಲ. ರಕ್ತ ಸಂಬಂಧಕ್ಕೆ ಬಹಳ ಮಹತ್ವ ಕೊಟ್ಟು ವಿವಾಹ ಸಂಬಂಧ ಬೆಳೆಸುತ್ತಾರೆ. ಉದಾ: ಪಾರ್ಧಿಯರ ಗಂಡು ಪಾರ್ಧಿಯರ ಹೆಣ್ಣನ್ನೇ ವಿವಾಹಕ್ಕೆ ಆಯ್ಕೆ ಮಾಡಿದರೂ ಅವರಿಬ್ಬರ ಕುಲ ಅಥವಾ ಬೆಡಗುಗಳು ಬೇರೆಯಾಗಿರುತ್ತವೆ. ಅರಿತೋ ಅರಿಯದೆಯೋ ಒಂದೇ ಬೆಡಗಿನಲ್ಲಿ ಮದುವೆಯಾಗಬಾರದು ಇದರಿಂದ ವಂಶಾಭಿವೃದ್ಧಿಗೆ ಹಾನಿ ಎಂಬ ವೈಜ್ಞಾನಿಕ ಸತ್ಯವನ್ನು ಬುಡಕಟ್ಟುಗಳು ತಿಳಿದುಕೊಂಡಂತೆ ಕಾಣುತ್ತದೆ. ಆದಿವಾಸಿಗಳು ಒಳಪಂಗಡ ವಿವಾಹ ಪದ್ಧತಿ ಅನುಸರಿಸಿದರೂ, ಅವರ ವಿವಾಹ ನಿಯಮ, ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇಧನ, ಲೈಂಗಿಕ ಕಟ್ಟುಪಾಡುಗಳು ಮೊದಲಾದವುಗಳ ವಿಷಯವಾಗಿ ಆದಿವಾಸಿಗಳು ಇತರರಿಗಿಂತ ಭಿನ್ನವಾದ ತನ್ನದೇ ಆದ ನಿಯಮಗಳನ್ನು ಪಾಲಿಸುತ್ತಾರೆ.

೯. ಸೌಂದರ್ಯದ ಪ್ರಜ್ಞೆ ಉಳ್ಳವರು : ಸರಳ ಮತ್ತು ಸ್ವತಂತ್ರ ಜೀವಿಗಳಾದ ಆದಿವಾಸಿಗಳು, ತಮ್ಮ ಸೌಂದರ್ಯಕ್ಕೆ ಅಷ್ಟೇ ಮಹತ್ವ ಕೊಡುತ್ತಾರೆ. ಸೌಂದರ್ಯೋಪಾಸಕರು ಮತ್ತು ಕಲಾರಾಧಕರಾದ ಆದಿವಾಸಿಗಳ ಜೀವನದಲ್ಲಿ ಗಾಯನ, ನೃತ್ಯ, ಕೆತ್ತನೆ, ಅಲಂಕಾರ, ವಿಚಿತ್ರ ರೀತಿಯ ಒಡವೆ ವಸ್ತ್ರಗಳನ್ನು ಹೊಂದಿದ ಕಲಾವಂತರು. ಗುಹೆ, ಬಂಡೆ ಮತ್ತು ಮಾನವನ ತಲೆಬುರುಡೆಗಳ ಮೇಲೆ ಚಿತ್ರ ಬರೆಯುವುದು, ಬುಟ್ಟಿ ಹೆಣೆಯುವುದು, ಆಟದ ಸಾಮಾನುಗಳನ್ನು ತಯಾರಿಸುವುದು, ಬಿಲ್ಲು, ಬಾಣ ಮತ್ತು ದೇವರುಗಳನ್ನು ಅನೇಕ ಬಗೆಯಲ್ಲಿ ಅಲಂಕರಿಸಿಕೊಳ್ಳುತ್ತಾರೆ. ಆದಿವಾಸಿ ಸ್ತ್ರೀಯರು ಕೇಶಾಲಂಕಾರ, ಹೂವು ಮುಡಿಯುವುದು, ಆಭರಣ, ಕೈ ಬಳೆಗಳು, ಗೊಲ್ಲಕಡಗ, ಬದ್ದು, ಕಂಠಾಭರಣ, ಬಾಚಣಿಕೆ, ಬಿದರಿನ ವಸ್ತುಗಳು, ವಿವಿಧ ಜಾತಿಯ ಮಣಿ ಸರಗಳು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು, ಪ್ರಾಣಿಗಳ ಗರಿ, ಕೊಂಬು, ಹಲ್ಲು, ಉಗುರುಗಳನ್ನು ಕೊಡು ಅಲಂಕಾರಕ್ಕಾಗಿ ಬಳಸುತ್ತಾರೆ.

೧೦. ರಕ್ಷಣೆ ಮತ್ತು ಐಕ್ಯತೆಯ ಭಾವನೆ : ಆದಿವಾಸಿಗಳು ಯಾವಾಗಲೂ ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ತಮ್ಮ ಬುಡಕಟ್ಟಿನ ಗುಟ್ಟನ್ನು ಕಾಪಾಡಿಕೊಂಡು ಬರುತ್ತಾರೆ. ಹೊರಗಿನ ಜನರನ್ನು ಸಂಶಯದಿಂದಲೇ ಕಾಣುತ್ತಾರೆ.

೩.೩. ಭಾರತದಲ್ಲಿ ಬುಡಕಟ್ಟುಗಳ ವಿಂಗಡಣೆ

ಆದಿವಾಸಿಗಳು ದೇಶಾದ್ಯಂತ ಚದುರಿಹೋಗಿ ವಿವಿಧ ಭಾಷೆ, ಸಂಸ್ಕೃತಿ ಮತ್ತು ಜನಾಂಗೀಯ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಬಹುಸಂಖ್ಯಾತ ಆದಿವಾಸಿಗಳನ್ನು ಹೊಂದಿರುವ ರಾಜ್ಯಗಳು ಪ್ರಮುಖವಾಗಿ ಮಧ್ಯಪ್ರದೇಶ, ಒರಿಸ್ಸಾ, ಮತ್ತು ಬಿಹಾರ ಈ ಮೂರು ರಾಜ್ಯಗಳಲ್ಲಿ ಅರ್ಧದಷ್ಟು ಆದಿವಾಸಿಗಳು ಕಂಡು ಬರುತ್ತಾರೆ. ಇವರಲ್ಲಿ,

ಮಧ್ಯ ಪ್ರದೇಶದಲ್ಲಿ ಹೆಚ್ಚು ಆದಿವಾಸಿಗಳು ಕಂಡು ಬರುತ್ತಾರೆ. ಬಂಗಾಲ ಉಪಸಾಗರದಲ್ಲಿರುವ ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ಅಂಗೆ, ಒಂಗೆ, ಮತ್ತು ಜಾರವ ಆದಿವಾಸಿ ಪಂಗಡಗಳಿವೆ. ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಅವರು ವಾಸಿಸುವ ಭೂಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ.

೧. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು

ಭಾರತದ ಈಶಾನ್ಯ ಗಿರಿಕಣಿವೆ, ಹಾಗೂ ಜಮುನಾ, ಪದ್ಮಾ ಮತ್ತು ಬ್ರಹ್ಮಪುತ್ರಾ ನದಿ ದಂಡೆಗಳಲ್ಲಿ ವಾಸಿಸುವ ಆದಿವಾಸಿಗಳನ್ನು ಈಶಾನ್ಯ ವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಈ ವಲಯದ ಆದಿವಾಸಿಗಳು ದೇಶದ ಒಟ್ಟು ಆದಿವಾಸಿಗಳ ೧೨.೩೩% ರಷ್ಟಿದ್ದಾರೆ. ಅಸ್ಸಾಂ, ನಾಗಾಲ್ಯಾಂಡ್, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ,ಅರುಣಾಚಲ ಪ್ರದೇಶ, ನೇಪಾಳ, ಭೂತಾನ, ಮೇಘಾಲಯ ಮತ್ತು ಸಿಕ್ಕಿಂ ಕೂಡ ಈ ವಲಯಕ್ಕೆ ಸೇರಿಕೊಂಡಿವೆ. ಬಂಗಾಳ ಮತ್ತು ಬಿಹಾರ ರಾಜ್ಯಗಳು ಈ ವಲಯದಲ್ಲಿಯೇ ಇವೆ. ಈ ಭಾಗದ ಮುಖ್ಯ ಆದಿವಾಸಿಗಳೆಂದರೆ ನಾಗಾ, ಅಂಗಾಮಿ, ಖಾಸಿ, ಆಕಾ, ಗಾರೋ, ಲಿಂಬೂ, ಲೆಪ್ಚಾ, ಗುರುಂಗ, ಮಿಖಿರ್,ಕಚಾಲಿ, ರಾಭಾ, ದುಶ್ಮೀ, ಚಕ್ಮೀ, ದಾಪ್ಲಾ ಇತ್ಯಾದಿ.

ಈಶಾನ್ಯ ವಲಯದ ಆದಿವಾಸಿಗಳು ಸಾಮಾನ್ಯವಾಗಿ ಮಂಗೋಲಿಯಾ ಬುಡಕಟ್ಟಿಗೆ ಸೇರಿದವರಾಗಿದ್ದಾರೆ. ಇವರ ಭಾಷೆ "ಟಿಬೆಟೊ-ಚೀನ" ಸೇರಿದ ಭಾಷೆಗಳನ್ನಾಡುತ್ತಾರೆ. ಇವರ ಪ್ರಮುಖ ಗುಣಲಕ್ಷಣಗಳೆಂದರೆ ಹಳದಿ ಬಣ್ಣ, ಅರ್ಧತೆರೆದಂತೆ ಕಾಣುವ ಕಣ್ಣುಗಳು, ಚಪ್ಪಟೆ ಮೂಗು, ಒರಟಾದ ಕೂದಲು, ಉದ್ದತಲೆ, ಸರಸಾರಿ ಎತ್ತರ. ಈ ಪ್ರದೇಶದ ಆದಿವಾಸಿಗಳು ನಾಗರಿಕತೆ ಮತ್ತು ಕೃಷಿಯಲ್ಲಿ ಮುಂದುವರೆದ ಆಧುನಿಕ ಗುಣಲಕ್ಷಣಗಳು ಹಾಗೂ ರಾಜಕೀಯ ಪ್ರಜ್ಞೆ ಉಳ್ಳವರು ಆಗಿದ್ದಾರೆ. ಗೃಹ ಕೈಗಾರಿಕೆಗಳಲ್ಲಿ ನೂಲುವುದು, ನೇಕಾರಿಕೆ ಮೊದಲಾದ ವೃತ್ತಿಗಳನ್ನು ಮಾಡುತ್ತಾರೆ. ಆದರೆ ಕಷ್ಟ ಸಹಿಷ್ಣುಗಳು, ಸದೃಢಕಾಯ ದವರೂ, ಸ್ವತಂತ್ರ ಪ್ರಿಯರೂ ಆಗಿರುವುದರ ಜೊತೆಗೆ ಯುದ್ಧ, ಕಲಹ ಹಾಗೂ ಬೇಟೆಯಲ್ಲಿ ಆಸಕ್ತಿಯುಳ್ಳ ಜನಾಂಗ. ಸೌಂದರ್ಯೋಪಾಸಕರು ಹಾಗೂ ಕಲಾಭಿರುಚಿ ಯುಳ್ಳವರು ಆಗಿರುತ್ತಾರೆ.ನಾಗಾ ಜನರ ಸಮೂಹ ನೃತ್ಯ ಮತ್ತು ಗಾಯನ ವಿಶ್ವವಿಖ್ಯಾತಿಯನ್ನು ಪಡೆದಿದೆ. ಇವರು ಮಾನವನ ಬೇಟೆಯಾಡಿ ಮನೆಯಲ್ಲಿ ತಲೆಬುರುಡೆಗಳನ್ನು ಶೇಖರಿಸಿಡುತ್ತಾರೆ. ದೇವರು ಧರ್ಮ ಮತ್ತು ದೈವಿಕ ನಂಬಿಕೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಇತ್ತೀಚೆಗೆ ವ್ಯವಸಾಯ ವೃತ್ತಿ ಕೈಗೊಂಡು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುತ್ತಿದ್ದಾರೆ.

೨. ಮಧ್ಯವಲಯದ ಆದಿವಾಸಿಗಳು

ಈ ವಲಯವು ಕೃಷ್ಣ, ನರ್ಮದ ಮತ್ತು ಗೋದಾವರಿ ನದಿಗಳ ಎಡ ಬಲ ದಂಡೆಗಳಲ್ಲಿ ವಾಸಿಸುವ ಆದಿವಾಸಿಗಳನ್ನು ಮಧ್ಯವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಮಧ್ಯ ಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಬಿಹಾರ ರಾಜ್ಯಗಳು ಮಧ್ಯವಲಯದಲ್ಲಿ ಸಮಾವೇಶ ಗೊಂಡಿರುತ್ತವೆ. ದಕ್ಷಿಣ ಪ್ರಸ್ಥಭೂಮಿಯಿಂದ ಆವರಿಸಲ್ಪಡುವ ಈ ಪ್ರದೇಶಗಳಲ್ಲಿ ಸಂತಾಲ, ಮುಂಡಾ, ಗೊಂಡಾ, ಸವರಾ, ಭಿಲ್ಲ, ಬೈಗಾ, ಗದಬ, ಕೋಳಿ, ಬಿರಿಹೋರ, ಜುಂಗಾ, ಬಿರ್‌ಹಾರ್, ಜುವಾಂಗ, ಕಂಧ ಮುಂತಾದ ಆದಿವಾಸಿಗಳು ಈ ವಲಯದಲ್ಲಿ ನೆಲೆಸಿದ್ದಾರೆ.

ಆರ್ಯ ಮತ್ತು ಆಸ್ಟ್ರಿಕ್ ಭಾಷೆಗಳನ್ನು ಬಳಸುತ್ತಾರೆ. ಈ ವಲಯದ ಆದಿವಾಸಿಗಳಲ್ಲಿ 'ಗೊಂಡಾ' ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಅವರು ವಾಸಿಸುವ ಪ್ರದೇಶವನ್ನು 'ಗೊಂಡಾರಣ್ಯ' ಎಂದು ಕರೆಯಲಾಗುತ್ತದೆ. ಗೊಂಡರ ನಂತರ ಹೆಚ್ಚು ಪ್ರಮಾಣದಲ್ಲಿ ಕಂಡು ಬರುವರೆಂದರೆ 'ಸಂತಾಲರು'. ಈ ವಲಯ ಜನಸಂಖ್ಯೆ ಮತ್ತು ಪ್ರದೇಶಗಳ ವಿಸ್ತಾರ ದೃಷ್ಟಿಯಿಂದ ಅತ್ಯಂತ ದೊಡ್ಡದಾಗಿದೆ.

ಮಧ್ಯವರ್ತಿ ನಿಲವು, ಕಪ್ಪು ಬಣ್ಣ, ಉದ್ದ ತಲೆ, ಗುಂಗುರು ಕೂದಲು, ಚಿಕ್ಕದಾದ ಚಪ್ಪಟೆಯಾದ ಮೂಗು, ಸಧೃಡವಾದ ಶರೀರ, ಚಿಕ್ಕದಾದ ಹಣೆ ಇವು ಮಧ್ಯ ವಲಯದ ಆದಿವಾಸಿಗಳ ದೈಹಿಕ ಲಕ್ಷಣಗಳು. ಇವರು ಅತೀ ಹಿಂದುಳಿದ ಅನಾಗರಿಕರಾಗಿದ್ದಾರೆ. ಬೇಟೆ, ಆಹಾರ ಸಂಗ್ರಹಣೆ, ಸಂಚಾರಿ ಬೇಸಾಯ,ಬೆತ್ತಲೆಯಾಗಿ ತಿರುಗುವುದು, ತೊಗಲಿನ ಅಥವಾ ಹುಲ್ಲಿನ ಉಡುಪು ಧರಿಸುವುದು, ಸಮೂಹಗಾನ ಮತ್ತು ನೃತ್ಯ ಕಾರ್ಯಕ್ರಮಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಪಿತೃಪ್ರಧಾನ ಕುಟುಂಬ, ಅಪಹರಣ ವಿವಾಹ, ತಮ್ಮದೇ ಆದ ಪಂಚಾಯಿತಿ ವ್ಯವಸ್ಥೆ, ಕುಲ ಪದ್ಧತಿಗಳು ಮೊದಲಾದ ರೂಢಿ ಸಂಪ್ರಾದಯಗಳು ಇವರಲ್ಲಿ ಕಂಡು ಬರುತ್ತವೆ. ಈ ಪ್ರದೇಶದ ಭಿಲ್ಲ ಮತ್ತು ಬೇಡ ಜನಾಂಗದಲ್ಲಿ 'ಪರೀಕ್ಷೆ ಮದುವೆ' ಮತ್ತು 'ಅಪಹರಣ' ವಿವಾಹ ಪದ್ಧತಿಗಳಿವೆ. ಗೊಂಡಾ ಆದಿವಾಸಿಗಳಲ್ಲಿ ಬಹುಪತ್ನಿತ್ವ ಹಾಗೂ ಸಂತಾಲರಲ್ಲಿ ಬಹುಪತಿತ್ವ ವಿವಾಹ ಪದ್ಧತಿಗಳು ಬಳಕೆಯಲ್ಲವೆ. ಬುಟ್ಟಿ ಹೆಣೆಯುವುದು, ಮರದ ಕೆತ್ತನೆಯ ಕೆಲಸದಲ್ಲಿ ಇವರು ನಿಪುಣರಾಗಿದ್ದಾರೆ. ವ್ಯವಸಾಯ ಪ್ರಧಾನ ವೃತ್ತಿಯಾಗಿದೆ. ಆದರೂ ಆರ್ಥಿಕವಾಗಿ ಇವರು ಸ್ವಾವಲಂಭಿಗಳಾಗಿಲ್ಲ ಆದರೆ ಶಾಂತ ಸ್ವಾಭಾವದವರು.

೩. ದಕ್ಷಿಣ ವಲಯದ ಆದಿವಾಸಿಗಳು

ದಕ್ಷಿಣ ಪ್ರಸ್ಥ ಭೂಮಿಯಿಂದ, ಕೃಷ್ಣಾ ನದಿಯ ದಕ್ಷಿಣ ಪ್ರದೇಶಗಳಲ್ಲಿ ಹಾಗೂ ಅಂಡ ಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ವಾಸಿಸುವ ಆದಿವಾಸಿಗಳನ್ನು ದಕ್ಷಿಣ ವಲಯದ ಆದಿವಾಸಿಗಳೆಂದು ಕರೆಯಲಾಗುವುದು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ನೀಲಗಿರಿಬೆಟ್ಟ ಮತ್ತು ಪಶ್ಚಿಮ ಘಟ್ಟ ಪ್ರದೇಶಗಳನ್ನು ಒಳಗೊಂಡಿದೆ. ಈ ವಲಯದ ಪ್ರಮುಖ ಆದಿವಾಸಿಗಳೆಂದರೆ ತೋಡಾ, ಬಡಗಾ, ಸೋಲಿಗ, ಇರುಳಾ, ಚೆಂಚು, ಮ್ಯಾಸಬೇಡ, ಕಾಡುಗೊಲ್ಲ, ಕಾಡುಕುರುಬ, ಜಿಪ್ಸಿ, ಜ್ಯೂ ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ಬರುತ್ತಾರೆ.

ಉಳಿದ ವಲಯಗಳ ಆದಿವಾಸಿಗಳಿಗೆ ಹೋಲಿಸಿದರೆ ಈ ಪ್ರದೇಶದ ಆದಿವಾಸಿಗಳು ನಾಗರಿಕತೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಕಲ್ಲನ್ನು ತಿಕ್ಕಿ ಬೆಂಕಿ ಹಚ್ಚುವುದು, ಚರ್ಮ, ತೊಗಟೆ, ಎಲೆ ಹಾಗೂ ಹುಲ್ಲುಗಳ ಉಡುಪು ಧರಿಸುವುದು. ಬಿದಿರು ಬೊಂಬುಗಳಲ್ಲಿ ನೀರು ಕುಡಿಯುವುದು, ಮರದ ಮೇಲೆ ಜೋಲಿ ಕಟ್ಟಿ ಮಲಗುವುದು, ಕಂದ ಮೂಲಗಳನ್ನು ಸಂಗ್ರಹಿಸುವುದು ಮತ್ತು ಬೇಟೆ, ಪಶುಪಾಲನೆ ಹಾಗೂ ಕೃಷಿಯನ್ನು ಅವಲಂಭಿಸಿದ್ದಾರೆ. ಭಾರತದ ಮೂಲನಿವಾಸಿಗಳೆಂದು ಕರೆಯುವ ಈ ವಲಯದ ಆದಿವಾಸಿಗಳು, ದ್ರಾವಿಡ ಭಾಷೆ ಮತ್ತು ಸಂಸ್ಕೃತಿಯನ್ನು ಹೋಲುತ್ತಾರೆ. ಕನ್ನಡ, ತೆಲುಗು, ಮಲೆಯಾಳಿ ಮುಂತಾದ ಭಾಷೆಗಳನ್ನು ವ್ಯಾಪಕವಾಗಿ ಬಳಸುತ್ತಾರೆ ಬಹುಸಂಖ್ಯಾ ಆದಿವಾಸಿಗಳಲ್ಲಿ ಮಾತೃಪ್ರಧಾನ ಕುಟುಂಬಗಳು ಅಸ್ತಿತ್ವದಲ್ಲಿವೆ. ಕರ್ನಾಟಕದ ಆದಿವಾಸಿಗಳಲ್ಲಿ ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳು ಅಸ್ತಿತ್ವದಲ್ಲಿವೆ.

ನಿಗ್ರೋಯಿಡ್ ಜನಾಂಗದವರಂತೆ ಕಪ್ಪುಬಣ್ಣ, ಚಪ್ಪಟೆ ಅಗಲ ಮೂಗು, ದಪ್ಪ ತುಟಿ, ಒರಟಾದ ಕೂದಲು, ಮಧ್ಯಮ ನಿಲುವು, ಉದ್ದತಲೆ, ಸದೃಢ ಶಾರೀರ, ಧೈರ್ಯಶಾಲಿಗಳು ಮುಂತಾದ ಗುಣಲಕ್ಷಣಗಳನ್ನು ಈ ಪ್ರದೇಶದ ಆದಿವಾಸಿಗಳು ಹೊಂದಿದ್ದಾರೆ. ಸೌಂದರ್ಯದ ಸಂಕೇತವಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ತೋಡರು ಎಮ್ಮೆಗಳನ್ನು ಪೂಜಿಸುತ್ತಾರೆ. ಈ ಪ್ರದೇಶಗಳಲ್ಲಿ ಹೆಣ್ಣು ಶಿಶುಹತ್ಯೆ ಅಸ್ತಿತ್ವದಲ್ಲಿದೆ.

೪. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

ಬುಡಕಟ್ಟುಗಳ ಅಧ್ಯಯನ ಕುರಿತು ಹೇಳಿಕೊಳ್ಳುವಂತ ಕೆಲಸ-ಕಾರ್ಯಗಳು ಕರ್ನಾಟಕದಲ್ಲಿ ನಡೆದಿಲ್ಲ. "ಭಾರತ ಸರಕಾರ ಕರ್ನಾಟಕದಲ್ಲಿ ಗುರುತಿಸಿರುವ ಅರವತ್ತೂರು ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟಜಾತಿಗೆ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಿದ್ದಾರೆ. ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಗಣನೆಗೆ ತೆಗೆದುಕೊಂಡರೆ ಕರ್ನಾಟದಲ್ಲಿ ಬುಡಕಟ್ಟುಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ."[೬] ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕುರಿತಂತೆ ಇಂಗ್ಲೀಷಿನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಕಾರಣ. "ಎ.ಎ.ಡಿ. ಲೂಯಿಜ್ ಅವರು Tribes of Mysore ಎಂಬ ತಮ್ಮ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರ ಮೈಸೂರು ರಾಜ್ಯದಲ್ಲಿ ೬೩ ಪರಿಶಿಷ್ಟ ಬುಡಕಟ್ಟುಗಳನ್ನು ಮಾನ್ಯ ಮಾಡಿದೆ."[೭] ಆದರೆ ಭಾರತದ ಯಾವುದೇ ಒಂದು ಜಾತಿ ಅಥವಾ ಜನಾಂಗ ಪರಿಶಿಷ್ಟ ಬುಡಕಟ್ಟಿನ ಮಾನ್ಯತೆ ಪಡೆಯಬೇಕಾದರೆ ಭಾರತ ಸಂವಿಧಾನದ ೩೪೨ನೆಯ ನಿಯಮದ ಪ್ರಕಾರ ಅದು ರಾಷ್ಟ್ರಾಧ್ಯಕ್ಷರಿಂದ ಮೊದಲು ಸೂಚಿತವಾಗಿ ನಂತರ ಸಂಸತ್ತಿನಲ್ಲಿ ಒಪ್ಪಿತವಾಗಬೇಕು. ಭಾರತ ಸರ್ಕಾರ 'ಪರಿಶಿಷ್ಟ ಬುಡಕಟ್ಟು' ಎಂದು ಗುರುತಿಸುವಾಗ ಆ ಜನಾಂಗದ ಗುಣಲಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆಯೇ 'ಪರಿಶಿಷ್ಟ ವರ್ಗಗಳ' ಪಟ್ಟಿಮಾಡುತ್ತದೆ. ಈ ಕಾರಣದಿಂದಾಗಿ ಭಾರತದ ಕೆಲವು 'ಬುಡಕಟ್ಟುಗಳು' ಪರಿಶಿಷ್ಟ ಬುಡಕಟ್ಟುಗಳ ಮಾನ್ಯತೆ ಪಡೆಯದೆ ಹೋಗಬಹುದು. ಆದ್ದರಿಂದ ಕರ್ನಾಟಕದ ಪ್ರಮುಖ ಎರಡು ಬುಡಕಟ್ಟುಗಳಾದ 'ಪಾರ್ಧಿಯರು' ಪರಿಶಿಷ್ಟ ಬುಡಕಟ್ಟುಗಳಲ್ಲಿ ಬಂದರೆ, 'ಹರಣ್‌ಶಿಕಾರಿ' ಹಿಂದುಳಿದ ವರ್ಗಗಳಲ್ಲಿ, ಅರೆ ಅಲೆಮಾರಿ ಬುಡಕಟ್ಟುಗಳ ವರ್ಗಕ್ಕೆ ಸೇರಿದ್ದಾರೆ. ಒಂದು ಬುಡಕಟ್ಟಿಗೆ 'ಪರಿಶಿಷ್ಟ ಪಂಗಡಗಳ' ಮಾನ್ಯತೆ ಕೊಟ್ಟು, ಇನ್ನೊಂದು ಬುಡಕಟ್ಟಿಗೆ 'ಹಿಂದುಳಿದ ವರ್ಗಗಳ' ಮಾನ್ಯತೆ ಕೊಟ್ಟಿರುವ ಸರ್ಕಾರದ ಈ ದ್ವಂದ್ವನೀತಿ ಸರಿಯಲ್ಲ. ಏಕೆಂದರೆ 'ಪಾರ್ಧಿಯರ' ಎಲ್ಲ ಗುಣಲಕ್ಷಣಗಳನ್ನು ಹೊಂದಿದ "ಹರಣ್‌ಶಿಕಾರಿ" ಜನಾಂಗವನ್ನೂ ಕೂಡಾ 'ಪರಿಶಿಷ್ಟ ಪಂಗಡ'ಗಳ ಪಟ್ಟಿಯಲ್ಲಿ ಸರ್ಕಾರ ಸೇರಿಸಬೇಕಾಗಿತ್ತು. ಈ ಕಾರ್ಯ ಇತ್ತೀಚೆಗೆ ಮಾತ್ರ ಆಗಿದೆ.

ಕರ್ನಾಟಕದಲ್ಲಿ ಇಲ್ಲಿಯವರೆಗೆ ನಡೆದಿರುವ ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ಅವಲೋಕಿಸಿದರೆ ಪ್ರಾರಂಭದ ದಿನಗಳಲ್ಲಿ ಹೇಳಿಕೊಳ್ಳುವಂತ ಅಧ್ಯಯನಗಳು ನಡೆಯದಿದ್ದರೂ ನಡೆದಿರುವಷ್ಟು ಅಧ್ಯಯನ ಮುಂದಿನ ಸಂಶೋಧಕರಿಗೆ ಮಾರ್ಗಸೂಚಿಗಳಾಗಿವೆ. ಮೊಟ್ಟ ಮೊದಲು ದೇಶ ಮತ್ತು ವಿದೇಶಗಳ ವಿದ್ವಾಂಸರುಗಳಿಂದ ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ೧೯೦೯ರಲ್ಲಿ ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ

ಅವರ 'Caste and tribes of southern India' ಎಂಬ ಕೃತಿಯು ದಕ್ಷಿಣ ಭಾರತದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ೧೯೨೮-೧೯೩೫ರಲ್ಲಿ ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ 'The Mysore tribes and castes' ಎಂಬ ಕೃತಿಗಳು ಬುಡಕಟ್ಟು ಅಧ್ಯಯನದ ಮಹತ್ವದ ಕೊಡುಗೆಗಳಾಗಿವೆ. ೧೯೨೮ರಲ್ಲಿ ಸೈಯದ್ ಸಿರಾಜ್-ಉಲ್-ಹುಸೇನ್ ಅವರ 'The caste and tribes of Nizam's Daminion' ಎಂಬ ಗ್ರಂಥ ಹೈದರಾಬಾದ್ ಕರ್ನಾಟಕದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಪರಿಚಯವಿದೆ. ಎ.ಎ.ಡಿ.ಲೂಯಿಸ್ ಅವರು ೧೯೬೩ರಲ್ಲಿ 'Tribes of Mysore' ಎಂಬ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ೧೯೭೫ರಲ್ಲಿ ಎಲ್.ಜಿ.ಹಾವನೂರು ಅವರ 'Karnataka Backward class commission report'ದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟುಗಳ ಮಾಹಿತಿಯಿದೆ. ಈ ವರದಿಯಿಂದ ಕೆಲವು ಜಾತಿ\ಸಮುದಾಯಗಳಿಗೆ ಒಳ್ಳೇಯದಾಗಿದ್ದರೇ, ಬಹುತೇಕ ಜಾತಿ\ಸಮುದಾಯಗಳಿಗೆ ಇದು ಅಷ್ಟು ಸಹಾಯಕಾರಿಯಾಗಿಲ್ಲ ಎಂಬುದು ಅವರ ವಾದವಾಗಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಐ.ಬಿ..ಹೆಚ್. ಪ್ರಕಾಶನ ಮತ್ತು ಮೈಸೂರಿನ ಭಾರತೀಯ ಸರ್ವೇಕ್ಷಣ ಸಂಸ್ಥೆಯ ಮಾನವ ವಿಜ್ಞಾನಿಗಳು ಕರ್ನಾಟಕದ ವಿವಿಧ ಬುಡಕಟ್ಟುಗಳ ಕುರಿತು ಅನೇಕ ಸಣ್ಣ-ಪುಟ್ಟ ಪುಸ್ತಕಗಳನ್ನು ಪ್ರಕಟ್ಟಿಸಿದ್ದಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟುಗಳ ಅಧ್ಯಯನಕ್ಕಾಗಿ ವಿಶೇಷ ವಿಭಾಗಗಳು ಇಲ್ಲದಿದ್ದರೂ ಇತ್ತೀಚೆಗೆ ೧೯೯೪ರಿಂದ ಕನ್ನಡ ವಿಶ್ವವಿದ್ಯಾಲಯ-ಹಂಪಿಯಲ್ಲಿ "ಬುಡಕಟ್ಟು ಅಧ್ಯಯನ ವಿಭಾಗ" ಅಸ್ಥಿತ್ವಕ್ಕೆ ಬಂದಿದೆ. ಪ್ರಸ್ತುತ ಈ ವಿಭಾಗದಲ್ಲಿ ಸುಮಾರು ಮೂವತ್ತು ಜನ ವಿದ್ಯಾರ್ಥಿಗಳು ಅಧ್ಯಯನ ಕೈಗೊಂಡಿದ್ದಾರೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟು ಅಧ್ಯಯನಗಳಿಗೆ ಡಾಕ್ಟರೇಟ್ ಪದವಿ ದೊರೆತು ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಬುಡಕಟ್ಟು ಜನಾಂಗಗಳನ್ನು ಕುರಿತು ಅಧ್ಯಯನ ಮಾಡಿದ ಪ್ರಕಟಿತ ಮತ್ತು ಅಪ್ರಕಟಿತ ಕೆಲವೊಂದು ಪಿಎಚ್.ಡಿ. ಮಹಾ ಪ್ರಬಂಧಗಳು ಮತ್ತು ಸಂಶೋಧಕರ ಹೆಸರುಗಳನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ.

೧. ಕಾಡುಗೊಲ್ಲರ ಜಾನಪದ : ಒಂದು ಅಧ್ಯಯನ - ಡಾ. ಕಾಳೇಗೌಡನಾಗವಾರ

೨. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು - ಡಾ. ತೀ.ನಂ.ಶಂಕರನಾರಾಯಣ

೩. ಬೇಡ ನಾಯಕರು - ಡಾ. ಕೃಷ್ಣಮೂರ್ತಿ ಹನೂರು

೪. ಮ್ಯಾಸ ನಾಯಕರು : ಒಂದು ಜನಾಂಗಿಕ ಅಧ್ಯಯನ - ಡಾ. ಕರಿಶೆಟ್ಟಿ ರುದ್ರಪ್ಪ

೫. ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ : ಒಂದು ಸಮಾಜಶಾಸ್ತ್ರೀಯ ಅಧ್ಯಯನ
- ಡಾ. ಕೆ.ಎಂ.ಮೈತ್ರಿ

೬. ಬುಡುಬುಡುಕೆಯವರು : ಒಂದು ಅಧ್ಯಯನ - ಡಾ. ಬಿ.ಎಸ್.ಪಮ್ಮಾರ

೭. ಸುಡುಗಾಡು ಸಿದ್ಧರು : ಒಂದು ಸಾಂಸ್ಕೃತಿಕ ಅಧ್ಯಯನ - ಡಾ. ಟಿ.ಎಂ. ಭಾಸ್ಕರ್

೮. ಕರ್ನಾಟಕದ ಹೆಳವರು : ಒಂದು ಅಧ್ಯಯನ (ಜಾನಪದೀಯ)-ಡಾ. ಹರಿಲಾಲ್ ಕೆ.ಪವಾರ್

೯. ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ -ಡಾ. ನಿಂಗಣ್ಣ ಸಣ್ಣಕ್ಕಿ

೧೦. ಎತ್ತಪ್ಪ ಜುಂಜಪ್ಪ : ಒಂದು ಅಧ್ಯಯನ -ಡಾ. ಪಿ.ಬಿ.ಶಿವಣ್ಣ

೧೧. ಕರ್ನಾಟಕದ ಲಂಬಾಣಿಗಳು : ಒಂದು ಸಾಂಸ್ಕೃತಿಕ ಅಧ್ಯಯನ-ಡಾ. ಪಿ.ಕೆ.ಖಂಡೋಬಾ

೧೨. ಹಾಲಕ್ಕಿ ಸಮಾಜ : ಒಂದು ಅಧ್ಯಯನ -ಡಾ. ಗೋಪಾಲಕೃಷ್ಣ ಹೆಗಡೆ

ಮೇಲ್ಕಂಡ ಪ್ರಬಂಧಗಳ ಜೊತೆಗೆ ಅವರವರ ಜಾತಿ ಮತ್ತು ಜನಾಂಗಕ್ಕೆ ಸಂಬಂಧಿಸಿದ ಕೆಲವೊಂದು ಪತ್ರಿಕೆಗಳು ಕೂಡ 'ಬುಡಕಟ್ಟು ಜನಾಂಗದ' ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡುತ್ತಿವೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು 'ಉಪಸಂಸ್ಕೃತಿಗಳ' ಅಧ್ಯಯನ ಎಂಬ ವಿಶೇಷ ಯೋಜನೆಯ ಅಡಿಯಲ್ಲಿ, ಬುಡಕಟ್ಟುಗಳ ಉಪ ಸಂಸ್ಕೃತಿಯನ್ನು ಕುರಿತು ಸುಮಾರು ೩೬ ಪುಸ್ತಕಗಳನ್ನು ಪ್ರಕಟಿಸಿದೆ. ಬುಡಕಟ್ಟುಗಳ ಕುರಿತು ಅಧ್ಯಯನ ಮಾಡುವ ಸಂಶೋಧಕರು ಅಗತ್ಯವಾಗಿ ಈ ಎಲ್ಲಾ ಪುಸ್ತಕಗಳನ್ನು ನೋಡಲೇಬೇಕಾಗುತ್ತದೆ.

೪.೧. ಭಾರತದಲ್ಲಿ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು

ಭಾರತದಲ್ಲಿ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿವೆ. ಅತಿವೃಷ್ಟಿ, ಅನಾವೃಷ್ಟಿ, ಸೂರ್ಯನ ಬೆಳಕು ಕೂಡಾ ಅಪರೂಪವಾಗಿರುವ, ಗಾಳಿ ಬೆಳಕಿನ ಕೊರತೆ, ಕಾಡು ಪ್ರಾಣಿ ಮತ್ತು ಪ್ರವಾಹಕ್ಕೆ ಬಲಿ ಮುಂತಾದ ನೈಸರ್ಗಿಕ ದುರಂತಕ್ಕೆ ಆದಿವಾಸಿಗಳು ಒಳಗಾಗುತ್ತಿದ್ದಾರೆ. ಮೂಢನಂಬಿಕೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಶಿಶುಹತ್ಯೆ, ನರಬಲಿ, ಪ್ರಾಣಿಬಲಿ ಮುಂತಾದ ಸಾಮಾಜಿಕ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ಕಡಿಮೆ ಉತ್ಪಾದನೆ, ದುಂದುವೆಚ್ಚ, ಯುವತಿಯರ ಮಾರಾಟ, ಶ್ರೀಮಂತರಿಂದ ಶೋಷಣೆ, ಉಪಜೀವನಕ್ಕಾಗಿ ಕೊಲೆ, ಸುಲಿಗೆ, ದರೋಡೆ ಮುಂತಾದ ಅಪರಾಧ ಕೃತ್ಯಗಳಿಂದ ಬದುಕನ್ನು ಸಾಗಿಸುವುದರಿಂದ ಅವರ ಆರ್ಥಿಕ ಜೀವನ ಕಷ್ಟಕರವಾಗಿದೆ. ಬೆಟ್ಟ, ಗುಡ್ಡ, ಕೊರಕಲು, ಅರಣ್ಯ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿಗಳಿಗೆ ಸಾರಿಗೆ ಸಂಪರ್ಕಗಳ ಕೊರತೆಯಿಂದ ನಾಗರಿಕ ಜನರ ಸಂಪರ್ಕವೇ ಇರಲಾರದು.ಅವರ ರೀತಿ ನೀತಿ, ಆಹಾರ, ಉಡಿಗೆ ತೊಡಿಗೆ, ರಾಜಕೀಯ, ಆರ್ಥಿಕ ಚಟುವಟಿಕೆಗಳ ಮೇಲೆ ಆಧುನಿಕ ಜನಾಂಗದ ಪರಿಣಾಮ ವಿರಲಾರದು.

ಚತುರ್ವರ್ಣ ಮತ್ತು ಜಾತಿ ಪದ್ಧತಿಯಿಂದ ಬೇರ್ಪಟ್ಟಿರುವ ಆದಿವಾಸಿ ಜನಾಂಗದ ಮೇಲೆ ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಪ್ರಭಾವದಿಂದಲೂ ಅವರ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಹಲವು ಸಂಸ್ಕೃತಿಗಳ ಪ್ರಭಾವ ಮತ್ತು ಒತ್ತಡದಿಂದ ಆದಿವಾಸಿಗಳ ಸಾಮಾಜಿಕ ಒಗ್ಗಟ್ಟು ಮತ್ತು ಐಕ್ಯತೆಗಳು ನಾಶವಾದವು. ೧೯ನೇ ಶತಮಾನದಲ್ಲಿ ಇಂಗ್ಲೆಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಪಾದ್ರಿ ವೆರಿಯರ್ ಎಲ್ವಿನ್ ಬುಡಕಟ್ಟುಗಳ ಅಧ್ಯಯನದಲ್ಲಿ ತೊಡಗಿ ನಂತರ ತನ್ನ ಧರ್ಮದ ಪ್ರಚಾರ ಕಾರ್ಯವನ್ನೇ ಕೈ ಬಿಟ್ಟಂಥ ವ್ಯಕ್ತಿ. ಮುಂದೆ ಆದಿವಾಸಿಗಳ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಕೊನೆಗೆ ಗೊಂಡರ ಗಿರಿಜನ ಕನ್ಯೆ 'ಲೀಲಾ'ಳನ್ನೇ ವಿವಾಹ ಮಾಡಿಕೊಂಡ. ಆದಿವಾಸಿಗಳಿಗೆ ನಾಗರೀಕತೆಯ ಪ್ರಭಾವ

ಉಂಟುಮಾಡುವ ಅಥವಾ ಹಿಂದೂ ಸಂಸ್ಕೃತಿಯೊಡನೆ ಗಿರಿಜನರ ಸಂಸ್ಕೃತಿಯನ್ನು ವಿಲೀನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವೆರಿಯರ್ ಎಲ್ವಿನ ಒಪ್ಪಲಿಲ್ಲ.

ಭಾರತದ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ನಿರಂತರವಾಗಿ ಪರಿವರ್ತನೆ ಹೊಂದುತ್ತಲೇ ಬಂದಿವೆ. ದೇಶದ ಸಂಪತ್ತನ್ನು ದೋಚಿಕೊಳ್ಳಲು ಪ್ರಯತ್ನಿಸುತ್ತಿದ್ದ ಬ್ರಿಟಿಷರಿಗೆ, ಆದಿವಾಸಿಗಳೊಂದಿಗೆ ನಿರಂತರ ಘರ್ಷಣೆ ಮಾಡಬೇಕಾದ ಪ್ರಸಂಗಗಳು ಉಂಟಾದವು. ಕೆಲವೊಂದು ಆದಿವಾಸಿಗಳ ನೆಲೆಗಳಿಗೆ ಕ್ರೈಸ್ತ ಪಾದ್ರಿಗಳನ್ನು ಕಳುಹಿಸಿ, ಧರ್ಮ ಪ್ರಚಾರ ಮಾಡುವ ನೆಪದಲ್ಲಿ ಬುಡಕಟ್ಟು ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಳಿಸಲು ಪ್ರಯತ್ನಿಸಿದರು. ತಮ್ಮ ಸಂಸ್ಕೃತಿ ಮತ್ತು ಸಮುದಾಯಗಳಿಗೆ ಧಕ್ಕೆ ಉಂಟುಮಾಡುವ, ಸ್ಥಳಾಂತರಿಸುವ, ಕಿರುಕುಳ ಕೊಡುವ, ಬ್ರಿಟಿಷರ ನೀತಿ ಮತ್ತು ಧೋರಣೆಗಳಿಗೆ ಪ್ರತಿಭಟಿಸಿದ ಆದಿವಾಸಿಗಳಿಗೆ ವಿನಾಕಾರಣವಾಗಿ ಅಪರಾಧಿಗಳೆಂಬ ಅಪವಾದವನ್ನು ಕೊಟ್ಟರು. ಬ್ರಿಟಿಷರ ಹೊಸ ಹೊಸ ಯೋಜನೆಗಳು ಮತ್ತು ಆಡಳಿತ ನಡೆಸುವ ನೆಪದಲ್ಲಿ 'ಬುಡಕಟ್ಟು ಜನರಿಗೆ' ಪ್ರತ್ಯಕ್ಷವಾಗಿ ಇಲವೇ ಅಪ್ರತ್ಯಕ್ಷವಾಗಿ ಅನೇಕ ಸಮಸ್ಯೆಗಳನ್ನು ಹುಟ್ಟಿ ಹಾಕುತ್ತಿದ್ದರು. ಕೆಲವೊಂದು ಆದಿವಾಸಿಗಳು ಹಣದ ಆಸೆಯಿಂದ ದೇಶ ದ್ರೋಹಿ ಕಾರ್ಯಗಳಲ್ಲಿತೊಡಗಿದರು. ಮತ್ತೆ ಕೆಲವರು ಬ್ರಿಟಿಷ ಸೈನ್ಯ ಪಡೆಯಲ್ಲಿ ಸೇರಿಕೊಂಡು ನಮ್ಮ ದೇಶದ ವಿರುದ್ಧವೇ ಕದನರಂಗಕ್ಕಿಳಿದು ದೇಶ ದ್ರೋಹಿಗಳಾದರು. ಸ್ವಾತಂತ್ರ್ಯ ನಂತರ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಭಾರತ ಹಲವು ಉಪಯುಕ್ತ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಆದಿವಾಸಿಗಳು ವಾಸಿಸುವ ಪ್ರದೇಶಗಳಲ್ಲೇ ಶಾಲೆಗಳನ್ನು ತೆಗೆಯುವುದರ ಜೊತೆಗೆ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಯಿತು. ಆದಿವಾಸಿಗಳ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ "ಆದಿವಾಸಿಗಳ ಸಮಗ್ರ ಅಭಿವೃದ್ಧಿ ಯೊಜನೆ"ಯನ್ನು ಪ್ರಾರಂಭಿಸಲಾಗಿದೆ. ವ್ಯಾಪಾರಿಗಳಿಂದಾಗುವ ಆರ್ಥಿಕ ಶೋಷಣೆ ತಪ್ಪಿಸಲು "ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರಿ ಸಂಘ"ಗಳನ್ನು ಸ್ಥಾಪಿಸಲಾಗಿದೆ. ಆರೋಗ್ಯ ಮತ್ತು ನೈರ್ಮಲ್ಯಗಳ ದೃಷ್ಟಿಯಿಂದ ಆದಿವಾಸಿ ಪ್ರದೇಶಗಳಲ್ಲಿಯೇ ಪ್ರಾಥಮಿಕ ಚಿಕಿತ್ಸಾಲಯ ಹಾಗೂ ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಆದಿವಾಸಿಗಳು ಮುಂದೆ ಬರಲು ಸಾರಿಗೆ ಸಂಪರ್ಕಗಳ ವ್ಯವಸ್ಥೆ ಕಲ್ಪಿಸಿ ಕೊಡಲಾಗಿದೆ.

ಸರಕಾರ ಬುಡಕಟ್ಟು ಜನಾಂಗಗಳ ಪ್ರಗತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಇದಕ್ಕಾಗಿ ಅಪಾರ ಪ್ರಮಾಣದಲ್ಲಿ ಹಣ ಖರ್ಚು ಮಾಡಲಾಗುತ್ತಿದೆ. ಸಂವಿಧಾನದ ಗಳಿಕೆ ವಿಧಿಯು ಪ್ರಕಾರ ಜಾತಿ, ಜನಾಂಗ,ಮತ-ಪಂಥ,ಮತ- ಪಂಗಡಗಳೆಂಬ ಭೇದವಿಲ್ಲದೆ ಆದಿವಾಸಿಗಳನ್ನೊಳ ಗೊಂಡಂತೆ ದೇಶದ ಎಲ್ಲರಿಗೂ ಸಮನಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

೫. ಈ ಅಧ್ಯಯನ (ಸಂಶೋಧನೆ) ಕೈಗೊಂಡ ವಿಧಾನ

೧. ಕ್ಷೇತ್ರಕಾರ್ಯದ ಮೂಲಕ ಸಮಗ್ರ ಸಮೀಕ್ಷೆ.

೨. ಎಂಪಿರಿಯಲ್ (ಪ್ರಾಯೋಗಿಕ) ಆಗಿ ಅಭ್ಯಸಿಸುವುದು.

೩. ನೇರ ಪಾಲ್ಗೊಳ್ಳುವಿಕೆ (Participate method) ಮೂಲಕ.

೪. ಪ್ರಶ್ನಾವಳಿಯನ್ನು ಬಳಕೆ ಮಾಡುವ ಮೂಲಕ. ಹಾಗೂ

೫. ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳನ್ನು ಕೇಳುವ ಮೂಲಕ.

ಇದುವರೆಗೆ ಪಾರ್ಧಿಬುಡಕಟ್ಟನ್ನು ಕುರಿತು ಅಧ್ಯಯನಗಳೆ ನಡೆದಿಲ್ಲ ಎಂದರೆ ತಪ್ಪಾಗದು. ನಡೆದಂತಹ ಅಧ್ಯಯನಗಳು ಕೂಡಾ ಸಂಪೂರ್ಣವಾಗಿ ಅಗಿರುವುದಿಲ್ಲ. ಕೆಲವೊಂದು ಪ್ರಬಂಧ ಒಂದೆರೆಡು ಪುಸ್ತಕಗಳು ಮತ್ತು ಅಲ್ಲೊಂದು ಇಲ್ಲೊಂದು ಬಿಡಿ ಲೇಖನಗಳು ಪ್ರಕಟವಾಗಿವೆ. ಈ ನಿಟ್ಟಿನಲ್ಲಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಸಮುದಾಯವನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಿರುವುದರಿಂದ ಪಾರ್ಧಿ, ಹಕ್ಕಿಪಿಕ್ಕಿ, ಹರಣ್‌ಶಿಕಾರಿ, ವಾಘ್ರಿ, ಅಡವಿಚೆಂಚು ಇನ್ನಿತರ ಹೆಸರುಗಳಿಂದ ಕರೆಯಲ್ಪಡುವ ಈ ಸಮುದಾಯಗಳು ಒಂದೇ ಆಗಿರುತ್ತವೆ. ಹೀಗಾಗಿ ಸರ್ಕಾರದ ಯೋಜನೆಯಡಿಯಲ್ಲಿ ಬರುವ ಇವರ ಎಲ್ಲಾ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಆದ್ದರಿಂದ ಇವರ ಸಮಗ್ರ ಉಪನಾಮಗಳಿಂದ ಕರೆಯಲ್ಪಡುವ ಹೆಸರುಗಳು ಒಂದೇ ಆಗಿವೆ ಎಂಬ ಪರಿಚಯಿಸುವ ದೃಷ್ಟಿಯಿಂದ **ಪಾರ್ಧಿ ಬುಡಕಟ್ಟು : ಒಂದು ಮಾನವಶಾಸ್ತ್ರಿಯ ಅಧ್ಯಯನ** ಎಂಬ ವಿಷಯವನ್ನು ಕೈಗೆತ್ತಿಕೊಂಡು, ಕ್ಷೇತ್ರಕಾರ್ಯದ ಆಧಾರದ ಮೇಲೆ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಆಧಾರಗಳು

೧. ಚ.ನ.ಶಂಕರ್ ರಾವ್, 'ಭಾರತೀಯ ಸಮಾಜ', ೧೯೯೧, ಪುಟ: ೩೮೩

೨. ಅದೇ, ಪುಟ:೩೮೪-೫

೩. ಡಾ. ಬಿ.ಎನ್.ಪಮ್ಮಾರ, 'ಬುಡುಬುಡುಕೆಯವರು ಒಂದು ಅಧ್ಯಯನ', ೧೯೯೪, ಪುಟ:೪

೪. ಡಾ. ತೀ.ನಂ.ಶಂಕರನಾರಾಯಣ, 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ೧೯೮೯, ಪುಟ:೧೬

ಅಧ್ಯಾಯ - ೨

ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಬುಡಕಟ್ಟಿನ ಪರಿಚಯ

೧. ಮಾನವಶಾಸ್ತ್ರದ ಅರ್ಥವಿವರಣೆ ಮತ್ತು ವ್ಯಾಪ್ತಿ

೨. ಮಾನವಶಾಸ್ತ್ರದ ಶಾಖೆಗಳು

೩. ಸಂಸ್ಕೃತಿ ಮತ್ತು ಸಮಾಜಗಳ ನಡುವಿನ ಸಂಬಂಧ

೪. ಪಾರ್ಧಿಯರ ಹಿನ್ನೆಲೆ

೫. ವಿಮಾನದಲ್ಲಿ ಪ್ರಯಾಣಿಸುತ್ತಿರುವ ಪಾರ್ಧಿಯರು

೬. ಬೇಟೆಗಾರಿಕೆಯ ಹಿನ್ನೆಲೆ

೨. ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಬುಡಕಟ್ಟಿನ ಪರಿಚಯ

ದಿನದಿಂದ ದಿನಕ್ಕೆ (ಕಣ್ಮರೆಯಾಗುತ್ತಿರುವ) ಬುಡಕಟ್ಟು ಲಕ್ಷಣಗಳನ್ನು ಆಧುನಿಕ ಜಗತ್ತಿಗೆ ಪರಿಚಯ ಮಾಡಿಕೊಡಬೇಕಾದ ಅಗತ್ಯತೆ ಇಂದು ತುಂಬಾ ಇದೆ. ಪ್ರತಿಯೊಂದು ಬುಡಕಟ್ಟುಗಳಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಸುಶಿಕ್ಷಿತ ನಾಗರಿಕರಾಗಿ, ಉಳಿದವರು ಅರಣ್ಯವಾಸಿಗಳಾಗುವುದೇ ಹೆಚ್ಚು. ಈ ಬುಡಕಟ್ಟು ಜನರು ಯಾವುದೇ ನಾಗರಿಕತೆಯ ಸೊಂಕಿಗೂ ಸಿಗದೆ, ಪ್ರಾಚೀನ ಸಂಸ್ಕೃತಿಯಲ್ಲಿದ್ದಾರೆ. ಇವರುಗಳ ಮೂಲವೃತ್ತಿ ಬೇಟೆ ಇತ್ತೀಚಿನ ದಿನಗಳಲ್ಲಿ ಸರ್ಕಾರ ಬೇಟೆಯನ್ನು ನಿಷೇದಿಸಿದ್ದರೂ ಬೇಟೆಗಾರಿಕೆಯು ಇನ್ನೂ ಅಲ್ಲೊ ಇಲ್ಲೊ ಎನ್ನುವ ಹಾಗೆ ಆಚರಣೆಯಲ್ಲಿದೆ. ಪಶುಪಾಲನೆ, ಕೃಷಿ ಚಟುವಟಿಕೆಗಳಲ್ಲಿ ಬುಡಕಟ್ಟು ಜನರು ಪರಿವರ್ತನೆಗೊಳ್ಳುತ್ತಿದ್ದರೂ ನೆಮ್ಮದಿಯ ಬದುಕು ಇನ್ನೂ ಗಗನ ಕುಸುಮವೇ ಆಗಿದೆ.

ಭಾರತದಲ್ಲಿ ವಸಾಹತುಶಾಹಿ ಸಂದರ್ಭವು ಬುಡಕಟ್ಟು ಜನರ ಇತಿಹಾಸ ರಚನೆಗೆ ಒತ್ತು ಕೊಟ್ಟಿತು. ಅಂದಿನ ಬ್ರಿಟಿಷ್ ಅಧಿಕಾರಿಗಳು, ಅನೇಕ ವಿದ್ವಾಂಸರೂ, ಕ್ರೈಸ್ತಮಿಷನರಿಗಳು, ಪ್ರವಾಸಿಗಳು ಹಾಗೂ ಅನೇಕ ವಿದೇಶಿಯರು ಬುಡಕಟ್ಟುಗಳ ಬಗ್ಗೆ ತಳೆದ ನಿಲುವುಗಳನ್ನು ವರದಿ, ದಿನಚರಿ ಹಾಗೂ ಇತರೆ ಕೃತಿಗಳಲ್ಲಿ ಕಾಣಬಹುದಾಗಿದೆ. ಸ್ವಾಂತಂತ್ರಪೂರ್ವ ಮತ್ತು ಸ್ವಾತಂತ್ರದ ನಂತರದಲ್ಲಿ ಬುಡಕಟ್ಟುಗಳ ಬಗ್ಗೆ ಅನೇಕ ವಿಧವಾದ ಸಂಶೋಧನೆಗಳು ನಡೆದಿವೆ. ಎಡ್ಗರ್ ಥರ್ಸ್ಟನ್, ವೆರಿಯರ್ ಎಲ್ವಿನ್, ಮಾರ್ಗರೇಟ್ ಮೀಡ್, ಮೆಲಿನೋಸ್ಕಿ ಹಾಗೂ ಇನ್ನೂ ಅನೇಕ ಮಾನವಶಾಸ್ತ್ರಜ್ಞರು ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿದವರಲ್ಲಿ ಪ್ರಮುಖರಾಗಿದ್ದಾರೆ.

ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಬುಡಕಟ್ಟು ಎಂದರೆ ಕುಟುಂಬ, ಕುಲ, ಸಮೂಹ, ಸಮುದಾಯ ಎಂದೆಲ್ಲಾ ಅರ್ಥವಿದೆ. ಆಂಗ್ಲ ಭಾಷೆಯ 'Tribes' ಗೆ ಸಂವಾದಿಯಾಗಿ ಕನ್ನಡದಲ್ಲಿ 'ಬುಡಕಟ್ಟು' ಎಂದೇ ಕರೆಯುತ್ತಾರೆ. ಪ್ರಾಚೀನ ಲ್ಯಾಟಿನ್ ಭಾಷೆಯಲ್ಲಿ 'Tribes' ಎಂಬ ಪದ ಉಗಮವಾಯಿತು. ಮೊಟ್ಟಮೊದಲಿಗೆ Greek-Romanನ ವಿದ್ವಾಂಸರು ಲ್ಯಾಟಿನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಆ ರೀತಿಯಲ್ಲಿ ಕರೆದರು. ಒಂದೇ ಕುಟುಂಬದ, ರಕ್ತ ಸಂಬಂಧಿಕರಿಗೆ ಸಮುದಾಯಕ್ಕೆ ಬುಡಕಟ್ಟು ಎನ್ನಲಾಗುವುದು. ಆದಿವಾಸಿ, ಮೂಲನಿವಾಸಿ, ಗಿರಿಜನ, ವನ್ಯಜಾತಿ, ಜನಜಾತಿ ಎಂದೆಲ್ಲಾ ಸಹ ಇವರನ್ನು ಕರೆಯುವರು. ಒಂದು ಸಮಾಜಕ್ಕೆ ಕುಟುಂಬವೇ ಮೂಲಘಟಕ ಮತ್ತು ಆಧಾರ. ಈ ತರಹದ ಕುಟುಂಬಗಳು ಸೇರಿಯೇ ಸಮುದಾಯಗಳಾದವು.

ಕರ್ನಾಟಕ ರಾಜ್ಯದ ಬುಡಕಟ್ಟು ಜನರ ಸ್ವರೂಪ ತೀರಾ ಭಿನ್ನವಲ್ಲದಿದ್ದರೂ ಪ್ರತ್ಯೇಕ ಲಕ್ಷಣಗಳು ಕಾಣಬರುತ್ತವೆ. ಒಂದು ಪ್ರದೇಶಕ್ಕೆ ಸೀಮಿತವಾಗಿ ರಾಜಕೀಯ, ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುತ್ತಾರೆ

ಜೀವನ ಶೈಲಿ, ಆಚಾರ-ವಿಚಾರ ಆಡಳಿತ ಇತರೆ ಎಲ್ಲ ಲಕ್ಷಣಗಳಲ್ಲಿ ಏಕತೆ, ಸ್ವಾತಂತ್ರ್ಯವನ್ನು ಹೊಂದಿದ್ದವರನ್ನು ಬುಡಕಟ್ಟು ಎಂದು ಕರೆಯಬಹುದು. ಬುಡಕಟ್ಟುಗಳು ಭೂಪ್ರದೇಶದಲ್ಲಿ ವಿಕಾಸಗೊಳ್ಳುತ್ತಾ ಹೋದಂತೆ ಪರಿವರ್ತನೆ ಕಂಡುಬರುತ್ತದೆ. ಪಾರ್ಧಿ ಬುಡಕಟ್ಟು ಹೀಗೆ ವಿಕಾಸ ಹೊಂದಿದ ಬುಡಕಟ್ಟುಗಳಲ್ಲಿ ಒಂದಾಗಿದೆ.

ಭಾರತದಲ್ಲಿನ ಬುಡಕಟ್ಟುಗಳ ಲಕ್ಷಣಗಳಿಗೂ ಮತ್ತು ಕರ್ನಾಟಕ ಬುಡಕಟ್ಟುಗಳ ಲಕ್ಷಣಗಳಿಗೂ ಹೋಲಿಕೆಯಲ್ಲಿ ಕೆಲವು ವೈರುಧ್ಯಗಳಿರುವುದುಂಟು. ವಿವಿಧ ಬುಡಕಟ್ಟುಗಳ ಆಚರಣೆ, ಲಕ್ಷಣಗಳಿಗೂ ಏಕರೂಪತೆ ಎಂದು ಹೇಳಲಿಕ್ಕಾಗದು ಅವುಗಳಲ್ಲಿ ವಿಭಿನ್ನ ಲಕ್ಷಣಗಳು ಸಹ ಇರಬಹುದಾಗಿದೆ.

ಮಾನವ ಜನಾಂಗಗಳಲ್ಲಿ (Races) ಪಾರ್ಧಿಯರು (Proto Austrotide)ಗೆ ಸೇರಿದರು. ಭಾರತದಲ್ಲಿ ದ್ರಾವಿಡ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿರುವ ಪಾರ್ಧಿಯರು ಆರ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿದ್ದಾರೆ. (ಭವ್ಯ ಭಾರತದ ಅನೇಕ ವೈಶಿಷ್ಟ್ಯಗಳ ಪೈಕಿ ಭೌಗೋಳಿಕ, ಜನಾಂಗಿಕ ಸಂಗತಿಗಳು ಪ್ರಮುಖವಾದವುಗಳು). ಯಾವುದೇ ಪ್ರದೇಶ, ದೇಶ, ಹಳ್ಳಿ ಹೀಗೆ ಭೌಗೋಳಿಕ ನೆಲೆ, ತಾಣ ಪ್ರದೇಶವಲ್ಲಿ ಸ್ಥಳೀಯರಿಗಿಂತ ಹೊರಗಿನವರ ಬುದ್ಧಿವಂತಿಕೆಯಿಂದ ದಬ್ಬಾಳಿಕೆ ನಡೆಸಿರುವುದು ಈಗ ಇತಿಹಾಸ. ಇದನ್ನು ಪ್ರಾಯೋಗಿಕವಾಗಿಯೂ ಇಂದು ಹೋಲಿಸಿ ನೋಡಬಹುದು. ಸಮಾನರಾದವರೊಡನೆ, ಒಂದು ದೇಶ ಜನಾಂಗ ಧರ್ಮಕ್ಕಿಂತ ಹೊರಗಿನ ಶಕ್ತಿ ಆಳ್ವಿಕೆ ನಡೆಸಿದ್ದೆ ಹೆಚ್ಚು.

ಅನೇಕ ಗಿರಿಜನರು ಗುಡ್ಡಗಾಡುಗಳನ್ನು ಬಿಟ್ಟು ಮೈದಾನ ಪ್ರದೇಶಗಳಿಗೆ ಕಾಲಕ್ರಮದಲ್ಲಿ ಬಂದು ನೆಲೆಸುತ್ತಿದ್ದಾರೆ. ಉತ್ತರ ಭಾರತದ ರಾಜಮಹಲ್, ಬಿಹಾರ್‌ಗಳಲ್ಲಿ ಮುಂಡಾ, ಸಂತಾಲ್, ಗಿರಿಜನರಿದ್ದಾರೆ.

ಮೂಲತಃ ಭಾರತ ನಿವಾಸಿಗಳೆಲ್ಲರೂ ವ್ಯಾಧ (Proto Austrolide) ಜನಾಂಗವಾಗಿದ್ದು, ಕ್ರಮೇಣ ವಿವಿಧ ದರ್ಜೆಗಳನ್ನು ತೋರ್ಪಡಿಸಿಕೊಂಡಿದ್ದಾರೆ. ಇವರು ಸಿಂಹಳ (ಶ್ರೀಲಂಕಾ) ವ್ಯಾಧದಂತೆ ಮೂಲ ಲಕ್ಷಣಗಳನ್ನು ಹೋಲುತ್ತಾರೆ. ವ್ಯಾಧ ಜನಾಂಗವು ಒಂದಾನೊಂದು ಕಾಲದಲ್ಲಿ ಈ ದೇಶದಲ್ಲಿ ವಿಶಾಲ ವ್ಯಾಪಿಯಾಗಿದ್ದು ತನ್ನ ವಲಸೆ ಹೋಗುವ ಕಾಲಗತಿಯಿಂದ ಪ್ರಾಯಶಃ ಅಲ್ಲಿಂದ ಹೊರಟು ಹೋಯಿತೆಂಬುದನ್ನು ತೋರಿಸುತ್ತದೆ. ಭಾರತದ ಹೊರಗೂ ಈ ವ್ಯಾಧ ಜನಾಂಗದ ಪುಟ್ಟ ಪ್ರದೇಶಗಳಿವೆಯೆಂದು ಹೇಳಲಾಗುತ್ತದೆ.

೧. ಮಾನವಶಾಸ್ತ್ರದ ಅರ್ಥವಿವರಣೆ ಮತ್ತು ವ್ಯಾಪ್ತಿ

ಮಾನವಶಾಸ್ತ್ರ ಎಂಬ ಶಬ್ದವನ್ನು ಆಂಗ್ಲ ಭಾಷೆಯಲ್ಲಿ 'Anthropology' ಎಂದು ಕರೆಯಲಾಗುತ್ತಿದ್ದು, ಈ ಶಬ್ದ ಲ್ಯಾಟಿನ್ ಭಾಷೆಯಿಂದ ಬಂದಿದ್ದು, ಈ ಶಬ್ದವನ್ನು Human (ಮಾನವ) ಮತ್ತು Logy (ಶಾಸ್ತ್ರ) ಎಂಬ ಎರಡು ಶಬ್ದಗಳಿಂದ ಆಗಿದೆ. ಅಂದರೆ ಮಾನವನನ್ನು ಕುರಿತು ಅಧ್ಯಯನ ಮಾಡುವ ಒಂದು ಶಾಸ್ತ್ರ ಎಂದು ಇದರರ್ಥ.

ಮನುಷ್ಯನನ್ನು ಕುರಿತು ಅವನ ಉಗಮ (Evolution), ಅವನು ದಾಟಿ ಬಂದಂಥಹ ವಿವಿಧ ಹಂತಗಳು (Stages), ಅವನ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಸ್ಥಾನಮಾನ, ರಾಜಕೀಯ ಏರಿಳಿತ, ಅವನ ಆಚಾರ ವಿಚಾರ (ಸಂಸ್ಕೃತಿ) ಅಷ್ಟೇ ಅಲ್ಲದೇ ಅವನ ಜೈವಿಕ ಅಂಶ (Biological Aspects) ಈ ರೀತಿಯಾಗಿ ಮಾನವನನ್ನು ಕುರಿತು

ಯಾವೊಂದು ವಿಷಯವನ್ನು ಬಿಡದೇ ಅವನ ಸಂಪೂರ್ಣ ಅಧ್ಯಯನವೇ (Wholistic Approach) ಈ ಮಾನವಶಾಸ್ತ್ರದ್ದು ಆಗಿದೆ. ಅಷ್ಟೇ ಅಲ್ಲದೇ ಅವನು ಹೇಗೆ ಮಾತನಾಡುತ್ತಾನೆ. ಅವನು ಹೀಗೆಯೇ ಏಕೆ ವರ್ತಿಸುತ್ತಾನೆ ಅಥವಾ ಹೀಗೆಯೇ ಏಕಿದ್ದಾನೆ? ಅವನಾಡುವ ಭಾಷೆ ಹೀಗೆಯೆ ಏಕಿದೆ? ಎಂದು ಅಧ್ಯಯನ ಮಾಡುವದರ ಜೊತೆಗೆ ಮಾನವ ಜನಸಂಖ್ಯೆಯಲ್ಲಿಯ ಬದಲಾವಣೆಗೆ ಅದು ಎಷ್ಟೇ ಚಿಕ್ಕದಿರಲಿ ಅಥವಾ ದೊಡ್ಡದಿರಲಿ ಹಾಗೂ ಪ್ರಸ್ತುತ ಹಾಗೂ ಪ್ರಾಚೀನ ಜಗತ್ತಿನಲ್ಲಿಯ ಮಾನವನ ಆಗು ಹೋಗುಗಳ ಅಧ್ಯಯನವೇ ಮಾನವಶಾಸ್ತ್ರ ಅಧ್ಯಯನವಾಗಿದೆ.

ಈ ಶಾಸ್ತ್ರವು ಇನ್ನುಳಿದ ಶಾಸ್ತ್ರಗಳಂತೆ ಕೇವಲ ಸೀಮಿತವಾದ ವ್ಯಾಪ್ತಿಯನ್ನು ಹೊಂದಿರದೆ ಇದರ ವ್ಯಾಪ್ತಿ ತುಂಬಾ ವಿಶಾಲವಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ಸಮಾಜಶಾಸ್ತ್ರಜ್ಞರು ಮಾನವನ ಕುರಿತು ಸಾಮಾಜಿಕ ಆಗು ಹೋಗುಗಳನ್ನು ಮಾತ್ರ ಅಧ್ಯಯನಿಸುತ್ತಾರೆ. ಅದೇ ಅರ್ಥಶಾಸ್ತ್ರಜ್ಞರು ಮಾನವನ ಆರ್ಥಿಕ ಅಂಶಗಳ ಬಗ್ಗೆ ಅಧ್ಯಯನ ಮಾಡುತ್ತಾರೆ. ರಾಜಕೀಯ ಶಾಸ್ತ್ರಜ್ಞರು ಮಾನವನ ರಾಜಕೀಯ ಏರಿಳಿತಗಳನ್ನು ಮಾತ್ರ ಅಧ್ಯಯನ ಮಾಡುತ್ತಾರೆ. ಆದರೆ ಮಾನವಶಾಸ್ತ್ರವು ಈ ಎಲ್ಲಾ ಅಂಶಗಳನ್ನು ಸವಿಸ್ತಾರವಾಗಿ ಅಧ್ಯಯನ ಮಾಡುವುದರೊಂದಿಗೆ ಮಾನವನ ಜೈವಿಕ (Biological) ಹಾಗೂ ಸಾಂಸ್ಕೃತಿಕ (Culturlogical) ಅಂಶಗಳನ್ನು ಸಹ ಅಧ್ಯಯನ ಮಾಡುತ್ತದೆ.

ಈ ಶಾಸ್ತ್ರದ ವ್ಯಾಪ್ತಿಯು ಭೌಗೋಳಿಕವಾಗಿ ಹಾಗೂ ಐತಿಹಾಸಿಕವಾಗಿ ತುಂಬಾ ವಿಶಾಲವಾಗಿದೆ. ಮಾನವ ಶಾಸ್ತ್ರವನ್ನು ಮುಖ್ಯವಾಗಿ ಜೈವಿಕ ಮಾನವಶಾಸ್ತ್ರ (Physical Anthropology) ಭಾಷಿಕ ಮಾನವಶಾಸ್ತ್ರ (Linguistic Anthropology) ಹಾಗೂ ಸಾಮಾಜಿಕ ಮಾನವಶಾಸ್ತ್ರ (Social Anthropology) ಎಂದು ವರ್ಗೀಕರಿಸಲಾಗಿದ್ದು, ಮತ್ತೇ ಇವುಗಳ ಉಪಶಾಖೆಗಳು ಹತ್ತು ಹಲವಾರು.

ಮಾನವಶಾಸ್ತ್ರಕ್ಕೂ ಸಮಾಜಶಾಸ್ತ್ರಕ್ಕೂ ಹೆಚ್ಚಿನ ವ್ಯತ್ಯಾಸ ಇರದೆ ಇದ್ದರೂ, ಸಮಾಜಶಾಸ್ತ್ರವು ಕೇವಲ ಆಧುನಿಕ ಸಮಾಜವನ್ನು ಮಾತ್ರ ಅಭ್ಯಸಿಸಿದರೆ, ಮಾನವಶಾಸ್ತ್ರವು ಕಾಡಿನ ಸಮಾಜವನ್ನು (ಬುಡಕಟ್ಟು ಸಮಾಜ) ಅಭ್ಯಸಿಸುತ್ತದೆ. ಅಷ್ಟೇ ಅಲ್ಲದೇ ಸಸ್ತನಿಗಳ ಬಗ್ಗೆ, ಇತಿಹಾಸ ಪೂರ್ವದ ದಾಖಲೆಗಳ ಬಗ್ಗೆ, ಸರಳ ಹಾಗೂ ಚಿಕ್ಕ ಚಿಕ್ಕ ಸಮಾಜಗಳ ಬಗ್ಗೆಯು ಈ ಶಾಸ್ತ್ರವು ಅಭ್ಯಸಿಸುತ್ತದೆ. ಮಾನವ ಶಾಸ್ತ್ರವನ್ನು ಸಂಪೂರ್ಣವಾಗಿ ಕ್ಷೇತ್ರ ಆಧಾರಿತ ಅಧ್ಯಯನವೆಂತಲೂ ಮತ್ತು (First Hand Study) ಮೂಲ ಅಧ್ಯಯನವೆಂತಲೂ ಹೇಳುತ್ತಾರೆ.

ಮಾನವಶಾಸ್ತ್ರ ಅಧ್ಯಯನದ ಮೂಲ ಬಂಡವಾಳವೇ ಬುಡಕಟ್ಟು ಸಮುದಾಯಗಳಾಗಿವೆ. ಮಾನವಶಾಸ್ತ್ರವು ಕೇವಲ ಅಂಕಿ-ಅಂಶಗಳ ಅಥವಾ ಊಹೆಯ ಮೇಲೆ ಅವಲಂಬಿತವಾಗಿರದೆ, ಇದು ಖಚಿತವಾದ ದಾಖಲೆಗಳ ಅಧ್ಯಯನವಾಗಿದೆ ಹಾಗೂ ಮಾನವಶಾಸ್ತ್ರವು ಮೊದಲು ಸರಳ ಸಮಾಜಗಳನ್ನು ಅಧ್ಯಯನ ಮಾಡುತ್ತಾ ನಂತರದಲ್ಲಿ ಸಂಕೀರ್ಣ ಸಮಾಜಗಳ ಅಧ್ಯಯನಕ್ಕೆ ಮುಂದಾಗುತ್ತದೆ. ಈ ಶಾಸ್ತ್ರವು ಎಲ್ಲಾ ಸಮಾಜಗಳನ್ನು ಮುಕ್ತವಾಗಿ ಅಧ್ಯಯನ ಮಾಡುತ್ತದೆ.

ನಗರೀಕರಣ, ಕೈಗಾರೀಕರಣ ಹಾಗೂ ಇತ್ತೀಚಿನ ಜಾಗತೀಕರಣ ಎಂಬ ತ್ರೀಕರಣಗಳ ಬಗ್ಗೆ ಈ ಶಾಸ್ತ್ರದ ಅಧ್ಯಯನವು ಮುಂದುವರೆದಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಮಾನವಶಾಸ್ತ್ರವು ಮಾನವನಿಂದ ಮಾನವನ ಬಗ್ಗೆ ಅಧ್ಯಯನ ಮಾಡುವ ಒಂದು ಶಾಸ್ತ್ರವಾಗಿದೆ.

ಮಾನವಶಾಸ್ತ್ರದಲ್ಲಿ ಬುಡಕಟ್ಟು ಸಮುದಾಯಗಳನ್ನು ಈ ಕೆಳಗಿನಂತೆ ನಿರೂಪಿಸಬಹುದಾಗಿದೆ. "ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಅಥವಾ ಅದನ್ನು ತನ್ನದೆಂದು ಹೇಳಿಕೊಳ್ಳುವಂತಹ ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಹೊಂದಿಕೊಂಡಿರುವ ಮತ್ತು ತಮ್ಮದೇ ಆದ ಸ್ವಯಂ ಆಡಳಿತವನ್ನು ಹೊಂದಿಕೊಂಡಿರುವ ಗುಂಪುಗಳೆ ಬುಡಕಟ್ಟು ಗುಂಪು". ಎಂದು ಲಂಡನ್ನಿನಲ್ಲಿಯ ಅಂತ್ರೋಪೊಲಜಿ ಸಂಸ್ಥೆಯು ವ್ಯಾಖ್ಯಾನಿಸುತ್ತದೆ. ಇನ್ನೂ ಸಂಕ್ಷಿಪ್ತವಾಗಿ ಡಿ.ಎಚ್.ಪೆರಿ ಅವರ ವ್ಯಾಖ್ಯಾನದ ಪ್ರಕಾರ, "ಯಾವುದೋ ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನು ಮಾತನಾಡುವ ಜನ ಸಮುಹಗಳೇ ಆದಿವಾಸಿ ಸಮುದಾಯಗಳಾಗಿವೆ". ಸಂಶೋಧಕನಾಗಿ ನನ್ನ ಪ್ರಕಾರ, "ಆದಿವಾಸಿ ಸಮುದಾಯಗಳು ಕೇವಲ ಯಾವುದೇ ಒಂದು ಭಾಷೆಯನ್ನು ಮಾತನಾಡದೆ ಇವರು ಬಹು ಭಾಷಿಕರಾಗಿದ್ದಾರೆ ಜೊತೆಗೆ ಒಂದೇ ಸ್ಥಳದಲ್ಲಿ ಸ್ಥಿರವಾಗಿ ನೆಲೆನಿಲ್ಲದೆ ಯಾವಾಗಲು ಸಂಚಾರಿ ಜೀವನವನ್ನು ಇಷ್ಟಪಡುವವರಾಗಿದ್ದಾರೆ. ಹಾಗೆಯೇ ಆದಿವಾಸಿ ಬುಡಕಟ್ಟುಗಳ ಅರಣ್ಯ ಸಂಪತ್ತಿನ ರಕ್ಷಕರು ಹಾಗೂ ಪರಿಸರ ಪ್ರೇಮಿಗಳಾಗಿದ್ದಾರೆ".

೨. ಮಾನವಶಾಸ್ತ್ರದ ಶಾಖೆಗಳು

ಮಾನವಶಾಸ್ತ್ರ ವಿಷಯದ ವಂಶವೃಕ್ಷದಲ್ಲಿ ಅನೇಕ ಶಾಖೆಗಳಿದ್ದು, ಅವುಗಳಲ್ಲಿ ಸಮಾಜೋಸಾಂಸ್ಕೃತಿಕ (Socio-Cultural Anthropology) ಮಾನವಶಾಸ್ತ್ರವು ಮುಖ್ಯವಾಗಿದ್ದು, ಇದು ಇತರೇ ಎಲ್ಲಾ ಶಾಖೆಗಳಿಗಿಂತ ವಿಶಾಲವಾದ ಮತ್ತು ವಿಸ್ತೃತವಾದ ಶಾಖೆ ಆಗಿದೆ.

ಎರಡನೇ ಶಾಖೆ ಪ್ರಾಚೀನ ಪಳೆಯುಳಿಕೆಗಳಿದ್ದು ಇದಾಗಿದೆ. (Archacology Anthropology ಆಗಿದೆ ಮೂರನೇಯದಾಗಿ ಭಾಷಿಕ ಮಾನವ ಶಾಸ್ತ್ರ (Linguistic Anthropology) ಆಗಿದೆ. ಈ ಶಾಸ್ತ್ರವು ಬೇರೆ ಬೇರೆ ಭಾಷೆಗಳ ಸಾಹಿತ್ಯ ಮತ್ತು ವ್ಯಾಕರಣದ ಬಗ್ಗೆ ಅಧ್ಯಯನ ಮಾಡುತ್ತದೆ.

Applied Anthropology ಯು ಮತ್ತೊಂದು ಉಪಶಾಖೆಯಾಗಿದ್ದು ಈ ಶಾಖೆಯನ್ನು ಕನ್ನಡದಲ್ಲಿ 'ಅನ್ವಯಿಕ ಮಾನವಶಾಸ್ತ್ರ' ಎಂದು ಕರೆಯುತ್ತಾರೆ. ಈ ಅನ್ವಯಿಕ ಮಾನವಶಾಸ್ತ್ರವು ಇತರೆ ಶಾಖೆಗಳಿಗಿಂತ ಸ್ವಲ್ಪ ಭಿನ್ನವಾದ ಹಾಗೂ ಮುಂದುವರೆದ ಶಾಖೆ ಆಗಿದೆ.

ಫಿಜಿಕಲ್ ಅಥವಾ ಬಯೋಲಾಜಿಕಲ್ ಮಾನವಶಾಸ್ತ್ರದ ಶಾಖೆಯನ್ನು ಕನ್ನಡದಲ್ಲಿ ಜೈವಿಕ ಮಾನವಶಾಸ್ತ್ರ ಎಂದು ಕರೆಯಲಾಗುತ್ತಿದ್ದು ಇದು ಸಹ ಒಂದು ಮುಖ್ಯ ಶಾಖೆಯಾಗಿದ್ದು, ಸಾಮಾನ್ಯವಾಗಿ ವಿಜ್ಞಾನದ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳೇ ಇದನ್ನು ಹೆಚ್ಚು ಓದುತ್ತಾರೆ. ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಇದು ಕಷ್ಟದ ಶಾಖೆಯೆಂತಲೇ ಹೇಳಬಹುದು.

ಮೇಲೆ ತಿಳಿಸಿದ ೫-೬ ಶಾಖೆಗಳಲ್ಲದೆ ಇನ್ನೂ ಅನೇಕ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಶಾಖೆಗಳು ಮಾನವಶಾಸ್ತ್ರ ವಿಷಯದಲ್ಲಿವೆ.

ಪ್ರಸ್ತುತ ಸಂಶೋಧಕ ಮೂಲತಃ ಮಾನವಶಾಸ್ತ್ರದ ವಿದ್ಯಾರ್ಥಿಯಾಗಿದ್ದರೂ ಸಹ ಸಂಶೋಧಕನ ವಿಶೇಷ ವಿಷಯ ಸಮಾಜೋ ಸಾಂಸ್ಕೃತಿಕ (Socio-Cultural) ಮಾನವಶಾಸ್ತ್ರವಾಗಿದೆ. ಈ ಕ್ಷೇತ್ರ ವಿಶೇಷ ಅಧ್ಯಯನದಲ್ಲಿ

ಸಂಸ್ಕೃತಿ ಮತ್ತು ಜನರ ಜೀವನ ಕ್ರಮದ ಅಧ್ಯಯನ ಬಗ್ಗೆ ಹೆಚ್ಚು ಒತ್ತು ಕೊಡಲಾಗಿದೆ. ಈ 'ಸಮಾಜೋ ಸಾಂಸ್ಕೃತಿಕ' ಮಾನವಶಾಸ್ತ್ರವನ್ನು 'ಸಾಮಾಜಿಕ ಮಾನವಶಾಸ್ತ್ರ' ಎಂತಲೂ 'ಸಾಂಸ್ಕೃತಿಕ ಮಾನವಶಾಸ್ತ್ರ' ವೆಂತಲೂ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಸಮಾಜಮಾನವಶಾಸ್ತ್ರದಲ್ಲಿ ಜನರು ಯಾವ ಯಾವ ವರ್ಗಕ್ಕೆ ಮತ್ತು ಯಾವ ರೀತಿ ಸಮಾಜಕ್ಕೆ ಸಂಬಂಧಿಸಿದವರಾಗಿದ್ದಾರೆ ಎಂದು ಅಧ್ಯಯನ ಮಾಡಿದರೆ, ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ಜನರ ಅಭಿರುಚಿ ಮತ್ತು ಅವರ ರೀತಿ ರಿವಾಜು ಹಾಗೂ ಅಚಾರ ವಿಚಾರಗಳ ಬಗ್ಗೆ ಹೆಚ್ಚು ಒತ್ತುಕೊಡಲಾಗುತ್ತದೆ. 'ಸಮಾಜ' ಎಂಬ ಅಂಶಕ್ಕೆ ಸಾಮಾಜಿಕ ಮಾನವಶಾಸ್ತ್ರಜ್ಞರು ಹೆಚ್ಚು ಒತ್ತುಕೊಟ್ಟರೆ, 'ಸಂಸ್ಕೃತಿ' ಎಂಬ ಅಂಶಕ್ಕೆ ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ಹೆಚ್ಚು ಒತ್ತು ಕೊಡುತ್ತಾರೆ.

'ಕುಟುಂಬ' ಎಂಬ ಅಂಶವನ್ನು ಮಾನವಶಾಸ್ತ್ರಜ್ಞರು ಸಮಾಜದ ಒಂದು ಮುಖ್ಯ ಘಟಕವೆಂದು ಭಾವಿಸಿ ಅದರ ಸವಿಸ್ತಾರ ಅಧ್ಯಯನಕ್ಕೆ ಮುಂದಾಗುತ್ತಾರೆ. ಮಾನವಶಾಸ್ತ್ರವು ಕುಟುಂಬವನ್ನು ವಿಭಕ್ತ ಕುಟುಂಬ (Nuclear Family), ಅವಿಭಕ್ತ ಕುಟುಂಬ (Joint Family) ಹಾಗೂ ಮುಂದುವರೆದ ಕುಟುಂಬ (Extended Family) ಗಳೆಂದು ಮೂರು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಅವುಗಳ ರಚನೆ ಹಾಗೂ ಕಾರ್ಯ ವೈಖರಿಯನ್ನು ಮಾನನಶಾಸ್ತ್ರವು ಅಧ್ಯಯನ ಮಾಡುತ್ತದೆ.

ಜಗತ್ತಿನಲ್ಲಿಯ ಪ್ರತಿಯೊಂದು ಸಮಾಜವು ತಮ್ಮ ತಮ್ಮದೇ ಆದ ರೀತಿಯಲ್ಲಿ ಮದುವೆ ಕಾರ್ಯಗಳನ್ನು ನೆರವೇರಿಸುತ್ತಿದ್ದುದರಿಂದ ಮಾನವಶಾಸ್ತ್ರಜ್ಞರಿಗೆ ಮದುವೆಯ ಬಗ್ಗೆ ಒಟ್ಟಾರೆ ವ್ಯಾಖ್ಯಾನ ಕೊಡಲು ಇನ್ನೂ ಸಾಧ್ಯವಾಗಿಲ್ಲ.

ಸಾಮಾಜೋಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ಮನುಷ್ಯನ ಕುರಿತು ಸಂಪೂರ್ಣವಾದ ಅಧ್ಯಯನ ಎಷ್ಟರ ಮಟ್ಟಿಗೆ ಮಾಡುತ್ತಾರೆಂದರೆ ಸಮಾಜದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯ ಆರಂಭಿಕ ಹಂತದಿಂದ ಅಂದರೆ (ಗರ್ಭಾವಸ್ಥೆಯಿಂದ) ಹಿಡಿದು, ಬಾಲ್ಯ, ಪ್ರೌಢ, ಯೌವನ, ಮದುವೆ, ಮುಂಜಿ, ಅಷ್ಟೇ ಏಕೆ ಕೊನೆಯ ಹಂತವಾದ ಮರಣದವರೆಗೆ ಅವನು ಆಚರಿಸುವ ಆಚಾರ ವಿಚಾರಗಳು ಹಾಗೂ ಮಾಡುವ ಹಬ್ಬ ಹರಿದಿನಗಳು ಹಾಗೂ ಇತರೇ ಚಟುವಟಿಕೆಗಳನ್ನು ಗಂಭೀರವಾಗಿ ಅವಲೋಕಿಸುವುದರ ಜೊತೆಗೆ ಸವಿಸ್ತಾರವಾಗಿ ಅಧ್ಯಯನ ಮಾಡುತ್ತಾರೆ.

೩. ಸಂಸ್ಕೃತಿ ಮತ್ತು ಸಮಾಜಗಳ ನಡುವಣ ಸಂಬಂಧ

ಸಂಸ್ಕೃತಿ ಎಂಬುದು ವ್ಯಕ್ತಿಗತ ಸಮಾಜದ ಭಾಗವಾಗಿದೆ. ವ್ಯಕ್ತಿಯು ಈ ಸಮಾಜ ಸಂಸ್ಕೃತಿಯ ಒಂದು ಘಟಕವಾಗಿದ್ದು, ಇಲ್ಲಿಯ ಒಳ, ಹೊರ ಒಡನಾಟ ಮತ್ತು ಹೋರಾಟಗಳಲ್ಲಿ ಮಗ್ನನಾಗಿರುತ್ತಾನೆ. ಈ ಅಂಶಗಳಿಂದಲೇ ಮಾನವ ಇತರ ಜೀವಿಗಳಿಗಿಂತ ಭಿನ್ನವಾಗಿ ಕಾಣುತ್ತಾನೆ. ಮಾನವ ಸಂಘ ಜೀವಿಯಾಗಿದ್ದಾನೆ. ಹೀಗೆ ಮನುಷ್ಯ, ಸಮಾಜ ಮತ್ತು ಸಂಸ್ಕೃತಿಗಳೆಲ್ಲವೂ ಒಂದಕ್ಕೊಂದು ಪರಸ್ಪರ ಸಂಬಂಧವನ್ನು ಹೊಂದಿವೆ. ಒಂದರೊಳಗೊಂದು ಬೆಳೆಯುತ್ತಾ, ಬೆರೆಯುತ್ತಾ, ಬೆಳಕಿನ ಬೀಜ ಬಿತ್ತುತ್ತ ಕೆಲವೊಮ್ಮೆ ಕತ್ತಲ ಹೂವು ಅರಳಿಸುತ್ತಾ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗಿವೆ. ಮನುಷ್ಯ ಪ್ರಾಣಿಯು ಸಮಾಜ ಮತ್ತು ಸಂಸ್ಕೃತಿಯ ಸ್ನೇಹ, ಎಲ್ಲಾ ಪರಿಳಿತಗಳ ಒಳ ಸುಳಿಯುಳ್ಳ ವಿಚಿತ್ರ ತಳಿಯಾಗಿದೆ.

Ruth Benedict ಎಂಬ ಮಾನವಶಾಸ್ತ್ರಜ್ಞನ ಪ್ರಕಾರ, "ಯಾವೊಬ್ಬ ವ್ಯಕ್ತಿಯೂ ತಾನು ಭಾಗವಹಿಸುವ ಸಂಸ್ಕೃತಿಗೆ ಹೊರತಾಗಿ ತನ್ನ ನಿಗೂಢ ಶಕ್ತಿಗಳ ಹೊಸ್ತಿಲನ್ನು ಸಹ ಮುಟ್ಟಲಾರನಂತೆ". ವ್ಯಕ್ತಿಯೂ ತನ್ನ ಜೀವನವನ್ನು ರೂಢಿಸಿಕೊಳ್ಳಲು ಸಂಸ್ಕೃತಿಯು ಆತನಿಗೆ ಅಥವಾ ಅವಳಿಗೆ ಮೂಲವಸ್ತುವಾಗಿ ಒದಗಿಸುತ್ತದೆ. ಇದರರ್ಥ ಇಷ್ಟೇ ವ್ಯಕ್ತಿಯ ಒಳಸುಳಿ ಮತ್ತು ಸ್ವಭಾವಗಳು ಇದ್ದಕ್ಕಿದ್ದಂತೆ ಪ್ರಕಟವಾದರೂ ಅವುಗಳಿಗೆ ತನ್ನದೇ ಆದ ಇತಿಹಾಸವಿದೆ. ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಅವನ ಪಾತ್ರ ಮಾತ್ರವಿರದೇ, ಅವನು ಬದುಕುತ್ತಿರುವ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರೇರಿತನಾಗಿರುತ್ತಾನೆ. ಯಾಕೆಂದರೆ ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿಗಳ ನಡುವಿನ ಸಂಬಂಧ ತುಂಬಾ ಗಾಢವಾದದ್ದು.

S.F.Nadel ಎಂಬ ಮಾನವಶಾಸ್ತ್ರಜ್ಞನ ಪ್ರಕಾರ, "ಸಮೂಹ ಮತ್ತು ಸಂಬಂಧಗಳ ಆಯಾಮದಲ್ಲಿ ಪ್ರಕಟಗೊಳ್ಳುವ ಸಾಮಾಜಿಕ ಸತ್ಯಗಳ ಒಟ್ಟು ಮೊತ್ತವೇ ಸಮಾಜವಾಗಿದೆ. ಇವೆಲ್ಲ ಒಟ್ಟು ಮೊತ್ತಗಳ ಕ್ರಿಯೆಗಳ ಆಯಾಮವೇ ಸಂಸ್ಕೃತಿ ಎಂದಾಗಿದೆ".

Herskovit ಎಂಬುವರ ಪ್ರಕಾರ, "ಕ್ರಿಯೆ ಇಲ್ಲದೇ ಸಂಸ್ಕೃತಿ ಇಲ್ಲ. ಅಂದರೆ ಸಂಸ್ಕೃತಿಯು ಕೇವಲ ಸ್ಥಗಿತ ಸ್ಥಿತಿಯಲ್ಲ. ಅದು ನಿಂತಂತೆ ಕಾಣುತ್ತಲೇ ನಡೆಯುವ ನಮೂನೆಗಳ ಅನನ್ಯ ಸ್ಥಿತಿಯೊಂದು ಸಂಸ್ಕೃತಿಯಲ್ಲಿ ಅಂತರ್ಗತವಾಗಿರುತ್ತದೆ".

ಇವರ ಪ್ರಕಾರ ಸಂಸ್ಕೃತಿಯೆಂಬುದು ಏಕಕಾಲದಲ್ಲಿಯೇ ಸ್ಥಿರವೂ ಮತ್ತು ಚಲನ ಶೀಲವೂ ಆಗಿರುತ್ತದೆ.

ಸಂಸ್ಕೃತಿಯೆನ್ನುವುದು ಮನುಷ್ಯನಿಗೆ ಸಂಬಂಧಿಸಿದವರಿಂದ ಮನುಷ್ಯ ಬದುಕಿನ ವೈರುಧ್ಯ ಮತ್ತು ವ್ಯಾಪ್ತಿಗಳನ್ನು ಒಳಗೊಳ್ಳುವುದು ಸಹಜ. ಕನ್ನಡದ ಹಿರಿಯ ಸಂಶೋಧಕರೂ ಹಾಗೂ ವಿದ್ವಾಂಸರೂ ಆಗಿದ್ದ ಶಂ.ಬಾ.ಜೋಷಿಯವರ ಪ್ರಕಾರ, "ಸಂಸ್ಕೃತಿಯನ್ನು ರೂಪಿಸುತ್ತಾ ಹೋಗುವ ಮಾನವ, ತನ್ನನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಹಾಗೆ ನೋಡಿದರೆ ಮನುಷ್ಯನೇ ಸಂಸ್ಕೃತಿಯ ಮೂಲ ನಿರ್ಮಾಪಕ ಹಾಗೂ ನಿರ್ದೇಶಕ".

ಸಮಾಜಶಾಸ್ತ್ರಜ್ಞರು ಹೇಳುವಂತೆ ಮನುಷ್ಯನ ಶ್ರಮ ಎಷ್ಟೆಷ್ಟು ಒಳಗಾಗುತ್ತದೆಯೇ ಅಷ್ಟಷ್ಟು ಸಂಸ್ಕೃತಿಯು ವಿಕಾಸವಾಗುತ್ತದೆ. ಮನುಷ್ಯನ ದೈಹಿಕ ಹಾಗೂ ಬೌದ್ಧಿಕ ಶ್ರಮ ಬಳಕೆಯಾದಂತೆಲ್ಲಾ ಹೊಸ ಹೊಸ ವಿನ್ಯಾಸಗಳು ರೂಪುಗೊಳ್ಳುತ್ತದೆ

ಮನುಷ್ಯ ಎಲ್ಲೆಲ್ಲಿ ಇದ್ದಾನೊ ಅಲ್ಲೆಲ್ಲಾ ಸಮಾಜಗಳಿವೆ. ಮತ್ತು ಆ ಸಮಾಜಗಳಲ್ಲಿಯೇ ಸಂಸ್ಕೃತಿಯು ಇದೆ. ಮನುಷ್ಯನ ಶ್ರಮ ಮತ್ತು ಕ್ರಿಯೆಗಳೇ ಸಂಸ್ಕೃತಿಯ ವಿಕಾಸದ ದಿಕ್ಕನ್ನು ನಿರ್ಧರಿಸುತ್ತದೆ. ಸಂಸ್ಕೃತಿ ಎಂಬ ಪರಿಕಲ್ಪನೆಗೆ ಮೇಲು ಸಂಸ್ಕೃತಿ, ಕೀಳು ಸಂಸ್ಕೃತಿ ಎಂಬ ತಾರತಮ್ಯಗಳಿಲ್ಲ.

Herskovit ಹೇಳುವಂತೆ, "ಜನರ ಜೀವನ ವಿಧಾನವೇ ಸಂಸ್ಕೃತಿಯಾಗಿದೆ". ಈ 'ಜನ' ಯಾರಾದರೂ ಆಗಿರಬಹುದು. (ಕಾಡು ಜನರಾದರೂ ಸರಿ ಇಲ್ಲ ನಾಡು ಜನರಾದರೂ ಸರಿ) ಜನರಿದ್ದ ಕಡೆ ಸಂಸ್ಕೃತಿ ಇದ್ದೇ ಇರುತ್ತದೆ. ಆದರೆ ಹೀಗೆ ಇರುವ ಸಂಸ್ಕೃತಿ ಒಂದೇ ತೆರನಾದುದಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯ.

ಈ.ಬಿ.ಟೇಲರ್ ಎಂಬ ಸಂಸ್ಕೃತಿ ತಜ್ಞನ ಪ್ರಕಾರ "ಸಮಾಜದ ಒಬ್ಬ ಸದಸ್ಯನಾಗಿ ಮನುಷ್ಯಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನಿಯಮ, ಆಚರಣೆ, ಸ್ವಭಾವ ಮತ್ತು ಯಾವುದೇ ಶಕ್ತ ಸ್ಥಿತಿಯನ್ನು ಒಳಗೊಳ್ಳುವ ಒಂದು ಸಂಕೀರ್ಣವೇ 'ಸಂಸ್ಕೃತಿ' ಆಗಿದೆ.

ಟೆಲರ್ ಸಹ ಸಾಮೂಹಿಕ ಪ್ರತಿಕ್ರಿಯೇಯಾಗಿಯೇ ಸಂಸ್ಕೃತಿಯನ್ನು ಸ್ವೀಕರಿಸಿದ್ದಾನೆ. ಈ ಸಂಸ್ಕೃತಿಯೆನ್ನುವುದು ಏಕಾಂತಕ್ಕೆ ಏಕ ವ್ಯಕ್ತಿಗೆ ಸೀಮಿತವಾಗಿಲ್ಲ. ಅದರಅನೇಕ ಅಂಶಗಳು ಅಂತರ್ಗತವಾಗುತ್ತ ರೂಪುಗೊಂಡ ಒಂದು ಸಂಕೀರ್ಣ ಸ್ಥಿತಿಯೆಂದು ಈತ ಕಂಡುಕೊಂಡಿದ್ದಾನೆ.

ಭಾರತ ದೇಶದ ಸಂಸ್ಕೃತಿಯು ವಿವಿಧತೆಯಲ್ಲಿ ಏಕತೆ (Unity in Diversity) ಹೊಂದಿರುವುದರ ಜೊತೆಗೆ ಭಾರತವು ಅನೇಕ ಸಂಸ್ಕೃತಿಗಳ ಹಾಗೂ ಅನೇಕ ಧರ್ಮಗಳ ದೇಶವಾಗಿದೆ. ಇದು ಅನೇಕ ಉಪಸಂಸ್ಕೃತಿಗಳ ಒಂದು ಒಕ್ಕೂಟವೆಂತಲೂ ಹೇಳಬಹುದು. ಇನ್ನೂ ಮುಂದುವರೆದು ಹೇಳುವುದಾದರೆ ನಮ್ಮದು ಸಂಸ್ಕೃತಿಗಳ ವಿಶ್ವ. ಭಾರತಕ್ಕೆ ಹೋಲಿಸಿದರೆ ಕರ್ನಾಟಕವೆ ಒಂದು ಸಂಸ್ಕೃತಿ. ವಿಶ್ವಕ್ಕೇ ಸಂಸ್ಕೃತಿಯಾಗುವ ಈ ಭಾರತ ತನ್ನೊಳಗೆ ನೂರಾರು ಸಂಸ್ಕೃತಿಗಳನ್ನು ಒಳಗೊಂಡಿರುವುದೇ ಒಂದು ವೈಶಿಷ್ಟ್ಯ. ಇದು ಇಡೀ ವಿಶ್ವದ ವೈಶಿಷ್ಟ್ಯವಾಗಿದೆ.

೪. ಪಾರ್ಧಿಯರ ಹಿನ್ನೆಲೆ

ಇಂದು ಕರ್ನಾಟಕ ರಾಜ್ಯದಲ್ಲಿ ಒಟ್ಟು ೫೦ ಬುಡಕಟ್ಟುಗಳು ವಾಸಿಸುತ್ತಿದ್ದು ಬಹುತೇಕ ಬುಡಕಟ್ಟುಗಳ ಬಗ್ಗೆ ಈಗಾಗಲೇ ಅಧ್ಯಯನ ಕೈಗೊಂಡು ಅನೇಕರು ತಮ್ಮ ಎಂ.ಫಿಲ್. ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಆದರೆ ಪಾರ್ಧಿ ಬುಡಕಟ್ಟಿನ ಬಗ್ಗೆ ಯಾರೊಬ್ಬರು ಅಷ್ಟು ಗಂಭೀರವಾಗಿ ಅಧ್ಯಯನ ಮಾಡಿಲ್ಲವೆಂದೆ ಹೇಳಬಹುದು. ಮೈಸೂರಿನಲ್ಲಿಯ ಮಾನವಶಾಸ್ತ್ರ ಸರ್ವೇಕ್ಷಣ ಸಂಸ್ಥೆ (An.S.I) ವತಿಯಿಂದ ಮಾನ್ ಎಂಬುವರು Hakkipikki Trapper and Seller ಎಂಬ ಪುಸ್ತಕವನ್ನು ಆಂಗ್ಲಭಾಷೆಯಲ್ಲಿ, ರಾಜಪ್ಪ ದಳವಾಯಿಯವರು 'ಹಕ್ಕಿಪಿಕ್ಕಿಯವರ ಸಂಸ್ಕೃತಿ' ಎಂತಲೂ, ಲಾರೆನ್ಸ್ ಡಿ ಸೋಜಾ, ಎಸ್.ಜೆ. ಎಂಬುವರು ಆಂಗ್ಲಭಾಷೆಯಲ್ಲಿ 'Hakki pikkis' ಎನ್ನುವ ಒಂದು ಪುಸ್ತಕ, ಸುದರ್ಶನ್ ಕುಮಾರ್ ಅವರು ಬೆಂಗಳೂರು ಬಳಿಯಲ್ಲಿಯ ಭೂತಾನಹಳ್ಳಿ (ಬನ್ನೇರು ಘಟ್ಟಬಳಿ) ಕಾಲೋನಿಯಲ್ಲಿಯ ಹಕ್ಕಿಪಿಕ್ಕಿಯವರ ಕುರಿತು ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನವನ್ನು ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ವಿನೋದಾ ನಾಯ್ಕ ಎಂಬುವರು ಶಿವಮೊಗ್ಗ ಜಿಲ್ಲೆಯಲ್ಲಿಯ ಹಕ್ಕಿಪಿಕ್ಕಿಯರ ಆರ್ಥಿಕ ವಿಷಯ ಕುರಿತು ಪಿಎಚ್.ಡಿ. ಅಧ್ಯಯನ ಕೈಗೊಂಡಿದ್ದಾರೆ. ಇವುಗಳನ್ನು ಹೊರತು ಪಡಿಸಿದರೆ. ಇಡೀ ಕರ್ನಾಟಕ ರಾಜ್ಯವನ್ನೇ ಕ್ಷೇತ್ರಕಾರ್ಯವನ್ನಾಗಿ ಮಾಡಿಕೊಂಡು ಪಾರ್ಧಿ ಬುಡಕಟ್ಟಿನ ಬಗ್ಗೆ ಮಾನವಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಮೊದಲ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. ರಾಜಪ್ಪ ದಳವಾಯಿ ಹಾಗೂ ಲಾರೆನ್ಸ್ ಡಿ ಸೋಜಾರವರು ಕೇವಲ ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಹೀಗೆ ೫-೬ ಜಿಲ್ಲೆಗಳಲ್ಲಿಯ ಹಕ್ಕಿಪಿಕ್ಕಿಯರನ್ನು ಮಾತ್ರ ಅಭ್ಯಸಿಸಿರುವುದು ಅವರ ಕೃತಿಗಳಿಂದ ಕಂಡು ಬರುತ್ತಿದೆ.

ಆದರೆ ಈ ಬುಡಕಟ್ಟಿನವರು ರಾಜ್ಯದ ೧೫ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದಾರೆ. ಈಗಾಗಲೇ ತಿಳಿಸಿರುವಂತೆ, ಭಾರತದ ಸಂಸ್ಕೃತಿ ಹೇಗೆ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆಯೋ ಹಾಗೆಯೇ ಕರ್ನಾಟಕದಲ್ಲಿಯ ಈ ಪಾರ್ಧಿಯರಲ್ಲಿಯೂ ಅನೇಕ ವಿವಿಧತೆಗಳನ್ನು ಕಂಡುಬಂದರೂ ಏಕತೆಯಿಂದ ಇರುವುದು ಕಂಡುಬರುತ್ತದೆ. ಕರ್ನಾಟಕ ಒಂದೇ ರಾಜ್ಯದಲ್ಲಿಯೇ ಈ ಬುಡಕಟ್ಟಿನವರನ್ನು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಹೆಸರಿನಿಂದ ಗುರುತಿಸುತ್ತಿದ್ದಾರೆ. ಉದಾಹರಣೆಗೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ 'ಪಾರ್ಧಿ' ಎಂದು ಕರೆದರೆ, ಬಳ್ಳಾರಿ, ಮೈಸೂರು, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ 'ಹಕ್ಕಿಪಿಕ್ಕಿ' ಎಂದು ಗುರ್ತಿಸುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇವರನ್ನು 'ಅಡವಿ ಚೆಂಚರು' ಎಂದು ಕರೆದರೆ, (ಆದರೆ ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಸಮುದಾಯ ಇಲ್ಲ) ಬಿಜಾಪೂರ್, ಬಾಗಲಕೋಟೆ ಹಾಗೂ ಗದಗ ಜಿಲ್ಲೆಗಳಲ್ಲಿ ಇವರನ್ನು 'ಹರಣ್‌ಶಿಕಾರಿ', 'ಬೇಟೆಗಾರ್', 'ಚಿಗರಿಕಾರ್' ಜನ ಎಂಥೆಲ್ಲಾ ಕರೆಯುತ್ತಾರೆ. ಪಕ್ಕದ ಆಂಧ್ರ ಪ್ರದೇಶದಲ್ಲಿ ಇವರನ್ನು 'ಪಾರ್‌ದಾನ್', 'ನೀರ್‌ಶಿಕಾರಿ' ಹಾಗೂ 'ಪಿಟಲೊಲು' ಎಂದೆಲ್ಲಾ ಗುರ್ತಿಸಿದರೆ, ಗುಜರಾತ್ ಮತ್ತು ರಾಜಾಸ್ಥಾನ ರಾಜ್ಯಗಳಲ್ಲಿ ಇವರನ್ನು 'ವಾಗ್ರಿ' ಎಂದು ಕರೆಯುತ್ತಾರೆ.

ಫರ್ಡಿನಾಂಡ್ ಕಿಟೆಲ್ಲರ ಕನ್ನಡ ಕನ್ನಡ ನಿಘಂಟಿನಲ್ಲಿ 'ಹಕ್ಕಿಪಿಕ್ಕಿ' ಎಂಬ ಪದ ಸಿಗುತ್ತದೆ. ಆದರೆ, Edmund Thurston ಅವರ 'Caste and Tribes in Southern India' ಎಂಬ ಪುಸ್ತಕದ ೭ ಸಂಪುಟಗಳಲ್ಲಿ ಎಲ್ಲಿಯೂ ಪಾರ್ಧಿ ಎಂತಾಗಲಿ ಅಥವಾ ಹಕ್ಕಿಪಿಕ್ಕಿ ಎಂತಾಗಲಿ ಶಬ್ಧವೇ ಇಲ್ಲ! ಆದರೆ ಅದರ ಬದಲಿಗೆ Shikari ಹಾಗೂ Sikligar ಎಂಬ ಶಬ್ಧಗಳು ಸಿಗುತ್ತವೆ. Thurstonನ ಕೈಯಲ್ಲೂ ಸಹ ಸಿಗದ ಈ ಬುಡಕಟ್ಟು ನಿಜಕ್ಕೂ ಒಂದು ನಿಗೂಢವಾದ ಬುಡಕಟ್ಟೇ ಎಂದರೂ ತಪ್ಪಾಗದು. ಇಷ್ಟೊಂದು ಚಲನಶೀಲವಾದ ಬುಡಕಟ್ಟನ್ನು ಭೇಟಿಮಾಡಿ ಮಾತನಾಡಿಸಲಾಗಿ, ಇವರಲ್ಲಿ ಕೆಲವರು ನಾವು ಮೂಲತಃ ಗುಜರಾತ್ ರಾಜ್ಯದವರೆಂದು ಹೇಳಿಕೊಂಡರೆ ಇನ್ನೂ ಕೆಲವರು ಇಲ್ಲ ನಾವು ಮೂಲತಃ ರಾಜಸ್ತಾನ ರಾಜ್ಯದವರೆಂದು ಹೇಳಿಕೊಳ್ಳುತ್ತಾರೆ.

ಹುಬ್ಬಳ್ಳಿ ನಗರದಲ್ಲಿಯ ಗಂಗಾಧರ್ ಸೆಟ್ಲಮೆಂಟ್ ಕಾಲೋನಿಯ ಪಾರ್ಧಿ ಸಮಾಜದ ಅಧ್ಯಕ್ಷರಾದ ಜಲಾಲ್ ಚಂದಪ್ಪ ಕಟ್ಟಿಮನಿ (೬೦ ವರ್ಷ) ಹಾಗೂ ಬಾಗಲಕೋಟೆ ನಗರದ ಗಾಂಧಿನಗರ್ ಸೆಟ್ಲಮೆಂಟ್‌ನಲ್ಲಿಯ ಹರಣ್‌ಶಿಕಾರಿ ಸಮಾಜದ ಮುಖಂಡರಾದ ಶಿವಾಜಿ ಎಂಗಪ್ಪ ಚೌಹ್ಹಾಣ (೬೦ ವರ್ಷ) ಎಂಬುವವರನ್ನು ವಿಚಾರಿಸಲಾಗಿ, ಅವರುಗಳು ತಮ್ಮ ಸಮುದಾಯದ ಹಿನ್ನೆಲೆಯನ್ನು ಈ ರೀತಿಯಾಗಿ ಹೇಳಿಕೊಳ್ಳುತ್ತಾರೆ.

"ರಾಜಸ್ಥಾನದ ಚಿತ್ತೊಡದ ಮೇವಾಡದಲ್ಲಿದ್ದಂತಹ ನಮ್ಮ ಪೂರ್ವಿಕರು ಮಹಾರಾಣಾಪ್ರತಾಪನ ಅಂಗರಕ್ಷಕರಾಗಿದ್ದರು. ಪಾರ್ಧಿ ಎಂದರೆ ಅಂಗರಕ್ಷಕ (Bodygward) ಎಂದರ್ಥ. ಕೆಲವೊಂದು ಮುಸ್ಲಿಂ ರಾಜರು ಮಹಾರಾಣಾ ಪ್ರತಾಪನ ಮೇಲೆ ರಾಜ್ಯಕ್ಕಾಗಿ ಧಾಳಿ ಮಾಡಿದಾಗ ಪಾರ್ಧಿಗಳೇ ಮಹಾರಾಜ ಪ್ರತಾಪನ ಅಂಗ ರಕ್ಷಕರಾಗಿ ಕೆಲಸ ಮಾಡಿದ್ದರು.

ಬಾಬರನು ಮಹಾರಾಣಾ ಪ್ರತಾಪನನ್ನು ಕೊಲ್ಲಲು ೧೫ ಸಲ ಅವನ ಮೇಲೆ ದಂಡೆತ್ತಿಬಂದಾಗಲೆಲ್ಲಾ ಪಾರ್ಧಿಗಳೇ ಅವನಿಗೆ ಅಂಗರಕ್ಷಕರಾಗಿದ್ದರು. ಆದರೆ ಬಾಬರನು ತನ್ನ ೧೬ನೇ ಪ್ರಯತ್ನದಲ್ಲಿ ರಾಣಾ ಪ್ರತಾಪನನ್ನು ಕೊಂದುಬಿಟ್ಟ, ಅದಕ್ಕೂ ಮುಂಚೆ ಅಕ್ಬರ್ ಬಾದಶಾಹನು ರಾಣಾ ಪ್ರತಾಪನನ್ನು ಸೋಲಿಸಿದಾಗ,

ರಾಣಾ ಪ್ರತಾಪರು ಅಡವಿ ಅಡವಿ ಅಲೆಯುತ್ತಿದ್ದರು. ಅಂಥಹ ಸಂದರ್ಭದಲ್ಲಿಯೂ ಪಾರ್ಧಿಯರೆ ರಾಣಾ ಪ್ರತಾಪನಿಗೆ ಅಂಗ ರಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನಮ್ಮ ಕಷ್ಟವನ್ನು ನೋಡಿ ಸಹಿಸದ ರಾಣಾ ಪ್ರತಾಪನು, 'ಮುಸ್ಲಿಂರ ಮೊಘಲ್ ರಾಜ್ಯವನ್ನು ಲೂಟಿಮಾಡಿ ಊಟ ಮಾಡಿ' ಎಂದು ಆದೇಶಿಸಿದ್ದ.

ನಂತರದಲ್ಲಿ ಗ್ವಾಲಿಯಾರದ ರಾಣಿ ಝಾನ್ಸಿ ಲಕ್ಷ್ಮೀಬಾಯಿಯು ನಮ್ಮನ್ನೇ (ಪಾರ್ಧಿಯರನ್ನೇ) ಅಂಗರಕ್ಷಕರನ್ನಾಗಿ ಇಟ್ಟು ಕೊಂಡಿದ್ದಳು. ಅವಳು ನಮ್ಮ ಜನರಿಗೆ ತಾಮ್ರದ ಹಕ್ಕು ಪತ್ರಗಳನ್ನು ಕೊಟ್ಟಿದ್ದಳು. ಅವಳ ಅಂತಿಮ ದಿನಗಳಲ್ಲಿ ನಮ್ಮ (ಪಾರ್ಧಿಯರ) ಉಳಿವಿಗಾಗಿ ನೀವು ಕೊಲ್ಲಾಪುರದ ಶಾಹು ಮಹಾರಾಜರ ಕಡೆಗೆ ಹೋಗಿರಿ ಎಂದು ತಾಮ್ರದ ಪತ್ರಗಳನ್ನು ಕೊಟ್ಟಿದ್ದಳು. ಆಗ ಶಾಹು ಮಹಾರಾಜನು ನಮ್ಮ ಜನರಿಗೆ ತುಂಬಾ ಸಹಾಯ ಮಾಡಿದ್ದರು. ನಂತರದಲ್ಲಿ ನಮ್ಮ ಜನ ತಮ್ಮ ಹೊಟ್ಟೆ ಪಾಡಿಗಾಗಿ ಭಾರತದ ಎಲ್ಲಾ ರಾಜ್ಯಗಳಲ್ಲಿ ಹರಡಿಕೊಂಡೆವು ಎಂದು ಹೇಳುತ್ತಾರೆ.

ಕ್ರಿ.ಶ.೧೯೫೮ರಲ್ಲಿ ನಮ್ಮವರು ಕೆಲವರು ಕರ್ನಾಟಕದ ಬಾದಾಮಿ, ಮುಂಡರಗಿ, ಬಾಗಲಕೋಟೆ, ಬಿಜಾಪೂರ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಚದುರಿ ಹೋದರಂತೆ."

ಹರಣಶಿಕಾರಿ ಅಥವಾ ಹಕ್ಕಿಪಿಕ್ಕಿ ಎಂಬುದು ನಮ್ಮ ಜಾತಿಯಾಗಿರದೆ ಅದು ನಮ್ಮ ವೃತ್ತಿಯಿಂದ ಜನರು ನಮ್ಮನ್ನು ಅದೇ ಹೆಸರಿನಿಂದ ಕರೆಯುತ್ತಾರೆ ಮತ್ತು ಗುರ್ತಿಸುತ್ತಾರೆ. ಎಂಬುದು ಮಾಹಿತಿದಾರರ ಅನಿಸಿಕೆಯಾಗಿದೆ.

ಸ್ವಾತಂತ್ರ ಪೂರ್ವದ ಭಾರತದಲ್ಲಿ. ಬ್ರಿಟಿಷ್ ಅಧಿಕಾರಿಗಳು ನಮ್ಮ ಜನರು ಕಾಡು ಮೇಡುಗಳಲ್ಲಿ ಬೇಟೆಯಾಡುವದನ್ನು ಹಾಗೂ ಇತರೇ ಕಾನೂನುಬಾಹಿರ ಚಟುವಟಿಕೆಗಳನ್ನು ಮಾಡುವುದನ್ನು ಕಂಡು ನಮ್ಮ ಸುಧಾರಣೆಗಾಗಿ ಇಡೀ ಭಾರತಾದ್ಯಂತ ಒಟ್ಟು ೫೨ ಸೆಟ್ಲಮೆಂಟ್‌ಗಳನ್ನು ರಚಿಸಿದ್ದರು. ಅವುಗಳಲ್ಲಿ ಕರ್ನಾಟಕ ರಾಜ್ಯದಲ್ಲಿಯು ಒಟ್ಟು ೫ ಬೇರೆ ಬೇರೆ ಕಡೆಗಳಲ್ಲಿ ನೆಲೆಗಳನ್ನು ಆರಂಭಿಸಿದ್ದಾರೆ. ಆ ೫ ಸೆಟ್ಲಮೆಂಟ್‌ಗಳೆಂದರೆ ಬಿಜಾಪೂರ್, ಬಾಗಲಕೋಟೆ, ಹುಬ್ಬಳ್ಳಿ, ಧಾರವಾಡ ಬಳಿಯಲ್ಲಿಯ ಕಂಬಾರ್‌ಗಣಿ (ಜೈ ಭಾರತ ಕಾಲೋನಿ) ಮತ್ತು ಗದಗ್ ನಗರಗಳಾಗಿವೆ.

ಕ್ರಿ.ಶ.೧೮೧೩ರಲ್ಲಿಯೆ ಬ್ರಿಟಿಷ್ ಅಧಿಕಾರಿಗಳು ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಆರಂಭಿಸಿದರು. ಯಾವ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲವೊ ಅಂಥಹ ಪಾಲಕರನ್ನು ಶಿಕ್ಷಿಸಿ, ೨ ವರ್ಷಗಳ ವರೆಗೆ ಜೈಲಿಗೆ ಕಳಿಸುತ್ತಿದ್ದರು. ಅಂಥಹ ಬ್ರಿಟಿಷ್ ಅಧಿಕಾರಿಗಳಲ್ಲಿ ಕೆಲವು ಹಿರಿಯ ಪಾರ್ಧಿಯರು ಬಿಸ್ಕಟ್‌ಮೊಷ್ತಾಂ, ಬೇಡ್‌ಬೇರಿ ಹಾಗೂ ತಾಡ್‌ಸಾಬ್ ಎಂಬುವರ ಹೆಸರನ್ನು ಬಹಳಷ್ಟು ಜನ ಹೆಸರಿಸಿದರು (ನೆನಪಿಸುತ್ತಾರೆ). ಬ್ರಿಟಿಷ್ ಅಧಿಕಾರಿಗಳು ನಮ್ಮನ್ನು ಕ್ರಿಮಿನಲ್‌ಟ್ರೈಬ್ (ಅಪರಾಧಿ ಬುಡಕಟ್ಟು) ಎಂಬ ಹಣೆಪಟ್ಟಿ ಕಟ್ಟಿ ಸೆಟ್ಲಮೆಂಟ್‌ಗಳಲ್ಲಿ ಕೂಡಿಹಾಕಿ ಹೊರಗೆ ಹೋಗಬೇಕಾದರೆ ನಮ್ಮ ಗುರ್ತಿನ ಚೀಟಿಯನ್ನು ತೋರಿಸಿ ಹೊರಗೆ ಹೋಗಿ ನಿರ್ದಿಷ್ಟ ಪಡಿಸಿದ ಅವಧಿ ಒಳಗೇ ಮನೆಗೂಡು(ಸೆಟ್ಲಮೆಂಟ್)ಗಳನ್ನು ಸೇರಬೇಕಾಗುತ್ತಿತ್ತು. ಪಾರ್ಧಿ ಬುಡಕಟ್ಟು ಮೂಲತಃ ಕ್ಷತ್ರಿಯ ವಂಶಕ್ಕೆ ಸೇರಿದವರಾಗಿದ್ದು, ಇವರು ಶ್ರೀರಾಮನ ಅನುಯಾಯಿಗಳಾಗಿದ್ದಾರೆ.

ರಾಜಪ್ಪ ದಳವಾಯಿ ಮತ್ತುವರು 'ಹಕ್ಕಿಪಿಕ್ಕಿಯರ ಸಂಸ್ಕೃತಿ' ಎಂಬ ಪುಸ್ತಕದಲ್ಲಿ ಬರೆದಿರುವಂತೆ ಹಾಗೂ

ಸಂಶೋಧನಾ ಕಾರ್ಯ ಕ್ಷೇತ್ರದಲ್ಲಿ ಕೆಲವು ಹಿರಿಯರು(ವಕ್ತೃ)ಗಳು ಹೇಳಿರುವ ಹಾಗೆ, ಪಾರ್ಧಿಯರು, ನಮ್ಮ ದಾದಾಜಿ(ತಂದೆ)ಗೆ ನಾವು ಒಟ್ಟು ೫ ಜನ ಮಕ್ಕಳು. ಅವರುಗಳೆಂದರೆ, ಲಂಬಾಣಿಗರು, ಜೋಗೋರು, ಬೈಲಕಮ್ಮಾರರು, ಮಾರವಾಡಿಗರು ಮತ್ತು ನಾವುಗಳು (ಪಾರ್ಧಿಯರು). ಮಾರವಾಡಿಗಳು ತಮ್ಮ ಕುಬುದ್ಧಿಯಿಂದ ನಮ್ಮ ಆಸ್ತಿಯನ್ನೆಲ್ಲಾ ಕಿತ್ತುಕೊಂಡು ಬಿಟ್ಟು ಶ್ರೀಮಂತರಾದರು. ನಾವು ನಾಲ್ವರು ಮಾತ್ರ ಭಿಕಾರಿಗಳಾಗಿ ಬಿಟ್ಟೆವು ಎಂದು ತಮ್ಮ ವ್ಯಥೆಯ ಕಥೆಯನ್ನು ಹೇಳುತ್ತಾರೆ.

ಪಾರ್ಧಿಯರು ರಜಪುತ ವಂಶಕ್ಕೆ ಸೇರಿದವರಾಗಿದ್ದು ಇವರು ವರ್ಣಾಶ್ರಮ ವ್ಯವಸ್ಥೆಯಲ್ಲಿ ಕ್ಷತ್ರಿಯ ವಂಶಕ್ಕೆ ಸೇರಿದವರಾಗಿದ್ದಾರೆ. ಯಾಕೆಂದರೆ ಪಾರ್ಧಿ ಎಂಬುದರ ಅರ್ಥವೆ ಅಂಗರಕ್ಷಕ ಎಂದಾಗಿದೆ. ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನಗಳಲ್ಲಿ ಇವರ ಸಂಬಂಧಿಗಳು ಬಹಳ ಶ್ರೀಮಂತಿಕೆಯಿಂದ ಇದ್ದಾರೆಂದು ಹೇಳುತ್ತಾರೆ.

ರಾಣಾ ಶಿವಾಜಿ ಮಹಾರಾಜರೆ ನಮ್ಮ ಗುರುಗಳು ಎನ್ನುತ್ತಾರೆ. ಅವರು ಚಾಮುಂಡೇಶ್ವರಿಯನ್ನು ಚೆನ್ನಾಗಿ ಪೂಜಿಸಿ ಭಕ್ತರಾಗಿ ಕುಲದೇವತೆಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಅಕ್ಬರ್ ಮತ್ತು ರಾಣಾಪ್ರತಾಪಸಿಂಗರ ಜಗಳ ದಿಂದಾಗಿ ನಾವು ಈ ಕಡೆ ಕರ್ನಾಟಕಕ್ಕೆ ಬರಬೇಕಾಯಿತು ಎಂದು ಹೇಳುತ್ತಾರೆ. ಅಕ್ಬರ್ ದೇಶವನ್ನೆಲ್ಲಾ ತನ್ನದನ್ನಾಗಿ ಮಾಡಿಕೊಳ್ಳಬೇಕೆಂದುಕೊಂಡು ರಾಣಾ ಪ್ರತಾಪನ ನಗರಕ್ಕೆ ಬಂದು ಡೇರೆ ಹಾಕಿದ್ದ. ಆಗ ರಾಣಾ ಹೋಗಿ ಅಮ್ಮ ಅಮ್ಮ ಚಾಮುಂಡೇಶ್ವರಿ, ಅಕ್ಬರ್ ಬಂದಿದ್ದಾನೆ ಅಂತ ಕೇಳಿಕೊಂಡ ಆಗ ಅಮ್ಮ ಬಂದು ಹುಣಸೆ ಮಾವಿನ ಬೀಜಗಳೆರಡನ್ನು ಕೊಟ್ಟಳು. ಇವನ್ನು ಹಾಕಿ ಬೆಳೆಸು ಇವು ಬೆಳೆದು ದೊಡ್ಡವರಾದರೂ ಅಕ್ಬರ್ ನಿನ್ನನ್ನು ಗೆಲ್ಲಲ್ಲಿಕ್ಕಾಗುವದಿಲ್ಲ ಎಂದು ಆಶೀರ್ವದಿಸಿದಳು. ಅದೇ ರೀತಿ ಬೀಜಹಾಕಿ ಬೆಳೆಸಲು ಅಕ್ಬರ್ ಅಲ್ಲಿಂದ ತನ್ನ ಡೇರೆಗಳನ್ನು ಕೀಳಲಿಕ್ಕೆ ಶುರುಮಾಡಿದ. ರಾಣಾನಿಗೆ ಅಮ್ಮ ಇನ್ನು ಒಂದು ಮಾತು ಹೇಳಿದಳು. ಆ ಮಾತೇನೆಂದರೆ, ಈ ಬಂಗಾರದ ಕುದುರೆ ಹತ್ತು ಇದು ಒಂದು ಹೊಡೆತಕ್ಕೆ ದೇವಕೊಂಡಕ್ಕೆ ಇನ್ನೊಂದು ಹೊಡೆತಕ್ಕೆ ಸುರಿಸ್‌ಕೊಂಡಕ್ಕೂ ಹೋಗುತ್ತೆ ಎಂದು ಹೇಳಿಕೊಟ್ಟಳು. ಆ ಕುದುರೆಯನ್ನೇರಿದ ರಾಣಾ ಒಂದು ಹೊಡೆತಕ್ಕೆ ದೇವಕೊಂಡಕ್ಕೆ ಬಂದ. ಅಲ್ಲಿ ಸ್ನಾನ ಮಾಡಿದ, ಆ ನಂತರ ಆ ನೀರು ಹುಳವಾಯಿತು. ಇನ್ನೊಂದು ಹೊಡೆತಕ್ಕೆ ಸುರಿಸ್‌ಕೊಂಡಕ್ಕೆ ಹೋದ. ಅಲ್ಲಿ ಬಾಯಿ ತೊಳೆದುಕೊಂಡ. ಆಗ ದೇವಿ ಮತ್ತೇ ಪ್ರತ್ಯಕ್ಷವಾಗಿ ಈ ಒಂದು ಕತ್ತಿ ಕೊಡ್ತೀನಿ ಈ ಕತ್ತಿಗೆ ಅಕ್ಬರನೇ ಸಿಕ್ತಾನೋ ಇಲ್ಲ ಅವನ ಮಗನೆ ಸಿಕ್ತಾನೋ ಗೊತ್ತಿಲ್ಲ. ಅಂತೇಳಿ ಕತ್ತಿಕೊಟ್ಟು ಮಾಯವಾಗಿ ಬಿಟ್ಟಳು. ಆಮೇಲೆ ಜಗಳವಾಯಿತು. ಅಕ್ಬರ್ ಸಿಗಲಿಲ್ಲ. ಅವನ ಮಗ ಸಿಕ್ಕುಬಿಟ್ಟ ಆಗ ಅಲ್ಲಿ ರಕ್ತದ ಕೋಡಿಯೇ ಹರಿತಂತೆ. ಅಮ್ಮ ಮುಂಚಿನೆ ಹೇಳಿದ್ದಳು. ಮೊದಲ ರಕ್ತ ನನಗೆ ತಗೋ ಅಮ್ಮ ಅಂತ ಕತ್ತಿಯಿಂದ ಕಾಣಿಸಬೇಕು ಅಂತ. ಈ ಜಗಳದಲ್ಲಿ ರಾಣಾ ಅಮ್ಮನಿಗೆ ರಕ್ತ ತೋರಿಸೋದನ್ನು ಮರೆತುಬಿಟ್ಟ ಬದಲಿಗೆ ರಕ್ತ ತೆಗೆದು ತನ್ನ ಹಣೆಗೆ ಇಟ್ಟುಕೊಂಡ. ಆಗ ದೇವಿ ಅವನಿಗೆ ಶಾಪಕೊಟ್ಟಳು. ನಿನ್ನ ಕತ್ತಿ ನಿನಗೆ ತಿರುಗಲಿ ಎಂದು ಆಗ ಪ್ರತಾಪನು ಸತ್ತ. ಅವನ ಹೆಂಡತಿಯು ಬಂದು ನೋಡಿದಳು. ತನ್ನ ಗಂಡ ಕಾಣಲಿಲ್ಲ. ಆಗ ಅಮ್ಮನಿಗೆ ನನ್ನ ಗಂಡನ ತಲೆ ತೋರಿಸಿಕೊಟ್ಟರೆ ನಾನು ಸತಿ ಆಗ್ತೀನಿ ಅಂತ ಬೇಡಿಕೊಂಡಳು. ಆಗ ಮುಂಡ ಎದ್ದು ನಿಂತು ಬಿಟ್ಟಿತು. ಹತ್ತು ನಿಮಿಷ ಆದ ಮೇಲೆ ಕೆಳಗೆ ಬಿದ್ದಿತು. ರಾಣಿ ತನ್ನ ಮಗನಿಗೆ ಮಗನೇ, ನಿನ್ನ ಅಪ್ಪನ ಜೊತೆ ನಾನು ಸತಿ ಆಗ್ತೀನಿ ಎಂದು ತನ್ನಷ್ಟಕ್ಕೆ ತಾನು ಬೆಂಕಿ ಇಟ್ಟುಕೊಂಡು ಸತ್ತಳು. ಆಗ ಉಳಿದ ಸಣ್ಣ ಮಕ್ಕಳಾದ ನಾವು (ಪಾರ್ಧಿಯರು) ಗತಿಯಿಲ್ಲದೆ ಅಲ್ಲಿ ಇಲ್ಲಿ ಬೇಡೋಣು. ತಿನ್ನೋಕು ಮಾಯಾ ಬಾರದು ನುಸ್ಳುತ್ತಾ ಕರ್ನಾಟಕಕ್ಕೆ ಬಂದೆವು ಎಂದು ತಮ್ಮ ಬುಡಕಟ್ಟಿನ ಐತಿಹಾಸಿಕ ಕತೆಯು ಹೇಳುತ್ತಾರೆ.

ಈ ರೀತಿಯಾಗಿ ಪಾರ್ಧಿ ಬುಡಕಟ್ಟಿನಲ್ಲಿ ಅನೇಕ ಪುರಾಣಕತೆಗಳು, ಐತಿಹ್ಯಗಳು ಚಾಲ್ತಿಯಲ್ಲಿವೆ. ಆದರೆ ಇವುಗಳನ್ನು ಖಚಿತ ಪಡಿಸಲು ಇವರಲ್ಲಿ ಯಾವುದೇ ದಾಖಲೆಗಳಿಲ್ಲ.

ಸಾಮಾನ್ಯವಾಗಿ ಈ ಬುಡಕಟ್ಟಿನವರು ಮುಂದುವರೆದ ಸಮಾಜದಲ್ಲಿ ಬಹಳಷ್ಟು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಒಂದಾನೊಂದು ಕಾಲದಲ್ಲಿ ಕಾಡಿನರಾಜರಂತೆ ಮೆರೆದ ಈ ಬುಡಕಟ್ಟಿನವರು ಈಗ ಈ ನಾಡಿನಲ್ಲಿ ಬಿಕ್ಷುಕರ ತರಹ ಜೀವನ ಮಾಡುತ್ತಿರುವುದು ನಿಜಕ್ಕೂ ವಿಪರ್ಯಾಸವೇ ಸರಿ. ಬೇರೆ ಜಾತಿಯವರು ಇವರನ್ನು ಪರಕೀಯರಂತೆ ಇಲ್ಲವೇ ಒಂದು ತರಹದ ಕೀಳರಿಮೆಯಿಂದ ನೋಡುವುದರಿಂದ ನಾವು ಈ ಆಧುನಿಕ ಸಮಾಜದವರಲ್ಲ. ನಮಗೂ ಇವರಿಗೂ ಏನೂ ಸಂಬಂಧವಿಲ್ಲ ಎಂದು ಭಾವಿಸಿ ಊರಾಚೆಯ ಸ್ಥಳಗಳಲ್ಲಿಯೇ ವಾಸಿಸುತ್ತಿರುವುದನ್ನು ಈಗಲೂ ನಾವು ಕಾಣಬಹುದಾಗಿದೆ.

ಪಾರ್ಧಿಯರ ಸಾಮಾಜಿಕ ಸಂರಚನೆ

ಸಮಾಜವೆಂದರೆ, ಪರಸ್ಪರ ವಿವಿಧ ಬಗೆಯ ಕುಟುಂಬ, ಕುಲ, ವೃಂದ, ಸಂಬಂಧವುಳ್ಳ ಜನತೆಯ ಸಮುದಾಯದ ಒಂದು ಆಂತರಿಕ ವ್ಯವಸ್ಥೆ. ಹೀಗಾಗಿ ಈ ಪಾರ್ಧಿಯರಲ್ಲಿಯು ಈ ಸಾಮಾಜಿಕ ಸಂಘಟನೆಯು ಆದಿ ಕಾಲದಿಂದಲೂ ಬೆಳೆದು ಬಂದಿದೆ. ಯಾವುದೇ ಇತರ ಸಮುದಾಯಗಳ ಪ್ರಭಾವಕ್ಕೆ ಒಳಗಾಗದೇ, ತಮ್ಮ ಸಂಪ್ರದಾಯದಂತೆ ಜೀವನ ನಿರ್ವಹಿಸುವ ಬುಡಕಟ್ಟು ಸಮುದಾಯ ಇದಾಗಿದೆ. ಇಂತಹ ಸಂಘಟನೆಯ ಆದಿ ಕಾಲದಿಂದ ಮಾನವನ ದಿನ ನಿತ್ಯದ ಆಹಾರಕ್ಕಾಗಿ ಕಾಡು, ಮೇಡು, ಗುಡ್ಡಗಳನ್ನು ಸುತ್ತಾಡಿ ಪ್ರಾಣಿ, ಪಕ್ಷಿ, ಗೆಡ್ಡೆ ಗೆಣಸುಗಳನ್ನು ತಿನ್ನುತ್ತಾ ಜೀವನ ಸಾಗಿಸುವ ಹಂತದಿಂದ ನಡೆದು ಬಂದಿದ್ದಾನೆ. ಬೇಟೆ ಮತ್ತು ಆಹಾರ ಸಂಗ್ರಹಣೆಯ ಮೂಲಕ ವ್ಯವಸ್ಥಿತವಾಗಿ ಸಂಘಟಿತವಾಗುತ್ತಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುತ್ತಾ ಜೀವನ ರೂಪಿಸಿಕೊಂಡು ಬರತೊಡಗಿದ ಸಮಯದಲ್ಲಿ ಅವರು ಶುದ್ಧ ಅಲೆಮಾರಿಗಳಾಗಿದ್ದರು. ಬೇಟೆಯಿಂದ ವ್ಯವಸಾಯಕ್ಕೆ ಮಾರ್ಪಾಡಾದ ನಂತರ ನೆಲೆ ನಿಂತು ಒಟ್ಟಾಗಿ ಬಾಳುವದರೊಂದಿಗೆ ಮೂಲಭೂತವಾದ ಅವಶ್ಯಕತೆಗಳನ್ನು ಪೂರೈಕೆ ಮಾಡಿಕೊಳ್ಳುವದರಿಂದ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಕಾಲಾಂತರದಲ್ಲಿ ರೂಪಿಸಿಕೊಂಡು ಜನರು ವಿಶೇಷವಾಗಿ ಹಳ್ಳಿಗಳ ಮತ್ತು ನಗರದ ಲಕ್ಷಣಗಳನ್ನು ಸಮ್ಮಿಳಿಸಿಕೊಂಡು ಬದಲಾದ ವ್ಯವಸ್ಥೆಯಲ್ಲಿ ವ್ಯವಸ್ಥಿತವಾದ ಸಂರಚನೆಯನ್ನು ಗುರುತಿಸಿಕೊಂಡರು.

ಅವಿಭಕ್ತ ಕುಟುಂಬವನ್ನು ಹೊಂದಿದ ಈ ಜನರ, ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಹೋದಂತೆ ವಿಭಕ್ತ ಕುಟುಂಬಗಳಾಗಿ ವಿಂಗಡಣೆಗೊಂಡಿದ್ದಾರೆ. ಮೂಲತಃ ಅಲೆಮಾರಿಗಳಾಗಿದ್ದ ಈ ಜನರು ಇನ್ನೂ ಕೆಲವು ಕಡೆ ತಮ್ಮ ಅಲೆಮಾರಿತನ ಬಿಡದೆ ಇರುವುದು ಕಂಡುಬರುತ್ತದೆ.

ಸುತ್ತಲ ಸಮುದಾಯಗಳ ಒಡನಾಟದಿಂದ ಇವರ ಸಂಪ್ರದಾಯ, ಧಾರ್ಮಿಕತೆ, ಭಾಷೆ, ಆಚರಣೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅಲೆಮಾರಿಗಳಾಗಿದ್ದಾಗ ಡೇರೆಗಳನ್ನು, ಗುಡಿಸಲುಗಳಲ್ಲಿ ವಾಸ ಸ್ಥಳಗಳನ್ನಾಗಿ ಮಾಡಿಕೊಂಡಿದ್ದ ಇವರುಗಳು ನೆಲೆಯೂರಿದ ಮೇಲೆ ಅನಿವಾರ್ಯವಾಗಿ ಮನೆಗಳನ್ನು ಕಟ್ಟಿಕೊಂಡು ನಿರ್ದಿಷ್ಟ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇನ್ನು ಇವರ ಕಾಲೋನಿಯಲ್ಲಿ ಗುಡಿಸಲು, ಹೆಂಚಿನ ಮನೆಗಳೇ ಹೆಚ್ಚು ಮತ್ತು ಮಾಳಿಗೆ ಮನೆಗಳು ಕಡಿಮೆ ಎನ್ನಬಹುದು.

ಇಂದು ಪಾರ್ಧಿಯರ ಸಂಪ್ರದಾಯಗಳು ಬಹುವಾಗಿ ಕಣ್ಮರೆಯಾಗುತ್ತಾ ಹೋಗುತ್ತಿವೆ. ಇವರ ಸಂಪ್ರದಾಯಗಳಿಂದ ನ್ಯಾಯ ತೀರ್ಮಾನ, ಹಬ್ಬಗಳು, ಆಚರಣೆಗಳು ಸಾಕಷ್ಟು ಮಹತ್ವವನ್ನು ಕಳೆದುಕೊಂಡಿವೆ. ಬುಡಕಟ್ಟಿನ ಹಿರಿಯರು ಬಹಳಷ್ಟು ಮಂದಿ ಇನ್ನು ತಮ್ಮ ತಲೆಯ ಮುಡಿಯ ಕೂದಲನ್ನು ಜಡೆ ಕಟ್ಟುವುದು. ಬಿಡದೆ ಉಳಿಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಪಾರ್ಧಿ ಬುಡಕಟ್ಟನ್ನು ತಾಕಣಕಾರಿ, ಫಾನ್ಸೆಪಾರ್ಧಿ, ರಾಜಪಾರ್ಧಿ, ವಾಗ್ರಿ, ಹಕ್ಕಿಪಿಕ್ಕಿ, ಚಿಗರಿಕಾರ್, ಖೇಡ, ಚೆಂಚರುಗಾರ್, ನೀರ್ ಶಿಕಾರಿ, ಮೇಲ್ ಶಿಕಾರಿ, ಪಾಶೆಚಾರಿ ಎಂತೆಲ್ಲಾ ಕರೆಯುತ್ತಾರೆ. ಇವರ ಆರಂಭದ ದಿನಗಳಲ್ಲಿ ಬೇಟೆಯಾಡುವುದೇ ಇವರ ಮೂಲ ಕುಲಕಸುಬಾಗಿತ್ತು. ಇವರ ಮೂಲ ಮಧ್ಯಭಾರತದ ವಿಂಧ್ಯ ಪರ್ವತವೆಂತಲೂ ಇವರು ಗುಜರಾತ್, ರಾಜಾಸ್ತಾನ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕಗಳತ್ತ ಬೇಟೆಯನ್ನು ಅರಸುತ್ತಾ ಬಂದವರು. ಅಂದಿನ ಮುಂಬೈ ಸರ್ಕಾರ ಈ ಅಲೆಮಾರಿ ಗುಡ್ಡಗಾಡು, ಬೇಟೆಗಾರರನ್ನು ಗುರುತಿಸಿ, ೧೯೨೪ರಲ್ಲಿ ಅಪರಾಧಿ ಬುಡಕಟ್ಟೆಂದು ಪರಿಗಣಿಸಿ ಆ ಕಾಯ್ದೆಯ ಅಡಿಯಲ್ಲಿ ಮೀಸಲಾತಿ ಸೌಲಭ್ಯಗಳಲ್ಲಿ ಕಲ್ಪಿಸಿತ್ತು. ೧೯೬೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ದಾಖಲಾದ ಪಾರ್ಧಿಯು ತಮ್ಮ ಪ್ರಾದೇಶಿಕ ಮಿತಿಯನ್ನು ೧೯೭೬ರಲ್ಲಿ ಸಡಿಲಿಸಿಕೊಂಡು ಕರ್ನಾಟಕದಾದ್ಯಂತ ಚದುರಿಕೊಂಡರು.

ಪಾರ್ಧಿ ಬುಡಕಟ್ಟಿನವರನ್ನು ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ಹಕ್ಕಿಪಿಕ್ಕಿಯರು ಎಂದು ಕರೆಯುತ್ತಿದ್ದಾರೆ. ಈ ಹೆಸರು ಇವರ ಸಾಂಪ್ರದಾಯಿಕ ಕಸುಬು ಹಕ್ಕಿಗಳನ್ನು ಹಿಡಿಯುವುದರಿಂದ ಬಂದಿರುವಂತಹದ್ದು. ಈ ಹಕ್ಕಿಪಿಕ್ಕಿ ಎನ್ನುವುದು ಕನ್ನಡ ಭಾಷೆಯ ಜೋಡುನುಡಿ. ಇಲ್ಲಿ 'ಹಕ್ಕಿ' ಎಂದರೆ ಪಕ್ಷಿ ಎಂತಲೂ ಪಿಕ್ಕಿ ಎಂದರೆ ಅದರ ಪ್ರತಿಧ್ವನಿ ರೂಪವಾಗಿದೆ. ಕನ್ನಡ ಕನ್ನಡ ನಿಘಂಟಿನ ಕರ್ತೃರಾದ ಫರ್ಡಿನಾಂಡ್ ಕಿಟೆಲ್ ತನ್ನ ನಿಘಂಟಿನಲ್ಲಿ ಹಕ್ಕಿಯನ್ನು ಹೆಕ್ಕಿ ಎಂಬ ಅರ್ಥದಿಂದ ಹಿಕ್ಕು ಹಿಡಿ, ಹಿಕ್ಕು ಪಿಕ್ಕು ಎಂದೆಲ್ಲಾ ನಿಷ್ಪನ್ನವಾಗಿದೆ. ಇವರು ಮೂಲತಃ ರಾಜಸ್ಥಾನ, ಗುಜರಾತ ಮೂಲದಿಂದ ಆಂಧ್ರಪ್ರದೇಶದ ಮಾರ್ಗವಾಗಿ ಕರ್ನಾಟಕಕ್ಕೆ ವಲಸೆ ಬಂದು ನೆಲೆನಿಂತವರು.

ಭಾರತದ ಹರಿಜನ ಗಿರಿಜನ ಅಭಿವೃದ್ಧಿ ಯೋಜನೆಯನ್ವಯ (ಟಿ.ಎಸ್.ಪಿ.) ೧೯೫೮ರಲ್ಲಿ ಹೂಣಸೂರು ತಾಲುಕಿನ ಪಕ್ಷಿರಾಜಪುರದಲ್ಲಿ ಇವರಲ್ಲಿಯ ಹಲವರನ್ನು ನೆಲೆನಿಲ್ಲಿಸಲಾಯಿತು. ೧೯೫೬ರ ಭಾಷಾವಾರು ಪ್ರಾಂತ ಪಂಗಡಗಳ ಮೈಸೂರು ರಾಜ್ಯ ಘೋಷಿತ ಪರಿಷ್ಕೃತ ಪಟ್ಟಿಯಲ್ಲಿ ಹಕ್ಕಿಪಿಕ್ಕಿ ಬುಡಕಟ್ಟನ್ನು ಹಳೆ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಮಾತ್ರ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಪ್ರಪ್ರಥಮವಾಗಿ ಸೇರಿಸಲಾಗಿತ್ತು.

೧೯೭೧ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಹಾಸನ, ಕೋಲಾರ, ಮಂಡ್ಯ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸೀಮಿತಗೊಂಡಂತೆ ೨,೫೬೧ ಇರುವುದು, ೧೯೮೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಇವರ ಜನಸಂಖ್ಯೆ ೬,೬೮೯ ದಾಖಲಾಗಿದೆ. ಅದರಲ್ಲಿ ಶೇ ೧೭.೨೪ರಷ್ಟು ನಗರವಾಸಿಗಳಾಗಿದ್ದಾರೆ. ಇವರ ಮಾತೃಭಾಷೆ ವಾಘರಿಯಾಗಿರುವುದು. ಇವರು ಇತರ ರಾಜ್ಯದ ಜನರೊಂದಿಗೆ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಹಾಗೂ ಒರಿ ಭಾಷೆಗಳೆಲ್ಲಾ ಮಾತನಾಡಬಲ್ಲವರಾಗಿದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ರಾಜ್ಯದಲ್ಲಿನ ೫೦ ಬುಡಕಟ್ಟುಗಳ ವಿವರವಾದ ಅಂಕಿಅಂಶಗಳು ಲಭ್ಯವಾಗಿಲ್ಲ.

ಪಾರ್ಧಿಯರನ್ನು ಲಂಗೋಟಿ ಪಾರ್ಧಿಗಳೆಂತಲೂ ಕರೆಯುತ್ತಾರೆ. ಪಾನ್ಸೆಪಾರ್ಧಿ ಎನ್ನುವ ಪದ ಪಾರದ್ ಎಂಬ ಪದದಿಂದ ಉಗಮಗೊಂಡಿದೆ. 'ಪಾರದ್' ಎಂದರೆ 'ಬೇಟೆಯಾಡುವುದು' ಎಂದರ್ಥ. 'ಪಾನ್ಸೆ' ಎಂದರೆ 'ಗಲ್ಲು' ಹಾಕುವುದು ಅಥವಾ ಫಾಸಿ ಹಾಕುವುದು ಎಂದರ್ಥ. ಫಾಸಿ ಅಥವಾ ಗಲ್ಲು ಹಾಕುವದರ ಮೂಲಕ ಬೇಟೆಯಾಡುವವರಿಗೆ 'ಫಾನ್ಸೆ ಪಾರ್ಧಿ' ಎಂಬ ಹೆಸರು ಬಂದಿರುವುದು. ಇವರು ಮರಾಠಿ ಭಾಷೆಯನ್ನು ಮಾತನಾಡುವುದರ ಜೊತೆಗೆ ಗುಜರಾತಿ ಮತ್ತು ಹಿಂದಿ ಭಾಷೆಗಳನ್ನು ತಮ್ಮ ವ್ಯವಹಾರಕ್ಕಾಗಿ ಬಳಸುವರು. ಇವರು ದೇವನಾಗರಿ ಲಿಪಿಯನ್ನು ಬಳಸುವರು. ಇವರ ಮುಖ್ಯ ಆಹಾರ ಜೋಳ ಮತ್ತು ಸಜ್ಜೆ ಮಾಂಸಹಾರಿಗಳಾದರೂ ಇವರು ಗೋಮಾಂಸವನ್ನು ತಿನ್ನುವದಿಲ್ಲ.

೫. ವಿಮಾನದಲ್ಲಿ ಪ್ರಯಾಣಿಸುತ್ತಿರುವ ಹಕ್ಕಿಪಿಕ್ಕಿ(ಪಾರ್ಧಿ)ಯರು

ಇಡೀ ಕರ್ನಾಟಕದಾದ್ಯಂತ ಹರಡಿಕೊಂಡಿರುವ ಪಾರ್ಧಿ ಬುಡಕಟ್ಟು ಮೈಸೂರು ಜಿಲ್ಲೆಯೊಂದನ್ನು ಹೊರತುಪಡಿಸಿದರೆ, ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಕೂಲಿನಾಲಿಯನ್ನಾಗಲಿ ಅಥವಾ ಇನ್ಯಾವುದೋ ಚಿಕ್ಕಪುಟ್ಟ ವ್ಯಾಪಾರಗಳನ್ನೋ ಮಾಡಿಕೊಂಡು ಕಷ್ಟದಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಮೈಸೂರು ಜಿಲ್ಲೆಯಲ್ಲಿಯ ಹುಣಸೂರು ತಾಲೂಕಿನ ಪಕ್ಷಿರಾಜಪುರ ಕಾಲೋನಿ ಹಾಗೂ ಇದೇ ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಟೈಗರ್‌ಬ್ಲಾಕ್‌ನ ಹಕ್ಕಿಪಿಕ್ಕಿ (ಪಾರ್ಧಿ)ಯರು ತಮ್ಮ ಹೆಸರಿಗೆ ಅನ್ವರ್ಥಕ ಎಂಬಂತೆ ಹಕ್ಕಿಯಂತೆ ಆಕಾಶ (ವಿಮಾನ)ದಲ್ಲಿ ಹಾರಾಡುತ್ತಾ ತಮ್ಮ ಪ್ರ(ಕು)ಖ್ಯಾತಿಯನ್ನು ಮೆರೆಯುತ್ತಿದ್ದಾರೆನ್ನಲೂ ಈ ಕೆಳಗಿನ ನಿದರ್ಶನವೇ ಸಾಕ್ಷಿ.

ಸುಮಾರು ೩೦೦ ಕುಟುಂಬಗಳನ್ನು ಹೊಂದಿರುವ ಮೈಸೂರು ಜಿಲ್ಲೆಯ ಪಾರ್ಧಿಯರು ನೂರಾರು ವರ್ಷಗಳ ಹಿಂದೆ ಊರುರು ಸುತ್ತಾತ್ತಾ ಊರ ಹೊರಗೆ ಗುಡಾರಗಳ (ಟೆಂಟ್) ಹಾಕಿಕೊಂಡು ಜನರಿಗೆ ಗಿಡಮೂಲಿಕೆ ಔಷಧಿಗಳನ್ನು, ಹೇರ್‌ಪಿನ್ನ, ಗೋಪಿಚಂದನ್, ಹಂದಿಕೂದಲಿನ ಬ್ರಷ್, ದಂತದ ಬಾಚಣಿಕೆ, ಕಸ್ತೂರಿ, ಗೋರಂಜನ ಹೀಗೆ ಅನೇಕ ವಸ್ತುಗಳನ್ನು ಊರುರುಗಳಲ್ಲಿ ಮಾರಾಟಮಾಡಿ ಜೀವನ ಸಾಗಿಸುತ್ತಿದ್ದರು.

ಈಗಾಗಲೇ ತಿಳಿಸಿರುವ ಹಾಗೆ ಈ ಬುಡಕಟ್ಟಿನವರ ಮುಖ್ಯ ಕಸುಬು ಬೇಟೆಯಾಡುವುದು. ವಿವಿಧ ಪ್ರಾಣಿಗಳ ಚರ್ಮವನ್ನು ಹದಮಾಡಿ ಒಣಗಿಸಿ ಮಾರುವುದು ಇತ್ಯಾದಿ. ಆದರೆ ದಿನಕಳೆದಂತೆ ಅರಣ್ಯ ಇಲಾಖೆಯು ಬೇಟೆಯನ್ನು ನಿಷೇದಿಸಿದೆ. ಯಾವಾಗ ತಮ್ಮ ಮೂಲ ಕುಲಕಸುಬಿಗೆ ಕುತ್ತುಬಂದಿತೋ ಆಗಲೆ ಪಾರ್ಧಿಯರು ಆರಿಸಿಕೊಂಡದ್ದು ಕರಕುಶಲವಸ್ತುಗಳ ತಯಾರಿಕೆ ಕೆಲಸ, ಹೂವಿನಬುಟ್ಟಿ, ಪ್ಲಾಸ್ಟಿಕ್ ಹೂವಿನ ಹಾರಗಳನ್ನು ತಯಾರಿಸುವುದು ಹಾಗೂ ರುದ್ರಾಕ್ಷಿಮಾಲೆಗಳನ್ನು ಮಾಡುವುದು, ಬಹಳ ದಿನಗಳ ಹಿಂದೆ ಇವರು ಹುಲಿಗಳ ಉಗುರುಗಳನ್ನು, ಕಡವೆ ಕೊಡು, ಹುಲಿ, ಚಿರತೆ ಹಾಗೂ ಜಿಂಕೆಗಳ ಚರ್ಮ ಮಾರುತ್ತಿದ್ದರು. ಆದರೆ ಈಗ ಆ ಎಲ್ಲ ವಸ್ತುಗಳು ಅಪರೂಪವಾದ ಕಾರಣ ಅವುಗಳಿಗೆ ಬದಲಾಗಿ ದನಗಳ ಕಾಲಿನ ಗೊರಸನ್ನೇ ಹುಲಿಯ ಉಗುರಿನಂತೆ ಸರಿಯಾದ ಆಕೃತಿಗೆ ತಂದು ಅದನ್ನು ಕುರಿಯ ತುಪ್ಪಟದಿಂದ ಕಲಾತ್ಮಕ ರೀತಿಯಿಂದ ಜೋಡಿಸಿ ಹುಲಿಯ ಕಾಲುಗಳನ್ನು ತಯಾರುಮಾಡಿ ಮಾರುತ್ತಾರೆ. ಹಸುವಿನ ಚರ್ಮಕ್ಕೆ ಬಣ್ಣ ಹಾಕಿ ಹುಲಿಯ ಚರ್ಮದಂತೆ ರೂಪಿಸಿ ಮಾರುತ್ತಿದ್ದಾರೆ. ಈ ರೀತಿಯಾಗಿ ಇವರು ತಯಾರಿಸಿದೆಲ್ಲಾ ನಕಲಿ ಅಲ್ಲ. ಇವೆಲ್ಲಾ 'ಕರಕುಶಲ ವಸ್ತುಗಳು' ಎಂದು ಸರ್ಕಾರವೇ ಮಾನ್ಯತೆ ನೀಡಿದೆ. (ಚಿತ್ರ ೨.೧ ಮತ್ತು ೨.೨

ಕಾಲಕ್ರಮೇಣ ಇವರ ಈ ಅಡ್ಡ ಕಸುಬಿಗೆ ಭಾರತದಲ್ಲಿ ಬೇಡಿಕೆ ಕಡಿಮೆಯಾಯಿತು. ಆದರೆ ದೂರದ ದೇಶಗಳಲ್ಲಿ ಇವರ ಈ ವಸ್ತುಗಳ ಬೇಡಿಕೆ ಹೆಚ್ಚಿತು. ಭಾರತದಲ್ಲಿಯ ಕೆಲವು ಏಜೆಂಟರು ಮೊದಲು ವಿದೇಶಿಗಳಿಗೇ ನಂತರ ದೇಶಿಗಳಿಗೆ ಇಂತಹ ನಕಲಿ ಕರಕುಶಲ ಸಾಮಗ್ರಿಗಳನ್ನು ಮಾರುವುದನ್ನು ನೋಡಿದ ತಮಿಳುನಾಡು ಮೂಲದ ಪಾರ್ಧಿಯರೂ ತಾವೂ ಪಾಸ್‌ಪೋರ್ಟ್‌ಗೆ ಅರ್ಜಿ ಹಾಕಿದರು. ಎರಡೆರಡು ತಿಂಗಳುಗಳ ಕಾಲ ವ್ಯಾಪಾರಕ್ಕೆ ಹೋಗುವ ಈ ಜನರಿಗೆ ವಿದೇಶಕ್ಕೆ ಹೋಗಲು ವೀಸಾ ಕೂಡಾ ಸಿಕ್ಕಿತು. ಸಾಲಪಡೆದು ವಿದೇಶಿ ಪ್ರವಾಸ ಮಾಡಿ ಸಾವಿರಾರು ಡಾಲರ್‌ಗಳನ್ನು ಗಳಿಸಿಕೊಂಡು ಮರಳಿ ತಮ್ಮ ಸ್ವಗೃಹವಾದ ಭಾರತಕ್ಕೆ ಮರಳುತ್ತಾರೆ. ಬ್ಯಾಂಕ್ ಮತ್ತು ಹಳ್ಳಿಯ ಲೇವಾದೇವಿಯವರಿಂದ ಪಡೆದ ಹಣವನ್ನೆಲ್ಲಾ ತಾವು ವಿದೇಶಿ ವ್ಯಾಪಾರದಿಂದ ಗಳಿಸಿಕೊಂಡು ಬಂದ ಹಣದಲ್ಲಿ ತೀರಿಸಿ ಸ್ವಲ್ಪ ಭಾಗ ತಮಗೆ ಉಳಿಸಿಕೊಂಡರೆ, ಉಳಿಸಿಕೊಂಡ ಆ ಹಣವೇ ತಿಂಗಳಿಗೆ ೧೦,೦೦೦ ದಿಂದ ೧೨,೦೦೦ ರೂ. ವರೆಗೆ ಆಗುತ್ತದೆ ಎನ್ನುತ್ತಾರೆ.

ಮೈಸೂರು ಜಿಲ್ಲೆಯಲ್ಲಿಯ ಸುಮಾರು. ೨೦೦ ಕುಟುಂಬಗಳಲ್ಲಿ ಸುಮಾರು ಒಂದು ನೂರಕ್ಕೂ ಹೆಚ್ಚಿನ ಜನರಲ್ಲಿ ವಿದೇಶಕ್ಕೆ ಹೋಗಲು ಪಾಸ್‌ಪೋರ್ಟ್ ಇದ್ದು ,ಇವರಲ್ಲಿ ಬಹುತೇಕರು ವಿವಿಧ ದೇಶಗಳಿಗೆ ಹತ್ತಾರು ಬಾರಿ ಭೇಟಿಕೊಟ್ಟು ಆ ಎಲ್ಲ ದೇಶ ವಿದೇಶಗಳಲ್ಲಿ ತಾವು ತಯಾರಿಸಿದ ಕರಕುಶಲ ವಸ್ತುಗಳನ್ನು ಮಾರಿ ಚೆನ್ನಾಗಿಯೇ ಹಣ ಸಂಪಾದಿಸಿಕೊಂಡಿದ್ದಾರೆ. ಜಿಲ್ಲೆಯ ಸುಮಾರು ೩೦ ಜನರು ಮಹಿಳೆ ಮತ್ತು ಪುರುಷರು ಸೇರಿ ಅನೇಕ ದೇಶಗಳಿಗೆ ಭೇಟಿನೀಡಿದ್ದಾರೆ. ಇವರುಗಳು ಮುಖ್ಯವಾಗಿ ಅರಬ್‌ರಾಷ್ಟ್ರಗಳಾದ ಸೌದಿ, ಕುವೈತ್, ಶಾರ್ಜಾ, ದುಬೈಗಳಲ್ಲದೆ ಮಲೇಶಿಯಾ, ಕಾಂಬೋಡಿಯಾ, ಬರ್ಮಾ, ಇಂಡೋನೇಷಿಯ, ಹಾಂಗ್‌ಕಾಂಗ್ ಹೀಗೆ ಇನ್ನೂ ಅನೇಕ ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ.

ಆರ್ಥಿಕವಾಗಿ ಬೇರೆ ಬುಡಕಟ್ಟುಗಳಿಗಿಂತ ಈ (ಹಕ್ಕಿಪಿಕ್ಕಿ) ಪಾರ್ಧಿಯರು ಬಡವರಿದ್ದರೂ ಇವರ ವಿದೇಶಿಯಾತ್ರೆಗಳ ಪರಿಣಾಮವಾಗಿ ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಪಕ್ಷಿರಾಜಪುರದ ಎರಡೂ ಕಾಲೋನಿಗಳು ಹಾಗೂ ಹೆಗ್ಗಡದೇವನಕೋಟೆ ತಾಲೂಕಿನ (ಮೈಸೂರು ಜಿಲ್ಲೆ) ಟೈಗರ್ ಬ್ಲಾಕ್‌ನ ಹಕ್ಕಿಪ್ಪಿಕಿಯರ ಬಹುತೇಕ ಎಲ್ಲರ ಮನೆಗಳಲ್ಲಿಯೂ ಕಾಲಲ್ಲಿ ಹಾಕಿಕೊಳ್ಳುವ ಚಪ್ಪಲಿಗಳಿಂದ ಮೊದಲು ಮಾಡಿ ಅವರ ಹಾಸಿಗೆ, ಉಡುಗೆ-ತೊಡಿಗೆ ಹಾಗೂ ಇನ್ನಿತರ ಗೃಹೋಪಯೋಗಿ ಸಾಮಾನುಗಳೆಲ್ಲಾ ವಿದೇಶಿಯವುಗಳೇ ಆಗಿರುತ್ತವೆ.

ತಮಿಳುನಾಡು ರಾಜ್ಯದಲ್ಲಿರುವ ಪಾರ್ಧಿ ಸಮುದಾಯದವರನ್ನು ತಮಿಳು ಭಾಷೆಯಲ್ಲಿ 'ನರಿಕೊರವರು' ಎಂದು ಕರೆಯಲ್ಪಡುತ್ತಿದ್ದು, ತಮಿಳುನಾಡಿನಲ್ಲಿಯ ಪಾರ್ಧಿಯರು ಮೊದಮೊದಲಿಗೆ ತಮ್ಮ ರಾಜ್ಯಕ್ಕೆ ಹತ್ತಿರವಾಗುವ ಶ್ರೀಲಂಕಾ, ಬರ್ಮಾ ಹಾಗೂ ಮಲೇಶಿಯಾ ರಾಜ್ಯಗಳಿಗೆ ಮಾತ್ರ ಹೋಗಿ ಬರುತ್ತಿದ್ದರು.

ಚೆನ್ನೈ ವಿಮಾನ ನಿಲ್ದಾಣದಲ್ಲಿ ತುಂಬಾ ಕಟ್ಟುನಿಟ್ಟಿನ ನಿರ್ಬಂಧಗಳು ಇವೆಯೆಂದು ಮೈಸೂರು ಜಿಲ್ಲೆಯಲ್ಲಿಯ (ಪಾರ್ಧಿ)ಯರು ಸಿಂಗಾಪುರಕ್ಕೆ ಹೋಗಬೇಕೆಂದರೆ ಮುಂಬೈ ಮಾರ್ಗವಾಗಿಯೇ ಹೋಗುತ್ತಾರೆ. ಜಿಲ್ಲೆಯಲ್ಲಿಯ ಬಹುತೇಕ ಎಲ್ಲ ಪಾರ್ಧಿಯರಲ್ಲಿಯೂ ರಾಜ್ಯ ಸರ್ಕಾರದ ಕರಕುಶಲ ಅಭಿವೃದ್ಧಿ ಸಂಸ್ಥೆಯ ಗುರುತಿನ ಚೀಟಿ ಇದೆ. ಹೀಗಾಗಿ ಇವರಿಗೆ ವಿಮಾನ ನಿಲ್ದಾಣಗಳಲ್ಲಿ ವಿದೇಶಿಗಳಿಗೆ ಹೋಗಲು ಯಾವುದೇ ರೀತಿಯ ತೊಂದರೆಗಳಾಗುವುದಿಲ್ಲ. ತಾವು ಭೇಟಿಕೊಡುವ ವಿದೇಶಿಗಳಲ್ಲಿ ಬಗೆಯ ಬಗೆಯ ತರಹದ ಕರಕುಶಲ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಇದೆ

ಎಂಬುದನ್ನು ನೋಡಿ ಅಂತಹ ವಸ್ತುಗಳನ್ನು ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳನ್ನು ಬೆಂಗಳೂರು, ಮುಂಬೈ ಮತ್ತು ದೆಹಲಿಗಳಿಂದ ತಂದು ಹತ್ತು ಹಲವಾರು ಬಗೆ ಬಗೆಯ ವಸ್ತುಗಳನ್ನು ತಮ್ಮ ಊರಲ್ಲೇ ಪರಿವಾರದ ಎಲ್ಲಾ ಸದಸ್ಯರು ಸೇರಿ ತಯಾರಿಸುತ್ತಾರೆ.

ಇವರ ಈ ರೀತಿಯ ಪ್ರ(ಕು)ಖ್ಯಾತಿಯ ಕರಕುಶಲತೆಗಳಿಂದ ಇವರು ಬೇರೆ ವಿಷಯಗಳಲ್ಲಿ ಅತ್ಯಂತ ಹಿಂದುಳಿದಿದ್ದರೂ ಜಾಗತೀಕರಣದ ಹಾದಿಯಲ್ಲಿ ಮುನ್ನಡೆಯುತ್ತಾ ಮೊದಲ ದಿಟ್ಟ ಹೆಜ್ಜೆಯನ್ನಿಟ್ಟು ಕರ್ನಾಟಕ ರಾಜ್ಯದಲ್ಲಿಯ ಬುಡಕಟ್ಟುಗಳ ಪ್ರಪ್ರಥಮ ಗ್ರಾಮ ಜಿಲ್ಲೆ ಇದಾಗಿದೆ ಎಂದರೆ ಅತಿಶಯೋಕ್ತಿ ಎನಿಸಲಾರದು. *ಕೃಪೆ : ಪಟೇಲ್ ಮರಳಸಿದ್ದಯ್ಯ, (ಪ್ರಜಾವಾಣಿ ೩೦.೧೦.೨೦೦೩)* ಕೇವಲ ಮೈಸೂರು ಜಿಲ್ಲೆಯವರು ಮಾತ್ರವಲ್ಲದೇ ರಾಜ್ಯದ ಬೇರೆ ಜಿಲ್ಲೆಯವರು ಈ ನಿಟ್ಟಿನಲ್ಲಿ ಪ್ರಯತ್ನಿಸಿದರೆ, ಅವರ ಆರ್ಥಿಕ ಮಟ್ಟ ಸುಧಾರಿಸುವುದರಲ್ಲಿ ಏನೂ ಅನುಮಾನವಿಲ್ಲ.

೬. ಬೇಟೆಗಾರಿಕೆ ಹಿನ್ನೆಲೆ

ಬೇಟೆ ಎಂಬ ಶಬ್ದವು ಮೂಲತಃ ದ್ರಾವಿಡ ಪದದಿಂದ ನಿಷ್ಪತ್ತಿಹೊಂದಿದೆ. ಬೇಟೆ ಎಂಬ ಶಬ್ದವನ್ನು ತಮಿಳಿನಲ್ಲಿ ವೇಟ್ಟೈ, ವೇಟೆ, ವೇಡು ಎಂತಲೂ, ಮಲಯಾಳಂ ಭಾಷೆಯಲ್ಲಿ ವೈಟ್ಟೆಯಂತಲೂ, ತುಳುಭಾಷೆಯಲ್ಲಿ ಬೋಣ್ಟೆ ಅಥವಾ ಬೋಂಟೆಯಂತಲೂ, ತೆಲುಗು ಭಾಷೆಯಲ್ಲಿ ಏಟೆ, ಅಥವಾ ವೇಟೆ ಎಂದೆಲ್ಲಾ ಕರೆಯುತ್ತಿದ್ದು, ಪಂಚ ದ್ರಾವಿಡ ಭಾಷೆಗಳಲ್ಲಿ ಈ ರೀತಿಯಾಗಿ ಬೇರೆ ಬೇರೆ ಕರೆಯುತ್ತಿದ್ದಾರೆ.

ಪ್ರಾಚೀನ ಕಾಲದಲ್ಲಿ ಬೇಟೆಗಾರಿಕೆಯು ಆಹಾರ ಉತ್ಪಾದನೆ ಹಾಗೂ ಆತ್ಮರಕ್ಷಣೆ ಈ ಎರಡು ಕಾರಣಗಳಿಂದ ಪ್ರಾಮುಖ್ಯತೆಯನ್ನು ಪಡೆದಿತ್ತು. ಹುಟ್ಟು ಬೇಟೆಗಾರನಾದ ಮನುಷ್ಯ ಆದಿಯಲ್ಲಿ ಒಂಟಿಯಾಗಿ ಅರಣ್ಯ ಪ್ರದೇಶಗಳಲ್ಲಿ ಅಲೆದಲೆದು ಗಡ್ಡೆ ಗೆಣಸು ಹಾಗೂ ಕೈಗೆ ಸಿಕ್ಕ ವಸ್ತು, ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡಿ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನೆಂಬುದು ಸಂಶೋಧನೆಗಳಿಂದ ತಿಳಿದು ಬರುತ್ತದೆ. ಸಸ್ಯಹಾರ, ಮಾಂಸಹಾರ, ಅಹಿಂಸೆ, ಹಿಂಸೆ ಇವ್ಯಾವುಗಳ ಪರಿಕಲ್ಪನೆ ಹಾಗೂ ವ್ಯತ್ಯಾಸ ಆ ಕಾಲಘಟ್ಟದಲ್ಲಿ ಅವನ ಮನೋಪಟದಲ್ಲಿರಲಿಲ್ಲ. ಆಗ ಆತನಿಗೆ ಬೇಟೆ ಕೇವಲ ಅನಿವಾರ್ಯವಾದ ಆಹಾರೋತ್ಪಾದನೆ ಹಾಗೂ ತನ್ನ ದೇಹ ರಕ್ಷಣೆಯ ಮಾರ್ಗವಾಗಿತ್ತು. ಆತನ ಬದುಕು ಜೀವಿಸುವುದಕ್ಕಾಗಿ ಆಹಾರ ಎನ್ನುವ ತತ್ವದ ಆಧಾರದ ಮೇಲೆಯೆ ಸಾಗುತ್ತಿತ್ತು. (ಚಿತ್ರ ೨.೩ ಮತ್ತು ೨.೪)

ಅಂದಿನ ದಿನಗಳಲ್ಲಿ ಪ್ರಾಣಿಗಳ ಜೊತೆಗೆ ಪ್ರಾಣಿಯಾಗಿ ಜೀವಿಸುವ ಆತನಿಗೆ ಪ್ರಾಣಿಗಳಿಂದ ರಕ್ಷಿಸಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಮರದ ಪೊಟರೆ, ಬಂಡೆಕಲ್ಲುಗಳ ಕೆಳಗೆ, ಗುಹೆಗಳಲ್ಲಿಯೇ ವಾಸದ ನೆಲೆಯನ್ನಾಗಿಸಿಕೊಂಡಿದ್ದ. ಪರಿಮಿತಿ ಭದ್ರತೆಗಳಿರುವ ಗುಹೆ, ಗುಡಿಸಲುಗಳಂತಹ ವಸತಿಗಳಲ್ಲಿ ವಾಸಿಸುತ್ತಿದ್ದ ಆತನು ಕಾಡು ಮೃಗಗಳಿಂದ ತನ್ನ ಜೀವ ರಕ್ಷಣೆಗಾಗಿ ಅವುಗಳನ್ನು ಬೇಟೆಯಾಡುವ ಅನಿವಾರ್ಯತೆಗೆ ಒಳಗಾಗಿರಬೇಕು. ಈ ರೀತಿ ಬೇಟೆಯಾಡಿ ಕೊಂದ ಎಲ್ಲಾ ಪ್ರಾಣಿಗಳ ಮಾಂಸವನ್ನು ಆತನು ರುಚಿ ನೋಡಿರಲೂ ಸಾಕು. ಅವುಗಳು ಪೈಕಿ ನಾಲಿಗೆಗೆ ಒಗ್ಗಿದ, ಹೊಟ್ಟೆಗೆ ಪಥ್ಯವೆನಿಸಿದ ಪ್ರಾಣಿಗಳ ಮಾಂಸ ಮಾತ್ರ ಆಹಾರಕ್ಕೆ ಯೋಗ್ಯವಾಗಿ ಮುಂದುವರೆದಿರಬಹುದು. (ವಿವೇಕ ರೈ ಬಿ.ಎ., ೧೯೯೪, ಪು.೨೪೧) ಮೊದಲ ರಕ್ಷಣೆಯ

ನೆಪದಲ್ಲಿ ಆರಂಭವಾದ ಬೇಟೆ ಹಸಿವನ್ನು ನೀಗುವ ಸಾಧನೆಯಾಯಿತು. "Hunting is one of the oldest methods of obtaining food" (M.S.E. Vol.9, 1990, Pp147). ಆತನಿಗೆ ಹಸಿವಿನ ನಿವಾರಣೆ ಹಾಗೂ ರಕ್ಷಣೆಗಳೆರಡೂ ಮೂಲ ಮಂತ್ರವಾಗಿದ್ದವು. ಹೀಗಾಗಿ ಆತ ಆಹಾರವನ್ನು ಸಂಗ್ರಹಿಸಿ ಇಡುವ ಗೋಜಿಗೆ ಹೋಗಲಿಲ್ಲ ಎನ್ನುವುದಕ್ಕಿಂತ ಅದು ಆತನಿಗೆ ತಿಳಿದಿರಲಿಲ್ಲ ಎಂದು ಹೇಳುವ ಮಾತೇ ಸತ್ಯಕ್ಕೆ ಹತ್ತಿರವಾದ ಸಂಗತಿ. ಅಂದಿನ ದಿನಗಳಲ್ಲಿ ಹಸಿವೆಯನ್ನು ನೀಗಿಸಿಕೊಳ್ಳುವುದು ಆತನಿಗೆ ಬಹಳ ಪ್ರಯಾಸದ ಕೆಲಸವೇ ಆಗಿತ್ತು. ಅದನ್ನು ತಕ್ಷಣದಲ್ಲಿ ಪಡೆದುಕೊಳ್ಳಲು ಸಾಧ್ಯವಿರಲಿಲ್ಲ. ಅದನ್ನು ಪಡೆದುಕೊಳ್ಳಲು ಅನಿವಾರ್ಯವಾಗಿ ಸಾಹಸ ಪಡಬೇಕಾಯಿತು. ಅನಿವಾರ್ಯವಾದ ಆ ಸಾಹಸವೇ ಅವನಿಗೆ ಬೇಟೆ ಎಂಬ ಹೊಸ ವಿದ್ಯೆಯನ್ನು ಕಲಿಸಿತು. ಬರುಬರುತ್ತಾ ಅದರಲ್ಲಿಯೇ ಹೆಚ್ಚು ಅವಲಂಬಿತನಾಗತೊಡಗಿದ. ಸುತ್ತಲಿನ ಪ್ರಕೃತಿ ಅವನಿಗೆ ಇನ್ನೂ ಹೆಚ್ಚಿನ ಬೇಟೆಯ ವಿಧಾನಗಳನ್ನು ಕಲ್ಪಿಸಿಕೊಟ್ಟಿತು. ಅವನಾಡುವ ಬೇಟೆ ದಿನದಿಂದ ದಿನಕ್ಕೆ ಹೆಚ್ಚು ಸುಲಭವಾಗುತ್ತಾ ಹೋಯಿತು.

ಬೇಟೆಯು ಆಹಾರೋತ್ಪಾದನೆ ಹಾಗೂ ದೇಹರಕ್ಷಣೆಯ ಜೊತೆಗೆ ಆತನ ಬುದ್ದಿ ವಿಕಾಸದಲ್ಲಿ ಬಹು ಮಹತ್ತರ ಪಾತ್ರವಹಿಸಿದೆ. ಪೂರ್ವಕಾಲದಲ್ಲಿ ಆದಿ ಮಾನವನು ಸಸ್ಯ ಆಹಾರದ ಜೊತೆಗೆ ತನ್ನ ಸುತ್ತಲಿನ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವ ಮಾಂಸಹಾರಿಯಾಗಿರುವುದೇ ಆತನಿಗೆ ವಕ್ರವಾಗಿ ಪರಿಗಣಿಸಿತೆಂದು ಹೇಳಬೇಕು. ಬೇಟೆಯ ಕ್ರಿಯೆ ಮಾಂಸವನ್ನು ಒದಗಿಸುವುದರ ಜೊತೆಗೆ ಅವನ ವಿಕಾಸಕ್ಕೆ ಕಾರಣವಾಯಿತು. ಸದ್ಯದ ಪರಿಸ್ಥಿತಿಯಲ್ಲಿ ಅಮಾನವೀಯವೂ, ಕ್ರೂರವು ಆಗಿ ಕಂಡುಬರುವ ಬೇಟೆ ಮಾನವನ ದೈಹಿಕ ಹಾಗೂ ಭೌದ್ಧಿಕ ವಿಕಾಸದಲ್ಲಿ ವಹಿಸಿದ ಪಾತ್ರವನ್ನು ಮರೆಯುವಂತಿಲ್ಲ. ಆತ ಬೇಟೆಗೆ ವ್ಯೂಹ ರಚಿಸಿದಾಗ ಅನಿವಾರ್ಯವಾಗಿ ಬೇಟೆಯ ಪ್ರಾಣಿಯ ಬಗೆಗೆ ಚಿಂತಿಸಬೇಕಾಗಿತ್ತು. ಬೇಟೆಯಾಡಬೇಕಾದ ಪ್ರಾಣಿಯ ಚಲನವಲನ ಗಮನಿಸುವುದು, ಅದರ ಅತ್ಯಂತ ದುರ್ಬಲಗಳನ್ನು ಗುರುತಿಸುವುದು ಹಾಗೂ ಅದರ ಮೇಲೆ ಆಕ್ರಮಣ ಮಾಡುವುದು. ಇಂಥ ಕಾರ್ಯಗಳು ಅವನ ಮೆದುಳಿನ ಬೆಳವಣಿಗೆಯನ್ನು ಚುರುಕುಗೊಳಿಸಿದವು. ಸಿಗುವ, ಸಿಕ್ಕ ಬೇಟೆಯ ಪ್ರಾಣಿ ದೊಡ್ಡದಾಗಿದ್ದರೆ ಒಂದು ಗುಂಪು ಭಾಗಿಯಾಗುವಂತೆ ಪರಿಸ್ಥಿತಿ ಅನಿವಾರ್ಯವಾಗಿ ನಿರ್ಮಾಣವಾಗುತ್ತಿತ್ತು. ಆ ಸಂದರ್ಭದಲ್ಲಿ ಪ್ರತಿಯೊಬ್ಬರೂ ಒಂದು ಗೊತ್ತಾದ ಕೆಲಸದಲ್ಲಿ ತೊಡಗಲೇಬೇಕಾದ ಅನಿವಾರ್ಯತೆ ಉಂಟಾಗುತ್ತಿತ್ತು. ಇದರಿಂದಾಗಿಯೇ ಅವರಲ್ಲಿ ಸಂಘ ಜೀವನ ಹಾಗೂ ಸಹಕಾರಿ ಮನೋಭಾವ ಬೆಳೆಯಲು ಅನುಕೂಲವಾಯಿತು ಎನ್ನಬಹುದು.

ಶಿಲಾಯುಗದ ಮಾನವನು ವಿವಿಧ ರೂಪದ ಆಯುಧಗಳನ್ನು ಕಲ್ಲಿನಿಂದ ತಯಾರಿಸಿಕೊಂಡು ಅದರಿಂದ ಬೇಟೆಯಾಡಿ ಹಸಿ ಹಸಿಯಾದ ಅಥವಾ ಅರೆಬೆಂದ ಮಾಂಸವನ್ನೇ ತಿಂದು ಜೀವನ ಸಾಗಿಸುತ್ತಿದ್ದನು. ಅವನಿಗೆ ಬೇಟೆಯು ಪ್ರಮುಖ ಆಹಾರೋತ್ಪಾದನೆಯ ಸಾಧನವಾಗುವುದರ ಜೊತೆಗೆ ಉಡುಗೆ ಹಾಗೂ ಆಭರಣ ಸಲಕರಣೆಯನ್ನು ಒದಗಿಸಿತು. "To early man, hunting was a necessity. His quarry provided not only food from the meat but clothing from the skins, and material for tools from the bones. Horns and hoores. Both archaeological evidence from the past and bservation of simpler societies of the present show widespread preocuption with, and ingenuity in

methods of hunting. These varied and vary, with the nature of the terriary, the animal hunted, the engenvity and inventiveness of the hunters, and the materials and technologies at their disposal". (Encylopaedia Britanica Vol.6, 1992 Pp.159) ಆದರೆ ಇಂದಿನ ಮಾನವನಿಗೆ ಬೇಟೆಗಾರಿಕೆ ಅಷ್ಟು ಅವಶ್ಯಕ ಎನಿಸುತ್ತಿಲ್ಲ. ಬೇಟೆಯ ಜಾಗದಲ್ಲಿ ಇಂದು ಬುಡಕಟ್ಟಿನವರು ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಗುಡಿಕೈಗಾರಿಕೆ ಜೊತೆಗೆ ಚಿಕ್ಕ ಪುಟ್ಟ ವ್ಯಾಪಾರ ಮಾಡುತ್ತಾ ತಮ್ಮ ಜೀವನ ಸಾಗಿಸುತ್ತಿರುವುದು ಸರ್ವೇಸಾಮಾನ್ಯವಾಗುತ್ತಿದೆ.

ಬೇಟೆ ಎಂಬುದು ಬುಡಕಟ್ಟು ಸಮುದಾಯಗಳಿಗೆ ಮುಂದುವರಿದು ಬದುಕಿನ ಅಂಗವಾಗಿ, ಅವನಿಗೆ ಗೌರವ ತರುವ ಮಾರ್ಗವಾಯಿತು. ಪ್ರಾಣಿಗಳನ್ನು ಸಾಕುವ ಮತ್ತು ಕೊಲ್ಲುವ ಪ್ರಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂದು ಅವರಲ್ಲಿ ಹಿಂಸೆ ಮತ್ತು ಅಹಿಂಸೆಯ ಕಲ್ಪನೆಯೇ ಇದ್ದಂತೆ ಕಾಣುವುದಿಲ್ಲ.

ಕೊಲ್ಲುವ ಬೇಟೆಯಾಡುವ ಈ ಕ್ರಿಯೆಯನ್ನು ಒಂದು ಅನಿವಾರ್ಯ ಆಹಾರೋತ್ಪಾದನಾ ವಿಧಾನ ಎಂದು ಭಾವಿಸಿದ್ದರಿಂದ ಅಂದಿನ ದಿನಗಳಲ್ಲಿ ಹಿಂಸೆಯ ಕಲ್ಪನೆ ಇರಲು ಸಾಧ್ಯವೇ ಇಲ್ಲ. ಊರುಗಳು ಹುಟ್ಟಿ ಬೆಳೆಯುತ್ತಾ ಬಂದಂತೆ ಅಹಿಂಸೆಯ ಕಲ್ಪನೆಗಳು ಬಲಿಯುತ್ತಾ ಬಂದವು ಎಂದು ಬರಗೂರು ರಾಮಚಂದ್ರಪ್ಪನವರು ಉಪಸಂಸ್ಕೃತಿ ಮಾಲೆ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಕಾಲ ಜಾರಿದಂತೆ ಜನಸಂಖ್ಯೆಯು ಹೆಚ್ಚುತ್ತಾ ಬಂದಿತು. ಕ್ರಮೇಣ ಕಾಡುಗಳೆಲ್ಲಾ ನಾಡಾಗುತ್ತ ಊರುಗಳು ಬೆಳೆದುಬಂದವು. ಇಂದಿನ ಸ್ಥಿತ್ಯಂತರ ಬದುಕಿನಲ್ಲಿ ಬೇಟೆ ಆಡುವ ಸಂಸ್ಕೃತಿಯು ತನ್ನ ಮೂಲ ಸ್ವರೂಪವನ್ನೇ ಬದಲಿಸಿಕೊಳ್ಳುತ್ತಿದೆ. ಕಾರಣ ಅಂದಿದ್ದ ಕಾಡು ಇಂದು ಇಲ್ಲ. ಹುಲಿ, ಚಿರತೆಯಂಥಹ ಪ್ರಾಣಿಗಳ ತಲೆ ಎಣಿಸುವಷ್ಟು ಅವು ವಿರಳವಾಗುತ್ತಿವೆ. ದಿನದಿಂದ ದಿನಕ್ಕೆ ನಶಿಸಿಹೋಗುತ್ತಿರುವ ಕಾಡುಪ್ರಾಣಿಗಳ ರಕ್ಷಣೆಯ ಜವಾಬ್ದಾರಿಗೆ ಸರ್ಕಾರ ಟೊಂಕಕಟ್ಟಿ ನಿಂತು ಅದಕ್ಕಾಗಿಯೇ ಹಲವು ನಿಯಮ ಕಾನೂನು ಕಟ್ಟಳೆಗಳನ್ನು ಮಾಡಿದೆ. ಇದರಿಂದ ಪ್ರಾಚೀನ ಬದುಕಿನಲ್ಲಿ ಅನಿವಾರ್ಯವಾಗಿದ್ದ ಬೇಟೆ ಇಂದಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾಣದಷ್ಟು ಕಣ್ಮರೆಯಾಗುತ್ತಾ ಬಂದಿದೆ. ಕೆಲವೇ ಕೆಲವು ಕಾಡುಗಳನ್ನು ಬಿಟ್ಟರೆ ಬೇಟೆಗಾರಿಕೆಯನ್ನೇ ಪೂರ್ಣ ಜೀವನಾಧಾರ ಮಾಡಿ ಬದುಕುತ್ತಿದ್ದ ಬುಡಕಟ್ಟು ಜನವರ್ಗ ಇಂದು ಕಡಿಮೆಯಾಗುತ್ತಿದೆ. ಹೀಗಾಗಿ ಇವರೆಲ್ಲಾ ತಮ್ಮ ಅಳಿವುಉಳಿವುಗಾಗಿ ಬೇರೊಂದು ವೃತ್ತಿಯನ್ನು ಅವಲಂಭಿಸುತ್ತಿದ್ದಾರೆ. (ಸ.ಚಿ.ರಮೇಶ, ೨೦೦೧ ಪು.೧೦) ಬೇಟೆಯಲ್ಲಿ ಜನ, ಪ್ರಾಣಿ ಹಾಗೂ ಪಕ್ಷಿಗಳ ಪಾತ್ರದಂತೆ ಪರಿಕರಗಳ ಆಯುಧಗಳು ಮುಖ್ಯವೆನಿಸುತ್ತವೆ. ಮರದಿಂದ ಮಾಡಿದ ಪರಿಕರಣಗಳಾದ ದಡಿಗೆ, ಕವ್ವಿಬಲೆ, ಹಲಗೆ, ಲೋಹದಿಂದ ಮಾಡಿದ ಖಡ್ಗ, ಈಟಿ, ಕತ್ತರಿ, ತಂತಿ, ಬಲೆ ಹಾಗೆಯೇ ಲೋಹ ಮತ್ತು ಮರದಿಂದ ತಯಾರಿಸಿದ ಜೋಸು, ಬಿಲ್ಲು, ಕತ್ತಿ, ಭರ್ಚಿ, ಕೋವಿ, ಸಾರು, ಮತ್ತು ದಾರದಿಂದ ತಯಾರಿಸಿದ ಹಗ್ಗ, ಬಲೆ, ಉರುಳುಗಳು, ಮೇಣ ಬಳಕೆ ಹಾಗೂ ಬೆಂಕಿಯ ಬಳಕೆಗಳು ಬೇಟೆಯನ್ನು ಸರಳಗೊಳಿಸಿ. ಬೇಟೆಗಾರರ ದೈವಗಳಾಗಿ ಪೂಜ್ಯನೀಯವಾಗಿವೆ. ಅಮವಾಸ್ಯೆ ಹುಣ್ಣಿಮೆ ಹಾಗೂ ಹಬ್ಬಗಳಲ್ಲಿ ಈ ಆಯುಧಗಳಿಗೆ ಬಲಿ ಅರ್ಪಿಸಿ ಎಡೆ ಸಲ್ಲಿಸುವ ಆಚರಣೆ ಬೇಟೆಗಾರರ ಸಂಸ್ಕೃತಿಯಲ್ಲಿದೆ.

ಬೇಟೆ ಹಲವು ಕಾರಣಗಳಿಗಾಗಿ ನಡೆಯುತ್ತದೆ ಎಂದು ಅನೇಕ ಅಧ್ಯಯನಗಳಿಂದ ತಿಳಿದು ಬಂದಿರುವ ಸತ್ಯ. ಬೇಟೆ ಪ್ರಾಚೀನ ಕಾಲದಲ್ಲಿ ಮಾನವನಿಗೆ ಮಾಡಿದ ಉಪಕಾರವನ್ನು ಹಾಗೂ ಇಂದು ಮಾಡುತ್ತಿರುವ

ಅಪಕಾರಗಳು ಈಗಾಗಲೇ ಎಲ್ಲರ ಅರಿವಿನಲ್ಲಿದೆ. ಬೇಟೆ ಎಂಬುದು ಅಂದಿನ ದಿನಗಳಲ್ಲಿ ಒಂದು ಆಚರಣೆ ಆಗಿದ್ದರೆ, ಆ ಬೇಟೆ ಇಂದು ಅನೇಕ ರೀತಿಯಲ್ಲಿ ರೂಪಾಂತರ ಹೊಂದುತ್ತಿದೆ. ಹೀಗಾಗಿ ಈ ಬೇಟೆಗಾರಿಕೆ ಇನ್ನೂ ಹಲವು ಕಡೆ ಇಂದಿಗೂ ಸಹ ಬೇರೆ ಬೇರೆ ಕಾರಣಗಳಿಂದ ಹಾಗೂ ಬೇರೆ ಬೇರೆ ಜನರಿಂದ ರೂಢಿಯಲ್ಲಿದೆ. ಆದರೆ ಅಧ್ಯಯನ ಸಂಶೋಧನೆ ದೃಷ್ಟಿಯಿಂದ ಈ ಬೇಟೆಗಾರಿಕೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

೧. ಪ್ರಾಣಿ ಬೇಟೆ

೨. ಪಕ್ಷಿ ಬೇಟೆ

೩. ಜಲಚರ ಬೇಟೆ

೪. ಜೇನು ಬೇಟೆ

ಬೇಟೆಯಲ್ಲಿ ಪ್ರಾಣಿ ಬೇಟೆಯಾಗುವಾಗ ಸಮುದಾಯದ ಸಹಕಾರ ಅಗತ್ಯ. ಬೇಟೆಗಾರರು ಪ್ರಾಣಿಗಳ ಚಲನವಲನಗಳನ್ನು ಅವುಗಳ ಹೆಜ್ಜೆ, ಕೂಗು ಇತ್ಯಾದಿಗಳಿಂದ ಗುರುತಿಸುವ ಜಾಣ್ಮೆ ಹೊಂದಿದವರಾಗಿತ್ತಾರೆ. ಪಾರ್ಧಿ (ಹಕ್ಕಿಪಿಕ್ಕಿ) ಬುಡಕಟ್ಟಿನವರು ಯಾವ ಪ್ರಾಣಿಶಾಸ್ತ್ರಜ್ಞರಿಗೇನು ಕಡಿಮೆ ಇಲ್ಲದಂತೆ ಪ್ರಾಣಿಗಳ ಬಗೆಗೆ ನಿಖರವಾಗಿ ಹೇಳುವ ಪ್ರಜ್ಞೆಯನ್ನು ಹೊಂದಿದವರಾಗಿದ್ದಾರೆ. ಯಾವ ಪ್ರಾಣಿ ಯಾವಾಗ ಚಟುವಟಿಕೆಯಿಂದಿರುತ್ತದೆ, ಯಾವಾಗ ಹೊರಗೆ ಬರುತ್ತದೆ, ಯಾವ ಆಹಾರ ಪ್ರಿಯವಾದುದು, ಯಾವಾಗ ಪುಷ್ಟಿಯಾಗಿ ಬೆಳೆದಿರುತ್ತದೆ. ಇತ್ಯಾದಿ ಅಂಶಗಳನ್ನು ಬಲ್ಲವರಾಗಿರುತ್ತಾರೆ. ಆದುದರಿಂದ ಬೇಟೆಯ ತಂತ್ರಗಳನ್ನು ಆಯಾ ಪ್ರಾಣಿಯ ಸ್ವಭಾವಕ್ಕಾನುಗುಣವಾಗಿ ರೂಪಿಸಿಕೊಂಡಿರುತ್ತಾರೆ. (ರಾಮಣ್ಣ ಯು.ಎಸ್. ೨೦೦೧, ಪು.೨೨) ಆದರೆ, ಬದಲಾದ ಇಂದಿನ ದಿನಗಳಲ್ಲಿ ಬೇಟೆಗಾರಿಕೆಯನ್ನು ಅರಣ್ಯ ಇಲಾಖೆಯವರು ನಿಲ್ಲಿಸಿರುವುದರಿಂದ ಪಾರ್ಧಿ(ಹಕ್ಕಿಪಿಕ್ಕಿ)ಯರು ಬೇರೆ ಬೇರೆ ಸಣ್ಣ ಪುಟ್ಟ ವ್ಯಾಪಾರಗಳನ್ನು ಮಾಡಿಕೊಳ್ಳುವದರ ಮೂಲಕ ತಮ್ಮ ಹೊಟ್ಟೆಯನ್ನು ತುಂಬಿಸಿ ಕೊಳ್ಳುತ್ತಿದ್ದಾರೆ.

ಆಧಾರಗಳು

Elwin Verier., **Leaves from The Jungle**, Delhi Oxford University, Press. Bombay, Calcutta, Madras, 1992

Herskovit M.J., **Cultural Anthropology**, Abridged revision of Man and his works, 1974

Perry J.S., Social web: **An Introduction to Sociology**, (ed.) VI

ರಾಮಣ್ಣ ಯು.ಎಸ್. ೨೦೦೦, 'ಮಲೆನಾಡಿನಲ್ಲಿ ಪ್ರಾಣಿಬೇಟೆ', (ಗ್ರಾಮೀಣ ಬೇಟೆಗಳು (ಸಂ.) ದೇವೇಂದ್ರ ಕುಮಾರ್ ಹಕಾರಿ), ಬೆಂಗಳೂರು, ಕನ್ನಡ ಪುಸ್ತಕ ಪ್ರಾದಿಕಾರ, ಕರ್ನಾಟಕ ಸರ್ಕಾರ.

ವಕ್ತೃಗಳು

ಹೆಸರು	ವಯಸ್ಸು	ಬೆಡಗು	ಸ್ಥಳ
ಜಲಾಲ್ ಚಂದಪ್ಪ ಕಟ್ಟಿಮನಿ	೭೦	ಸಾವಂಡಿಯಾ	ಹುಬ್ಬಳ್ಳಿ
ರಾಧಭಾಯಿ ಪ್ರೇಮಸಿಂಗ್	೫೦	ರಾಜ್‌ಪಾರ್ಧಿ	ಬೀದರ್
ರೂಪಚಂದ	೫೫	ಕಾಳಿವಾಲೆ	ಬಸವಕಲ್ಯಾಣ
ಶಿವಾಜಿ ಎಂಗಪ್ಪ ಚೌಹ್ನ	೬೦	ಸಾವಂಡಿಯಾ	ಬಾಗಲಕೋಟೆ
ವಸಂತ ಚೌಹ್ನ	೪೫	ಸಾವಂಡಿಯಾ	ಗದಗ

ಅಧ್ಯಾಯ - ೩

ಪಾರ್ಧಿಯರ ಸಂಸ್ಕೃತಿ ಮತ್ತು ಆಚರಣೆಗಳು

೧. ಜನನ

೨. ಋತುಮತಿ ಕಾರ್ಯ

೩. ಮದುವೆಯ ನಿರ್ಬಂಧಗಳು

೪. ಮದುವೆಯ ರೀತಿ ರಿವಾಜುಗಳು

೫. ಜಾತ್ರೆ ಮತ್ತು ಹಬ್ಬಗಳು

೩. ಪಾರ್ಧಿಯರ ಸಂಸ್ಕೃತಿ ಮತ್ತು ಆಚರಣೆಗಳು

ಮಾನವಶಾಸ್ತ್ರಕ್ಕೂ ಸಮಾಜಶಾಸ್ತ್ರಕ್ಕೂ ನಿಕಟವಾದ ಸಂಬಂಧವಿದೆ. ಇವೆರಡೂ ಅವಳಿ ಜವಳಿ ಮಕ್ಕಳಿದ್ದಂತೆ. ಈ ಎರಡೂ ಶಾಸ್ತ್ರಗಳ ಮುಖ್ಯ ಗುರಿ ಕೆಲವು ರೀತಿಯಲ್ಲಿ ಒಂದೇ ಆಗಿದ್ದರೂ ಮತ್ತೇ ಕೆಲವು ರೀತಿಯಲ್ಲಿ ವ್ಯತ್ಯಾಸಗಳೂ ಇವೆ. ಮಾನವಶಾಸ್ತ್ರ ಮುಖ್ಯವಾಗಿ ಪ್ರಾಚೀನ ಮಾನವನಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಹೆಚ್ಚು ವಿಚಾರಮಾಡುತ್ತದೆ. ಸಮಾಜಶಾಸ್ತ್ರ ಹೆಚ್ಚಾಗಿ ಆಧುನಿಕ ಮಾನವ ಸಮಾಜ, ಸಂಸ್ಥೆಗಳು ಅವುಗಳ ಉದ್ದೇಶ ಮತ್ತು ಕಾರ್ಯಕಲಾಪಗಳನ್ನು ಕುರಿತು ವಿಚಾರ ಮಾಡುತ್ತದೆ. ಸಮಾಜಶಾಸ್ತ್ರ ಸಮಾಜವನ್ನು ಕುರಿತ ಶಾಸ್ತ್ರ ಮಾನವಶಾಸ್ತ್ರ ಮಾನವನ್ನು ಕುರಿತಶಾಸ್ತ್ರವಾಗಿದೆ. ಮಾನವನಿಗೂ ಹಾಗೂ ಸಮಾಜಕ್ಕೂ ನಿಕಟ ಸಂಬಂಧವಿರುವುದರಿಂದಲೇ ಈ ಎರಡೂ ಶಾಸ್ತ್ರಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಈ ಎರಡೂ ಶಾಸ್ತ್ರಗಳೂ ಮಾನವನ ಸಮಾಜ ಮತ್ತು ಸಂಸ್ಕೃತಿಗಳನ್ನು ಕುರಿತು ವ್ಯಾಸಂಗ ಮಾಡುತ್ತವೆ. ಸಂಸ್ಕೃತಿ ಮತ್ತು ಸಾಮಾಜಿಕ ವಸ್ತುಗಳನ್ನು ಅಥವಾ ವಿಷಯಗಳನ್ನು ಅಭ್ಯಾಸಮಾಡುವುದು ಸಮಾಜಶಾಸ್ತ್ರದ ಕೆಲಸವಾದರೆ ಮಾನವಶಾಸ್ತ್ರ ಎಲ್ಲಾ ಮಾನವ ಕುಲಗಳ (Race) ಸಂಸ್ಕೃತಿಗಳ ವಿಷಯ ಪರಿಶೀಲನೆ ಮಾಡುತ್ತದೆ. ಅಂದರೆ ಸಮಾಜಶಾಸ್ತ್ರವು ಮಾನವ ಸಂಸ್ಕೃತಿಯ ಗೊತ್ತಾದ ಅಂಶವಾದ ಸಾಮಾಜಿಕ ಅಂಶವನ್ನು ವಿವರಿಸುತ್ತದೆ. ಆದರೆ ಮಾನವಶಾಸ್ತ್ರವು ಬೃಹತ್ ಸಂಸ್ಕೃತಿಯನ್ನೇ ಅಧ್ಯಯನ ಮಾಡುತ್ತದೆ. ಮಾನವನ ಇಡೀ ಸಂಸ್ಕೃತಿ ಮತ್ತು ಅದರ ವಿಶ್ಲೇಷಣೆ ಮಾನವಶಾಸ್ತ್ರಕ್ಕೆ ಸೇರಿದೆ. ಎಲ್ಲಾ ಕಾಲಗಳಲ್ಲಿಯೂ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಎಲ್ಲ ಸಮಾಜಗಳಲ್ಲಿಯೂ ಮತ್ತು ಎಲ್ಲಾ ಬಗೆಯ ಸಂಸ್ಕೃತಿಗಳಲ್ಲಿಯೂ ನಡೆಯುವ ಮತ್ತು ನಡೆದ ಸಂಸ್ಕೃತಿಗಳನ್ನು, ಕ್ರಿಡೆಗಳನ್ನು ಪರೀಕ್ಷಿಸುವುದೇ ಮಾನವಶಾಸ್ತ್ರದ ಮುಖ್ಯಗುರಿಯಾಗಿದೆ. ಇಷ್ಟೇ ಅಲ್ಲದೆ ಸಂಸ್ಕೃತಿಗಳ ವಿಕಾಸದಲ್ಲಿಯೂ ಕಂಡುಬರುವ ಸಾಮಾನ್ಯ ನಿಯಮಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತದೆ. ಒಂದು ಗೊತ್ತಾದ ಸಂಸ್ಕೃತಿಯ ಆಶ್ರಯದಲ್ಲಿ ಮಾನವನು ಹೇಗೆ ವರ್ತಿಸುತ್ತಾನೆ ಎಂಬುದನ್ನು ಸಹ ಮಾನವಶಾಸ್ತ್ರವು ತಿಳಿಸುತ್ತದೆ. ಈ ರೀತಿಯಾಗಿ ಮಾನವಶಾಸ್ತ್ರವು ಮಾನವರಲ್ಲಿ ಕಂಡುಬರುವ ವಿವಿಧ ವರ್ತನೆಗಳನ್ನು, ನಡವಳಿಕೆಗಳನ್ನು ಅರಿತುಕೊಳ್ಳಲು ಪ್ರಯತ್ನ ಪಡುತ್ತದೆ. ಸಂಸ್ಕೃತಿಯ ಇತಿಹಾಸದಲ್ಲಿ ಕಂಡುಬರುವ ಮುಖ್ಯ ಘಟನೆಗಳನ್ನು ಗುರುತಿಸುವುದು ಸಹ ಮಾನವಶಾಸ್ತ್ರದ ಮತ್ತೊಂದು ಕಾರ್ಯವಾಗಿದೆ. ಸಂಸ್ಕೃತಿಗಳಲ್ಲಿ ಕಾಣುವ ಮುಖ್ಯ ತತ್ವಗಳನ್ನು, ಕ್ರಿಯೆಗಳನ್ನು ಮತ್ತು ಕಾರ್ಯಗತಿಗಳನ್ನು ಅರಿಯಲು ಈ ಶಾಸ್ತ್ರವು ಪ್ರಯತ್ನಿಸುತ್ತದೆ.

ಈಗಾಗಲೇ ಹೇಳಿರುವಂತೆ ಈ ಎರಡೂ ಶಾಸ್ತ್ರಗಳಿಗಿರುವ ಪರಸ್ಪರ ಸಂಬಂಧ ಅವಳಿಮಕ್ಕಳಿಗಿರುವ

ಸಂಬಂಧದಂತೆ. ಸಮಾಜಶಾಸ್ತ್ರವು ವರ್ತಮಾನ ಸಮಾಜದ ರಚನೆ, ಕ್ರಿಯೆಗಳನ್ನು ಸಂಶೋಧನೆ ಮಾಡುವುದಕ್ಕೆ ಹೆಚ್ಚು ಗಮನ ಕೊಡುತ್ತದೆ. ಆಧುನಿಕ ಮಾನವನ ವರ್ತನೆ, ಅವನ ಸಂಸ್ಕೃತಿಯ ಮಟ್ಟ ಇವುಗಳನ್ನೆಲ್ಲಾ ತಿಳಿಯಬೇಕಾದರೆ ಮಾನವನ ಭೂತಕಾಲವನ್ನು ಇತಿಹಾಸವನ್ನು ತಿಳಿಯುವುದು ಅತ್ಯಾವಶ್ಯವಕ. ಏಕೆಂದರೆ ವರ್ತಮಾನ ಸಮಾಜದ ಸಂಸ್ಕೃತಿಯ ಬೇರುಗಳು ಭೂತಕಾಲದ ಸಮಾಜದ ಮತ್ತು ಸಂಸ್ಕೃತಿಯಲ್ಲಿ ಹೂತು ಹೋಗಿವೆ. ಕಾರಣ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ಕೆಲವು ನಿಯಮಗಳನ್ನು ಉಪಯೋಗಿಸಿಕೊಂಡು ವರ್ತಮಾನ ಸಮಾಜ ಪರಿಶೋಧನೆಗೆ ಅಳವಡಿಸಿಕೊಳ್ಳುತ್ತದೆ. ಹೀಗಾಗಿ ಈ ಎರಡೂ ಶಾಸ್ತ್ರಗಳು ಒಂದನ್ನೊಂದು ಅವಲಂಬಿಸಿವೆ ಮತ್ತು ಒಂದರ ಮೇಲೊಂದು ಪ್ರಭಾವ ಬೀರುತ್ತವೆ.

ಸಮಾಜಶಾಸ್ತ್ರಜ್ಞನು ಸಮಾಜಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿವರಿಸುವಾಗ ಮಾನವಶಾಸ್ತ್ರಜ್ಞನಿಗೂ ಸಮಾಜಶಾಸ್ತ್ರಜ್ಞನ ಅನುಭವದಿಂದ ಪ್ರಯೋಜನವುಂಟು. ಮಾನವಶಾಸ್ತ್ರ ಪ್ರಾಚೀನ ಮಾನವನಿಗೆ ಸಂಬಂಧಪಟ್ಟ ವಿಷಯಗಳನ್ನು ವಿವರಿಸುವುದರಿಂದ ಪ್ರಾಚೀನ ಮಾನವ ಜೀವನಕ್ಕೂ ಸಮಾಜ ವ್ಯವಸ್ಥೆಗೂ, ಆಧುನಿಕ ಮಾನವನ ಜೀವನಕ್ಕೆ ಸಮಾಜ ವ್ಯವಸ್ಥೆಗೂ ಇರುವ ಸಾಮ್ಯ ಮತ್ತು ವ್ಯತ್ಯಾಸಗಳನ್ನು ತಿಳಿಯಬಹುದು. ಪ್ರಾಚೀನ ಮಾನವನ ಜೀವನ ಮತ್ತು ಸಂಸ್ಕೃತಿ ಅತಿ ಸರಳವಾದದು. ಅವನ ಸಮಾಜದಲ್ಲಿ ಯಾವ ತೊಡಕಿನ ಸಮಸ್ಯೆಗಳೂ ಇರಲಿಲ್ಲ. ಧರ್ಮಬುದ್ಧಿಗೆ ಪ್ರಧಾನ ಸ್ಥಾನವಿದ್ದಿತು. ಅವನ ಕುಟುಂಬ ಜೀವನ, ವಿವಾಹ ಪದ್ಧತಿ, ಆಚಾರ-ವ್ಯವಹಾರ, ನಡೆ-ನುಡಿಗಳು ಧರ್ಮವನ್ನೇ ಅವಲಂಬಿಸಿದ್ದವು. ಈ ವಿಷಯಗಳನ್ನು ತಿಳಿದುಕೊಳ್ಳುವುದರಿಂದ ಆಧುನಿಕ ಸಮಾಜದಲ್ಲಿನ ಕುಂದುಕೊರತೆಗಳನ್ನು ಸ್ವಲ್ಪಮಟ್ಟಿಗೆ ತಡೆಗಟ್ಟಲು ಪ್ರಯತ್ನಿಸಬಹುದು. ಆದಿವಾಸಿಗಳ ಜೀವನವನ್ನು ಪುನರ್ ವ್ಯವಸ್ಥೆಗಳೊಳಿಸುವ ಕಾರ್ಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಾಜಶಾಸ್ತ್ರ ಹಾಗೂ ಮಾನವಶಾಸ್ತ್ರದಲ್ಲಿ ಜ್ಞಾನ ಅತ್ಯಗತ್ಯವಾಗಿಬೇಕಾಗಿದೆ.

ಮಾನವನ ಸಂಸ್ಕೃತಿ ಪ್ರಗತಿಶೀಲ ಸ್ವಭಾವವುಳ್ಳದ್ದು. ಹೊಸ ಉಪಕರಣಗಳ ಸೃಷ್ಟಿಯಿಂದ ಸಾಮಾಜಿಕ ಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಮಾನವನ ಸಂಸ್ಕೃತಿ ಹಾಗೂ ನಾಗರಿಕತೆಗಳೆರಡೂ ಅತಿ ಪ್ರಾಚೀನವಾದುದ್ದಾಗಿದೆ. ಸಾವಿರಾರು ವರ್ಷಗಳಿಂದಲೂ ಅನೇಕ ಜನರ ಸತತ ಪ್ರಯತ್ನದಿಂದ ಸಂಸ್ಕೃತಿ ಸಹಜವಾಗಿ ಸಾಗಿಬಂದಿದೆ. ಆದ್ದರಿಂದ ಪ್ರಾಚೀನ ಮಾನವನು ಉಪಯೋಗಿಸುತ್ತಿದ್ದ ಉಪಕರಣಗಳು, ಅಭ್ಯಾಸಗಳು ಆಧುನಿಕ ಯಂತ್ರಗಳ ಅಭ್ಯಾಸದಷ್ಟೇ ಪ್ರಾಮುಖ್ಯವಾದುದು. ಆಧುನಿಕ ಉಪಕರಣಗಳಿಗೆ ಪ್ರಾಚೀನ ಮಾನವನ ಉಪಕರಣಗಳು ಆಧಾರವಾಗಿದೆ. ಈ ದೃಷ್ಟಿಯಿಂದ ಪ್ರಾಚೀನ ಮಾನವನ ವಿಷಯಗಳನ್ನು ವಿಚಾರಮಾಡುವ ಮಾನವಶಾಸ್ತ್ರಕ್ಕೂ ಆಧುನಿಕ ಮಾನವನ ವಿಷಯಗಳನ್ನು ವಿಚಾರಮಾಡುವ ಸಮಾಜಶಾಸ್ತ್ರಕ್ಕೂ ನಿಕಟವಾದ ಸಂಬಂಧವಿದೆ. ಈ ಎರಡೂ ಶಾಸ್ತ್ರಗಳೂ ಸಮಾಜವನ್ನು ಗುರಿಯಾಗಿಟ್ಟುಕೊಂಡು (ಒಂದು ಆಧುನಿಕ ಸಮಾಜ ಇನ್ನೊಂದು ಬುಡಕಟ್ಟು, (ಕಾಡಿನ) ಸಮಾಜ) ಮಾನವ ಸಮಾಜದ ಸಕಲ ಚಟುವಟಿಕೆಗಳನ್ನು ಅಭ್ಯಾಸ ಮಾಡುತ್ತವೆ. ಆದ್ದರಿಂದ ಇವೆರಡೂ ಒಂದನ್ನು ಬಿಟ್ಟು ಇನ್ನೊಂದು ಇರಲಾರದಷ್ಟು ಪೂರಕವಾಗಿವೆ.

ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಹೇಳಿರುವಂತೆ, ಪಾಣ್ಯಿಯರು ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಂತಹ ಒಂದು ಬುಡಕಟ್ಟು. ಇವರಲ್ಲಿ ಅನೇಕ ಉಪ ಪಂಗಡಗಳು, ಕಸುಬುಗಳು, ಆಚರಣೆಗಳಿವೆ.

ಬೀದರ್ ಜಿಲ್ಲೆಯಲ್ಲಿ ಇವರು ಕೇವಲ ೭ ಸ್ಥಳಗಳಲ್ಲಿ ಮಾತ್ರ ವಾಸಿಸುತ್ತಿದ್ದು, ಬಸವ ಕಲ್ಯಾಣ ತಾಲೂಕಿನ ಬಸವ ಕಲ್ಯಾಣ ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ, ಅಂದರೆ ಒಟ್ಟು ೬೮ ಕುಟುಂಬಗಳಿಂದ ೩೯೭ ಜನಸಂಖ್ಯೆ ಇದ್ದಾರೆ. ಅಲ್ಲಿ ಇವರನ್ನು 'ಪಾರ್ಧಿಯರು', 'ಫಾಸಿ ಪಾರ್ದೆರು', ಎಂತೆಲ್ಲಾ ಕರೆಯುತ್ತಾರೆ.

ಬೀದರ್ ನಗರ(ಮಂಗಲಪೇಟೆ)ದಲ್ಲಿ ಕೇವಲ ಮೂರು ಕುಟುಂಬಗಳು ಮಾತ್ರ ವಾಸಿಸುತ್ತಿದ್ದು, ಈ ಮೂರು ಕುಟುಂಬಗಳಲ್ಲಿ ಎರಡು ಕುಟುಂಬಗಳ ಸದಸ್ಯರು ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರಿಯನ್ನು ಮಾಡುತ್ತಿದ್ದಾರೆ.

ಬೀದರ್ ನಗರದಿಂದ ಐದು ಕಿ.ಮೀ. ಅಂತರದಲ್ಲಿಯ ಚಿಟ್ಟಾಗ್ರಾಮದಲ್ಲಿ ಕೇವಲ ಆರು ಕುಟುಂಬಗಳಿದ್ದು, ಇವರಲ್ಲಿ ಬಹುತೇಕರು ದಿನಗೂಲಿಗಳಾಗಿ ಕೆಲಸ ಮಾಡುತ್ತಿದ್ದು, ಒಬ್ಬ ಯುವಕ ಮಾತ್ರ ಒಂದು ಸೈಕಲ್ ಮತ್ತು ಗಾಡಿಗಳ ರಿಪೇರಿ ಅಂಗಡಿಯನ್ನು ಇಟ್ಟುಕೊಂಡಿದ್ದಾನೆ. ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ದುಬಲ್‌ಗುಂಡಿ ಗ್ರಾಮದಲ್ಲಿ ಒಟ್ಟು ಒಂಬತ್ತು ಕುಟುಂಬಗಳು ಹಾಗೂ ಭಾಲ್ಕಿ ತಾಲೂಕಿನ ಮೇಹಕೇರ್ ಗ್ರಾಮದಲ್ಲಿ ಕೇವಲ ಮೂರು ಕುಟುಂಬಗಳು ಮಾತ್ರ ವಾಸಿಸುತ್ತಿವೆ. ಈ ಏಳು ಸ್ಥಳಗಳಲ್ಲಿ ವಾಸಿಸುತ್ತಿರುವ ಎಲ್ಲಾ ಪಾರ್ಧಿಯರು ಕಡು ಬಡವರಾಗಿದ್ದು ಸರ್ಕಾರದಿಂದ ನ್ಯಾಯಬದ್ಧವಾಗಿ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಬಸವಕಲ್ಯಾಣ ನಗರದಲ್ಲಿಯ ಟೌನ್‌ಮುನ್ಸಿಪಾಲ್ ಕೌನ್ಸಿಲ್‌ನ ಸದಸ್ಯರಾದ ರೂಪಚಂದ್ ಹಾಗೂ ಶಿಕಂದರ್ ಶಿವಾಜಿ ಎನ್ನುವವರನ್ನು ಪ್ರಶ್ನಿಸಲಾಗಿ, ಪಾರ್ಧಿ ಎಂಬ ಬುಡಕಟ್ಟನ್ನು ಒಟ್ಟು ಹನ್ನೆರಡು ಉಪ ಪಂಗಡಗಳಿಂದ ಈ ಕೆಳಗಿನಂತೆ ವಿಂಗಡಿಸಿದ್ದಾರೆ.

೧. ಫಾಸಿಪಾರ್ಧಿ	೨. ಗಾಯಿ ಪಾರ್ಧಿ
೩. ರಾಜ್‌ಪಾರ್ಧಿ	೪. ಭಿಲ್ ಪಾರ್ಧಿ
೫. ಲಂಗೋಟಿ ಪಾರ್ಧಿ	೬. ಚೋರಾಸ್ ಪಾರ್ಧಿ
೭. ನೌಕಡ್ ವಾಲೆ	೮. ಸಕತ್‌ವಾಲೆ (ಮಹಾಶಕ್ತಿ)
೯. ಕಾಳಿವಾಲೆ (ಭವಾನಿ)	೧೦. ಪಾಡೆವಾಲೆ
೧೧. ವಾಗದೇವಿವಾಲೆ	೧೨. ನವಾಡೆ

ಮಹಾಶಕ್ತಿ ಎಂಬ ಪಂಗಡದವರ ಜಾತಿ ಸಕತ್‌ವಾಲೆ ಆಗಿದ್ದು, ಇವರ ಮನೆದೇವರು ತುಳುಜಾಪುರದ ತುಳಜಾ ಭವಾನಿ ಆಗಿದೆ. ಈ ಬುಡಕಟ್ಟು, ಊರಿಂದ ಊರಿಗೆ ತಿರುಗಾಡದೇ, ಒಂದೇ ಕಡೆ ನೆಲೆಸಿ ವ್ಯಾಪಾರ ಮಾಡುವವರಾಗಿದ್ದಾರೆ. ಶಿವಾಜಿ ಎಂಬ ವಕ್ತ ಈ ಗುಂಪಿಗೆ ಸೇರಿದವರಾಗಿದ್ದಾರೆ.

ರೂಪಚಂದ್ ಎಂಬ ಇವರೊಬ್ಬ ವಕ್ತ, ಕಾಳಿವಾಲೆ ಜಾತಿಗೆ ಸೇರಿದವರಾಗಿದ್ದು, ಇವರ ಮನೆದೇವರು ಕಾಳಿಕಾದೇವಿ ಆಗಿರುತ್ತಾಳೆ.

ಸಕತ್‌ವಾಲೆ ಎಂಬ ಉಪಪಂಗಡದವರ ಮನೆದೇವರು ದತ್ತಾತ್ರೇಯ ಆಗಿದ್ದು, ಈ ಬುಡಕಟ್ಟಿನವರು ಒಂದೇ ಕಡೆ ನೆಲೆಯೂರಿ ನಿಲ್ಲದೇ ಊರಿಂದ ಊರಿಗೆ ಅಲೆಮಾರಿಗಳಾಗಿ ಅಲೆಯುವವರಾಗಿದ್ದಾರೆ.

ವಾಗ್‌ದೇವಿವಾಲಾ ಎಂಬ ಉಪಪಂಗಡದವರ ಮನೆದೇವರು ದುರ್ಗಾಮಾತಾ ಆಗಿದ್ದು ಇವರುಗಳ ಅಡ್ಡ ಹೆಸರು ಅಥವಾ ಇವರ ಉಪಜಾತಿ ಪಾಡೆವಾಲಾ ಆಗಿದೆ. ಇವರು ಕಾಡಿನಿಂದ ಕೌಂಜಾ, ಬಟರೆ, ತಿತರ್, ಬುರಲಿ, ಮೊಲ, ಎಳ್ಳಿ (ಚಿಗರೆ), ನೂರಿ (ನರಿ) ಹಾಗೂ ಜೇನು ತುಪ್ಪವನ್ನು ಬೇಟೆಮಾಡಿ ತರುವವರಾಗಿದ್ದಾರೆ. ಹಾಗೆಯೇ ಇವರು ಮೀನುಗಾರಿಕೆಯನ್ನು ಸಹ ಮಾಡುವವರಾಗಿದ್ದಾರೆ.

ಆದರೆ ಬೀದರ್ ಪಕ್ಕದ ಜಿಲ್ಲೆಯಾದ ಗುಲ್ಬರ್ಗ ಜಿಲ್ಲೆಯಲ್ಲಿ ೧೪ ಜನ ಪುರುಷರು ಮತ್ತು ೧೦ ಜನ ಮಹಿಳೆಯರು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇಲ್ಲಿಯ ಪಾರ್ಧಿಯರನ್ನು ವಿಚಾರಿಸಿದರೆ, ನಮ್ಮನ್ನು 'ಊರೊಳಗಿನ ಪಾರ್ಧಿ' ಎಂತಲೂ ಹಾಗೂ 'ಊರೊಳಗಿನ ಪೋಚಾರು' ಎಂದೆಲ್ಲಾ ಕರೆಯುತ್ತಾರೆ ಎಂದರು. ಇಲ್ಲಿಯ ಪಾರ್ಧಿಯರು ಗುಲ್ಬರ್ಗ ನಗರದ ಸೂಪರ್ ಮಾರ್ಕೆಟ್ ಹಿಂಬದಿಯ ತರಕಾರಿ ಮಾರುಕಟ್ಟೆ ಇರುವ ಸ್ಥಳದಲ್ಲಿ ಸುಮಾರು ೨೦ ವರ್ಷಗಳಿಂದ ವಾಸಿಸುತ್ತಿದ್ದು, ಈ ಜಾಗದ ಮಾಲಿಕ ಶ್ರೀ ಟೆಕುಬುರಾನ್ ಸಾಹೇಬ್ ಎನ್ನುವವರಾಗಿದ್ದು, ಇವರು ಈ ಜಾಗವನ್ನು ಬಡವರಿಗಾಗಿಯೇ ಉಚಿತವಾಗಿ ಕೊಟ್ಟಿದ್ದಾರೆ.

ಬೀದರ್ ಜಿಲ್ಲೆಯಲ್ಲಿಯ ಪಾರ್ಧಿಯರು ತಮ್ಮ ಉಪಜೀವನಕ್ಕಾಗಿ ಮೀನುಗಾರಿಕೆಯನ್ನು ಉದ್ಯೋಗವನ್ನಾಗಿ ಮಾಡಿಕೊಂಡಿರುವುದರ ಜೊತೆಗೆ ಮೀನನ್ನು ತಮ್ಮ ಊಟಕ್ಕಾಗಿ ಬಳಸುತ್ತಾರೆ. ಆದರೆ ಗುಲ್ಬರ್ಗಾದಲ್ಲಿಯ ಪಾರ್ಧಿಯರು ಮೀನನ್ನು ತಿನ್ನಲು ಬಳಸದೇ ಅದನ್ನು ಪೂಜಿಸುತ್ತಾರೆ! ಇಲ್ಲಿರುವ ಪಾರ್ಧಿಯರು ಮಕ್ಕಳ ಆಟಿಕೆ ಸಾಮಾನುಗಳನ್ನು ಬಲೂನ್, ಹೇರ್‌ಪಿನ್ನು ಹಾಗೂ ಇತರೇ ಚಿಲ್ಲರೆ ವ್ಯಾಪಾರಗಳನ್ನು ಮಾಡಿಕೊಂಡು, ತಮ್ಮ ಉಪಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಇದೇ ಜಿಲ್ಲೆಯ ಆಳಂದ ತಾಲೂಕಿನ ದರ್ಗಾಶಿರೂರು ಗ್ರಾಮದಲ್ಲಿಯ ಕೆಲವು ಪಾರ್ಧಿಯರು ಭಟ್ಟಿ ಸರಾಯಿಯನ್ನು ಸಹ ಮಾರಾಟ ಮಾಡಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಆದರೆ ದುರ್ದೈವ ಹಾಗೂ ದುಃಖದ ಸಂಗತಿಯೆಂದರೆ, ಎಲ್ಲಿಯೇ ಕಳ್ಳತನವಾಗಲಿ ಅಥವಾ ದರೋಡೆಯಾಗಲಿ ಸಂಭವಿಸಿದರೆ ಪೋಲಿಸಿನವರು ನಮ್ಮನ್ನೇ ಅನುಮಾನಪಟ್ಟು ನಮ್ಮನ್ನೇ ಬಂಧಿಸಿ ಬಡೆಯುತ್ತಿದ್ದಾರೆ. ಎಂಬ ದೂರುಗಳನ್ನು ಬಹಳಷ್ಟು ಜನರು ತೋಡಿಕೊಂಡರು. ಗುಲ್ಬರ್ಗಾ ಜಿಲ್ಲೆ ಹಾಗೂ ಗುಲ್ಬರ್ಗಾ ತಾಲೂಕಿನ ಶಾಖಾಪುರ ತಾಂಡಗಳಲ್ಲಿ ಪಾರ್ಧಿಯರು ವಾಸಿಸುತ್ತಿದ್ದು ಅವರ ಒಟ್ಟು ಜನಸಂಖ್ಯೆ ೭೧೬ ಇದೆ. (೩೭೫ ಪುರುಷರು ಮತ್ತು ೩೪೧ ಮಹಿಳೆಯರು) ಜಿಲ್ಲೆಯಲ್ಲಿ ಒಟ್ಟು ೧೨೫ ಕುಟುಂಬಗಳು ಪಾರ್ಧಿಯರಿವೆ. ಇವರಲ್ಲಿ ೬೭ ಜನ ಪುರುಷರು ಹಾಗೂ ೬೩ ಜನ ಮಹಿಳೆಯರು ಮಕ್ಕಳ ಆಟಿಕೆ ಸಾಮಾನುಗಳ ತಯಾರಿಕೆ ಹಾಗೂ ಮಾರಾಟದಲ್ಲಿ ತೊಡಗಿದ್ದಾರೆ.

ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ಬೀದರ್ ಗುಲ್ಬರ್ಗಾ ಜಿಲ್ಲೆಗಳ್ನು ಅಭ್ಯಸಿಸಿ ಮುಂದೆ ಅದೇ ಭಾಗದ ಬಳ್ಳಾರಿ ಜಿಲ್ಲೆಗೆ ಬಂದರೆ ಇಲ್ಲಿರುವ ಪಾರ್ಧಿಯರ ಆಚಾರ-ವಿಚಾರ, ಜಾತಿ ಉಪಜಾತಿಗಳೆಲ್ಲಾ ಸಂಪೂರ್ಣವಾಗಿ ಬೇರೆಯಾಗಿರುವುದು ಕಂಡುಬಂತು.

ಬಳ್ಳಾರಿ ಜಿಲ್ಲೆಯ ಪಾರ್ಧಿಯರನ್ನು ಪಾರ್ಧಿಯರೆಂದು ಕರೆಯದೇ 'ಹಕ್ಕಿಪಿಕ್ಕಿ' ಎಂಬ ಹೆಸರಿನಿಂದ ಗುರುತಿಸುತ್ತಾರೆ, ಇವರಲ್ಲಿ ಬೀದರ್ ಗುಲ್ಬರ್ಗದಲ್ಲಿರುವಂತೆ ೧೨ ಉಪಪಂಗಡಗಳಿರದೇ ಕೇವಲ ಆರು ಮಾತ್ರ ಉಪಪಂಗಡಗಳಿವೆ.

ಆ ಆರು ಉಪಪಂಗಡಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಖೋಡಿಯಾರ್

೨. ಕೋರ್‌ಬಿಯಾ

೩. ಸಾವಂಡಿಯಾ

೪. ಪಿಂಪಳಾಜ

೫. ಇಕೋತಿಯಾ

೬. ಹರಕತಿಯಾ.

ಈ ಆರು ಪಂಗಡದ ಹಕ್ಕಿಪಿಕ್ಕಿಯರು (ಪಾರ್ಧಿಯರು) ಏಳುಜನ ಅಕ್ಕತಂಗಿ (ಸಹೋದರಿ) ದೇವತೆಗಳನ್ನು ತಮ್ಮ ಕುಲದೇವರೆಂದು ಪೂಜಿಸುತ್ತಿದ್ದಾರೆ.

ಖೋಡಿಯಾರ್ ಪಂಗಡದವರು ಖೋಡಿಯಾರ್ ದೇವಿಯನ್ನು ತಮ್ಮ ಮನೆದೇವರನ್ನಾಗಿ ಪೂಜಿಸುತ್ತಿದ್ದು ಇವರ ಅಡ್ಡ ಹೆಸರು ಅಥವಾ ಮನೆತನದ ಹೆಸರು 'ಕಾಳೇ' ಎಂತಿದೆ.

ಕೋರ್‌ಬಿಯಾ ಎಂಬ ಪಂಗಡದವರ ಮನೆದೇವರು ಗಂಗಮ್ಮ(ಗಂಗಾದೇವಿ) ಆಗಿದ್ದು, ಇವರನ್ನು ರಾಠೋಡ್ ಮತ್ತು ಪವಾರ್ ಎಂಬ ಅಡ್ಡ ಹೆಸರಿನಿಂದ ಗುರ್ತಿಸುತ್ತಾರೆ.

ಸಾವಂಡಿಯಾ ಎಂಬ ಉಪಪಂಗಡದವರು 'ಸರಕ್‌ಸಾವೊಂಡಿಯಾದೇವಿ'ಯನ್ನು ಪೂಜಿಸುತ್ತಿದ್ದು ಇವರ ಮನೆತನದ ಹೆಸರು 'ಚೌಹ್ಹಾಣ' ಎಂದಿರುತ್ತದೆ.

ಪಿಂಪಳಾಜ ಪಂಗಡದವರ ಮನೆದೇವರು ಪಿಂಪಳಾದೇವಿ ಆಗಿದ್ದು, ಈ ಪಂಗಡದವರು ಉಳಿದ ಐದು ಪಂಗಡದವರಿಗಿಂತ ಶ್ರೇಷ್ಟ ಎಂದು ಹೇಳಿಕೊಳ್ಳುತ್ತಿದ್ದು ಇವರನ್ನು ಸಹ 'ಕಾಳೆ' ಎಂಬ ಅಡ್ಡ ಹೆಸರಿನಿಂದಲೇ ಕರೆಯುತ್ತಾರೆ.

ಇಕೋತಿಯಾ ಎಂಬ ಉಪಪಂಗಡದವರು ಇಕೋತಿಯಾದೇವಿಯ ಆರಾಧಕರಾಗಿದ್ದು ಇವರುಗಳ ಅಡ್ಡ ಹೆಸರು ಸಹ ಪವಾರ್ ಎಂದಿರುತ್ತದೆ.

ಕೊನೆಯದಾಗಿ ಹರಕತಿಯಾ ಎಂಬ ಉಪಪಂಗಡದವರು ಭಾನುದೇವಿಯನ್ನು ಪೂಜಿಸುತ್ತಿದ್ದು ಇವರನ್ನು 'ಭಾನುಡೋಕ್ರಿ' ಎಂತಲು 'ಭಾನು' ಎಂತಲೂ ಅಡ್ಡ ಹೆಸರುಗಳಿಂದ ಕರೆಯುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ನಗರದ ಹರಿಶ್ಚಂದ್ರಕಾಲೋನಿ, ಹೊಸಪೇಟೆ ನಗರದ ಊರಮ್ಮನ ಬಯಲು (ಕೇರಿ) ಕಂಪ್ಲಿ ಪಟ್ಟಣದ ಶಿಕಾರಿ ಕಾಲೋನಿ ಹಾಗೂ ಸಣಾಪುರ ಗ್ರಾಮದಲ್ಲಿ ಹಕ್ಕಿಪಿಕ್ಕಿಯರು ವಾಸಿಸುತ್ತಿದ್ದು ಒಟ್ಟು ೨೦೩ ಕುಟುಂಬಗಳನ್ನು ಹೊಂದಿದ್ದು ಅದರಲ್ಲಿ ೩೪೫ ಪುರುಷರು ಹಾಗೂ [illegible] ಮಹಿಳೆಯರು ಹೀಗಾಗಿ ಒಟ್ಟು ೭೧೫ ಜನಸಂಖ್ಯೆಯನ್ನು ಹೊಂದಿದೆ.

ಬಳ್ಳಾರಿ ಜಿಲ್ಲೆಯಂತೆ ಶಿವಮೊಗ್ಗ, ಹಾಸನ, ದಾವಣಗೆರೆ, ಮೈಸೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿಯೂ ಈ ಬುಡಕಟ್ಟಿನವರನ್ನು 'ಹಕ್ಕಿಪಿಕ್ಕಿ' ಎಂತಲೆ ಕರೆಯುತ್ತಿರುವುದು ಕಂಡು ಬಂತು. ಆದರೆ ಬಿಜಾಪೂರ್, ಬಾಗಲಕೋಟೆ ಜಿಲ್ಲೆಗಳಲ್ಲಿ ಇವರನ್ನು ಹರಣ್‌ಶಿಕಾರಿ, ಬೇಟೆಗಾರ್, ಚಿಗಾರಿಕಾರ್ ಎಂತೆಲ್ಲಾ ಕರೆಯುತ್ತಿದ್ದಾರೆ.

ಆದರೆ ಹಾಸನ, ಮೈಸೂರು, ದಾವಣಗೆರೆ ಜಿಲ್ಲೆಗಳಲ್ಲಿಯ (ಹಕ್ಕಿಪಿಕ್ಕಿಯರ) ಪಾರ್ಧಿಯರ ಬೆಡಗುಗಳು, ಬೀದರಿನಲ್ಲಿರುವಂತೆ ೧೨ ಆಗಿರದೇ ಅಥವಾ ಬಳ್ಳಾರಿಯಂತೆ ೬ ಬೆಡಗುಗಳಾಗಿರದೇ ಕೇವಲ ೪ ಬೆಡಗುಗಳು ಮಾತ್ರ ನಮ್ಮಲ್ಲಿ ಇವೆ ಎಂದು ಹೇಳುತ್ತಾರೆ. ಅವುಗಳೆಂದರೆ:

೧. ಮೇವಾಡೋ

೨. ಗುಜರಾತೋ

೩. ಕಾಳಿವಾಳೋ

೪. ಪವಾರ್

ಮೇವಾಡೋ ಉಪಪಂಗಡದವರು ಎಲ್ಲಮ್ಮದೇವಿಯನ್ನು ಆರಾಧಿಸಿದರೆ, ಕಾಳಿವಾಳೇ ಉಪಪಂಗಡದವರು ಕಲ್ಕತ್ತೆಯಲ್ಲಿಯ 'ಮಹಾಕಾಳಿಕಾದೇವಿ'ಯನ್ನು ಪೂಜಿಸುತ್ತಾರೆ. ಹಾಗೂ ಗುಜರಾತೋ ಉಪಪಂಗಡದವರು ಮೈಸೂರಿನ ಚಾಮುಂಡೇಶ್ವರಿ ಹಾಗೂ ಸಂತೋಷಿಮಾತಾದೇವಿಯನ್ನು ಪೂಜಿಸುತ್ತಿದ್ದಾರೆ.

ಆದರೆ ಈ ಜಿಲ್ಲೆಗಳಲ್ಲಿ ಪವಾರ್ ಉಪಪಂಗಡದವರು ಯಾರು ಇರದ ಕಾರಣ ಅವರು ಯಾವ ದೇವಿಯನ್ನು ಪೂಜಿಸುತ್ತಾರೆ ಎಂಬುದು ತಿಳಿದು ಬರಲಿಲ್ಲ.

ಶಿವಮೊಗ್ಗ ನಗರದಿಂದ ಕೇವಲ ೯ ಕಿ.ಮೀ ಅಂತರದಲ್ಲಿಯ ಗೌತಂನಗರ ಹಕ್ಕಿಪಿಕ್ಕಿ ಕಾಲೋನಿ ಅಥವಾ ಚಿಕ್ಕಮಟ್ಟೆ ಗ್ರಾಮದ ಪಾರ್ಧಿಯರ ಹೇಳಿಕೆಯೇ ಬೇರೆಯಾಗಿದೆ. ಇಲ್ಲಿ ವಾಸಿಸುವ ಶ್ರೀಮತಿ ಏಕಾಶಿಬಾಯಿ ಎಂಬ ಸಾಮಾಜಿಕಕಾರ್ಯಕರ್ತೆ, ಜೈಕೀರ್ತಿ ಹಾಗೂ ಅಂಜನ ತಂದೆ ಗಂಗನೂರ್ ಚಂದ್ ಎಂಬುವರನ್ನು ವಿಚಾರಿಸಲಾಗಿ, ಅವರುಗಳು ತಮ್ಮಲ್ಲಿರುವ ಉಪಪಂಗಡಗಳನ್ನು ಈ ಕೆಳಗಿನಂತೆ ತಿಳಿಸುತ್ತಾರೆ.

೧. ಕಾಳಿವಾಳೋ   ೨. ಇಕೋತಿಯಾ

೩. ನೌಕಡ್‌ವಾಲೋ   ೪. ಮೇವಾಡೋವಾಳೋ

೫. ರಾಣೋ ಶಿಶುದೇವ್   ೬. ತುಲ್ಲೋವಾಳೋ

೭. ತಾರ್‍ಯಾವಾಳೋ   ೮. ಸಪ್ಪತಿಯೋ

೯. ಅಂಬಾವಾಳೋ   ೧೦. ನಾಗೋವಾಳೋ

೧೧. ಬಾಳುವಾಳೋ   ೧೨. ಶಿವವಾಳೋ

೧೩. ಶಂಬಾವಾಳೋ   ೧೪. ಶಂಬ್ವಿವಾಳೋ

೧೫. ಬಬುಲ್‌ವಾಳೋ   ೧೬. ಬಂಡಿವಾಳೋ

೧೭. ಫಕೀರ್ ವಾಳೋ   ೧೮. ಶಕ್ರುವಾಳೋ

೧೯. ಶಾಮ್‌ವಾಳೋ   ೨೦. ಉದ್ರೋ ವಾಳೋ

೨೧. ಜೋಗನ್‌ವಾಳೋ ಇತ್ಯಾದಿ!

ಕಾಳಿವಾಳೋದವರು ಕಾಳಿಕಾದೇವಿಯನ್ನು, ರಾಣೋ ಶಿಶುದೇವ್‌ದವರು ನೌಕಡ್‌ದೇವಿಯನ್ನು ನಾಗೋವಾಳೋದವರು ನೌಕಡ್‌ದೇವಿಯನ್ನು, ಶಿವವಾಳೋದವರು ಚಾಮುಂಡಿ ದೇವಿಯನ್ನು ಬಬುಲ್‌ವಾಳೋದವರು ಭದ್ರಕಾಳಿಯನ್ನು ಉದ್ರೋವಾಳೋದವರು ವಾಗೈದೇವಿಯನ್ನು ಜೋಗನ್‌ವಾಳೋದವರು ಸಕತ್‌ದೇವಿಯನ್ನು ಪೂಜಿಸುತ್ತಿದ್ದಾರೆ. ಇಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿ(ಪಾರ್ಧಿ)ಯರು ಪ್ಲಾಸ್ಟಿಕ್ ಹೂವುಗಳನ್ನು ತೋರಣಗಳನ್ನು ತಯಾರಿಸಿ, ಅವುಗಳ ಮಾರಾಟದಿಂದ ತಮ್ಮ ಉಪಜೀವನ ನಡೆಸುತ್ತಿದ್ದಾರೆ. ಜೊತೆಗೆ ಇಲ್ಲಿಯ ಬಹುತೇಕ ಎಲ್ಲರಿಗೂ ಸರ್ಕಾರದಿಂದ ಮನೆ, ಭಾಗ್ಯಜ್ಯೋತಿ ಹಾಗೂ ಪಡಿತರ ಚೀಟಿಗಳಂತಹ ಅನೇಕ ಸೌಲಭ್ಯಗಳು ಸಿಕ್ಕಿವೆ. ಇವರುಗಳು ನಾವು ಮೂಲತಃ ಗುಜರಾತ್ ರಾಜ್ಯದವರೆಂದು ಹೇಳಿಕೊಳ್ಳುತ್ತಾರೆ.

೧೯೧೧ಳರಲ್ಲಿ ಪ್ರಕಟವಾದ 'ಮುಂಬಯಿ ಇಲಾಖೆಯ ದುರುಳರು' ಎಂಬ ಪುಸ್ತಕದಲ್ಲಿ ಎಸ್.ವಿ. ಹಳದಿಪುರ ಎಂಬುವರು ಪಾರ್ಧಿಯರನ್ನು ಕುರಿತು ಈ ರೀತಿಯಾಗಿ ಹೇಳುತ್ತಾರೆ. ಪಾರ್ಧಿಯರಲ್ಲಿಯ ಒಳಭೇದಗಳಲ್ಲಿ ಶರೀರ ಸಂಬಂಧವೂ, ಅನ್ನ ವ್ಯವಹಾರವೂ ಆಗುವುದಿಲ್ಲ.

ಪಾರ್ಧಿಯರು ಬಹಳಷ್ಟು ಸರಾಯಿ ಕುಡಿಯುತ್ತಾರೆ. ತಿರುಗಾಟದ ಪಾರ್ಧಿಯವರ ಮೈ ಬಣ್ಣವು ಬಹಳ ಮಾಡಿ ಕಪ್ಪು ಅಥವಾ ಎಣ್ಣೆಗೆಂಪು ಇರುವುದು. ಇವರು ಸರಾಸರಿ ಉದ್ದವಿದ್ದು (ಎತ್ತರ), ಚಪಲರೂ, ಕಟ್ಟಾಳುಗಳೂ ಆಗಿರುತ್ತಾರೆ. ಇವರ ಉಡಿಗೆ ತೊಡಿಗೆ ನೋಡಿದರೆ ಈ ಬುಡಕಟ್ಟಿನವರ ಗುರುತು ಸಿಗದೇ ಇರಲಾರದು. ಇವರು ಕೊರಳಲ್ಲಿ ಕರೀ ಕಟ್ಟಿಗೆಯ ಸೀಟಿ (ಸಿಳ್ಳು ಹಾಕುವ ಕೊಳವೆ) ಯನ್ನು ಹಾಕಿಕೊಳ್ಳುತ್ತಾರೆ. ಅದನ್ನು ಊದಿ ಕೌಜು ಹಕ್ಕಿಯಂತೆ ಶಬ್ದವನ್ನು ಮಾಡುವರು. ತಿರುಗಾಟದ ಪಾರ್ಧಿಯರು ತಮ್ಮ ಹೆಂಡಿರು ಮಕ್ಕಳನ್ನು ಸಂಗಡ ಕಟ್ಟಿಕೊಂಡೇ ಊರೂರು ತಿರುಗಾಡುವರು.

'ಚಿತಾವಾಲಾ' ಎಂಬ ಪಾರ್ಧಿಯರು ಸಣ್ಣ ಹುಲಿಯ ಮರಿಗಳನ್ನು ಹಿಡಿದು ಅರಸರಿಗೆ ಅಥವಾ ದೊಡ್ಡ ದೊಡ್ಡ ಸರದಾರರಿಗೆ ಮಾರುವರು. ಆದ್ದರಿಂದ ಅವರು 'ರಾಜ್ ಪಾರಧಿ' ಎಂದು ಅನ್ನಿಸಿಕೊಳ್ಳುವರು.

'ಗಾಯ್ ಪಾರ್ಧಿ' ಎಂದರೆ ಸಾಕಿದ (ಮಾತು ಕಲಿಸಿದ) ಆಕಳ ಹಿಂದೆ ಅಡಗಿಕೊಂಡು ಹೋಗಿ ಚಿಗರಿ ಮುಂತಾದವುಗಳನ್ನು ಹಿಡಿಯುವರು. ಕೆಲವು ಫಾಸಿ ಪಾರ್ಧಿಯರು ತಮ್ಮ ಬೇಟೆಗಳ ಕೊರಳಿಗೆ ಫಾಸಿ (ಹುರಲು) ಹಾಕಿ ಹಿಡಿಯುವುದರಿಂದ ಅಂಥವರನ್ನು 'ಫಾಸಿ ಪಾರ್ಧಿ' ಎನ್ನುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಫಾಸಿ ಪಾರ್ಧಿಯರನ್ನು ಹರಣಶಿಕಾರಿ, ಅಡವಿಚೆಂಚರು, ಚಿಗರಿಕಾರ್ ಹಾಗೂ ಬೇಟೆಗಾರ್ ಎಂತೆಲ್ಲಾ ಕರೆಯುತ್ತಾರೆ.

ಎಸ್.ವಿ.ಹರಳದಿಪೂರ್‌ರವರ ಪ್ರಕಾರ, ಕರ್ನಾಟಕದಲ್ಲಿ ಪಾರ್ಧಿಯರ ಜನಸಂಖ್ಯೆ ಸರಿಸುಮಾರು ೧೩,೦೦೦

ಇದೆ. ಅದರಲ್ಲಿ ಬಿಜಾಪೂರ್ ಜಿಲ್ಲೆಯಲ್ಲಿ ಸುಮಾರು ೨೫೦! ಧಾರವಾಡ ಜಿಲ್ಲೆಯಲ್ಲಿ ಸುಮಾರು ೮೦! ಎಂದು ಹೇಳುತ್ತಾರೆ.

ತಿರುಗಾಟದ ಪಾರ್ಧಿಯರು ವಸ್ತ್ರ ಹೀನರು (ಕನಿಷ್ಟ ಬಟ್ಟೆ ತೊಡುವವರು) ಮತ್ತು ಹೊಲಸು ಜನರಂತೆ. ಅವರು ತಲೆಯ ಕೂದಲನ್ನು ಎಂದೂ ಬಾಚಿಕೊಳ್ಳುವುದಿಲ್ಲವಂತೆ. ತಲೆ ಹಾಗೂ ಗಡ್ಡವನ್ನು ಹಾಗೆಯೇ ಬೆಳೆಸಿಕೊಳ್ಳುತ್ತಾರಂತೆ.

೧. ಪಾರ್ಧಿಯರ ಜನನ

ಹಿಂದಿನ ಕಾಲದಲ್ಲಿ ಪಾರ್ಧಿಯರ ಹೆಣ್ಣು ಮಕ್ಕಳು ತಮ್ಮ ಹೆರಿಗೆಯನ್ನು ತಾವೇ ಮಾಡಿಕೊಳ್ಳಬೇಕಾಗುತ್ತಿತ್ತು. ತಮ್ಮ ಗುಡಿಸಲಿನಿಂದ ದೂರದಲ್ಲಿ ಒಂದು ಚಿಕ್ಕ ಗುಡಿಸಲು ಹಾಕಿ ಅಲ್ಲಿಗೆ ಬಾಣಂತಿಯನ್ನು ಕರೆತಂದು ಬಿಟ್ಟರೆ, ನಂತರದಲ್ಲಿ ಅಲ್ಲಿಗೆ ಬೇರೆ ಯಾರು ಹೋಗುವಹಾಗಿಲ್ಲ. ಮಗು ಹುಟ್ಟಿದ ಮೇಲೆ ಹೊಕ್ಕಳ ಬಳ್ಳಿಯನ್ನು ಮರದ ತುಂಡು ಇಲ್ಲವೇ ಬಳೆಯ ಚೂರಿನಿಂದ ತಾನೇ ಕೊಯ್ದು ಸೀರೆಯ ನೂಲಿನಿಂದ ಹೊಕ್ಕಳ ಬಳ್ಳಿಯನ್ನು ಕಟ್ಟಿಕೊಳ್ಳುತ್ತಿದ್ದಳು. ಮಾಂಸ ಮತ್ತು ಮಣ್ಣಿನಿಂದ ಕೂಡಿದ್ದ ಮಗುವನ್ನು ಹಸಿಬಾಣಂತಿಯೇ ತನ್ನ ಕಾಲ ಮೇಲೆ ಹಾಕಿಕೊಂಡು ದನದ ಸಗಣಿಯಿಂದ ಅದನ್ನು ಸ್ನಾನ ಮಾಡಿಸುತ್ತಿದ್ದಳು. ಮಗುವಿನ ಸ್ನಾನದ ನಂತರ ತಾನೂ ಸ್ನಾನ ಮಾಡಿ ಬಟ್ಟೆ ಬರೆಗಳನ್ನು ತೊಳೆದುಕೊಂಡು ಬೆಂಕಿಯ ಅಗ್ಗಿಷ್ಟಿಕೆ ಹಾಕಿಕೊಳ್ಳಬೇಕು. ಆ ಬೆಂಕಿಯ ಬಳಿ ಹಸಿಭಾಣಂತಿ ಮತ್ತು ಮಗು ಕಾಯಿಸಿಕೊಂಡ ನಂತರ ಅವಳ ಗಂಡ ಎನಿಸಿಕೊಂಡವನು ಅರ್ಧ ಪಾವು ಅಕ್ಕಿ ಬೆಲ್ಲ ಹಾಕಿ ಪಾಯಸ ಮಾಡಿ ಮುತ್ತುಗದ ಎಲೆಯ ದೊನ್ನೆ ಮಾಡಿ ಬಾಣಂತಿಗೆ ಗಂಜಿ ಮಾಡಿಕೊಡುತ್ತಾರೆ. ಮಗುವನ್ನು ಜೋಳಿಗೆಗೆ ಕಟ್ಟಿಕೊಂಡು ಊರೆಲ್ಲಾ ತಿರುಗಿ ಬಿಕ್ಷೇ ಬೇಡ ಬೇಕು. ಇವಳು ಬಿಕ್ಷೆಬೇಡಿತಂದ ಆಹಾರವನ್ನು ಅವಳಷ್ಟೇ ತಿನ್ನಬೇಕು. ಬೇರೆಯವರು ತಿಂದರೆ ಅದನ್ನು ಮೈಲಿಗೆ ಎಂದು ಭಾವಿಸುತ್ತಾರೆ. ಹೆರಿಗೆಯ ನಂತರ ಬಾಣಂತಿಯೇ ನೀರು, ಸೌದೆ, ಕಲ್ಲುಒಲೆ ಹಾಕಿ ಅಡಿಗೆ ಮಾಡಿ ಊಟ ಮಾಡಬೇಕಾಗುತ್ತದೆ. ಬಾಣಂತಿಯೂ ಸುಮಾರು ೩ ತಿಂಗಳುಗಳ ಕಾಲ ತಾನೇ ಬಿಕ್ಷಬೇಡಿ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕಾಗುತ್ತಿತ್ತು. ಬಾಣಂತಿಯು ತನ್ನ ಹೊಟ್ಟೆಗಾಗಿ ಬಿಕ್ಷೆಯನ್ನು ಮಾತ್ರಬೇಡದೇ, ಕಸ್ತೂರಿ, ಗೋರಂಜನ, ಪಿನ್ನು, ದಬ್ಬಣ, ಕರಿಮಣಿಗಳನ್ನು ಸಹ ಮಾರಾಟ ಮಾಡುತ್ತಿರುತ್ತಾಳೆ.

ಹುಟ್ಟಿದ ಮಗುವಿಗೆ ದಿನಾಲು ಸ್ನಾನ ಮಾಡಿಸಿದರೆ, ಬಾಣಂತಿಯಾದವಳಿಗೆ ಐದು ದಿನಗಳ ನಂತರವೇ ಸ್ನಾನಮಾಡಿಸಿ, ಬೆಲ್ಲಹಾಕಿ ಮಾಡಿದ ಸಿಹಿ ಅನ್ನ (ಮಿಟ್ಟುದಾನ್)ನ್ನು ಕೊಡುತ್ತಾರೆ.

ಮುಂದಿನ ಐದು ದಿನಗಳ ತನಕವೂ ಒಂದೊಂದು ಹಿಡಿ ಸಿಹಿ ಅನ್ನವನ್ನು ಕೊಡುತ್ತಾರೆ. ಹೆರಿಗೆಯಾದ ಹೆಂಗಸು ಮೂರು ತಿಂಗಳುಗಳ ವರೆಗೆ ಹಾಸಿಗೆ, ಒಲೆ, ಪಾತ್ರೆ ಹಾಗೂ ಇನ್ನುಳಿದ ಯಾವುದೇ ಸಾಮಗ್ರಿಗಳನ್ನು ಮುಟ್ಟುವಂತಿಲ್ಲ. ಅಷ್ಟೇ ಏಕೆ ಗಂಡ ಹೆಂಡಿರಿಬ್ಬರು ಕೂಡಿ ಮಾತು ಕೂಡಾ ಆಡುವಂತಿಲ್ಲ!

ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಹಾಗೂ ಬದಲಾಗುತ್ತಿರುವ ಈ ದಿನಗಳಲ್ಲಿ ಇಂದು ಇವ್ಯಾವುದು ಕಟ್ಟು ನಿಟ್ಟನ್ನು ಪಾಲಿಸದೆ ಇಂದಿನ ಪಾರ್ಧಿಯರು ಆಸ್ಪತ್ರೆಗಳಲ್ಲಿ ಹಾಗೂ ಸೂಲಗಿತ್ತಿಯರಿಂದ ತಮ್ಮ ಹೆರಿಗೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ.

ಗರ್ಭವತಿಯಾದ ಹೆಣ್ಣು ಒಬ್ಬಳೇ ಕಾಡಿಗೆ ಹೋದರೆ ದೆವ್ವ ಹಿಡಿಯುತ್ತದೆ ಎಂಬ ನಂಬಿಕೆ. ಇವರಲ್ಲಿ ಚಾಲ್ತಿಯಲ್ಲಿದೆ. ಅಂದಿನ ದಿನಗಳಲ್ಲಿ ಹಡೆದ ಹೆಣ್ಣನ್ನು ಮೈಲಿಗೆ ಎಂದು ಭಾವಿಸುತ್ತಿದ್ದರು. ಏಕೆಂದರೆ ಅಲ್ಲಿಯ ಡಾಕ್ಟರ್‌ಗಳು ಮತ್ತು ನರ್ಸಗಳು ಎಲ್ಲಿ ತಮ್ಮ ಗುಪ್ತಾಂಗಗಳಿಗೆ ಕೈಹಾಕಿ ಬಿಡುತ್ತಾರೋ ಎಂದು ಹೆದರಿ ಮತ್ತು ನಾಚಿಕೊಂಡು, ಹೆರಿಗೆಗೆ ಮುನ್ನ ಕಲಸೆ ಗಿಡದ ರಸವನ್ನು ಕುಡಿಸಿ ಅಂಗಾತ ಮಲಗಿಸಿ ಎರಡೂ ಕಡೆಯಿಂದ ಹೊಟ್ಟೆಯನ್ನು ಅದುಮಿ ಮಗುವನ್ನು ಹೊರತೆಗೆಯುತ್ತಿದ್ದರು. ಒಂದು ವೇಳೆ ಹೆರಿಗೆ ತಡವಾದರೆ ಅಥವಾ ಹೆರಿಗೆ ಆಗುವ ಸಮಯದಲ್ಲಿ ಏನಾದರೂ ತೊಂದರೆಯಾದರೆ ಅದು ದೆವ್ವದ ಕಾಟವೇ ಇರಬೇಕೆಂದು ಭಾವಿಸಿ, ಅದರ ಪರಿಹಾರಕ್ಕಾಗಿ ತಮ್ಮ ಕುಲದೇವತೆಯನ್ನು ಮೊರೆ ಹೊಗುತ್ತಿರುತ್ತಾರೆ. ಅನೈತಿಕವಾಗಿ ಬಸಿರಾದರೆ ಹೆರಿಗೆ ತಡ ವಾಗುತ್ತದೆಂದು ಇವರು ನಂಬುತ್ತಾರೆ.

ಮಗು ಹುಟ್ಟಿದ ೧೫ ದಿವಸಕ್ಕೆ ಖಂಡೋ ಸಮಾರಂಭ ಮಾಡುತ್ತಾರೆ. ಅಂದರೆ ಮಾಂಸದ ಊಟವನ್ನು ಈ ಸಮಾರಂಭದಲ್ಲಿ ಮಾಡುತ್ತಾರೆ. ತಮ್ಮ ಕುಲದೇವತೆಯನ್ನು ಪೂಜಿಸಿ ಮಗುವಿಗೆ 'ಉಡದಾರ' ಹಾಕುತ್ತಾರೆ. ಅವರ ದೇವತೆಗಳ ಮೂಲಕ, ತೀರಿಕೊಂಡ ಮಾತಾ ಪಿತೃಗಳಿಗೆ ಮತ್ತು ತಮ್ಮ ಪೂರ್ವಿಕರಿಗೆ ಮಗು ಹುಟ್ಟಿದ ವಿಚಾರವನ್ನು ತಿಳಿಸುತ್ತಾರೆ. ತಮ್ಮ ಕುಲದೇವತೆಗಳನ್ನು ಗಂಡು ಮಗುವಿಗೆ ಯಾರದೋ ಕೆಟ್ಟ ದೃಷ್ಟಿ ಬಿಳದಿರಲೆಂದು ಹಾಗೂ ಪಾರ್ಶ್ವವಾಯುವಿನಿಂದ ರಕ್ಷಣೆ ಪಡೆಯುವುದಕ್ಕಾಗಿ ಉಡದಾರವನ್ನು ಕಟ್ಟುತ್ತಾರೆ.

ಪಾರ್ಧಿಯರು ಗಂಡು ಮಗುವಿಗಿಂತ ಹೆಣ್ಣು ಮಗು ಹುಟ್ಟಿದಾಗ ಹೆಚ್ಚು ಸಂಭ್ರಮ ಪಡುತ್ತಾರೆ. ಏಕೆಂದರೆ ಇವರಲ್ಲಿ 'ವರದಕ್ಷಿಣೆ'ಯ ಬದಲಾಗಿ 'ವಧುದಕ್ಷಿಣೆ ಪದ್ಧತಿ' ಜಾರಿಯಲ್ಲಿದೆ.

ಪಾರ್ಧಿಯರು ಹಿಂದೂ ಮತಾವಲಂಬಿಗಳಾಗಿದ್ದು ಕುರಿಯಾರಿಮಾತಾ ಮತ್ತು ಆ ದೈವದ ಏಳು ಸಹೋದರಿ ಯರನ್ನು ದೈವವೆಂದು ಆರಾಧಿಸುವರು. ದಸರಾ ಹಬ್ಬ ಇವರ ಪ್ರಮುಖ ಹಬ್ಬವಾಗಿದ್ದು, ಹಬ್ಬ ಹರಿದಿನಗಳಲ್ಲಿ ಇವರು ತಮ್ಮ ದೈವಗಳನ್ನು ಪ್ರಾಣಿ ಬಲಿಯಿಂದ ಸಂತೃಪ್ತಿಸುವರು.

ಜವಳ ಕಾರ್ಯಕ್ರಮ

ಪಾರ್ಧಿಯರಲ್ಲಿ ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳು ಇದ್ದಾಗ ಮನೆಯ ಎಲ್ಲ ಮಕ್ಕಳಿಗೆ ಒಂದೇ ಸಾರಿಗೆ (ಎಲ್ಲ ಅಣ್ಣ ತಮ್ಮ ಅಥವಾ ಅಕ್ಕ ತಂಗಿಯರ ಮಕ್ಕಳಿಗೆ) ಜವಳ ಮಾಡಿಸುವ ಕಾರ್ಯಕ್ರಮವಿತ್ತು. ಆದರೆ ಇತ್ತೀಚಿನ ಆಧುನಿಕತೆಯ ಪ್ರಭಾವದಿಂದ ಅವಿಭಕ್ತ ಕುಟುಂಬಗಳೆಲ್ಲಾ ವಿಭಕ್ತಕುಟುಂಬಗಳಾಗುತ್ತಿವೆ. ಹೀಗಾಗಿ ಇವರು ತಮ್ಮ ತಮ್ಮ (ಒಬ್ಬೊರ) ಮಕ್ಕಳ ಜವಳ ಶಾಸ್ತ್ರವನ್ನು ಆಚರಿಸುತ್ತಿದ್ದಾರೆ. ಈ ಜವಳ ಕಾರ್ಯವೂ ಅತ್ಯಂತ ಸುಲಭವಾಗಿದ್ದು. ಮಗು ಹುಟ್ಟಿದ ಐದನೇ ದಿನಕ್ಕೆ ತಾಯಿಯೇ ಮಗುವನ್ನು ಕಾಲಮೇಲೆ ಹಾಕಿಕೊಂಡು, ಬ್ಲೇಡಿನಿಂದ ಅದರ ಕೂದಲವನ್ನು ಕತ್ತರಿಸುವ ಮೂಲಕ ಜವಳವನ್ನು ಮಾಡುತ್ತಾಳೆ.

೨. ಋತುಮತಿ ಕಾರ್ಯ

ಹುಡುಗಿಯರು ಋತುಮತಿಯಾದಾಗ ಅವಳಿಗೆ ಸ್ನಾನ ಮಾಡಿಸಿ, ಹೂವು ಮುಡಿಸಿ, [illegible] ಕೈ ಕಾಲುಗಳಿಗೆ ಕೆಂಪು ಬಣ್ಣವನ್ನು ಹಚ್ಚುತ್ತಾರೆ. [illegible] ಮತ್ತು ಒಂದು [illegible]

ಬಡಿಸುತ್ತಾರೆ. ಆಗಲೇ ಆ ಹುಡುಗಿ ಮದುವೆಗೆ ಬಂದಿದ್ದಾಳೆಂದು ನಿರ್ಧರಿಸುತ್ತಾರೆ. ಈ ಸಂದರ್ಭದಲ್ಲಿ ಇತರೇ ಜಾತಿಯವರಂತೆ ಅದ್ದೂರಿ ಸಮಾರಂಭವನ್ನು ಮಾಡುತ್ತಿರುವದು ಕಂಡು ಬರುತ್ತದೆ. ಅನೇಕ ಪರಿವಾರಗಳಲ್ಲಿ ಈ ದಿನವೇ ಮದುವೆಯ ಮಾತು ಕತೆಗಳು ಸಹ ನಡೆಯುತ್ತವೆ. ಹುಡುಗಿಯು ಮದುವೆಯಾದ ನಂತರ ಋತುಮತಿ ಯಾದರೆ ಆಗ ಯಾವುದೇ ಸಮಾರಂಭಗಳನ್ನು ಮಾಡುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಬಹುತೇಕ ಪಾರ್ಧಿಯರು ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯನ್ನು ಬಿಟ್ಟು ಹುಡುಗಿಯು ಪ್ರೌಢಾಳಾದ ನಂತರವೇ ಮದುವೆಯ ಸಮಾರಂಭಗಳನ್ನು ಮಾಡುತ್ತಿರುವುದು ಸಂತೋಷ ಮತ್ತು ಸಮಾಧಾನದ ಸಂಗತಿಯಾಗಿದೆ.

ಬಾಲೆಯರು ಕನ್ನೆಯಾಗುವ ಪ್ರಕ್ರಿಯೆಯನ್ನು ಬುಡಕಟ್ಟುಗಳು ಅತೀ ಸಂಭ್ರಮದಿಂದಲೇ ಎದುರುಗೊಳ್ಳುತ್ತಾರೆ. ಈ ಕಾರ್ಯವು ಒಂದೊಂದು ಬುಡಕಟ್ಟುಗಳಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುತ್ತಾರೆ. ಇವರು ಈ ಕಾರ್ಯವನ್ನು ಹೆಣ್ಣಿನ ಜೀವನದ ಮುಖ್ಯ ಅಂಗ ಎಂದು ಭಾವಿಸುತ್ತಾರೆ.

ಹುಡುಗಿಯು ಮೈನೆರೆದಾಗ ಕೆಲವು ಸಂಪ್ರದಾಯಗಳನ್ನು ಆಚರಿಸುತ್ತಾರೆ. ಮೈನೆರೆದ ಮೂರು ಅಥವಾ ಐದು ದಿನಕ್ಕೆ ಗುಡ್ಲು ಹಾಕುವ ಶಾಸ್ತ್ರ ಮಾಡುತ್ತಾರೆ. ತೆಂಗಿನ ಗರಿ, ಹಲಸಿನ ಎಲ್ಲೆ, ಲೆಕ್ಕಿಸೊಪ್ಪು, ಬೇವಿನಸೊಪ್ಪು ಈ ತರಹ ಐದು ತರಹದ ಸೊಪ್ಪನ್ನು ಗುಡ್ಲಿಯ ಮೇಲೆ ಹಾಕಿ ಹುಡಗಿಯನ್ನು ಹಸೆಮಣೆ ಮೇಲೆ ಕೂರಿಸಿ ಐದು ತಟ್ಟೆ ತುಂಬುತ್ತಾರೆ.

ಪಾರ್ಧಿಯ ಹಿರಿಯ ವಕ್ತೃಗಳ ಪ್ರಕಾರ, ಈ ರೀತಿಯ ಆಚರಣೆ ತುಂಬಾ ಪೂರ್ವದಲ್ಲಿ ಇದ್ದುದಾಗಿ ತಿಳಿದು ಬರುತ್ತದೆ. ಆದರೆ ಇಂದು ಆಧುನಿಕ ಸಮಾಜದ ಒತ್ತಡಗಳು ಮತ್ತು ಮೇಲ್ವರ್ಗಗಳ ಪ್ರಭಾವಗಳಿಗೆ ಒಳಗಾಗುತ್ತಿರುವ ಪಾರ್ಧಿಯರು ಇಂದು ಈ ರೀತಿಯ ಪ್ರತ್ಯೇಕ ಗುಡಿಸಲು ಹಾಕಿ ಹೆಣ್ಣನ್ನು ಅದರಲ್ಲಿ ಬಿಡುವ ಪದ್ಧತಿ ಇಲ್ಲವಾಗಿದೆ. ಪಾರ್ಧಿಯರು ಮೈನೆರೆದ ಹುಡುಗಿಯನ್ನು ತಮ್ಮ ಹಟ್ಟಿ(ಗುಡಿಸಲು)ಯಿಂದ ದೂರಕ್ಕೆ ಒಂದು ಪ್ರತ್ಯೇಕ ಗುಡಿಸಲನ್ನು ಹಾಕಿ ಸೂತಕ ಕಳೆಯುವವರೆಗೂ ಆ ಹೆಣ್ಣನ್ನು ಗುಡಿಸಲಿನಲ್ಲಿ ಇಡುತ್ತಾರೆ. ಆದರೆ ಇತ್ತೀಚೆಗೆ ಈ ಎಲ್ಲ ಕಟ್ಟುನಿಟ್ಟುಗಳು ಕಡಿಮೆಯಾಗುತ್ತಿವೆ. ಅಂದಿನ ಪ್ರತ್ಯೇಕ ಗುಡಿಸಲಿನ ಸ್ಥಾನವನ್ನು ಇಂದು ಮನೆಯ ಒಂದು ಕೋಣೆಯಾಗಿ ಮಾರ್ಪಾಡುಗೊಂಡಿವೆ. ಋತುಮತಿ ಹುಡುಗಿಯನ್ನು ಕೂಡಿಸಿದ ಆ ಜಾಗವನ್ನು ಚಾದರ್ ಇಲ್ಲವೆ ಯಾವುದಾದರೂ ಪರದೆಯಿಂದ ಮರೆಮಾಡಿ ಇಡಲಾಗುತ್ತದೆ. (ಶಂಕರನಾರಾಯಣ ತಿ.ನಂ., ಕರ್ನಾಟಕ ಜನಪದ ಮಹಾಕಾವ್ಯಗಳು, ಪು.೧೨೫) ಆದರೆ ಇತ್ತಿಚಿನ ದಿನಗಳಲ್ಲಿ ಋತುಮತಿಯದಾಗಿನ ಕಾರ್ಯಗಳು ಇನ್ನೂ ಸರಳವಾಗುತ್ತಿದ್ದು ಬಹುತೇಕ ಪಾಲಕ/ಪೋಷಕರು ತಮ್ಮ ಮಗಳು ಋತುಮತಿಯಾಗಿರುವುದನ್ನೇ ಗೌಪ್ಯವಾಗಿಡಲು ಪ್ರಯತ್ನಿಸುತ್ತಿದ್ದಾರೆ. ಮೈನೆರೆದ ಹೆಣ್ಣಿರುವ ಜಾಗಕ್ಕೆ ಯಾವುದೇ ದುಷ್ಟಶಕ್ತಿಗಳು ಸುಳಿಯದಂತೆ ಹಳೆ ಚಪ್ಪಲಿ, ಕಸಬರಿಗೆ, ಕುಡುಗೋಲುಗಳನ್ನು ಇಡುವ ಪದ್ಧತಿಯು ಚಾಲ್ತಿಯಲ್ಲಿದೆ. ಹಾಗೆಯೇ ಆ ಹುಡುಗಿಯು ಮಲಗುವ ಹಾಸಿಗೆಯ ಕೆಳಭಾಗದಲ್ಲಿ ಬೇವಿನ ಸೊಪ್ಪನ್ನು ಹಾಕಲಾಗಿರುತ್ತದೆ.

ಹುಡುಗಿ ಮೈನೆರೆದಿದ್ದಾಳೆಂದು ತಿಳಿದ ತಕ್ಷಣ ಮನೆಯ ಯಜಮಾನಿಯಾಗಲಿ, ಮೈನೆರೆದ ಹೆಣ್ಣಿನ ಸೋದರತ್ತೆಯಾಗಲೀ ಅಥವಾ ಸೋದರಮಾವನಾಗಲಿ ಮೊದಲ ಮುಟ್ಟು ನೀರನ್ನು ಹಾಕುತ್ತಾರೆ. ನಂತರ ಮೂರು ದಿನಗಳವರೆಗೂ ಮೈನೆರೆದ ಹೆಣ್ಣಿಗೆ ಸ್ನಾನ ಮಾಡಿಸುವುದಿಲ್ಲ. ಮೈನೆರೆದ ಮನೆಯನ್ನು ಸೂತಕದ ಮನೆಯೆಂದು

ಪರಿಗಣಿಸುವದರಿಂದ ಇತರ ಸಂಬಂಧಿಗಳು ಇತರ ಸೂತಕ ಕಳೆಯುವವರೆಗೂ ವಿಶೇಷವಾದ ಪೂಜಾ ವಿಧಿ ವಿಧಾನಗಳು ಈ ಮನೆಯಲ್ಲಿ ನಡೆಯುವಂತಿಲ್ಲ.

ಹುಡುಗಿಯ ಮೈನೆರೆದ ಐದು ದಿನಕ್ಕೆ ಹುಡುಗಿ ಕುಳಿತ ಮೂಲೆಯನ್ನು ಆ ಹುಡುಗಿಯ ಕೈಯಿಂದಲೇ ಸಗಣಿಯಿಂದ ಸಾರಿಸಿ, ಪೂಜೆ ಸಲ್ಲಿಸುತ್ತಾರೆ. ನಂತರ ಹುಡುಗಿಯನ್ನು ದೇವರ ಮನೆಗೆ ಕರೆದುಕೊಂಡು ಹೋಗಿ ಮನೆ ದೇವತೆಗೆ ಪೂಜೆ ಮಾಡಿಸುತ್ತಾರೆ. ಈ ಎಲ್ಲ ಕ್ರಿಯೆಗಳ ನಂತರ ಹುಡುಗಿಗೆ ಧಾನ್ಯ, ಚಿಗಳಿ ಮತ್ತು ಫಲ ತಾಂಬೂಲಗಳನ್ನು ಐದು ಜನ ಮುತ್ತೈದೆಯರು ಉಡಿತುಂಬುತ್ತಾರೆ. ಐದನೇ ದಿನದಿಂದ ಹನ್ನೊಂದು ದಿನದವರೆಗೂ ಅರಿಷಿಣದ ನೀರನ್ನು ಕಡ್ಡಾಯವಾಗಿ ಹಾಕುತ್ತಾರೆ. ಈ ರೀತಿಯಲ್ಲಿ ನೀರು ಹಾಕುವಾಗ ಬಂಧು ಬಳಗವೆಲ್ಲಾ ಸೇರಿ ಸಡಗರ ಸಂಭ್ರಮವನ್ನು ಆಚರಿಸಿ ಬಂದಂಥಹ ಬಿಗರಿಗೆಲ್ಲಾ ಸಿಹಿ ಊಟವನ್ನು ಹಾಕುತ್ತಾರೆ. ಹುಟ್ಟು, ಸಾವಿನ ಕಾರ್ಯಗಳ ಹಾಗೆಯೇ ಋತುಮತಿ ಕಾರ್ಯವು ಒಂದು ಮುಖ್ಯ ಕಾರ್ಯವಾಗಿದೆ.

೩. ಮದುವೆಯ ನಿರ್ಬಂಧಗಳು

ಪಾರ್ಧಿಯರಲ್ಲಿ ಮದುವೆಗಳಿಂದ ಗಂಡಿನ ಕಡೆಯವರಿಗಿಂತಲೂ ಹೆಣ್ಣಿನ ಕಡೆಯವರಿಗೇ ಗೌರವ ಹೆಚ್ಚು ಇದೆ. ಗಂಡು ವಧುದಕ್ಷಿಣೆ ಕೊಟ್ಟು ನಂತರ ಮದುವೆಯಾಗಬೇಕಿರುವದರಿಂದ ಹೆಣ್ಣುಗಳಿಗೆ ಬೇಡಿಕೆ ಹೆಚ್ಚು. ಒಂದು ಮದುವೆಯಿಂದ ಹೆಣ್ಣಿನ ಕಡೆಯವರಿಗೆ ನಾಲ್ಕೈದು ಸೀರೆ, ಸಾವಿರಾರು ರೂಪಾಯಿ, ಹಣ, ಶರಾಬುಕೊಟ್ಟು ಮದುವೆಯ ಸಂತೋಷವನ್ನು ಹೆಚ್ಚಿಸಲು ಅವಕಾಶವಿರುವದರಿಂದ ಇವರ ಮದುವೆಗಳಲ್ಲಿ ವಿಶೇಷತೆ ಇದೆ. ಅಲ್ಲದೇ ಯಾರಾದರೂ ಮದುವೆಯಾದ ಹೆಣ್ಣನ್ನು ತನ್ನ ಗಂಡನ ಮನೆಯಿಂದ ತವರಿಗೆ ಓಡಿಸಿದರೆ, ಆ ಬಗ್ಗೆ ಆ ಹೆಣ್ಣಿನ ಬಗ್ಗೆ ತಲೆಯೇನು ಕೆಡಿಸಿಕೊಳ್ಳುವುದಿಲ್ಲ. ಕಾರಣ ಆ ಹೆಣ್ಣಿಗೆ ಇನ್ನೊಂದು ಮದುವೆ ಮಾಡಲು ಅವಕಾಶವಿರುವುದರಿಂದ, ಬೇರೆ ಮದುವೆ ಮಾಡುವ ಕಡೆಗೂ ಯೋಚಿಸುತ್ತಿರುತ್ತಾರೆ. ಮದುವೆಯಾದ ಮೇಲೆ ಅತ್ತೆ ಮಾವಂದಿರಿಗೆ ಅಳಿಯನಾದವನು ಸರಿಯಾಗಿ ಹೋಟೆಲ್‌ಗಳಲ್ಲಿ ತಿನ್ನಿಸದಿದ್ದರೆ ಅಂಥವನ್ನಿಂದ ತಮ್ಮ ಮಗಳನ್ನು ಕಿತ್ತುಕೊಳ್ಳುತ್ತಾರೆ. ಅವನಿಗೆ ಪುನಃ ಹೆಂಡತಿ ಬೇಕಾದರೆ ಅವನು ಪುನಃ ಅತ್ತೆ ಮಾವ ಅವರಿಗೆ ಚೆನ್ನಾಗಿ ಕುಡಿಸಿ, ತಿನ್ನಿಸಿ, ಹಣಕೊಟ್ಟು ಹೆಂಡತಿಯನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ ಒಬ್ಬ ಗಂಡು ತಂದೆ ತಾಯಿಗಳನ್ನು ಸರಿಯಾಗಿ ಊಟಕ್ಕೆ ಹಾಕಿ ಸಾಕಿದರೆ ಆತನಿಗೆ ನಾಲ್ಕಾದರು ಹೆಚ್ಚಿನ ಮದುವೆಗಳನ್ನು ಮಾಡುತ್ತಿದ್ದರು. ಈಗ ಅದು ಕಡಿಮೆಯಾಗಿ ಇದಕ್ಕೆ ಒಪ್ಪದಿದ್ದರೆ ಹುಡುಗಿಯ ತಂದೆ ತಾಯಿಗಳು ಅವಳು ಸತ್ತ ಮೇಲೆ ಅವಳ ಹೆಣವನ್ನು ನಿಮ್ಮ ಕೈಲಿ ಕೊಡುವದಿಲ್ಲ ಎಂದು ಹೆದರಿಸುತ್ತಿದ್ದರು. ಒಬ್ಬ ಅಳಿಯ ಹೆಣ್ಣನ್ನು (ತನ್ನ ಹೆಂಡತಿಯನ್ನು) ಉದಾಸೀನ ಮಾಡಿದರೆ ಅದರ ಬಗ್ಗೆ ಹೆಚ್ಚು ಚಿಂತೆಯನ್ನಾಗಲಿ ಅಥವಾ ಅವರನ್ನು ಒಂದು ಮಾಡುವ ಬಗ್ಗೆ ಯಾಗಲಿ ಕುಲಸ್ಥರು ತಲೆಕೆಡಿಸಿಕೊಳ್ಳುವುದಿಲ್ಲ. ಪಾರ್ಧಿಯರಲ್ಲಿಯು ಪಾಶ್ಚಾತ್ಯರಂತೆ ತಮ್ಮ ವೈವಾಹಿಕ ಜೀವನವನ್ನು ಬಲುಬೇಗ ಶಿಥಿಲಗೊಳಿಸಿಕೊಳ್ಳುತ್ತಾರೆಂದರೂ ಅದು ಅತಿಶಯೋಕ್ತಿ ಏನು ಆಗದು. ಇವರಲ್ಲಿಯ ನಿರ್ಬಂಧಗಳು ಈ ಕೆಳಗಿನಂತಿವೆ.

೧. ಗುಜರಾತಿಗಳು ತಮ್ಮ ಒಳಪಂಗಡದಲ್ಲಿ ಮದುವೆಯಾಗುವಂತಿಲ್ಲ. ಆದರೆ ಅವರು [illegible] ಮತ್ತು ಮೇವಾಡೋಗಳ ಮದುವೆಯಾಗಬಹುದು. ಆದರೆ ಪವಾರ್‌ಗಳಲ್ಲಿ ಮದುವೆಯಾಗುವಂತಿಲ್ಲ.

ಗುಜರಾತ್ಯೋಗಳು ಇನ್ನುಳಿದ ಮೂರು ಗುಂಪುಗಳಲ್ಲಿ ಮದುವೆಯಾಗುತ್ತಾರೆ. ಆದರೆ ಕಾಳಿವಾಳೋಗಳು ಉಳಿದ ಮೂರು ಪಂಗಡಗಳಲ್ಲಿ ಯಾರೊಂದಿಗಾದರೂ ಮದುವೆಯಾಗಬಹುದಾಗಿದೆ.

೨. ಒಂದೇ ಬಳಿ(Clan)ಗಳಲ್ಲಿ ರಕ್ತ ಸಂಬಂಧವಿರುವದರಿಂದ ಮದುವೆಯಾಗಲು ಬರುವದಿಲ್ಲ.

ಇತರೇ ಬೇರೆ ಜಾತಿಗಳಲ್ಲಿ ಇರುವಂತೆ ಪಾರ್ಧಿಯರಲ್ಲಿಯೂ ಅನೇಕ ವಿವಾಹ ರೀತಿಗಳಿವೆ ಆ ರೀತಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಅಕ್ಕನ ಮಗನಿಗೆ ಅಣ್ಣನ ಮಗಳನ್ನು ಮದುವೆ ಮಾಡುವ ಪದ್ಧತಿಜಾರಿಯಲ್ಲಿದೆ

೨. ಪವಾರ್ ಗಂಡಿಗೂ ಕಾಳಿವಾಳೋ ಹೆಣ್ಣಿಗೂ ಮದುವೆ ಮಾಡಬಹುದಾಗಿದೆ.

೩. ಗುಜರಾತೋ ಗಂಡಿಗೂ ಮೇವಾಡೋ ಹೆಣ್ಣಿಗೂ ಮದುವೆ ಮಾಡಬಹುದಾಗಿದೆ.

೪. ಪವಾರ್, ಮೇವಾಡೋ ಮತ್ತು ಗುಜರಾತ್ಯೋ ಗಂಡುಗಳಿಗೆ ಕಾಳಿವಾಳೋ ಹೆಣ್ಣಿಗೂ ಮದುವೆ ಮಾಡ ಬಹುದಾಗಿದೆ.

೫. ಕಾಳಿವಾಳೋ ಗಂಡಿಗೂ ಗುಜರಾತ್ಯೋ ಹೆಣ್ಣಿಗೂ ಮದುವೆ ಮಾಡಬಹುದಾಗಿದೆ.

೬. ಗುಜರಾತ್ಯೋ ಗಂಡಿಗೆ ಕಾಳಿವಾಳೋ ಹೆಣ್ಣು ಮದುವೆ ಮಾಡಿಕೊಳ್ಳುವದಾದರೆ ಆ ಅತ್ತೆ ಮೇವಾಡಗೂ ಹಾಗೂ ಪವಾರ್‌ನಿಗೂ ಅತ್ತೆಯಾಗುತ್ತಾಳೆ.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಪಾರ್ಧಿಯರು ತಮ್ಮ ಬೆಡಗಿಗಿಂತ ಭಿನ್ನವಾದ ಬೆಡಗಿನ ಹೆಣ್ಣುಗಳನ್ನು ಮಾತ್ರ ಮದುವೆಯ ಹೆಣ್ಣುಗಳನ್ನಾಗಿ ಆರಿಸಿಕೊಳ್ಳುತ್ತಾರೆ. ಕಡ್ಡಾಯವಾಗಿ ಸ್ವ-ಗೋತ್ರ ವಿವಾಹಗಳು ಇವರಲ್ಲಿ ನಿಷಿದ್ಧ. ಯಾಕೆಂದರೆ ಸ್ವ ಗೋತ್ರದಲ್ಲಿ ವಿವಾಹವಾದರೆ, ಅಲ್ಲಿ ಅಣ್ಣ ತಂಗಿಯರ ಸಂಬಂಧವೇ ಹೆಚ್ಚಿರುತ್ತವೆ. ಪಾರ್ಧಿಯವರಲ್ಲಿ ಮದುವೆಗಳನ್ನು ನಿಯಂತ್ರಿಸುವ ಮತ್ತು ನಿರ್ಣಯಿಸುವ ಶಕ್ತಿ ಬೆಡಗುಗಳಿರುವುದನ್ನು ಕಾಣಬಹುದಾಗಿದೆ. ಈಗಾಗಲೇ ತಿಳಿಸಿರುವ ಹಾಗೆ ಸ್ವ ಜಾತಿಯ ಬೆಡಗಿನಲ್ಲಿ ವಿವಾಹ ನಿಷೇದಿಸಲ್ಪಟ್ಟಿದೆ. ವಿಜಾತಿ ಬೆಡಗುಗಳೊಗಿನ ವಿವಾಹಗಳನ್ನು ಇವರು ಸ್ವಾಗತಿಸುತ್ತಾರೆ. ವಿವಾಹವಾಗುವುದು ಇಂತಹ ಒಂದು ಘಟಕಗಳಲ್ಲಿ ಮಾತ್ರ. ತನ್ನದಲ್ಲದ ಮಹಿಳೆಯೊಬ್ಬ ತನ್ನ ಸಮೂಹಕ್ಕೆ ಪ್ರವೇಶ ಪಡೆಯುತ್ತಾಳಲ್ಲ ಎಂಬ ಆತಂಕದಿಂದ ಇವರು ಅಂತರ್‌ಜಾತಿಯ ವಿವಾಹಗಳನ್ನು ವಿರೋಧಿಸುತ್ತಾರೆ. ಹೀಗಾಗಿ ಯಾವುದೇ ಒಂದು ಬುಡಕಟ್ಟು ಸಮುದಾಯದಲ್ಲಿ ಮೊದಲಿಗೆ ಜಾತಿ ನಂತರ ಅವರ ಬೆಡಗು.

೪. ಮದುವೆಯ ರೀತಿ ರಿವಾಜುಗಳು

ಮದುವೆಗೆ ಮೊದಲು ಮಾತುಕತೆಗಳಾಗಿ ಇಂಥ ಹೆಣ್ಣಿಗೆ ಇಂಥವನೆ ಗಂಡು ಎಂದು ನಿರ್ಧಾರವಾದ ಮೇಲೆಯೇ ಗಂಡಿನ ತಂದೆ ಎದುರಿನಲ್ಲಿ ಖಾತ್ರಿ ಮಾಡಿಕೊಳ್ಳುತ್ತಾರೆ. ಮದುವೆಗೆ ಎರಡೂ ಮನೆಗಳ ಮುಂದೆ ಚಪ್ಪರ ಹಾಕುತ್ತಾರೆ. ಮಾಡಿದ ಸಿಹಿ ಅಡಿಗೆಯನ್ನು ಸೇರಿದ ಹಿರಿಯರೆಲ್ಲರಿಗೂ ಫಲಹಾರ ನೀಡುವಂತೆ ಕೊಡು ತ್ತಾರೆ. ಮದುವೆ ಮಾಡಿಕೊಡುವವರೇ ಮದುವೆಯ ಗಂಡು ಹೆಣ್ಣನ್ನು ನಿಗದಿ ಮಾಡಿರುತ್ತಾರೆ. ಇಂತಹ

ಮಧ್ಯವರ್ತಿಗಳನ್ನು 'ಸಾರಥಿ' ಎಂತಲೂ ಹಾಗೂ 'ಉಪಾದಿ' ಎಂತಲೂ ಕರೆಯುತ್ತಾರೆ. ಈ ಸಾರಥಿಗಳು ಏಳು ಸಲ ದೇವರಿಗೆ ಎರಡೂ ಹೆಬ್ಬೆಟ್ಟುಗಳಿಂದ ಅರಿಷಿಣದ ಬೊಟ್ಟು ಇಡುತ್ತಾರೆ. ಆ ಮೇಲೆ ಎಡಗೈಯಿಂದ ಹೆಣ್ಣಿಗೂ ಮತ್ತು ಬಲಗೈಯಿಂದ ಗಂಡಿಗೂ ಹಣೆಗೆ ಏಳು ಸಲ ಬೊಟ್ಟು ಇಡುತ್ತಾರೆ. ನಂತರ 'ರಿಂಕದಾರ್‌ನಿ' ಎಂದು ಘೋಷಿಸುತ್ತಾರೆ. ಹೀಗೆಂದರೆ 'ದೇವರಿಗೆ ಅರ್ಪಿತವಾದ ಹೆಣ್ಣು ಇವಳು ಇನ್ನೂ ಮೈಲಿಗೆ ಆಗಿಲ್ಲ' ಎಂದರ್ಥ. ಈ ಸಂದರ್ಭದಲ್ಲಿ ಖಾಂಡು (ಕಂಕಣ) ವನ್ನು ಮೂರು ದಿನಗಳವರೆಗೆ ಕಟ್ಟುತ್ತಾರೆ. ಮೂರನೆಯ ದಿವಸದ ಒಂದು ಯಾವುದಾದರೂ ತಟ್ಟೆಯ ಜೊತೆಗೆ ಒಂದು ಕೊಡ ನೀರನ್ನು ಇಟ್ಟುಕೊಂಡಿರುತ್ತಾರೆ. ಮನೆ ಮುಂದೆ ಚಪ್ಪರದ ಕೆಳಗೆ ಮಾಡುವ ಶಾಸ್ತ್ರ ಇದಾಗಿದೆ. ಒಂದು ತಟ್ಟೆಯಲ್ಲಿ ನೀರಿರುತ್ತದೆ. ಬೆಳ್ಳಿ, ಬಂಗಾರ, ತಾಮ್ರದ ಯಾವುದೇ ಬಗೆಯ ಏಳು ಉಂಗುರಗಳನ್ನು ಹಾಕಿ ಯಾರು ಎಷ್ಟು ಮೀನುಗಳನ್ನು ಹಿಡಿಯುತ್ತೀರಿ ನೋಡೋಣವೆಂದು ಸಾರಥಿಗಳು 'ಮೀನಿನ ಆಟ'ವನ್ನು ಆಡಿಸುತ್ತಾರೆ. ಕಂಕಣಕ್ಕೆ ಹಾಕಿದ್ದ ಏಳು ಗಂಟುಗಳನ್ನು ಗಂಡು ಹೆಣ್ಣಿನದನ್ನು, ಹೆಣ್ಣು ಗಂಡಿನದನ್ನು ಬಿಚ್ಚುತ್ತಾ ಈ ಆಟವನ್ನು ಆಡುತ್ತಾರೆ. ಇದರೊಂದಿಗೆ ಮದುವೆಯೆಂಬ ಕಾರ್ಯ ಮುಗಿದಂತಾಗುತ್ತದೆ. ಗಂಡು ಹೆಣ್ಣುಗಳು (ಗಂಡ-ಹೆಂಡತಿ) ಹಿರಿಯರ ಕಾಲಿಗೆ ಬೀಳುತ್ತಾರೆ. ಪಾರ್ಧಿಯಲ್ಲಿ ಗಂಡ ಹೆಂಡತಿಯರ ಹೆಸರು ಕೇಳುವ ಸಂಪ್ರದಾಯ ಇಲ್ಲ. ಒಂದು ವೇಳೆ ಯಾರಾದರೂ ಹೆಸರನ್ನು ಕೇಳಿದರೆ ಹಿರಿಯರ ಕಾಲಿಗೆ ಬೀಳದೆ ಯಾರು ತಮ್ಮ ಗಂಡ ಅಥವಾ ಹೆಂಡತಿಯ ಹೆಸರನ್ನು ಹೇಳುವದಿಲ್ಲ.

ಇವುಗಳ ಜೊತೆಗೆ ಇನ್ನೂ ಕೆಲವು ವಿಶೇಷತೆಗಳೆಂದರೆ, ಲಗ್ನಕ್ಕೆಂದು ಎರಡು ಜೋಡಿ ಕರಿಮಣಿಸರ ಕಟ್ಟುತ್ತಾರೆ. ಆದರೆ ಬದಲಾದ ಇಂದಿನ ದಿನಗಳಲ್ಲಿ ಬಂಗಾರದಿಂದ ಮಾಡಿದ ತಾಳಿಯನ್ನು ಕೂಡಾ ಕಟ್ಟುತ್ತಿದ್ದಾರೆ. ಗಂಡಿನ ಕಡೆಯವರೇ ತಾಳಿಯನ್ನು ತರಬೇಕಾಗುತ್ತದೆ.

ಹಿಂದೆಲ್ಲಾ ಗಂಡಿನ ತಂದೆಯೋ ಇಲ್ಲವೇ ಕುಟುಂಬದ ಯಾರಾದರೂ ಸದಸ್ಯರು ತಾಳಿಯನ್ನು ಕಟ್ಟುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಮದುವೆಯಾಗುವ ಗಂಡೇ ತಾಳಿಯನ್ನು ಕಟ್ಟುತ್ತಾನೆ.

ಗಂಡನಾಗುವವನು ಹೆಂಡತಿಯಾಗುವಳ ಕಾಲಿಗೆ ಕುಂಕುಮದಿಂದ ನಾಲ್ಕು ಪಟ್ಟೆಗಳನ್ನು ಹೊಡೆದಿರುತ್ತಾನೆ. ಗಂಡಿನ ಕೈಲಿ ವೀಳೆದೆಲೆಗಳನ್ನು ಸುತ್ತಿ ಚಾಕುವಿನ ತುದಿಗೆ ನಿಂಬೆ ಹಣ್ಣನ್ನು ಚುಚ್ಚಿ ಗಂಡಿನ ಎಡಗೈಗೆ ಕೊಟ್ಟಿರುತ್ತಾರೆ. ಅದೇ ರೀತಿ ಹೆಣ್ಣಿಗೂ ಸಹ ಕೊಟ್ಟಿರುತ್ತಾರೆ.

ಮದುವೆಯ ೨-೩ ದಿವಸಗಳು ಹೆಣ್ಣು ಮಗಳಿಗೆ ಮತ್ತು ಗಂಡನಾಗುವ ಗಂಡಿಗೆ ಎಣ್ಣೆ ಹಚ್ಚಿ ಬೆಳಿಗ್ಗೆ ಮತ್ತು ಸಾಯಂಕಾಲ ಸ್ನಾನ ಮಾಡಿಸುತ್ತಾರೆ. ಊಟವಾದ ಮೇಲೆ ಗಂಡ ಹೆಂಡಿರಿಬ್ಬರಲ್ಲೂ ಮಮತೆ ಇರಲೆಂದು ಗಂಡಿನ ತಾಂಬೂಲದ ಎಂಜಿಲನ್ನು ಹೆಣ್ಣಿಗೂ, ಹೆಣ್ಣಿನ ತಾಂಬೂಲದ ಎಂಜಿಲನ್ನು ಗಂಡಿಗೂ ಎಲೆಯಲ್ಲಿಟ್ಟು ತಿನ್ನಿಸುತ್ತಾರೆ.

ಗಂಡಿನ ಕಡೆಯವರು ಹೆಣ್ಣಿಗೆ ಕಡೇ ಪಕ್ಷ ಒಂದು ಸಾವಿರ ರೂಪಾಯಿಗಳನ್ನಾದರೂ ವಧುದಕ್ಷಿಣೆ ಎಂದು ಕೊಡಬೇಕಾಗುತ್ತದೆ. ನೆಂಟರಿಷ್ಟರಿಗೆ ಬಟ್ಟೆಗಳನ್ನು ಕೊಡುತ್ತಾರೆ. ಹೆಣ್ಣು ಮಕ್ಕಳಿಗೆ ಬಳೆಗಳನ್ನು ತೊಡಿಸುತ್ತಾರೆ. ಬಂದ ನೆಂಟರು ಹಾಗೂ ಗೆಳೆಯರು ವಧುವರರಿಬ್ಬರಿಗೂ ತಮ್ಮ ಕೈಲಾದಷ್ಟು ಹಣವನ್ನು ಮುಯ್ಯ್ ರೂಪದಲ್ಲಿ ಕೊಡುತ್ತಾರೆ.ಮದುವೆಯಾದ ಮೂರನೆಯ ದಿವಸಕ್ಕೆ ಸೇಂದಿ ಸರಾಯಿಯು ಕುಡಿತ ಮತ್ತು ಮಾಂಸದ ಬಾಡಿ ಊಟವನ್ನು ತಯಾರು ಮಾಡ್ತಾರೆ.

ಇದರ ಮರುದಿನವೇ ಗಂಡು ಮತ್ತು ಹೆಣ್ಣಿನ ಪ್ರಸ್ಥ (ಸೋಬಾನ) ಮಾಡಿಕೊಡುತ್ತಾರೆ. ಒಂದು ವೇಳೆ ಆಗ ಹೆಣ್ಣು ಒಪ್ಪದಿದ್ದಾಗ ಒಂದೆರಡು ದಿನ ಅಥವಾ ಎರಡ್ಮೂರು ತಿಂಗಳುಗಳ ಕಾಲ ಹೆಂಡತಿಗಾಗಿ ಗಂಡನಾದವನು ಅವರ ತಂದೆ ತಾಯಿಗಳೊಂದಿಗೆ ಊರೂರು ಸುತ್ತುತ್ತಾನೆ. ಹೆಣ್ಣು ತನ್ನ ಸ್ವ-ಇಚ್ಛೆಯಿಂದ ಗಂಡಿನ ಜೊತೆ ಸೇರಿಕೊಳ್ಳುವವರೆಗೂ ಈ ಪದ್ಧತಿಯು ಮುಂದುವರೆಯುತ್ತದೆ. ಅಲ್ಲದೆ ತಾಯಿಯು ತನ್ನ ಮಗಳಿಗೆ ಸಂಭೋಗ ಹೇಳಿಕೊಟ್ಟು ಸಾಕಷ್ಟು ಧೈರ್ಯವನ್ನು ತುಂಬುತ್ತಾಳೆ. ಹೆಣ್ಣು ತೀರಾ ಚಿಕ್ಕ ವಯಸ್ಸಿನವಳಾಗಿದ್ದಲ್ಲಿ ಮಾತ್ರ ಈ ರೀತಿಯ ಸಮಸ್ಯೆಗಳು ಉದ್ಭವವಾಗುತ್ತವೆ. ಬೇರೆ ಜಾತಿಯವರಿಗೆ ಹೋಲಿಸಿದಾಗ, ಪಾರ್ಧಿಯರಲ್ಲಿ ಕಂಡು ಬರುವ ವಿಶೇಷತೆಯೇನೆಂದರೆ, ಇವರಲ್ಲಿ ಅಳಿಯನೆನಿಸಿಕೊಂಡವನು ತನ್ನ ಅತ್ತೇ ಮಾವಂದಿರಿಗೆ ಚೆನ್ನಾಗಿ ಕುಡಿಸಿ ತಿನ್ನಿಸಬೇಕಾಗುತ್ತದೆ. ಆಗಲೇ ಅವರು ತಮ್ಮ ಮಗಳಿಗೆ ಒಳ್ಳೇ ಬುದ್ಧಿ ಹೇಳಿಕೊಡುವರು. ಅಳಿಯನೇನಾದರೂ ಈ ರೀತಿ ಮಾಡದಿದ್ದರೆ, ಅತ್ತೆ ಮಾವಂದಿರು ತಮ್ಮ ಮಗಳಿಗೆ ಬೇರೆ ಗಂಡನ್ನು ಹುಡುಕುವ ಸಾಧ್ಯತೆಗಳೂ ಇವೆ. ಎಲ್ಲರೂ ಜವಾಬ್ದಾರಿಯುತವಾಗಿ ವರ್ತಿಸಿದಾಗ ಮಾತ್ರ ಯಾವುದೇ ರೀತಿಯಲ್ಲಿ ಸಮಸ್ಯೆಗಳು ಉದ್ಭವವಾಗದೆ ಇರುತ್ತವೆ. ಇಲ್ಲದಿದ್ದರೆ ಅಷ್ಟೇ ಗಂಡನೊಂದಿಗೆ ಸರಿಯಾಗಿ ಕೂಡಿಕೊಳ್ಳದೆ ಹೆಣ್ಣಿಗೆ, ಗಂಡನ ಮನೆಗೆ ಬೇಗ ಹೋಗದೆ ಬಹಳ ಕಾಲ ತಂದೆ ತಾಯಿಗಳ ಜೊತೆಯಲ್ಲಿ ಇರುವ ಹೆಣ್ಣಿಗೆ ಅಥವಾ ಮೂರು ದಿವಸಕ್ಕೊಮ್ಮೆ ಗಂಡನನ್ನು ಬಿಟ್ಟು ತಂದೆ ತಾಯಿಗಳ ಬಳಿಗೆ ಓಡಿಬರುವ ಹೆಂಡತಿಗೆ ಕುಲದ ಹಿರಿಯರ ಸಮ್ಮುಖದಲ್ಲಿ ಗಂಡನಾದವನೇ ತನ್ನ ಹೆಂಡತಿಯ ಬಟ್ಟೆ ಬಿಚ್ಚಿ ಅಥವಾ ಬಟ್ಟೆಯಿದ್ದಾಗಲೇ ಓತಿಕ್ಯಾತವನ್ನು ಹೆಣ್ಣಿನ ಮೈ ಮೇಲೆ ಬಿಡುತ್ತಿದ್ದನು. ಇದಕ್ಕೆ ಪಾರ್ಧಿಯಲ್ಲಿರುವ ನಂಬಿಕೆ ಏನೆಂದರೆ, ಇದರಿಂದ ಹೆಣ್ಣಿಗೆ (ಹೆಂಡತಿಯಾದವಳಿಗೆ) ಬುದ್ಧಿಬಂದು ಗಂಡನ ಮನೆಯಲ್ಲಿ ನೆಟ್ಟಗೆ ಬಾಳುವೆ ಮಾಡುತ್ತಾಳಂತೆ! ಆದರೆ ಬದಲಾದ ಈ ದಿನಗಳಲ್ಲಿ ಓತಿಕ್ಯಾತನಾಗಲಿ ಅಥವಾ ಇನ್ನಾವುದೇ ಪ್ರಾಣಿಯನ್ನು ಮೈಮೇಲೆ ಬಿಡದೇ, ಪಂಚರ ಸಮ್ಮುಖದಲ್ಲಿ ನ್ಯಾಯ ಬಗೆಹರಿಸುತ್ತಿದ್ದಾರೆ. ಜೊತೆಗೆ ಇತ್ತೀಚೆಗೆ ಹುಡುಗಿಯರು ಸಾಕಷ್ಟು ದೊಡ್ಡವಳಾದ ಮೇಲೆಯೇ ಮದುವೆ ಮಾಡುತ್ತಿರುವದರಿಂದ ಈ ತರಹದ ಸಮಸ್ಯೆಗಳು ಉದ್ಭವವಾಗುತ್ತಿಲ್ಲ.

ಎದುರು ಹೆಣ್ಣು ಅಥವಾ ಎದುರು ಗಂಡು (Mutual Exchange) ತರುವ ಪದ್ಧತಿ ಇವರಲ್ಲಿದೆ.

ಸೀರುಡಿಕೆ ಹಿಂದಿನ ಕಾಲದಲ್ಲಿ ಒಂದು ಹೆಣ್ಣು ಅಥವಾ ಒಬ್ಬ ಗಂಡಸು ಎಷ್ಟು ಬೇಕಾದರೂ ಮದುವೆಯಾಗಬಹುದಿತ್ತು. ಆದರೆ ಇತ್ತೀಚೆಗೆ ಈ ಕೆಟ್ಟ ಪದ್ಧತಿಯು ಕಡಿಮೆಯಾಗುತ್ತಾ ಬರುತ್ತಿದೆ. ಮದುವೆಯ ಶಾಸ್ತ್ರ ಮಾಡಿಸುವುದು ಆ ಮದುವೆ ಆ ಹೆಣ್ಣಿಗೆ ಮೊದಲ ಮದುವೆಯಾಗಿದ್ದಾಗ ಮಾತ್ರ. ಅದು ಲೆಕ್ಕಕ್ಕೆ ಬರುತ್ತದೆ. ಗಂಡಿಗೆ ಈ ತರಹದ ನಿರ್ಬಂಧವೇನೂ ಇಲ್ಲ. ಹೆಣ್ಣಿಗೆ ಎರಡು, ಮೂರು, ನಾಲ್ಕು ಐದನೆಯ ಸಂಬಂಧಗಳನ್ನು ಮದುವೆ ಮಾಡುವುದಿಲ್ಲ. ಆದರೆ ಅದಕ್ಕೆ 'ಸೀರುಡಿಕೆ', 'ಕೂಡಾವಳಿ' ಎಂಬ ಹೆಸರಿನಿಂದ ಕರೆಯುತ್ತಾರೆ.

ಪಾರ್ಧಿಯರಲ್ಲಿ ಒಬ್ಬ ವ್ಯಕ್ತಿಗೆ ಮದುವೆಯಾಗಿದೆ ಎಂದು ನಿರ್ಧರಿಸಲು, ಮದುವೆಯ ಸಂದರ್ಭದಲ್ಲಿ 'ಮಿಶಿ'(ಹಲ್ಲಿಟ್ಟು)ಯನ್ನು ಹಲ್ಲಿಗೆ ತಿಕ್ಕುತ್ತಾರೆ. ಈ ಓಟ್ಟುಹಲ್ಲುಗಳ ಸಂದಿಗೆಲ್ಲಾ ಸೇರಿಕೊಂಡಿರುತ್ತದೆ. ಒಂದು ಹೆಣ್ಣಿಗೆ ಮಿಶಿ ಹಚ್ಚಿದಾರೆಯೇ ಇಲ್ಲವೋ ಎಂದು ನೋಡಿ ಖಾತ್ರಿ ಮಾಡಿಕೊಂಡರೆ ಅವಳನ್ನು ಪುನಃ ಮದುವೆ ಮಾಡಿಕೊಳ್ಳುವದಿಲ್ಲ. ಬದಲಿಗೆ ಸೀರುಡಿಕೆ ಎಂಬ ಕಾರ್ಯವನ್ನು ಮಾಡಿಕೊಳ್ಳುತ್ತಾರೆ. ಇದು ಅವರವರ ಸಂಬಂಧಗಳನ್ನು ಮಡಿಮಾಡಿಕೊಳ್ಳುವ ಎರಡನೇ ದಾರಿಯಾಗಿದೆ. ಇವರಲ್ಲಿ ಒಬ್ಬೊಬ್ಬರೊಬ್ಬರು ಒಪ್ಪಿಕೊಳ್ಳಲು ವಿಧಿ

ವಿಧಾನಗಳು ತುಂಬಾ ಸರಳವಾಗಿವೆ. ಒಬ್ಬ ವ್ಯಕ್ತಿ ವಿಧವೆಯಾಗಿರುವ ತನ್ನ ಅಣ್ಣನ ಹೆಂಡತಿಯನ್ನು ಸೀರುಡಿಕೆ ಮಾಡಿಕೊಳ್ಳಬಹುದಾಗಿದೆ. ಅಣ್ಣ ವಿಧವೆಯಾದ ತಮ್ಮನ ಹೆಂಡತಿಯನ್ನು ಸೀರುಡಿಕೆ ಮಾಡಿಕೊಳ್ಳಬಹುದಾಗಿದೆ.

ವಿಧವೆ ಅಣ್ಣನ ಹೆಂಡತಿಗೆ ಮಕ್ಕಳಿದ್ದರೆ ಆಕೆ ಒಂಟಿಯಾಗಿಯೇ ಉಳಿಯಲು ಇಷ್ಟಪಡುತ್ತಾಳೆ. ಪಾರ್ಧಿಯರಲ್ಲಿ ವಿಧವೆಯಾದ ಹೆಣ್ಣಿನ ತೀರ್ಮಾನಕ್ಕೆ ತುಂಬಾ ಗೌರವವಿದೆ. ಈ ಸಂದರ್ಭದಲ್ಲಿ ಮೈದುನನಿಗೆ ಮದುವೆಯಾಗುವ ಬಿಡುವ ನಿರ್ಣಯ ತಿಳಿಸಲು ಅವಕಾಶ ನೀಡಿರುತ್ತಾರೆ. ವಿಧವೆ ಹೆಣ್ಣು ಇಷ್ಟಪಟ್ಟು ಗಂಡು ಒಪ್ಪದಿದ್ದಲ್ಲಿ ಕುಲಸ್ಥರೆಲ್ಲಾ ಸೇರಿ ಅವನ ಮನ ಒಲಿಸಿ ಅವನಿಗೆ ಒತ್ತಡ ತಂದು ಅವನನ್ನು ಈ ಕೆಲಸಕ್ಕೆ ಒಪ್ಪಿಸುತ್ತಾರೆ.

ಈ ಸೀರುಡಿಕೆ ಸಮಾರಂಭ ವಿಜೃಂಭಣೆಯಿಂದ ಕೂಡಿರದೇ ತುಂಬಾ ಸರಳವಾಗಿರುತ್ತದೆ. ವಿಧವೆ ಹೆಣ್ಣಿಗೆ ಮತ್ತೊಮ್ಮೆ 'ಮಣಿ' (ಹಲ್ಲಿಟ್ಟು) ಹಚ್ಚುತ್ತಾರೆ. ಅವಳು ಎಲೆ ಅಡಿಕೆಯನ್ನು ವಿನಿಮಯ ಮಾಡಿಕೊಳ್ಳುತ್ತಾಳೆ. ಈ ಎಲ್ಲಾ ಕಾರ್ಯಕ್ರಗಳು ಗುಂಪಿನ ಹಿರಿಯ ಸದಸ್ಯ ಅಥವಾ ಯಜಮಾನ ಮತ್ತು ಇನ್ನಿತರ ಹಿರಿಯರ ಮುಂದೆಯೇ ನಡೆಯುತ್ತದೆ. ಇಂಥಹ ಸಂದರ್ಭದಲ್ಲಿ ಒಂದು ಚಿಕ್ಕ ಔತಣವನ್ನೇರ್ಪಡಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಸ್ತ್ರೀಯರು ಪಾಲ್ಗೊಳ್ಳುತ್ತಾರೆಯೇ ಹೊರತು ಪುರುಷರಲ್ಲ. ಏಕೆಂದರೆ ಗಂಡಸರು ಈ ಸೀರುಡಿಕೆಯ ಕಾರ್ಯಕ್ರಮವನ್ನು ಕೀಳುಮಟ್ಟದ್ದು ಎಂದು ಭಾವಿಸುತ್ತಾರೆ. ಈ ಮದುವೆಯಿಂದ ಪಾರ್ಧಿಯ ಹೆಣ್ಣು ಇತರ ಹೆಣ್ಣುಗಳಂತೆಯೇ ಸಮಾನ ಸ್ಥಾನಮಾನವನ್ನು ಹೊಂದಿರುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿಗೆ ಗಂಡನು ಕೇವಲ ೧೫ ರೂಪಾಯಿಗಳನ್ನು ಕೊಡುತ್ತಾನೆ. ವಿಧವೆಗೆ ಮಕ್ಕಳಿದ್ದರೆ, ಅಂಥಹ ಮಕ್ಕಳು ಅಜ್ಜನ ಮನೆ ಅಥವಾ ಚಿಕ್ಕಪ್ಪನ ಮನೆಗಳನ್ನು ಸೇರಿಕೊಳ್ಳುತ್ತಾರಾಗಲಿ, ತನ್ನ ತಾಯಿಯ ಹಿಂದೆ ಹೋಗುವದಿಲ್ಲ. ಆದರೆ ಆ ಸ್ತ್ರೀಯು ನವವಧುವಿನಂತೆಯೇ ಗಂಡನ ಮನೆಗೆ ಹೋಗುತ್ತಾಳೆ. ಗಂಡ ಇದ್ದ ಮಹಿಳೆ ಕೂಡಾ ಸೀರುಡಿಕೆ ಮಾಡಿಕೊಳ್ಳುವ ಪದ್ಧತಿಯು ಇವರಲ್ಲಿದೆ. ಅಷ್ಟೇ ಏಕೆ ಒಬ್ಬ ವಿವಾಹಿತ ಹೆಣ್ಣು ತನಗಿಂತ ಕಿರಿಯ ಅಥವಾ ಹಿರಿಯ ವಯಸ್ಸಿನ ವಿಧುರನ ಜೊತೆ ಸಹ ಸೀರುಡಿಕೆ ಮಾಡಿಕೊಳ್ಳಬಹುದಾಗಿದೆ. ಈ ಸೀರುಡಿಕೆ ಪದ್ಧತಿಯು ಕೇವಲ ಹೆಣ್ಣಿಗೆ ಸಂಬಂಧಿಸಿದ್ದೆ ಹೊರತು ಪುರುಷರಿಗಲ್ಲ.

ಪಟ್‌ಕರ್‌ವಾನಾ ಪಾರ್ಧಿಯರು ಮಾಡುವ ಅನೇಕ ಮದುವೆ ವಿಧಗಳಲ್ಲಿ ಇದೂ ಒಂದು. 'ಪಟ್‌ಕರ್‌ವಾನಾ' ಎಂದರೆ 'ಓಡಿಹೋಗಿ ಮದುವೆಯಾಗುವುದು' ಎಂದರ್ಥ. ಇಲ್ಲಿ ವಯಸ್ಸಿಗೆ ಬಂದ ಗಂಡು ಮತ್ತು ಹೆಣ್ಣು ಇಬ್ಬರೂ ಓಡಿ ಹೋಗಿ ವಿವಾಹವಾಗುತ್ತಾರೆ.

ಇಂಥಹ ಮದುವೆಯನ್ನು ಹಿರಿಯರು ಒಪ್ಪದೇ, ಕುಲದ ಪಂಚ ಹಿರಿಯರನ್ನು ಕೂಡಿಸಿ, ನ್ಯಾಯ ನಿರ್ಣಯ ಮಾಡಿ ಎರಡೂನೂರರಿಂದ ಮೂರುನೂರು ರೂಪಾಯಿಗಳವರೆಗೆ ದಂಡವನ್ನು ವಿಧಿಸುತ್ತಾರೆ. ಇಂಥಹ ಜೋಡಿಯನ್ನು ಕೀಳಾಗಿ ಕಾಣುವವರ ಜೊತೆಗೆ ಸ್ವಲ್ಪ ದಿನ ಯಾರೊಬ್ಬರೂ ಇವರನ್ನು ತಮ್ಮ ಮನೆಗೆ ಕರೆಯುವುದಿಲ್ಲ. ಹೀಗಾಗಿ ಅವರು ತಮ್ಮದೇ ಆದ ಪ್ರತ್ಯೇಕ ಗುಡಿಸಲನ್ನು ಹಾಕಿಕೊಳ್ಳಬೇಕಾಗುತ್ತದೆ. ಇವರ ತಪ್ಪಿನ ಪ್ರಾಯಶ್ಚಿತತೆಯೆನ್ನುವ ಅರ್ಥವನ್ನು ಇವರು ನೆರವೇರಿಸುತ್ತಾರೆ.

ಓಡಿಹೋಗಿ ಮದುವೆಯಾದ ಹೆಣ್ಣು ಮತ್ತು ಗಂಡುಗಳನ್ನು ಸ್ವಲ್ಪ ದಿನಗಳ ಕಾಲ ತಮ್ಮ ಸಿಟ್ಟು ಶಮನವಾದ ಮೇಲೆ ಅವರನ್ನು ಮಾನವೀಯತೆಯಿಂದ ಕಾಣಲು ಮತ್ತು ಮದುವೆಯ ಮೈಲಿಗೆಯನ್ನು ಕಳೆಯಲು

ಒಂದು ಬಾಳೆ ಮರವನ್ನು ಹೆಣ್ಣಿನಂತೆ ಶೃಂಗರಿಸುತ್ತಾರೆ. ಈ ಕಾರ್ಯವನ್ನು ಹೆಣ್ಣು ಮತ್ತು ಗಂಡಿನ ತಂದೆ ತಾಯಿಗಳೆ ನೆರವೇರಿಸುವುದು ಒಂದು ಗಮನಾರ್ಹ ವಿಷಯ. ಇದಾದ ನಂತರ ಆ ಹೆಣ್ಣು ಮತ್ತು ಗಂಡು ಪುನರ್ ವಿವಾಹಕ್ಕೆ ಯೋಗ್ಯರಾಗಿರುತ್ತಾರೆ. ಈ ಪದ್ಧತಿಯು ಅವರಲ್ಲಿ ಅದೆಷ್ಟು ಕಟ್ಟುನಿಟ್ಟು ಎಂದರೆ, ಈ ರೀತಿಯಲ್ಲಿ ಮದುವೆಯಾಗದ ಜೋಡಿಗಳು ಮತ್ತೆ ಇವರ ಕುಲದ ಪದ್ಧತಿಯಂತೆ ಮರು ಮದುವೆಯಾಗದಿದ್ದರೆ ಅಂಥವರಿಗೆ ಯಾವುದೇ ಸ್ಥಾನಮಾನವನ್ನು ಕೊಡುವದಿಲ್ಲ. ಈ ಕಾರಣಕ್ಕಾಗಿ ಎಷ್ಟೋ ಕಡೆ ತಮ್ಮ ತಂದೆ ತಾಯಿಗಳ ಮದುವೆಗೆ ಸ್ವತಃ ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಅಕ್ಷತೆಯನ್ನು ಹಾಕಿದ ಅನೇಕ ಉದಾಹರಣೆಗಳಿವೆ. ಈ ರೀತಿ ಮಾಡುವದರಿಂದಲೇ ಅವರ ದೇವತೆ ತೃಪ್ತಿಪಟ್ಟು ಗಂಡು ಹೆಣ್ಣುಗಳ ದೋಷವನ್ನು ಕಳೆಯುತ್ತಾಳೆಂಬುದು ಅವರ ದೃಢ ನಂಬಿಕೆ. ಹೀಗೆ ಪಲಾಯನಗೈದು ಮದುವೆಯಾದ ಹೆಣ್ಣನ್ನು ಅನೇಕ ಉತ್ತಮ ಸಮಾರಂಭಗಳಿಗೆ ಸೇರಿಸಿಕೊಳ್ಳುವುದಿಲ್ಲ. ಹಾಗೂ ತಮ್ಮ ದೇವತೆಯ ಕುಂಕಮವನ್ನು ಅಂಥಹ ಹೆಣ್ಣು ಮಕ್ಕಳಿಗೆ ಕೊಡುವುದಿಲ್ಲ.

ಇತರೇ ವಿಧದ ಮದುವೆಗಳು ಒಬ್ಬ ಪಾರ್ಧಿ ಗಂಡಸು ತನ್ನ ಹೆಂಡತಿಯು ತೀರಿದಾಗ ಅಥವಾ ಅವಳು ಜೀವಂತ ಇದ್ದಾಗಲೇ ಆಕೆಯ ತಂಗಿಯನ್ನು ಮದುವೆಯಾಗಬಹುದಾಗಿದೆ. (Sarorate and Levirate System) ಈ ಮದುವೆಗೆ ಸ್ವಲ್ಪ ಮಟ್ಟಿನ ವಿರೋಧವಿದ್ದರೂ, ಇದು ನಿಶಿದ್ಧವಂತೆನಲ್ಲ. ಈಗಲೂ ಗಂಡು ತನ್ನ ಹೆಂಡತಿಗೆ ಹೆಚ್ಚಿನ 'ವಧುದಕ್ಷಿಣೆ' ಕೊಡಬೇಕಾಗುತ್ತದೆ. ಈ ತರಹದ ಮದುವೆಯಿಂದ ತನ್ನ ಅಕ್ಕನ ಮಕ್ಕಳನ್ನು ತಂಗಿ ಚೆನ್ನಾಗಿ ನೋಡಿಕೊಳ್ಳುತ್ತಾಳೆ ಎಂದು ಜನರು ನಂಬುತ್ತಾರೆ.

ಪಾರ್ಧಿಯರಲ್ಲಿ ಸೋದರತ್ತೆ ಮತ್ತು ಸೋದರ ಮಾವನ ಸಂಬಂಧಗಳು ಹೆಚ್ಚಾಗಿ ಕಂಡುಬರುತ್ತವೆ. ಸೋದರತ್ತೆಯ ಮಕ್ಕಳು ಸೋದರ ಮಾವನ ಮಕ್ಕಳಿಗೆ ಮದುವೆಯನ್ನು ಏರ್ಪಡಿಸುತ್ತಾರೆ. ಇವರು ಅಪರಿಚಿತರೂ ಅಥವಾ ದೂರದ ಊರಿನವರಿಗಿಂತಲೂ ಹೆಚ್ಚಾಗಿ ಪರಿಚಿತರನ್ನು ಹಾಗೂ ಹತ್ತಿರದ ಬಂಧುಗಳನ್ನೇ ಹೆಚ್ಚಾಗಿ ಮದುವೆಯಾಗಲು ಇಷ್ಟ ಪಡುತ್ತಾರೆ. ಈ ತರಹದ ಸಂಬಂಧಗಳಲ್ಲಿ ವಧು ದಕ್ಷಿಣೆಯು ಅಧಿಕವಾಗಿರುತ್ತದೆ. ಇಲ್ಲಿ ವಧುದಕ್ಷಿಣೆ ಅಥವಾ ವರದಕ್ಷಿಣೆ ಅಧಿಕವಾಗಿದ್ದರೂ ನಮ್ಮ ಹಣ ನಮಗೇ ಸೇರುತ್ತದೆಯೆಂದು ಖುಷಿ ಪಡುವವರಿದ್ದಾರೆ.

ಭಾರತೀಯ ಹಿಂದೂ ಸಂಸ್ಕೃತಿಯಂತೆ ಬಹುತೇಕ ಪಾರ್ಧಿಯರು ಒಂದೇ ಹೆಣ್ಣಿನ ಜೊತೆಗೇ ಮತ್ತೊಂದು ಮದುವೆ ಏನಾದರೂ ಆದರೆ, ಮೊದಲಿನ ಹೆಂಡತಿ ಇವನ ಜೊತೆ ಇರಲು ಇಷ್ಟ ಪಡುವುದಿಲ್ಲ. ಬದಲಿಗೆ ಜಗಳ ಮಾಡಿಕೊಂಡು ತಾನು ಬೇರೆಯಾಗಿ ಇದ್ದು ಬಿಡುತ್ತಾಳೆ. ಇದಕ್ಕೆ ವಿರುದ್ಧವಾಗಿ ಕೆಲವು ಗಂಡಸರು ೫-೬ ಜನ ಉಪ ಪತ್ನಿಯರನ್ನು ಕಟ್ಟಿಕೊಂಡು ಸುಖವಾಗಿರುವ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ.

ಇಂದಿನ ದಿನಗಳಲ್ಲಿ ಅರಣ್ಯ ನೀತಿಯು ತುಂಬಾ ಬಿಗಿಯಾಗಿದ್ದು, ಪಾರ್ಧಿಯರಿಗೆ ಹಿಂದಿನಂತೆ ಬೇಟೆಯಾಡಲು ವಿಫುಲ ಅವಕಾಶಗಳು ಇಲ್ಲದಿದ್ದರೂ, ಅಧಿಕವಾಗಿ ಬೇಟೆಯಾಡುವ ಮತ್ತು ವ್ಯಾಪಾರದಲ್ಲಿ ಅಧಿಕವಾಗಿ ಹಣ ಗಳಿಸುವ ಗಂಡಸರು ಒಬ್ಬರಿಗಿಂತ ಹೆಚ್ಚು ಹೆಂಡಿರನ್ನು ಹೊಂದಿರುವುದು ಕಂಡುಬಂತು. ಒಬ್ಬರಿಗಿಂತ ಹೆಚ್ಚು ಹೆಣ್ಣುಗಳನ್ನು ಮದುವೆಯಾದ ಗಂಡಸು ತನ್ನ ಮೊದಲ ಪತ್ನಿಯಂತೆ ಇತರರಿಗೂ ಸಮಾನವಾದ ಸ್ಥಾನಮಾನ ಕೊಟ್ಟು, ಅವರಿಗೆಲ್ಲಾ ಪ್ರತ್ಯೇಕವಾಗಿ ಮನೆಗಳನ್ನು ಮಾಡಿ ಇಟ್ಟಿದ್ದಾನೆ. ಇನ್ನೂ ಕೆಲವು ಕಡೆ ಪಾರ್ಧಿ ಪುರುಷರು

ಅಂತರ್‌ಜಾತಿ ಮಹಿಳೆಯರನ್ನು ಮಾಡಿಕೊಂಡು ಅವರೆಲ್ಲಾ ಒಂದೇ ಕಡೆ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ನಾಲ್ಕೈದು ಹೆಂಡಿರನ್ನು ಮಾಡಿಕೊಂಡ ಪುರುಷರು ನಾಲ್ಕೈದು ದಿನವೂ ಒಬ್ಬೊಬ್ಬ ಹೆಂಡತಿಯ ಮನೆಯಲ್ಲಿ ಮಲಗುತ್ತಾನೆ. ಹಿರಿಯ ಹೆಂಡತಿಗೆ ಇನ್ನುಳಿದ (ಚಿಕ್ಕ ಎರಡು, ಮತ್ತು ಮೂರನೆಯ) ಹೆಂಡಿರು ಸಹಾಯಕಿಯಾಗಿ ತಮ್ಮ ಅತ್ತೆ ಮಾವಂದಿರಿಗೂ ಸರಿಯಾಗಿ ನೋಡಿಕೊಳ್ಳುತ್ತಾರೆ.

ಅನೈತಿಕ ಸಂಬಂಧ : ಪಾರ್ಧಿಯರಲ್ಲಿ ಅನೈತಿಕ ಸಂಬಂಧಗಳಿಗೆ ಅವಕಾಶವಿರುವುದಿಲ್ಲ. ಒಂದು ವೇಳೆ ಹಾಗೇನಾದರೂ ಯಾರಾದರೂ ಈ ರೀತಿಯ ಚಟುವಟಿಕೆಯಲ್ಲಿ ತೊಡಗಿದ್ದರೆ ಆ ಕೂಡಲೇ ತಮ್ಮ ತಪ್ಪನ್ನು ತಮ್ಮ ಕುಲದೇವತೆಯ ಮುಂದೆ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಮನೆಯಲ್ಲಿ ಇಲ್ಲದ ತೊಂದರೆಯಾಗುವುದರ ಜೊತೆಗೆ ಇನ್ನೂ ಹೆಚ್ಚಿನ ಅನಾಹುತಗಳು ಆಗುತ್ತವೆ ಎಂದು ಇವರು ನಂಬುತ್ತಾರೆ. ಮದುವೆಗೆ ಮುನ್ನ ಹುಡುಗ ಮತ್ತು ಹುಡುಗಿ ನೈತಿಕವಾಗಿ ಸರಿಯಾಗಿರಬೇಕು. ಕೆಟ್ಟ ನಡವಳಿಕೆಗಳನ್ನು ಕುಲಸ್ಥರು ವಿರೋಧಿಸುತ್ತಾರೆ. ಹಾಗೂ ನೂರರಿಂದ ಇನ್ನೂರು ರೂಪಾಯಿಗಳವರೆಗೆ ದಂಡವನ್ನು ಹಾಕುತ್ತಾರೆ. ಇವರಲ್ಲಿ ಯಾರೂ ಒಂದೇ ಗೋತ್ರದಲ್ಲಿ ಮದುವೆ ಆಗುವ ಹಾಗಿಲ್ಲ. ಒಂದು ವೇಳೆ ಹಾಗಾದರೆ ಅಂಥವರನ್ನು ದಂಡ ಹಾಕುತ್ತಾರೆ. ಹುಡುಗಿಯರನ್ನು ಯಾರಾದರೂ ಬಸುರು ಮಾಡಿಬಿಟ್ಟರೆ (ಬಸುರು ಮಾಡಿರುವಂತ ವ್ಯಕ್ತಿ ತಮ್ಮ ಜಾತಿಯವನಾಗಿರಬಹುದು ಅಥವಾ ಬೇರೆ ಜಾತಿಯವನಾಗಿರಬಹುದು) ಕುಲಸ್ಥರೆಲ್ಲಾ ಸೇರಿ ಅವನಿಗೆ ಮದುವೆ ಮಾಡಿಕೊಳ್ಳುವಂತೆ ಹೇಳುತ್ತಾರೆ.

'ಪತ್' ಎನ್ನುವ ಒಂದು ಬಗೆಯ ಔಪಚಾರಿಕ ಕಾರ್ಯಕ್ರಮ ಮಾಡಿ ಇಬ್ಬರಿಗೂ ಮದುವೆ ಮಾಡಿಸುತ್ತಾರೆ. ಇವರಿಂದ ದಂಡದ ರೂಪದಲ್ಲಿ ಪಡೆದ ಹಣವನ್ನು ಎಲ್ಲರೂ ಸೇರಿ ಸೇಂದಿ ಸರಾಯಿ ಕುಡಿದು ಸಂತೋಷಪಡುತ್ತಾರೆ.

ವಿಚ್ಛೇದನೆ ವಿವಾಹ ವಿಚ್ಛೇದನೆ ಎಂಬುದು ಇಂದಿನ ಬಹುತೇಕ ಎಲ್ಲಾ ಜಾತಿ ಮತ್ತು ಜನಾಂಗಗಳಲ್ಲಿ ಬಹಳಷ್ಟು ಸಾಮಾನ್ಯವಾಗಿದೆ. ಆದರೆ ಪಾರ್ಧಿಯರಲ್ಲಿ ವಿವಾಹ ವಿಚ್ಛೇದನೆ ಎಂಬುದು ಪಾಶ್ಚಾತ್ಯರಷ್ಟೇ ಸಾಮಾನ್ಯವಾಗಿದೆ. ಮತ್ತು ಅವರಷ್ಟೇ ಸರಳವಾಗಿದೆ. ಈ ಬುಡಕಟ್ಟು ತೀರಾ ಮುಂಗೋಪಿಯಾಗಿರುವುದರಿಂದ ತಮ್ಮ ಕೋಪದಷ್ಟೇ ಬೇಗ ತಮ್ಮ ಹೆಂಡಿರನ್ನು ಹೊರಗೆ ಹಾಕುತ್ತಾರೆ. ಹೆಂಗಸರೂ ಸಹ ಅಷ್ಟೇ ಕೋಪಿಷ್ಟ ರಾಗಿರುವುದರಿಂದ ಅವರೂ ಸಹ ಅಷ್ಟೇ ದಿಢೀರನೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಸಣ್ಣ ಪುಟ್ಟ ಜಗಳಗಳಿಂದ ಹಿಡಿದು ಎಷ್ಟೋ ಸಲ ಕಾರಣವೇ ಇಲ್ಲದ ಕ್ಷುಲ್ಲಕ ವಿಷಯಗಳಿಗೂ ವಿಚ್ಛೇದನೆಗಳಿಗೆ ಅನೇಕ ಕಾರಣಗಳುಂಟು. ಹೆಣ್ಣು ಗರ್ಭಧರಿಸದೇ ಬಂಜೆಯಾಗಿರುವದರಿಂದ, ಗಂಡನಾದವನು ತನ್ನ ಪುರುಷತ್ವ ಕಳೆದು ಕೊಂಡು ಷಂಡನಾದರೆ, ಗಂಡ ಹೆಂಡಿರಿಬ್ಬರಲ್ಲಿ ಯಾರಾದರೂ ಒಬ್ಬರ ಚಾರಿತ್ರ್ಯ ಒಳ್ಳೆಯದಿಲ್ಲದಿದ್ದರೆ ಅಥವಾ ಇಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಭೀಕರ ಕಾಯಿಲೆಯಿರುವುದರಿಂದ, ಈ ರೀತಿಯಾಗಿ ಅನೇಕ ರೀತಿಯ ಕಾರಣಗಳನ್ನು ಮುಂದೊಡ್ಡಿ ವಿವಾಹ ವಿಚ್ಛೇಧನೆಗಳು ಆಗುತ್ತವೆ. ಇಂಥಹ ಸಂದರ್ಭಗಳಲ್ಲಿ ಸಮಾಜದ ಹಿರಿಯರು ವಿಚ್ಛೇದನೆಯನ್ನು ಘೋಷಿಸುತ್ತಾರೆ. ಗಂಡಸು ಹೆಂಗಸು ಎರಡೂ ಕಡೆಯವರು ಸೇರಿ ಪಂಚರ ಸಮ್ಮುಖದಲ್ಲಿ ವಾದ ಪ್ರತಿವಾದಗಳು ನಡೆದು ಪಂಚಾಯ್ತಿ ನಡೆದು ವಿಚ್ಛೇಧನೆಯನ್ನು ನಿರ್ಧರಿಸುತ್ತಾರೆ. ಅಷ್ಟೇ ಅಲ್ಲದೇ ವಿಚ್ಛೇಧನೆ ಪಡೆದ ಹೆಣ್ಣಾಗಲಿ ಅಥವಾ ಗಂಡಾಗಲಿ ಪುನಃ ಮದುವೆಯಾಗುವಂತೆ ಅವಕಾಶ ಮಾಡಿಕೊಡುತ್ತಾರೆ.

ಸಾಮಾನ್ಯವಾಗಿ ಗಂಡಸು ವಿಚ್ಛೇಧನೆ ಮಾಡಿದಾಗ ತಾನು ಕೊಟ್ಟಿದ್ದ ವಧು ದಕ್ಷಿಣೆಯನ್ನು ಹಿಂದಿರುಗಿ

ಕೇಳುವಂತಿಲ್ಲ. ಮತ್ತು ಮಕ್ಕಳು ತಂದೆಯ ಕಡೆಗೆ ಹೋಗುತ್ತಾರೆ. ಈ ತರಹದ ವಿಚ್ಛೇಧನೆಗೆ ಹಲವು ಕಾರಣಗಳಿರುತ್ತವೆ. ಮೂಲತಃ ಜಗಳಗಂಟಿಯಾದ ಹೆಂಡತಿ, ಬಾಯಿಗೆ ಬಂದ ಹಾಗೆ ಬೈಯುವ ಅತ್ತೆ ಮಾವಂದಿರು, ಕುಡಿದು ಬಂದು ಹೊಡೆಯುವ ಗಂಡ ಈ ಎಲ್ಲಾ ಕಾರಣಗಳಿಂದ ವಿಚ್ಛೇದನಕ್ಕೆ ಮನಸ್ಸು ಮಾಡುತ್ತಾರೆ. ಗಂಡ ಹೆಂಡತಿ ಒಬ್ಬರಿಗೊಬ್ಬರು ಅಸಡ್ಡೆ ಮಾಡುವುದು, ಬೇಟೆಯಾಡಿ ಬಂದ ಗಂಡನಿಗೆ ಸರಿಯಾಗಿ ನೋಡಿಕೊಳ್ಳದೇ ಇರುವುದು, ಮನೆಗೆ ಸರಿಯಾದ ಖರ್ಚು ವೆಚ್ಚವನ್ನು ಗಂಡನು ಕೊಡದಿದ್ದರೆ ಇಂಥಹ ಸಂದರ್ಭಗಳಲ್ಲೂ ವಿವಾಹ ವಿಚ್ಛೇದನೆಗಳು ಆಗುತ್ತವೆ. ಹೆಂಡತಿ ಯಾವಾಗಲೂ ಸಾಮಾಜಿಕ ಮತ್ತು ಆರ್ಥಿಕ ರಕ್ಷಣೆಯನ್ನು ತನ್ನ ಗಂಡನಿಂದ ಬಯಸುತ್ತಾಳೆ. ಗಂಡ ಪರಸ್ತ್ರೀಯರಲ್ಲಿ ಅನುರಕ್ತನಾಗಿದ್ದರೆ, ಅಥವಾ ಹೆಂಡತಿ ಕುರೂಪಿ, ಅವಲಕ್ಷಣದ್ದಂತಹ ಸಂದರ್ಭದಲ್ಲಿಯೂ ಅನೇಕ ವಿವಾಹ ವಿಚ್ಛೇದನೆಗಳು ಆಗಿರುವುದು ಕಂಡು ಬರುತ್ತವೆ.

ಬಂಧುತ್ವ (Kinship): ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಬಂಧುತ್ವವನ್ನು ವಿವರಿಸಬೇಕೆಂದರೆ, ಎಲ್ಲಾ ಸಮಾಜಗಳಲ್ಲಿಯೂ ಜನರ ಗುಂಪುಗಳು ಅನೇಕ ಬಗೆಯ ಬಂಧನಗಳಿಂದ ಬೆಸೆಯಲ್ಪಟ್ಟಿರುತ್ತವೆ. ಈ ರೀತಿಯ ಬಂಧನಗಳಲ್ಲಿ ಅತಿ ಮುಖ್ಯವಾದದ್ದು, ಸರ್ವೇಸಾಮಾನ್ಯವಾದದ್ದು, ಮೂಲಭೂತವಾದದ್ದು, ಸಂತಾನೋತ್ಪತ್ತಿಯ ಪ್ರವೃತ್ತಿಯ ಆಧಾರದ ಮೇಲೆ ರಚಿತವಾದುದು. ಸಂತಾನೋತ್ಪತ್ತಿಯ ಪ್ರವೃತ್ತಿ ಎರಡು ಬಗೆಯ ಬಂಧನಗಳಿಗೆ ಎಡೆ ಮಾಡಿಕೊಡುತ್ತದೆ. ಮೊದಲನೆಯದು ವೈವಾಹಿಕ ಬಂಧುತ್ವ. ಇದರಲ್ಲಿ ರಕ್ತ ಸಂಬಂಧವಿಲ್ಲ. ಉದಾಹರಣೆಗೆ ಸತಿಪತಿಯರ ಸಂಬಂಧ. ಈ ಸಂಬಂಧಕ್ಕೆ ಸಮಾಜದ ಅಂಗೀಕಾರ ಅಥವಾ ಕಾನೂನಿನ ಒಪ್ಪಿಗೆ ಮುಖ್ಯ. ಎರಡನೆಯದು ರಕ್ತ ಸಂಬಂಧ. ಒಬ್ಬ ವ್ಯಕ್ತಿಯೂ ಇನ್ನೊಬ್ಬ ವ್ಯಕ್ತಿಗೆ ನೇರವಾಗಿ ಸಂಬಂಧಿಸಿದ್ದರೆ ಅದನ್ನು ಪ್ರಾಥಮಿಕ ಸಂಬಂಧವೆಂದೂ ಆ ವ್ಯಕ್ತಿಯನ್ನು ಪ್ರಾಥಮಿಕ ಸಂಬಂಧಿಯೆಂದೂ ಕರೆಯುತ್ತಾರೆ. ತಂದೆಯು ತನ್ನ ಮಗನಿಗೆ ಪ್ರಾಥಮಿಕ ಸಂಬಂಧಿ. ಹಾಗೆಯೇ ತಂದೆಯ ಸೋದರನು ದ್ವಿತಿಯ ಸಂಬಂಧಿ. ವೈವಾಹಿಕ ಬಂಧುತ್ವದಲ್ಲಿ ಪತಿಗೆ ಪತ್ನಿಯು ಪ್ರಾಥಮಿಕ ಸಂಬಂಧಿ ಪತ್ನಿಯ ಸಹೋದರನು ದ್ವಿತೀಯ ಸಂಬಂಧಿ.

ಆದಿವಾಸಿ ಬುಡಕಟ್ಟು ಜನರಲ್ಲಿ ಬಂಧುಬಳಗಗಳ ಬಂಧನ ಅತಿಯೇ ಎನ್ನಬಹುದು. ಒಂಟಿಜೀವನ ನಡೆಸುವ ವ್ಯಕ್ತಿ ಅತಿವಿರಳ. ಬಂಧುಬಳಗಗಳ ದೊಡ್ಡ ಗುಂಪುಗಳು ಒಟ್ಟಾಗಿ ಜೀವಿಸುವಾಗಲೇ ಅವರ ಜೀವನಕ್ಕೆ ಭದ್ರತೆ, ರಕ್ಷಣೆ ದೊರೆಯುತ್ತದೆ. ನಾಗರಿಕರಿಗೆ ಒಂದು ರೀತಿಯಲ್ಲಿ ಒಂಟಿಜೀವನ ಸಾಗಿಸಲು ಸಾಧ್ಯವಿದೆ. ತನಗೆ ಅವಶ್ಯಕವಾದ ನೆರವನ್ನು ವೈದ್ಯಶಾಲೆ, ಪೋಲಿಸು, ನ್ಯಾಯಾಲಯ, ಧರ್ಮಸಂಸ್ಥೆ, ಸಂಘಗಳು, ವಿಮಾಕಂಪನಿ ಮುಂತಾದವುಗಳಿಂದ ಪಡೆಯಬಹುದು. ಆದ್ದರಿಂದ ನಾಗರಿಕನಿಗೆ ಬಂಧುಗಳ ಅವಶ್ಯಕತೆ ಅಷ್ಟಾಗಿ ತೋರುವುದಿಲ್ಲ. ಆದರೆ ಈ ಸೌಕರ್ಯ, ಸೌಲಭ್ಯಗಳು ಆದಿವಾಸಿಗಳಲ್ಲಿರುವುದಿಲ್ಲ. ಒಂದಲ್ಲ ಒಂದು ಅಗತ್ಯವನ್ನು ಪೂರೈಸಿಕೊಳ್ಳಬೇಕಾದರೆ ಆತನು ತನ್ನ ಬಂಧುಗಳನ್ನೇ ಮರೆಹೋಗಬೇಕು. ಆತನಿಗೆ ಬಂಧುಗಳಿಲ್ಲದ ಜೀವನ ಬರಡು ಜೀವನ, ಬರಿದಾದ ಜೀವನ. ಒಂಟಿಬಾಳು ಅಸಹನೀಯವಾದುದು. ಆತನನ್ನು ಬಂಧುಬಳಗದ ಗುಂಪಿನಿಂದ ಬೇರ್ಪಡಿಸಿದರೆ ಅದೇ ಆತನಿಗೆ ಕಠಿಣ ಶಿಕ್ಷೆಯೆನ್ನಬೇಕು. ಗಂಡಾಂತರಗಳು ಒದಗಿದಾಗ, ಕೇಡುಗಳು ಸಂಭವಿಸಿದಾಗ, ಜನನ ಮರಣ ಕಾಲದಲ್ಲಿ ಆತನು ತನ್ನ ಬಂಧುಗಳ ಆಸರೆಯನ್ನು ಕೋರುತ್ತಾನೆ. ಆದ್ದರಿಂದ ಆದಿವಾಸಿ ಜನರು ತಮ್ಮ ಜೀವನದುದ್ದಕ್ಕೂ ಬಂಧುತ್ವದ ನೆರವನ್ನು ಪಡೆಯುತ್ತಾನೆ. ಹೀಗಾಗಿ ಬಂಧುತ್ವ ಎಂಬುದು ಒಂದು ಸಂಸ್ಥೆಯಿದ್ದಂತೆ.

ಪಾಲಿನೇಶಿಯಾದ ಒಂದು ಬುಡಕಟ್ಟು ಸಮುದಾಯದಲ್ಲಿ ಒಬ್ಬ ಪುರುಷ ತನ್ನ ನಂತರದ ಆಸ್ತಿಗೆ ವಾರಸುದಾರರಾರೂ ಇಲ್ಲದ ಪ್ರಸಂಗ ಒದಗಿದಾಗ ತನ್ನ ಬಂಧುಗಳ ಹುಡುಗನನ್ನು ದತ್ತು ತೆಗೆದುಕೊಳ್ಳಲು ಇಚ್ಛಿಸುತ್ತಾನೆ. ಆಗ ದತ್ತುಪುತ್ರರ ಆ ದತ್ತು ತಂದೆಯ ವಿಶಿಷ್ಟ ಹಕ್ಕು ಬಾಧ್ಯತೆಗಳಲ್ಲಿ ಪಾಲುದಾರನಾಗುತ್ತಾನೆ. ಇದರಿಂದ ಸಾಮಾನ್ಯ ಹುಡುಗನೊಬ್ಬನು ಉತ್ತಮ ಸ್ಥಾನವನ್ನು ಪಡೆಯುತ್ತಾನೆ. ಇದೆ ರೀತಿಯಲ್ಲಿ ಟೆಂಗೊ ಎಂಬ ಬುಡಕಟ್ಟು ಸಮುದಾಯದ ಸ್ತ್ರೀಯು ತನ್ನ ಕಿರಿಯ ಸಹೋದರನನ್ನೇ ತನ್ನ ಆಸ್ತಿಯ ಹಕ್ಕುದಾರನನ್ನಾಗಿ ಮಾಡಿ ಕೊಳ್ಳುತ್ತಾಳೆ. ಭಾರತದಲ್ಲಿ ತಂದೆ ಮಕ್ಕಳ ಬಾಂಧವ್ಯ ಹೇಗೆ ಉನ್ನತವಾದುದೋ ಅಂತೆಯೇ ರಕ್ತಸಂಬಂಧಿಗಳಲ್ಲಿಯೇ ದತ್ತುತೆಗೆದುಕೊಂಡು ಮಕ್ಕಳು ಉನ್ನತಸ್ಥಾನ ಪಡೆಯಲು ಸಾಧ್ಯವಾಗುತ್ತದೆ.

ಹಿಂದೆ ಯುಗೋಸ್ಲಾವಿಯಾದಲ್ಲಿ ವಿಚಿತ್ರ ರೀತಿಯ ದತ್ತು ಸ್ವೀಕಾರ ಪದ್ಧತಿಯು ರೂಢಿಯಲ್ಲಿತ್ತು. ಬ್ಯಾಸಿಲಸ್ ಚಕ್ರವರ್ತಿ ಒಬ್ಬ ಹುಡುಗನನ್ನು ದತ್ತು ತೆಗೆದುಕೊಳ್ಳುವಾಗ ತನ್ನ ಮತ್ತು ಆತನ ಕೈಯನ್ನು ಸ್ವಲ್ಪ ಕೊಯ್ದು, ರಕ್ತವನ್ನು ಪಾತ್ರೆಯಲ್ಲಿ ಹಾಕಿ ಮಿಶ್ರಮಾಡಿ ಇಬ್ಬರೂ ಕುಡಿದು ಬಂಧುತ್ವವನ್ನುಂಟು ಮಾಡಿ ಕೊಂಡಿದ್ದರಂತೆ!

'ಬಂಧುತ್ವ' ಎಂಬ ಪದಪ್ರಯೋಗವು ಸಮಾಜವಿನ್ಯಾಸ ಆಚರಣೆ ಮತ್ತು ವರ್ತನೆಗಳನ್ನು ಅನುಸರಿಸುತ್ತದೆ. ಬಂಧುತ್ವವನ್ನು ಒಂದು ಸಂಸ್ಥೆಯೆಂದು ಪರಿಗಣಿಸಿದಾಗ ಸಂಪ್ರದಾಯಗಳು ಪರಸ್ಪರಾವಲಂಬಿಗಳಾಗಿ ಆವರಿಸಲ್ಪಟ್ಟಿರುತ್ತದೆ. ಯಾವುದೇ ಬಾಂಧವ್ಯರಲ್ಲಿ ಸಂಪ್ರದಾಯಗಳನ್ನು ಗ್ರಹಿಸಬೇಕಾದರೆ ಅವುಗಳನ್ನು ಬೇರೆಯವರ ಸಂಪ್ರದಾಯಗಳಿಗೆ ಹೋಲಿಸಬೇಕು.

ಈ ರೀತಿಯಾಗಿ ಒಂದು ಕುಟುಂಬ, ಇಲ್ಲವೇ ಅವಿಭಕ್ತ ಕುಟುಂಬ ಹಾಗೂ ಕುಲ ಮುಂತಾದ ಬಂಧುತ್ವದ ಗುಂಪುಗಳಲ್ಲಿ ವ್ಯಕ್ತಿಗಳ ಮಧ್ಯೆ ನಡುವಳಿಕೆಗಳು ನಿರ್ಧಿಷ್ಟವಾಗಿ ಶಾಶ್ವತವಾಗಿ ವ್ಯವಸ್ಥೆಗೊಳಿಸಲ್ಪಟ್ಟಿರುತ್ತವೆ. ಒಂದು ಗುಂಪಿಗೆ ಸೇರಿದ ವ್ಯಕ್ತಿಗಳು ಒಬ್ಬರನ್ನೊಬ್ಬರು ಯಾವ ರೀತಿ ಸಂಭೋದಿಸಬೇಕು, ಯಾವ ರೀತಿ ವರ್ತಿಸಬೇಕು ಎನ್ನುವ ಬಗ್ಗೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಇವುಗಳನ್ನು ಬಂಧುತ್ವದ ಬಳಕೆಗಳನ್ನು ಆದಿವಾಸಿ ಸಮಾಜಗಳಲ್ಲಿ ಕಾಣುತ್ತೇವೆ. ಅವುಗಳಲ್ಲಿ ಬಹಳ ಮುಖ್ಯವಾದುವೆಂದರೆ, ದೂರವಿಡುವಿಕೆ (avoidance), ವಿನೋದ ಸಂಬಂಧಗಳು ಮಾನವಶಾಸ್ತ್ರದ ಪ್ರಕಾರ ವಿಶ್ವದ ಅನೇಕ ಭಾಗಗಳಲ್ಲಿ ವಾಸಿಸುವ ಅನೇಕ ಆದಿವಾಸಿ ಸಮಾಜಗಳಲ್ಲಿ ಬಂಧುತ್ವ ವಿವಿಧ ರೀತಿಗಳನ್ನು ಕಾಣಬಹುದು. ಸಾಮಾಜಿಕವಾಗಿ ಬಂಧುತ್ವ, ವಯಸ್ಸು, ಲಿಂಗ, ಜಾತಿ ಇತ್ಯಾದಿಗಳನ್ನು ಕಾಣಬಹುದು. ಸಾಮಾಜದಲ್ಲಿ ರಕ್ತಸಂಬಂಧಗಳು ವಿಸ್ತಾರವಾಗಿ ಹರಡಿ ಕೊಂಡಿರುವದಲ್ಲದೆ ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ಅನುಸರಿಸುತ್ತವೆ. ಆಫ್ರಿಕಾದ ಬಹುಭಾಗಗಳಲ್ಲಿ ಕಾನೂನಿನ ಪ್ರಕಾರ ಅಗತ್ಯವಾದ ಆಸ್ತಿಯನ್ನು ರೂಢಿಸಿಕೊಳ್ಳುವ ವಿವಾಹಿತ ಪುರುಷನು ಮಾತ್ರ ಮಗುವಿಗೆ ತಂದೆಯಾಗುವನೇ ಹೊರತು ಅದಕ್ಕೆ ಜನ್ಮ ವಿತ್ತಮಾತ್ರಕ್ಕೆ ತಂದೆಯೆನಿಸಿಕೊಳ್ಳುವುದಿಲ್ಲ. ಭಾರತದ ಬಗ್ಗೆ ಒಂದು ಉದಾಹರಣೆ ಕೊಡುವುದಾದರೆ ಒಬ್ಬ ವ್ಯಕ್ತಿ, ತನಗೆ ಮಗನಿಲ್ಲದ ಪಕ್ಷದಲ್ಲಿ ತನ್ನ ಬಂಧುಗಳಲ್ಲಿ ಒಬ್ಬ ಹುಡುಗನನ್ನು ದತ್ತುವಾಗಿ ಸ್ವೀಕರಿಸಿ, ಕಾನೂನು ಪ್ರಕಾರ ತಂದೆಯಾಗುತ್ತಾನೆ.

ಹಾಗೆ ಪ್ರಪಂಚದ ಹಲವಾರು ದೇಶಗಳಲ್ಲಿ ತಂದೆಯ ಹೆಸರು ಮಕ್ಕಳಿಗೆ ಉಪನಾಮವಾಗಿ ಬರುತ್ತದೆ.

ಅದೇ ರೀತಿ ಆಸ್ತಿಯೂ ಸಹ ತಂದೆಯಿಂದ ಮಕ್ಕಳಿಗೆ ವರ್ಗಾಯಿಸಲ್ಪಡುತ್ತದೆ. ಆದರೆ ಉತ್ತರ ಆಲ್ಬೇನಿಯಾದಲ್ಲಿ ಕಂಡುಬರುವ ಒಂದು ವಿಚಿತ್ರ ಸಂಪ್ರದಾಯವೆಂದರೆ ಮಕ್ಕಳು ತಮ್ಮ ಸೋದರಮಾವ ಅಥವಾ ಸೋದರತ್ತೆಯ ಹೆಸರನ್ನು ಉಪನಾಮವಾಗಿ ಬಳಸುತ್ತಾರೆ. ಬಂಧುತ್ವದಲ್ಲಿ ಮೇಲುಕೀಳು ಭಾವನೆಗಳಿರುವುದಿಲ್ಲ. ಆದರೆ ಬಂಧುತ್ವ ಉನ್ನತ ಸ್ಥಾನಮಾನಗಳಿಸಬಹುದು. ಉದಾಹರಣೆಗೆ ಟಿಬೆಟಿನಲ್ಲಿ ದಲೈಲಾಮಾ ಚುನಾವಣಾಯ ನಂತರ ಆತನ ಕುಟುಂಬದ ಕುಡಿಗಳೇ ಉನ್ನತ ಸ್ಥಾನವನ್ನುಗಳಿಸಿದ್ದು ಈಗ ಇತಿಹಾಸ.

ದೂರವಿಡುವಿಕೆ (Avoidance) : ಮಾನವಶಾಸ್ತ್ರದ ಪ್ರಕಾರ, ಸಾಮಾನ್ಯವಾಗಿ ಅನೇಕ ಆದಿವಾಸಿಗಳಲ್ಲಿ ಅತ್ತೆಮಾವಂದಿರು ಹಾಗೂ ಸೊಸೆ, ಅಳಿಯ ಹಾಗೂ ಅತ್ತೆ, ಸೋದರ ಸೋದರಿಯರ ನಡುವೆ ಕೆಲವು ನಿರ್ಬಂಧಗಳ ಕಂಡುಬರುತ್ತವೆ. ಯುಕಾಘಿರ್ ಎಂಬ ಬುಡಕಟ್ಟು ಸಮುದಾಯದ ಸೊಸೆಯಾದವಳು ತನ್ನ ಮಾವನಿಗೂ ತನ್ನ ಪತಿಯ ಹಿರಿಯ ಸೋದರನಿಗೂ ಮುಖ ತೋರಿಸಕೂಡದು. ಅದರಂತೆಯೇ ಅಳಿಯನಾದವನು ಸಹ ತನ್ನ ಅತ್ತೆ ಮಾವಂದಿರ ಮುಖಾವಲೋಕನ ಮಾಡಕೂಡದು. ಒಂದು ವೇಳೆ ಒಬ್ಬರನೊಬ್ಬರು ಸಂಧಿಸಿದರೆ ಆಗ ಅವರು ಮುಖಮುಚ್ಚಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಒಬ್ಬರು ಮತ್ತೊಬ್ಬರ ಹೆಸರು ಹಿಡಿದು ಸಂಭೋದಿಸ ಕೂಡದು. ಇಂಥಹ ನಿರ್ಬಂಧ ಶ್ರೀಲಂಕಾ ದ್ವೀಪ, ಆಫ್ರಿಕಾ, ಆಸ್ಟ್ರೇಲಿಯಾ ಇನ್ನೂ ಮುಂತಾದ ಕಡೆ ಗೌರವ ಸೂಚಿಸುವುದಕ್ಕಾಗಿ ರೂಢಿಗೆ ಬಂದಿದೆ. ಮಾತೃಪ್ರಧಾನ ಕುಟುಂಬಗಳಲ್ಲಿ ಅಳಿಯನಿಗೆ ಕೆಲಸ ವಿಧಿಸುವ ವೇಳೆಯಲ್ಲಿ ಮಾವನು ಬೇರೊಬ್ಬರ ಮುಖಾಂತರ ತಿಳಿಸಬೇಕಾಗುತ್ತದೆ. Ostiyac ಬುಡಕಟ್ಟಿನವರಲ್ಲಿ ವಿವಾಹಿತ ಸ್ತ್ರೀಯ ತನ್ನ ಮಾವನಿಗೆ ಕಾಣಿಸಿಕೊಳ್ಳಕೂಡದು. ಹಾಗೆಯೇ ವಿವಾಹಿತ ಪುರುಷನ ತನಗೆ ಮಕ್ಕಳಾಗುವ ತನಕ ಅತ್ತೆಯ ಕಣ್ಣಿಗೆ ಕಾಣಿಸಿಕೊಳ್ಳಕೂಡಿದು. ಆಕಸ್ಮಿಕವಾಗಿ ಅವರಿಬ್ಬರೂ ಎದುರುಬದುರು ಭೇಟಿಯಾದ ಪಕ್ಷದಲ್ಲಿ ಅವರಿಬ್ಬರೂ ಮುಖ ಮುಚ್ಚಿಕೊಳ್ಳುತ್ತಾರೆ. ಇಲ್ಲವೇ ಮುಸುಕು ಹಾಕಿಕೊಳ್ಳುತ್ತಾರೆ. ಹೀಗಾಗಿ ಸ್ತ್ರೀಯಾದವಳು. ತನ್ನ ಜೀವಮಾನ ಪರ್ಯಂತ ಮುಸುಕು ಹಾಕಿಕೊಂಡೇ ಇರುತ್ತಾಳೆ.

ಬುರ್ಯಾತೆ ಎಂಬ ಬುಡಕಟ್ಟಿನಲ್ಲಿ ಸೊಸೆಯಾದವಳು ತನ್ನ ಅತ್ತೆ ಮಾವಂದಿರ ಹೆಸರನ್ನು ಉಚ್ಚರಿಸಕೂಡದು. ತನ್ನ ಮಾವ ಹಾಗೂ ಹಿರಿಯ ಬಂಧುಗಳು ಎದುರಿನಲ್ಲಿ ಮುಖ ಮುಚ್ಚಿಕೊಂಡಿರಬೇಕು. ಅವರ ಎದುರಿನಲ್ಲಿ ಯಾವುದೇ ಕಾರಣಕ್ಕೂ ಬಟ್ಟೆ ತೆಗೆಯಕೂಡದು. ಅವರು ಮಲಗುವ ಸ್ಥಳದಲ್ಲಿ ಇವಳು ಮಲಗಕೂಡದು ಅಷ್ಟೇ ಏಕೆ ಅವರು ಪ್ರಯಾಣಿಸುವ ಗಾಡಿಯಲ್ಲಿ ಇವಳು ಪ್ರಯಾಣಿಸಕೂಡದು. ಅದರಂತೆಯೇ ಅವರೂ ಕೂಡಾ ಆಕೆಯ ಎದುರಿನಲ್ಲಿ ಬಟ್ಟೆ ತೆಗೆಯಕೂಡದು. ಕೆಟ್ಟ ಶಬ್ದಗಳನ್ನು ಹೇಳುವಂತಿಲ್ಲ. ಈ ಎಲ್ಲಾ ಕಟ್ಟುನಿಟ್ಟಿನ ನಿರ್ಬಂಧಗಳು ಕೇವಲ ಬೂರ್ಯಾತ್ ಜನಾಂಗಕ್ಕೆ ಮಾತ್ರ ಸಿಮಿತವಾಗಿರದೇ ಕಾಲ್‌ಮುಕ್, ಅಲ್ಟಾಯಿಯನ್, ತುರುಷ್ಕ ಮತ್ತು ಕಿರ್‌ಗಿಜ್ ಜನಾಂಗಗಳಲ್ಲಿಯೂ ಸಹ ಈ ರೀತಿಯ ಕಟ್ಟುಪಾಡುಗಳು ರೂಢಿಯಲ್ಲಿವೆ.

ಆರೆಂಟು ಎಂಬ ಸಮುದಾಯದಲ್ಲಿ ನಿರ್ಬಂಧಗಳು ಇನ್ನೂ ಹೆಚ್ಚು ಕಷ್ಟಕರವಾಗಿವೆ. ಈ ಸಮುದಾಯದಲ್ಲಿ ಅತ್ತೆಯಾದವಳು ತನ್ನ ಅಳಿಯನ ಗುಡಿಸಲನ್ನು ಸಮೀಪಿಸಿದರೆ ಆಕೆಗೆ ಬಹಿಷ್ಕಾರ ಹಾಕುತ್ತಾರೆ. ಕೆಲವು ವೇಳೆ ಆಕೆಗೆ ಮರಣದಂಡನೆಯನ್ನು ಸಹ ವಿಧಿಸುವುದುಂಟು. ಇದೇ ರೀತಿ ಮಾವ ಸೊಸೆಯರ ಸಂಬಂಧಗಳಲ್ಲಿಯೂ ನಿರ್ಬಂಧಗಳು ಕಂಡುಬರುತ್ತವೆ.

ಈ ಎಲ್ಲಾ ನಿಷೇಧ ಪದ್ಧತಿಗಳನ್ನು ಅನುಸರಿಸುವುದು ಬಹಳ ಕಷ್ಟವೆಂದು ಅರಿತ ಪಾರಷೀ ಮತ್ತು ಓಜಿಬ್ವಾ ಜನಾಂಗದವರು ಇವುಗಳನ್ನೆಲ್ಲಾ ಬಿಟ್ಟುಬಿಟ್ಟಿದ್ದಾರೆ.

ಭಾರತದ ಅಂಡಮಾನ್ ದ್ವೀಪನಿವಾಸಿಗಳಲ್ಲಿ ಪುರುಷನು ತನ್ನ ಮಧ್ಯವಯಸ್ಸಿನಲ್ಲಿ ತನ್ನ ಕಿರಿಯ ಸೋದರನ ಮಡದಿಯ ಎದುರಿನಲಿ ನಿಂತು ಮಾತನಾಡಲು ನಾಚಿಕೊಳ್ಳುತ್ತಾನೆ. ಆದರೆ ಮಧ್ಯಸ್ಥಗಾರನ ಮೂಲಕ ಆಕೆಯೊಡನೆ ಮಾತನಾಡಬಹುದು. ಆದರೆ ಆತನು ತನ್ನ ಹಿರಿಯ ಸೋದರನ ಮಡದಿಯ ಸಂಗಡ ಮಾತನಾಡಲು ಯಾವುದೇ ರೀತಿಯ ನಿರ್ಬಂಧಗಳಿಲ್ಲ. ಅಕ್ಕಪಕ್ಕ ಪ್ರದೇಶಗಳಲ್ಲಿ ವಾಸಮಾಡಿಕೊಂಡಿರುವ ಆದಿವಾಸಿ ಸಮುದಾಯಗಳು ಒಂದು ಜನಾಂಗಗಳಲ್ಲಿ ಕಂಡುಬರುವ ಕೆಲವು ಸಾಂಸ್ಕೃತಿಕ ರೀತಿನೀತಿಗಳನ್ನು ಬಹಿಷ್ಕಾರಾಜ್ಞೆಗಳನ್ನು ಅಳವಡಿಸಿಕೊಂಡಿರುತ್ತಾರೆ. ಇದಕ್ಕೆಲ್ಲಾ ಸಂಸ್ಕೃತಿಯ ಪ್ರಸಾರವೇ ಮುಖ್ಯ ಕಾರಣ. ಈ ರೀತಿ ಅತ್ತೆ, ಅಳಿಯ, ಮಾವ, ಸೊಸೆಯರು ಪರಸ್ಪರ ದೂರವಿರುವ/ಡುವ ಪದ್ದತಿಯು ವಿಶ್ವದ ಎಲ್ಲಾ ಭಾಗಗಳಲ್ಲಿಯೂ ಕಂಡುಬರುತ್ತದೆ.

ಮೇಲೆ ಉದಾರಿಸಿದ ನಿಷೇಧಾಜ್ಞೆಗಳಿಗೆ (ದೂರವಿಡುವ) ಪದ್ಧತಿಗೆ ಮಾನವಶಾಸ್ತ್ರಜ್ಞರು ಅನೇಕ ರೀತಿಯ ಕಾರಣಗಳನ್ನು ಕೊಡುತ್ತಾರೆ. Tailor ಪ್ರಕಾರ, ಮಾನವ ಇತಿಹಾಸದ ಮೊದಲಿನಲ್ಲಿ ಮಾತೃಸ್ಥಾನಿಯ ಕುಟುಂಬಗಳು ಅಳಿಯನ ಅತ್ತೆಯ ಮನೆಯಲ್ಲಿ ವಾಸಿಸಬೇಕಾದ ಪ್ರಸಂಗವಿದ್ದು ಅತ್ತೆಯ ಬಗ್ಗೆ ಕೆಲವು ನಿಯಮಗಳನ್ನು ಪರಿಪಾಲಿಸಬೇಕಾಗಿತ್ತು. ಮಾತೃಪ್ರಧಾನ ಕುಟುಂಬಗಳಲ್ಲಿ ಆತ ಒಬ್ಬ ಅಗಂತುಕನಂತೆಯೇ ಇರಬೇಕಾಗಿತ್ತು. ಆದ್ದರಿಂದ ಮಾತೃಪ್ರಧಾನ ಕುಟುಂಬದ ವಾಸವೇ ಈ ಪದ್ಧತಿಗೆ ಕಾರಣವಿರಬಹುದು ಎಂದು ಇ.ಬಿ.ಟೈಲರ್‌ನ ಅಭಿಪ್ರಾಯವಾಗಿದೆ.

ಪಾರ್ಸಿಯರ ಬಂಧುತ್ವ ಹೆಚ್ಚಾಗಿ ಅವರುಗಳ ವಿವಾಹಗಳ ಮೂಲಕವೇ ನಿರ್ಧಾರವಾಗುತ್ತದೆ. ತಾಯಿ ಮತ್ತು ತಂದೆಯ ಕಡೆಯಿಂದ ಭಿನ್ನ ಭಿನ್ನ ಬಗೆಯ ರಕ್ತ ಸಂಬಂಧಗಳು ಏರ್ಪಡುತ್ತವೆ. ಹೆಂಡತಿಯಾದವಳ ಕಡೆಯಿಂದಲೇ ಹೆಚ್ಚಿನ ಸಂಬಂಧಗಳು ಏರ್ಪಡುತ್ತವೆ. ಸುಮಾರು ಐಂಕ್ಯೂ ಹೆಚ್ಚು ಬಂಧುತ್ವಗಳು ಈ ಪಾರ್ಸಿಯರಲ್ಲಿವೆ. ಈ ಬಂಧುತ್ವದ ಸರಪಳಿ ಅವರ ಸಾಂಸ್ಕೃತಿಕ ಸಮಾಜದ ಒಟ್ಟು ರಚನೆಯನ್ನೆ ಹೇಳುತ್ತದೆ.

ಬಂಧು ಬಳಗದ ಬಗ್ಗೆ ಹೆಚ್ಚಿನ ಮಹತ್ವ ಕೊಡುವ ಪಾರ್ಸಿಯರು ಬಂಧು ಬಳಗವನ್ನೆ ದೇವರೆಂದು ತಿಳಿದಂತಹ ಒಂದು ಅಮಾಯಕ ಬುಡಕಟ್ಟು.

ಸಾವು : ಹಿಂದಿನ ದಿನಗಳಲ್ಲಿ ಪಾರ್ಸಿಯರು ಸಾವಿಗೆ ತುಂಬಾ ಹೆದರುತ್ತಿದ್ದರು. ಅವರ ಅಲೆಮಾರಿ ಜೀವನ ಇದರಿಂದಲೂ ಬೆಳವಣಿಗೆ ಹೊಂದಿರುವ ಸಾಧ್ಯತೆ ಇದೆ. ಏಕೆಂದರೆ ಅಂದಿನ ದಿನಗಳಲ್ಲಿ ತಮ್ಮಲ್ಲಿ ಯಾರಾದರೂ ಸತ್ತರೆ ಗುಂಪಿನ ಗುಡಿಸಲುಗಳಲ್ಲಿ ಅರ್ಧ ಮುಕ್ಕಾಲು ಜನ ಹೆದರಿಕೊಂಡು ತಮ್ಮ ಗುಡಿಸಲುಗಳನ್ನೇ ಕಿತ್ತು ಹಾಕಿಕೊಂಡು ಬೇರೆ ಕಡೆಗೆ ಹೋಗುತ್ತಿದ್ದರು. ಯಾಕೆಂದರೆ ಸತ್ತವರ ಮನೆಯವರು ಮತ್ತು ನೆಂಟರಷ್ಟೇ ಅಲ್ಲಿ ಉಳಿಯುತ್ತಿದ್ದರಂತೆ. ಹೆಣವನ್ನು ಒಂದು ಕಡೆಯಿಂದ ತಮಗೆ ಅನುಕೂಲವಾಗುವಷ್ಟು ದೂರಕ್ಕೆ ಒಯ್ದು ಅದನ್ನು ಮಣ್ಣಿನಲ್ಲಿ ಹೂಳುತ್ತಾರೆ. ಮದುವೆಗೆ ಮುಂಚೆ ಸತ್ತ ಯುವಕನಾಗಲಿ ಅಥವಾ ಯುವತಿಯನ್ನಾಗಲಿ ಇವರನ್ನು ಸಹ ಮಣ್ಣಿನಲ್ಲಿ ಹೂಳುತ್ತಾರೆ. ಆದರೆ ಮದುವೆಯ ನಂತರ ಸತ್ತವರನ್ನು ಸುಡುತ್ತಾರೆ.

ಪಾರ್ಧಿಯರಲ್ಲಿ ವ್ಯಕ್ತಿ ಸತ್ತ ಹನ್ನೆರಡನೆ ದಿನಕ್ಕೆ ಅವರ ತಿಥಿಯನ್ನು ಮಾಡದೇ, ಒಂದು ವರ್ಷದಿಂದ ಹಿಡಿದು ಹತ್ತು ವರ್ಷಗಳ ಅವಧಿಯಲ್ಲಿ ತಿಥಿಯನ್ನು ಮಾಡುತ್ತಾರೆ. ಈ ಸಮಯದಲ್ಲಿ ಎರಡೂ ಕೈಯಿಂದ ರೊಟ್ಟಿಯನ್ನು ತಟ್ಟದೇ ಕೇವಲ ಎಡಗೈಯಿಂದ ಮಾತ್ರ ರೊಟ್ಟಿಯನ್ನು ಮಾಡಿ ಅದರ ಜೊತೆಗೆ ನವಣಕ್ಕಿ ಅನ್ನ ಮಾಡುತ್ತಾರೆ. ಸತ್ತವರ ತಿಥಿ ಆಗದ ಹೊರತು ಮನೆಯಲ್ಲಿ ಯಾರದು ಮದುವೆಯಾಗುವಂತಿಲ್ಲ.

ಪಾರ್ಧಿಯರು ತಮ್ಮ ಸಮುದಾಯದಲ್ಲಿ ಆದ ಸಾವುಗಳಿಗೆ ಅವರ ದೇವರು ಅಥವಾ ದಾದಾಜಿಯೆಂಬ ಹಾಗೂ ಅಸಾಮಾನ್ಯವಾದ ಶಕ್ತಿಗಳೇ ಕಾರಣವೆಂದು ನಂಬುತ್ತಾರೆ. ಯಾರಾದರೂ ಸತ್ತರೆ ಆ ಹೆಣವನ್ನು ಸ್ನಾನ ಮಾಡಿಸಿ, ಹೊಸ ಬಟ್ಟೆ ಹಾಕಿಸಿ, ಚಟ್ಟದ ಮೇಲಿಟ್ಟು ಹೊತ್ತುಕೊಂಡು ಹೋಗಿ ಹೂತುಹಾಕಿ ಬರುವುದು ಇತ್ತೀಚಿನ ಪದ್ಧತಿಯಾಗಿದೆ. ಇವರ ಶವ ಸಂಸ್ಕಾರ ಪದ್ಧತಿಯು ಕೂಡಾ ತುಂಬಾ ಸರಳವಾಗಿದೆ. ಹೆಣವನ್ನು ಹೂಳಿ ಅಲ್ಲಿಂದ ಮನೆಗೆ ಹಿಂತಿರುಗಿ, ರೊಟ್ಟಿಮಾಡಿ ಮೆಣಸಿನಕಾಯಿ ಚಟ್ನಿಯನ್ನು ಮೇಲಿಟ್ಟುಕೊಂಡು ಅದನ್ನು ಹೆಣ ಹೂತ ಸ್ಥಳದಲ್ಲಿಟ್ಟು ಮನೆಗೆ ಹಿಂತಿರುಗುತ್ತಾರೆ. ಆರು ದಿನಗಳ ತನಕ ಸತ್ತ ಕುಟುಂಬದವರು ತಮ್ಮ ಗುಂಪಿನವರ ಜೊತೆ ಸೇರುವಂತಿಲ್ಲ. ಸತ್ತ ಆರನೆಯ ದಿನಕ್ಕೆ 'ಭಾರ್' ಎಂಬ ಕೂಳನ್ನು ಮಾಡುತ್ತಾರೆ. ಆಗ 'ಕಾಣಿಕೆವಧಾವ' ಮಾಡಿಸಿ, ಗುಲಗಂಜಿಯನ್ನು ಎಣಿಸುವ ಮೂಲಕ ದೇವಿಯನ್ನು ಹೊರಡಿಸಿ ಅಪ್ಪಣೆ ಕೇಳುವ ಪದ್ಧತಿ) ಭಾರಿನ ಭೋಕಡಾ(ಕೂಳಿನ ಕುರಿ)ಯನ್ನು ತಂದಿರುತ್ತಾರೆ. ಗುಜರಾತ್ಯೋಗಳು ಚಾಮುಂಡಿಗೂ, ಮೇವಾಡೊಗಳು ಎಲ್ಲಮ್ಮನಿಗೂ, ಕಾಳಿವಾಳೋ ದುರ್ಗಮ್ಮನಿಗೂ, ಕುರಿಯನ್ನು ಇಲ್ಲವೆ 'ಖಿವಾಳಿ' ಎಂಬ ಒಂದು ಬಗೆಯ ಸಿಹಿರೊಟ್ಟಿಯನ್ನು ಗುಜರಾತಿಯೋ, ಕಾಳಿವಾಳೋಗಳು ಎಣ್ಣೆಯಲ್ಲಿ ಕರಿಯುತ್ತಾರೆ. ಉಳಿದವರು ಎಣ್ಣೆ ಅಥವಾ ತುಪ್ಪದಲ್ಲಿ ಮಾಡುತ್ತಾರೆ. 'ದೇವರಕುರಿ' ಎಂದರೆ ಕುರಿ ಅಥವಾ ಕೋಣವನ್ನು ತಂದು ಎಲ್ಲರಿಗೂ ಕೂಡಿಸಿ ಊಟಕ್ಕೆ ಹಾಕಿದ ಮೇಲೆಯೇ ಸತ್ತ ಹೆಣದ ಮೈಲಿಗೆ ಮುಗಿಯುತ್ತದೆ ಇದಕ್ಕೆ ಅವರು 'ಮುರಾಮುರ್ಪ ಖಿಂಟಕ್ ಸಿಹಿ ಲೂಕು' ಎನ್ನುತ್ತಾರೆ. ಹೀಗೆಂದರೆ ಸತ್ತವರ ಕಂಟಕ ಮುಗಿಯಿತು ಎಂದರ್ಥ.

ಬೆಂಗಳೂರು, ಮೈಸೂರು, ಶಿವಮೊಗ್ಗ, ಹಾಸನ ಮತ್ತು ದಾವಣಗೆರೆ ಕಡೆಗಳಲ್ಲಿರುವ ಪಾರ್ಧಿಯರು (ಹಕ್ಕಿಪಿಕ್ಕಿ) ಮೂರು ವರ್ಷಗಳವರೆಗೆ ಒಬ್ಬ ವ್ಯಕ್ತಿ ಸತ್ತ ಜಾಗಕ್ಕೆ ಪುನಃ ಹೋಗುವುದಿಲ್ಲ. ಹಾಗೆ ಹೋದರೆ ತಮಗೆ ಭೂತ ಹಿಡಿಯುತ್ತದೆ ಎಂದು ಇವರು ನಂಬುತ್ತಾರೆ. ಜೊತೆಗೆ ಅದಕ್ಕೆ ಹೆದರುತ್ತಾರೆ. 'ಭಾರ್' ಸಮಯದಲ್ಲಿ (ಸತ್ತ ಆರು ದಿನಗಳು) ಏನಾದರೂ ಜಗಳ ಪಂಚಾಯ್ತಿ ಬಿದ್ದರೆ, ತಂದೆ ತಾಯಿಗಳು ಕೂಳು ಹಾಕಿ ಕುಲಸ್ಥರಿಗೆ ಊಟಕ್ಕೆ ಹಾಕದೆ ಹೋದರೆ ಕೊಡುತರುವ ಸಂಬಂಧಗಳನ್ನೇ ಉಳಿದವರು ನಿಷೇಧಿಸಿಬಿಡುತ್ತಾರೆ. ಆ ಕಾರಣಕ್ಕಾಗಿ ಎಂಥ ಕಡುಬಡವರಾದರೂ ಸರಿ ಅವರು ಕೂಳಿನ ಊಟವನ್ನು ಸಾಲ ಮಾಡಿಯಾದರು ಹಾಕಿಸಲೇಬೇಕು ಮತ್ತು ಹಾಕಿಸುತ್ತಾರೆ ಕೂಡಾ. ಅಲ್ಲದೇ ಈ ಕೂಳಿನ ಊಟದ ಪಂಚಾಯ್ತಿ ಬಿದ್ದಲ್ಲಿ ಪಂಚಾಯ್ತಿ ಮಾಡುವವರಿಗೆ ಕತ್ತೆ ಮೇಲೆ ಅವರಿದ್ದಲ್ಲಿಗೆ ಹೆಂಡ ತರಿಸಿ ಎಲ್ಲರಿಗೂ ಕುಡಿಸಿದ ಮೇಲೆಯೇ ಕೂಳಿನ ಪಂಚಾಯ್ತಿ ಮುಗಿಯುವುದು.

ಅಂದಿನ ಕಾಲದಲ್ಲಿ ಪಾರ್ಧಿಯರು ಸಾವಿಗೆ ಇಷ್ಟೊಂದು ಭಯಪಡಲು ಕಾರಣವೆಂದರೆ, ಅಂದಿನ ದಿನಗಳಲ್ಲಿ ಇವರು ವ್ಯವಸ್ಥಿತವಾಗಿ ಒಂದೇ ಕಡೆ ನೆಲೆ ನಿಲ್ಲದೆ, ಬೇಟೆಯ ಹೆಸರಿನಲ್ಲಿ ಕಾಡು ಮೇಡುಗಳಲ್ಲಿ ಅಲೆಯು

ತ್ತಿದ್ದರು. ಆಗ ಅಲ್ಲೊಂದು ಇಲ್ಲೊಂದು ಮಾತ್ರ ತಮ್ಮ ಗುಡಿಸಲು ಇರುತ್ತಿದ್ದವು. ಹೀಗಾಗಿ ಅವರು ಸಾವಿಗೆ ಅಷ್ಟೊಂದು ಭಯ ಪಡುತ್ತಿದ್ದರು. ಜೊತೆಗೆ ಸಾವಿಗೆ ಹೆದರಿ ಎಲ್ಲರೂ ತಮ್ಮ ಗುಡಾರಗಳನ್ನು ಕಿತ್ತುಕೊಂಡು ಹೊರಟು ಜಾಗ ಖಾಲಿ ಮಾಡುತ್ತಿದ್ದುದ್ದರಿಂದ ಹೆಣ ಹೂಳುವಾಗ ಯಾರೂ ಇರುತ್ತಿರಲಿಲ್ಲ. ಮತ್ತು ಎಲ್ಲರೂ ಹೆದರುತ್ತಿದ್ದರಿಂದ ಹೆಣದ ಅಂತಿಮ ಕಾರ್ಯಕ್ಕೆ ಯಾರನ್ನೂ ಕರೆಯುವ ಪದ್ಧತಿಯು ಇವರಲ್ಲಿ ಇರದೇ ಹೋಗಿರಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಇವರೂ ಸಂಘಟಿತರಾಗಿ ಒಂದೇ ಕಡೆ ಕಾಲೋನಿಗಳನ್ನು ಮಾಡಿಕೊಂಡು ಬದುಕುತ್ತಿರುವುದರಿಂದ ಇವರು ತಮ್ಮಲ್ಲಿ ಆದ ಸಾವಿಗೆ ಇತರರಿಗೆಲ್ಲಾ ಕರೆಯುತ್ತಿರುವದರಿಂದ ಈಗ ಹೆಣಗಳಿಗೆ ಹೆದರುತ್ತಿಲ್ಲ.

ಅಂದಿನ ದಿನಮಾನಗಳಲ್ಲಿ ಹೆಣವನ್ನು ಇಬ್ಬರೇ ಹೊರುತ್ತಿದ್ದರು. ಈ ಅಂಶದಿಂದ ಇವರಲ್ಲಿ ಅಂದು ಜನಸಂಖ್ಯೆ ಕಡಿಮೆಯಿರುವುದೇ ಕಾರಣ ಎಂಬುದು ಸ್ಪಷ್ಟವಾಗುತ್ತದೆ.

ಹೆಣವನ್ನ ಹೊರುವುದು ಮತ್ತು ಅದನ್ನು ಮಣ್ಣು ಮಾಡುವುದು ಇವರಲ್ಲಿ ತುಂಬಾ ಸರಳವಾಗಿತ್ತು. ಸತ್ತವರು ಹಾಸಿಕೊಳ್ಳುತ್ತಿದ್ದ ಚಾಪೆಯಲ್ಲಿಯೇ ಅವರ ಹೆಣವನ್ನು ಸುತ್ತಿ ಕಟ್ಟುಗಳಿಂದ ಬಿಗಿಯಾಗಿ ಬಿಗಿದು ಆ ಕಟ್ಟುಗಳಿಗೆ ಒಂದು ದಡೆಯನ್ನು ಇಲ್ಲ ಒಂದು 'ಗಳ'ವನ್ನು ಏರಿಸಿ ಇಬ್ಬರೇ ಹೆಣವನ್ನು ಹೊತ್ತುಕೊಂಡು ಹೋಗುತ್ತಿದ್ದರು. ಸತ್ತವರ ಕಾಲುಗಳನ್ನು ಮುದುರಿಸುವ ಪದ್ಧತಿ ಇವರಲ್ಲಿ ಇರಲಿಲ್ಲ. ಆದರೆ ಇತ್ತೀಚೆಗೆ ಈ "ಖಾಟ್ಲು'(ಚಟ್ಟ)ವನ್ನು ನಾಲ್ಕು ಜನ ಹೊರುವಂತೆ ತಯಾರು ಮಾಡುತ್ತಾರೆ. ಹೆಣವನ್ನು ಹೊರುವವನಿಗೆ 'ಖಾಂದ್ಯ' ಎಂದು ಕರೆಯುತ್ತಾರೆ. ಈ ಖಾಂದ್ಯಾ ಮೇವಾಡಗಳಲ್ಲಿ ಸತ್ತರೆ ಮೇವಾಡೋದವರು ಆಗಿರುತ್ತಾನೆ. ಇಲ್ಲವೇ ಸತ್ತವನ ಮಗ ಅಥವಾ ಕುಲದವರು, ಅಣ್ಣ ತಮ್ಮಂದಿರಲ್ಲಿ ಯಾರಾವರೂ ಒಬ್ಬರು ಆಗಿರುತ್ತಾರೆ. ಈತ ಶಾಸ್ತ್ರೋಕ್ತವಾಗಿ ಹೆಣವನ್ನು ಹೊರುವವನು ಒಬ್ಬನೇ ಎಂಬುದನ್ನು ಸೂಚಿಸಲು ನಾಲ್ಕು ತುದಿಗಳನ್ನು ಸ್ವಲ್ಪ ಸ್ವಲ್ಪ ಎತ್ತುತ್ತಾ ಹೊರುತ್ತಾ ಅಂತಿಮ ಕ್ರಿಯಾವಿಧಿಯ ಮಂತ್ರಗಳನ್ನು ಹೇಳುತ್ತಾನೆ. ಮೂರು ಅಥವಾ ಆರು ಎಂದು ಹೇಳುತ್ತಾನೆ. ಈ ಸಂಖ್ಯೆ ಹೆಣಕ್ಕೆ ಕೂಳು ಹಾಕುವ ದಿನಗಳನ್ನು ಸೂಚಿಸುತ್ತದೆ. ಹೆಣವನ್ನು ಒಂದು ಅಥವಾ ಎರಡು ದಿವಸ ಇಟ್ಟುಕೊಂಡು ಅದರ ಮೈ ತೊಳೆದು ಹೊಸ ಬಟ್ಟೆ ಹಾಕಿ ನಾಲ್ಕು ಜನ ಅದನ್ನು ಹೊರುತ್ತಾರೆ. ಎರಡು ಮೂರು ಜನ ಮೊದಲೆ ಹೋಗಿ ಕುಣಿ ತೆಗೆದು ಅಲ್ಲೇ ಕುಳಿತಿರುತ್ತಾರೆ. ಹೆಣದೊಂದಿಗೆ ತೆಂಗಿನ ಕಾಯಿ, ಮಂಡಕ್ಕಿ, ತರಕಾರಿ, ಎಡೆ, ಗಂಡಸಾಗಿದ್ದರೆ ಬೀಡಿ, ಮಿಠಾಯಿ, ಜಿಲೇಬಿ, ಮಾವಿನ ಕಾಯಿ, ಪೇರಲ ಮುಂತಾದವುಗಳನ್ನು ಮಣ್ಣಿನ ಮೇಲೆ ಇಡುತ್ತಾರೆ. ಸೇಂದಿ, ಸಾರಾಯಿಯನ್ನು ಇಡುತ್ತಾರೆ. ತೆಂಗಿನಕಾಯಿ ಒಡೆದು ಪೂಜಿಸುತ್ತಾರೆ. ಕುಣಿಗೆರೆಗೆ (ಸುಡಗಾಡಿಗೆ) ತೆಗೆದುಕೊಂಡು ತಿಂಡಿಗಳನ್ನೆಲ್ಲಾ ಮಣ್ಣಿಗೆ ಹೋದವರೆ ತಿನ್ನುತ್ತಾರೆ. ಹಳೆಯ ಪದ್ಧತಿಯಂತೆ 'ರೊಟ್ಟಿ ಮಾರ್ಜಿನ ಚಟ್ನಿ' ರೊಟ್ಟಿ, ರಾಗಿ, ಜೋಳದ್ದು ಮೆಣಸಿನಕಾಯಿ ಚಟ್ನಿ)ಯನ್ನು ಮೂರನೇ ದಿನಕ್ಕೆ ಇಡುತ್ತಾರೆ. ನಾಳೆ 'ದಿನ' ಇದೆ ಎಂದರೆ ಇಂದು ತರಕಾರಿ, ಬೇಳೆ, ಎಣ್ಣೆ, ಎಲ್ಲಾ ಸಾಮಗ್ರಿಗಳನ್ನು ಜೋಡಿಸಿ ರಾತ್ರಿಯಿಡೀ ಗೋರಿಯನ್ನು ಕಾಯುತ್ತಾರೆ. ಅಲ್ಲಿಗೆ ತೆಗೆದುಕೊಂಡು ಹೋದ ಎಲ್ಲಾ ಸಾಮಗ್ರಿಗಳನ್ನು ರಾತ್ರಿಯಿಡೀ ಕಾಯುತ್ತಾ ಕೂರುತ್ತಾರೆ.

ಬೆಳಗಿನ ಜಾವ ನಾಲ್ಕು ಅಥವಾ ಐದು ಗಂಟೆಯ ಹೊತ್ತಿಗೆ ಖಾಂದ್ಯ ಆದ ಮನುಷ್ಯ ನಾಲ್ಕು

ಕುಡಿಕೆಗಳನ್ನು ಅವನೊಬ್ಬನೆ ತೆಗೆದುಕೊಂಡು ಮೈ ತೊಳೆಯಲು ಹೋಗಬೇಕು. ಒಂದೊಂದು ಕೈಲಿ ಎರಡೆರಡು ಮಡಿಕೆಯನ್ನು ಹಿಡಿದುಕೊಂಡಿರುತ್ತಾನೆ. ಇವು ಒಂದೊಂದು ಹಿಡಿಯಷ್ಟು ಗಾತ್ರಕ್ಕೆ ಇರುತ್ತವೆ. ಮಡಿಕೆಗಳಿಂದ ಏಳು ಬಾರಿ ಭುಜದಿಂದ ಕೆಳಗೆ ಇಳಿಸಿಕೊಳ್ಳಬೇಕು. ಇದು ಹೆಣ ಎತ್ತಿದ ಭಾರ ಇಳಿಯಲೆಂದು ಮಾಡುವ ಆಚರಣೆ ಇದಾದ ಮೇಲೆ ಅವನು ಮೈತೊಳೆದುಕೊಳ್ಳುತ್ತಾನೆ. ನಾಲ್ಕು ಕುಡಿಕೆಗಳನ್ನು ಕಾರ್ಯ ಮಾಡುವ ಜಾಗದ ಸ್ವಲ್ಪ ದೂರದಲ್ಲಿ ಉತ್ತರಾಭಿಮುಖವಾಗಿ ಸ್ವಲ್ಪ ಬಗ್ಗಿಸಿ ಇಡುತ್ತಾರೆ. ಇದನ್ನು 'ಘೋರವಾಡೆ' ಎಂದು ಕರೆಯುತ್ತಾರೆ. ಇದನ್ನು ಖಾಂದ್ಯುವೇ ತೆಗೆದುಕೊಳ್ಳಬೇಕು. ಉಳಿದ ನಾಲ್ಕು ಕುಡಿಕೆಗಳನ್ನು ನೀರು ತುಂಬಿ ಇಟ್ಟು ಅವುಗಳ ಮೆಲೆ ಥಾಳ್ (ದೊಡ್ಡ ಹರಿವಾಣ) ಇಡುತ್ತಾರೆ. ಕುಲಸ್ಥರೆಲ್ಲಾ ಒಂದೊಂದೇ ಚಮಚ ಅನ್ನದ ಮೇಲೆ ಹಾಕುತ್ತಾರೆ. ಕುಡಿಕೆಗಳಿಗೆ ಹಾಕುತ್ತಾರೆ. ಈ ನಾಲ್ಕನ್ನು ಕುಲಸ್ಥರು ಎತ್ತಿಕೊಳ್ಳುತ್ತಾರೆ. ಘೋರವಾಡೆಯನ್ನು ಖಾಂದ್ಯು ಎತ್ತಿಕೊಳ್ಳುತ್ತಾನೆ. ಇದರ ಮೇಲೆ ಒಂದೇ ಒಂದು ರೊಟ್ಟಿಯನ್ನು ಇಟ್ಟಿರುತ್ತಾನೆ. 'ಥಾಳ್'ನ ಮೇಲೆ ಐದು ರೊಟ್ಟಿಗಳನ್ನು ಇಟ್ಟಿರುತ್ತಾರೆ. ಇವೆರಡರ ಪಕ್ಕದಲ್ಲಿ ಒಲೆಯ ಕೆಂಡವನ್ನು ಇಟ್ಟಿರುತ್ತಾರೆ. ಸ್ವಲ್ಪ ಸ್ವಲ್ಪ ಅನ್ನವನ್ನು ಕೆಂಡಕ್ಕೂ ಹಾಕುತ್ತಿರುತ್ತಾರೆ. ಕುಲಸ್ಥರು ಥಾಳ್‌ಗೆ ಅನ್ನವನ್ನು ಬಲಗೈಲಿ ಹಾಕುವಾಗ ಎಡಗೈಲಿ ಘೋರವಾಡೆಗೆ ಹಾಕುತ್ತಾರೆ. ಘೋರವಾಡೆಯನ್ನು ಖಾಂದ್ಯು ಅದೇ ಜಾಗದಲ್ಲಿ ಕಲ್ಲಿನ ಖಾಂದ್ಯು ಇಟ್ಟ ನಾಲ್ಕು ಕುಡಿಕೆಗಳ ಜೊತೆ ಥಾಳ್ ಕೆಳಗಿದ್ದ ಕುಡಿಕೆಗಳನ್ನು ಇಡಬೇಕು. ಖಾಂದ್ಯು ಘೋರವಾಡೆಯನ್ನು ಚೂರು ಚೂರು ಮಾಡಿ ತೆಗೆದುಕೊಂಡು ಹೋಗಿ ನೀರಿನಲ್ಲಿ ಹಾಕುತ್ತಾನೆ. ತಿಂದು ಅದನ್ನೆಲ್ಲಾ ಮನೆಗೆ ತಂದು ಮನೆಯಲ್ಲೇ ಊಟ ಮಾಡಬೇಕು. ಖಾಂದ್ಯು ಕೂಳು ಹಾಕುವ ಬಳಿ ಊಟ ಮಾಡುವಂತಿಲ್ಲ. ಇನ್ನೊಮ್ಮೆ ಯಾವಾಗಲಾದರೂ ಮತ್ತೊಂದು ಕೂಳು ಇನ್ನೊಂದು ಕೂಳು ಎಂದು ಒಟ್ಟು ಮೂರು ಕೂಳನ್ನು ಹಾಕುತ್ತಾರೆ. ಎರಡು ಮತ್ತು ಮೂರನೆ ಕೂಳನ್ನು ಮನೆ ಹತ್ತಿರವೇ ಮಾಡುತ್ತಾರೆ. ಮೂರು ಕೂಳು ಹಾಕಿದರೆ ಸತ್ತವನು ಗುರುವಿನ ಸ್ಥಾನವನ್ನು ಮುಟ್ಟುತ್ತಾನೆಂಬ ನಂಬಿಕೆ ಇವರಲ್ಲಿದೆ.

ಪಾರ್ಧಿಯರಲ್ಲಿ ಒಬ್ಬ ವ್ಯಕ್ತಿ ಸತ್ತನೆಂದರೆ, ಆತನ ಮಗ ಅಥವಾ ಸತ್ತವನ ಹೆಂಡತಿ ನಾಲ್ಕು ದಿನಗಳ ಕಾಲ ಊಟ ಮಾಡದೇ, ಹಾಲು, ನೀರು, ಸೇಂದಿ ಸಾರಾಯಿಯನ್ನೇ ಕುಡಿದೇ ಇರುತ್ತಾರೆ. ದಿನನಿತ್ಯ ಅವರು ಗೋರಿಯನ್ನು ನೋಡಬೇಕು. ೧೨ ದಿನ ಈ ರೀತಿ ಮಾಡುತ್ತಿರಬೇಕು. ಸತ್ತ ವ್ಯಕ್ತಿಗೆ ಏನೇನು ಪ್ರಿಯವಾಗಿದ್ದವೋ ಅವನ್ನೆಲ್ಲಾ ಅವನ ಗೋರಿಯ ಮೇಲಿಟ್ಟು ಸಮಾಧಾನ ಮಾಡಬೇಕು. ಈ ೧೨ ದಿನಗಳಲ್ಲಿ ಈ ರೀತಿಯಾಗಿ ಮಾಡದಿದ್ದರೆ ಆತನು/ಅವಳು ದೆವ್ವವಾಗಿ ಬಿಡುತ್ತಾರೆ ಎಂದು ತಿಳಿಯುತ್ತಾರೆ. ಸತ್ತವನ ಆತ್ಮ ಮನುಷ್ಯ ಅಥವಾ ಪ್ರಾಣಿಯ ಶರೀರಕ್ಕೆ ಹೋಗಿದೆಯೇ ಎಂದು ತಿಳಿಯುತ್ತಾರೆ. ಇದನ್ನು ಮನವರಿಕೆ ಮಾಡಿಕೊಳ್ಳಲು ಗೋರಿ ಹತ್ತಿರ ಹೋಗಿ ಸ್ವಲ್ಪ ಬೂದಿಯನ್ನು ಒಂದು ತಟ್ಟೆಯಲ್ಲಿ ಸಂಗ್ರಹಿಸಿ ಒಂದು ಪುಟ್ಟಿಯನ್ನು ಮುಚ್ಚುತ್ತಾರೆ. ಒಂದುರಾತ್ರಿ ಕಳೆದ ನಂತರ ಮಾರನೆಯ ದಿನ ಕೆಲವು ಗುರುತುಗಳನ್ನು, ಗೆರೆಗಳನ್ನು ಅಚ್ಚುಗಳನ್ನು ನೋಡಿ ಯಾವ ಪ್ರಾಣಿಯ ಆತ್ಮಕ್ಕೆ ಹೋಗಿದೆ ಎಂದು ಅವರ ಜನರಿಗೆಲ್ಲಾ ಹೇಳುತ್ತಾರೆ. ಇಂಥ ಆತ್ಮದ ಶಾಂತಿಗಾಗಿ ಮೇಕೆಯನ್ನು ಕತ್ತರಿಸಿ ಮಾಂಸದೂಟವನ್ನು ಹಲವರಿಗೆ ಕೊಡುವುದರಿಂದ ಶಾಂತಿ ದೊರೆಯುತ್ತದೆಂದು ತಿಳಿಯುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಸತ್ತವರ ಆಸೆಗಳು ಪೂರೈಸದಿದ್ದರಿಂದ ಅಂಥಹ ಮಕ್ಕಳು ಸೈತಾನಗಳಾಗುತ್ತಾರೆಂದು ಹೆದರುತ್ತಾರೆ. ಸೈತಾನವಾದದ್ದು ಹೆಂಗೆ ಹೊಲದಲ್ಲಿ ತುಂಬಾ ಕೊಂದರೆ ಕೊಡುತ್ತದೆಂತಲೂ ಮುಟ್ಟಿದಾಗ ತುಂಬಾ ಹೊಟ್ಟೆ ನೋವು ಬರುವುದರೊಂದಿಗೆ ಗರ್ಭಪಾತವು ಆಗುತ್ತದೆಂದು ಅವರ ನಂಬಿಕೆ.

೫. ಪಾರ್ಧಿ ಬುಡಕಟ್ಟಿನವರ ಜಾತ್ರೆ

ಮಾನವಶಾಸ್ತ್ರಜ್ಞರು ಮಾಡಿರುವ ಇನ್ನೂ ಕೆಲವು ಮುಖ್ಯ ಹಾಗೂ ಕ್ಲಿಷ್ಟ ಅಭ್ಯಾಸಗಳಲ್ಲಿ ದೈವಗಳ ಮತ್ತು ಶಕ್ತಿಗಳ ಅಭ್ಯಾಸ ಪ್ರಸ್ತುತವಾಗಿ, ಬಹು ಉಪಯುಕ್ತವಾದದ್ದು. ಧರ್ಮ ಮಾನವ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ ಮತ್ತು ಸಂಸ್ಕೃತಿ ಮಾನವನಷ್ಟೇ ಪ್ರಾಚೀನವಾದದ್ದು. ಹೀಗಾಗಿ ಧರ್ಮ ಮತ್ತು ಸಂಸ್ಕೃತಿಗಳಿಗೆ ಹತ್ತಿರದ ನಂಟು. ಇದೇ ರೀತಿ ಧರ್ಮ ಮತ್ತು ಸಮಾಜಕ್ಕೆ ನೇರ ಸಂಬಂಧವಿದೆ. ಸಮಾಜ, ಇದು ಪವಿತ್ರ ವಿಚಾರ ಎಂದು ಒಪ್ಪಿ ಅನುಸರಿಸಿದ್ದು ಮಾತ್ರ ನಂತರ ಧಾರ್ಮಿಕ ವಿಚಾರವಾಗಿ ಆಚರಣೆ ಬರುತ್ತದೆ. ಹೀಗಾಗಿ ಇಂದು ಧರ್ಮಹೀನವಾದ ಯಾವ ಸಮಾಜವೂ ಇಲ್ಲ. ಅರವತ್ತು ಸಾವಿರ ವರ್ಷಗಳಷ್ಟು ಹಳೆಯದಾದ ಮಾನವನ ಶವಗುಣಿಗಳಲ್ಲಿ ಆಹಾರ ಮತ್ತು ಪಾನೀಯ ತುಂಬಿದ ಮಣ್ಣಿನ ಪಾತ್ರೆಗಳನ್ನು, ಆಯುಧಗಳನ್ನು ಇಟ್ಟಿರುವುದು ಕಂಡುಬಂದಿದೆ. ಇದು ಆ ಜನರಲ್ಲಿ ಬೇರೆ ಬೇರೆ ಲೋಕಗಳಿವೆ. ವ್ಯಕ್ತಿಯೊಬ್ಬ ಮಡಿದ ನಂತರ ಅವನ ಆತ್ಮ ಇವುಗಳಲ್ಲಿ ಒಂದಕ್ಕೆ ಹೋಗುತ್ತದೆ. ಅಲ್ಲಿ ಅಥವಾ ಅಲ್ಲಿಗೆ ಹೋಗುವ ದಾರಿಯಲ್ಲಿ ಇವು ಅವನ ಬಳಕೆಗೆ ಬೇಕಾಗುತ್ತವೆ ಎಂಬ ಧಾರ್ಮಿಕ ನಂಬಿಕೆ ಇವರಲ್ಲಿ ಇದ್ದುದೇ ಇದಕ್ಕೆ ಕಾರಣ ಎಂದು ತಿಳಿಯುತ್ತದೆ.

ಈ ಬುಡಕಟ್ಟು ಸಾಮಾನ್ಯವಾಗಿ ಹಿಂದೂ ಧರ್ಮದವರು ಆಚರಿಸುವ ಎಲ್ಲಾ ಹಬ್ಬ ಹರಿದಿನಗಳನ್ನು ಅದೇ ರೀತಿಯಲ್ಲಿ ಆಚರಿಸುವುದರೊಂದಿಗೆ, ಪ್ರತಿವರ್ಷ ಗದಗ ಬಳಿಯಲ್ಲಿರುವ (ರಾಯಚೂರು ರಸ್ತೆ) ರಸ್ತೆ ಪಕ್ಕಕ್ಕೆ ನಾಗಸಮುದ್ರ ಗ್ರಾಮದಲ್ಲಿ ಕಟ್ಟಿರುವ ದಂಡಿ ದುರ್ಗಮ್ಮ ದೇವಿಯ ಜಾತ್ರೆಯನ್ನು ತುಂಬಾ ಅದ್ದೂರಿಯಾಗಿ ಆಚರಿಸುತ್ತಾರೆ. ಈ ಜಾತ್ರೆಗೆ ಕೇವಲ ಕರ್ನಾಟಕದಲ್ಲಿರುವ ಪಾರ್ಧಿಯರಷ್ಟೇ ಅಲ್ಲದೇ ಇಡೀ ಭಾರತದ ಮೂಲೆ ಮೂಲೆಯಲ್ಲಿರುವ ಎಲ್ಲಾ ಪಾರ್ಧಿಯರು ಸಹ ಈ ಜಾತ್ರೆಗೆ ಆಗಮಿಸುತ್ತಿರುವುದು ಈ ಜಾತ್ರೆಯ ಒಂದು ಮಹಿಮೆಯೇ ಸರಿ. ಒಂದು ಅಂದಾಜಿನ ಪ್ರಕಾರ, ಸುಮಾರು ೫೦ ಸಾವಿರ ರೂಪಾಯಿಗಳಷ್ಟು ಆದಾಯ (ಕುರಿಯ ಚರ್ಮ ಹಾಗೂ ಇತರೇ ರೂಪದಲ್ಲಿ) ಸಂಗ್ರಹವಾಗುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ಸುಮಾರು ಅರ್ಧ ಕಿ.ಮೀಟರಿನಷ್ಟು ಎಲ್ಲಿ ನೋಡಿದಲ್ಲಿ ಕುರಿ, ಕೋಳಿಗಳ ರುಂಡ, ಮುಂಡಗಳೇ ಬಿದ್ದಿರುತ್ತವೆ. ಅಲ್ಲಿಗೆ ಆಗಮಿಸಿದ ಭಕ್ತಾದಿಗಳೆಲ್ಲಾ ಇವುಗಳ ಮೇಲೆಯೇ ನಡೆಯುತ್ತಾರೆ. ಅಂದರೆ ಅಷ್ಟೊಂದು ರೀತಿಯಲ್ಲಿ ಇಲ್ಲಿ ಮಾಂಸದ ರಾಶಿಯೇ ಬಿದ್ದಿರುತ್ತದೆ. ಬಹುತೇಕ ಹುಡುಗ ಮತ್ತು ಹುಡುಗಿಯರು ಇದೇ ಜಾತ್ರೆಯಲ್ಲಿ ತಮ್ಮ ಬಾಳ ಸಂಗಾತಿಯಾಗುವರನ್ನು ಆರಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಇದೇ ಮಾದರಿಯ ಗದುಗಿನ ದಂಡಿ ದುರ್ಗಮ್ಮನ ಜಾತ್ರೆಯನ್ನು ಬಾಗಲಕೋಟೆ ನಗರದಲ್ಲಿಯೂ ಆಚರಿಸುತ್ತಿದ್ದಾರೆ.

ಆದರೆ ಬೀದರ್ ಜಿಲ್ಲೆಯಲ್ಲಿಯ ಪಾರ್ಧಿಯರಿಗೆ ಈ ಗದುಗಿನ ದಂಡಿ ದುರ್ಗಮ್ಮನ ಜಾತ್ರೆಯ ಬಗ್ಗೆ ಅಷ್ಟೇನು ಗೊತ್ತಿಲ್ಲ. ಹೀಗಾಗಿ ಅವರು ಹೈದ್ರಾಬಾದ್ (ಆಂಧ್ರ ಪ್ರದೇಶ) ಬಳಿಯ ಜಲ್‌ಪಲ್ಲಿ ಎಂಬಲ್ಲಿಯೂ ಇದೇ ತರಹದ ಜಾತ್ರೆಯನ್ನು ಆಚರಿಸುತ್ತಾರೆ. ಹೀಗಾಗಿ ಬೀದರ್ ಜಿಲ್ಲೆಯ ಪಾರ್ಧಿಯರು ದೂರದ ಗದುಗಿಗೆ ಹೋಗದೇ ತಮ್ಮ ಊರಿನ ಪಕ್ಕದಲ್ಲೇ ಇರುವ ಹೈದ್ರಾಬಾದಿನ ಜಲ್‌ಪಲ್ಲಿಗೆ ಹೋಗುತ್ತಾರೆ.

ಇಷ್ಟೇ ಅಲ್ಲದೇ ಒಂದು ವರ್ಷದ ಅವಧಿಯಲ್ಲಿ ಹಬ್ಬವನ್ನು ಮಾಡುತ್ತಾರೆ. ಈ ಹಬ್ಬದಲ್ಲಿಯೂ ಆಡು,

ಕುರಿ, ಕೋಳಿ ಮತ್ತು ಕೋಣಗಳನ್ನು ಬಲಿಕೊಡುವ ಸಂಪ್ರದಾಯವಿದೆ. ಪ್ರತಿವರ್ಷ ಎಲ್ಲರೂ ಮಾಡಿದಂತೆಯೇ ಇದೇ ಹಬ್ಬವನ್ನು ಬೇರೆ ಬೇರೆ ಊರುಗಳಲ್ಲಿರುವವರೆಲ್ಲಾ ಸೇರಿ ಹನ್ನೆರಡು ವರ್ಷಗಳಿಗೊಮ್ಮೆ ದೊಡ್ಡ ಹಬ್ಬವನ್ನು ಮಾಡುವ ಸಂಪ್ರದಾಯವೂ ಇವರಲ್ಲಿದೆ.

ಇವೆಲ್ಲವುಗಳ ಜೊತೆಗೆ ಚಾಮುಂಡಿ, ದುರ್ಗಾ, ಎಲ್ಲಮ್ಮ ಇನ್ನೂ ಮುಂತಾದ ಹೆಣ್ಣು ದೇವರುಗಳಿಗೆ ಆಗಾಗ ಚಿಕ್ಕ ಹಬ್ಬಗಳನ್ನು ಮಾಡುತ್ತಿರುತ್ತಾರೆ. ಇದಕ್ಕೆ ಅವಧಿಯ ನಿರ್ಧಿಷ್ಪತೆಯೇನೂ ಇರುವುದಿಲ್ಲ. ಈ ಹಬ್ಬಗಳು ಮುಖ್ಯವಾಗಿ ಜನರ ಕಷ್ಟ ಮತ್ತು ಸುಖ (ಅನುಕೂಲತೆ) ವನ್ನು ಅವಲಂಬಿಸಿರುತ್ತದೆ. ಒಂದು ಮಗುವಿಗೆ 'ಅಮ್ಮ' ಎದ್ದಿದೆ ಎಂಬ ವಿಷಯದಿಂದ ಹಿಡಿದು, ಒಬ್ಬನಿಗೆ ವ್ಯಾಪಾರದಲ್ಲಿ ಅಧಿಕ ಲಾಭ ಬಂದಿದೆ ಎನ್ನುವವರೆಗೆ ಈ ಹಬ್ಬಗಳ ಆಚರಣೆಯ ವ್ಯಾಪ್ತಿ ಹರಡಿದೆ.

ಪಾರ್ಧಿಯರಲ್ಲಿ ದೇವರನ್ನು ಕರೆಯುವುದು ಅಥವಾ ಒಲಿಸಿಕೊಳ್ಳುವುದು ಒಂದು ಕಲೆಯಂತಿದೆ. ಇದನ್ನು ನಿರ್ವಹಿಸಲು ಅವರಲ್ಲೆ ಒಂದು ಪುರೋಹಿತ ವರ್ಗವಿರುತ್ತಾದರೂ, ಇದಕ್ಕೆ ಯಾವುದೇ ಸ್ಥಾನಮಾನ ಅಥವಾ ಸವಲತ್ತಗಳಿರುವುದಿಲ್ಲ. ದೇವರನ್ನು ಕರೆಯುವ ವ್ಯಕ್ತಿ ಯಾವುದೇ ಮನೆಯ ನಡುಮನೆಯಲ್ಲಿರುವ ದೇವರ ಕಟ್ಟೆಯ ಮುಂದೆ ನಿಂತರೆ ಪಕ್ಕದಲ್ಲಿ ಒಬ್ಬ ಯಜಮಾನ 'ಡಾಕ್' (ಡಮರುಗು ದಂತಿರುವ ಒಂದು ವಾದ್ಯ ಇದಕ್ಕೆ ಒಂದು ಕಡೆ ಅಡ್ಡದಾರವನ್ನು ಸಡಿಲವಾಗಿ ಕಟ್ಟಿರುವುದರಿಂದ ಮತ್ತೊಂದು ಕಡೆ ಬಡಿದಾಗ ಧ್ವನಿ ದ್ವಿಗುಣಿಸಿ ಒಂದು ವಿಶೇಷ ನಾದ(ಗುಂಗು ಗುಯ್ ಗುಟ್ಟುತ್ತಿರುತ್ತದೆ)ವನ್ನು ಬಡಿಯುತ್ತಾ 'ದೇವತೆಯೇ ದೇವ ಆಯೋ' ಎಂದು ಪರಿ ಪರಿಯಾಗಿ ದೇವರನ್ನು ದಾದಾಜಿ ಅಥವಾ ಚಾಮುಂಡಿ, ದುರ್ಗಾ, ಎಲ್ಲಮ್ಮ ಮುಂತಾದ ದೇವರುಗಳನ್ನು ಹೊಗಳುತ್ತಾ ಕರೆಯುತ್ತಾರೆ. ಈ ರೀತಿಯಾಗಿ ಕರೆಯುವ ವ್ಯಕ್ತಿಯು ವಿಶೇಷವಾದ ಗಾಗರಿಯನ್ನು ತೊಟ್ಟಿರುತ್ತಾನೆ. ಈ ಕೆಂಪು ಬಣ್ಣದ ಗಾಗರಿಯು ಹೆಣ್ಣು ಮಕ್ಕಳ ಲಂಗದಂತಿರುತ್ತದೆ. (ಚಿತ್ರ ೩.೧೮) ಈ ದೇವರು ವ್ಯಕ್ತಿಯ ಮೈಮೇಲೆ ಬಂದಾಗ ಆತ ಒಂದು ಕಬ್ಬಿಣದ ಸಲಾಕೆಯಿಂದ ತನ್ನ ಬಲ, ಮತ್ತು ಎಡ ಭುಜಗಳಿಗೆ ಹೊಡೆದು ಕೊಳ್ಳಲು ಆರಂಭಿಸಿದಾಗ ಜನ ಇವನಿಗೆ ದೇವರು ಬಂದಿವೆ ಎಂದು ನಿರ್ಧರಿಸುತ್ತಾರೆ.

ಈ ದೇವರು ಒಂದು ಕಡೆ ಈ ರೀತಿಯ ಸಣ್ಣ ಹೆಜ್ಜೆ ಹಾಕುತ್ತಾ ಜನರನ್ನು ತನ್ನ ಕಡೆ ಆಕರ್ಷಿಸಿದರೆ, ದೇವರ ಜಗುಲಿಯ ಮುಂಭಾಗದಲ್ಲಿ ಒಂದು ಪಗಡೆಯಾಟದ ಬಟ್ಟೆಯೋಪಾದಿಯಲ್ಲಿರುವ ಪವಿತ್ರ ಬಟ್ಟೆಯ ಮೇಲೆ ಇದು ಚೀಲವೂ ಹೌದು, ಹರಡಿದರೆ ಬಟ್ಟೆಯು ಆಗುತ್ತದೆ. ಈ ಚೀಲದೊಳಗೆ ನಾಲ್ಕೈದು ಹಿಡಿಯಷ್ಟು ಗುಲಗಂಜಿ ಇರುತ್ತದೆ. ಹಿಡಿಯಲ್ಲೇ ಒಂದಿಷ್ಟು ತೆಗೆದು ನಾಲ್ಕು ನಾಲ್ಕು ಗುಲಗಂಜಿಗಳಿಗೆ ಒಂದೊಂದು ಗುಂಪು ಇಡುತ್ತಾರೆ. ಇದರಲ್ಲಿ ಸರಿ ಬಂದರೆ ಒಳ್ಳೆಯದಲ್ಲವೆಂದೂ, ಬೆಸ ಬಂದರೆ ಒಳ್ಳೆಯದೆಂದು ನಿರ್ಧರಿಸುತ್ತಾರೆ. ಆಗ ಅಪ್ಪಣೆಯನ್ನು ಯಜಮಾನ ಕೇಳುತ್ತಾನೆ.

ಇವರು ದೇವರುಗಳಿಗೆ ಕೊಡುವ ಬಲಿಯಲ್ಲಿ ಎರಡು ವಿಶೇಷಗಳಿವೆ. ಕೆಲವರು ಪ್ರಾಣಿಯ ಶಿರವನ್ನು ಆಯುಧಗಳಿಂದ ಎತ್ತಿ ಕಡಿದು ತುಂಡರಿಸಿದರೆ, (ಚಿತ್ರ ೩.೧೯) ಮತ್ತೆ ಕೆಲವರು ಚರಚರನೆ ಕೊಯ್ದು ಬಲಿಕೊಡುತ್ತಾರೆ.

ಎಲ್ಲವನ್ನು ಸರಳವಾಗಿ ಸ್ವೀಕರಿಸುವ ಈ ಜನರ ಆಚರಣೆಗಳಲ್ಲಿ ಅತಿ ವಿಜೃಂಭಣೆ ಎಂಬುದು ಕಡಿಮೆಯೇ ಇದೆ.

ದೇವ್‌ನೋ ಬುಲಾವೋ (ದೇವರನ್ನು ಕರೆಯುವುದು)

ಪಾರ್ಧಿಯರಲ್ಲಿ ಇದು ಒಂದು ವಿಶೇಷ ಧಾರ್ಮಿಕ ಆಚರಣೆಯಾಗಿದೆ. ದೇವರ ಕಟ್ಟೆಯ ಎದುರು ಮೂರು ಕಲ್ಲುಗಳನ್ನು ಹೂಡಿ ಖವಾಳಿಯನ್ನು ಮಾಡುತ್ತಾರೆ. ದೇವಾಯು ದೇವರು ಮೈಮೇಲೆ ಬಂದವನು ಸುಡುವ ಕಡಾಯಿಯಿಂದ ೯ ಖವಾಳಿಗಳನ್ನು ಬಲಗೈಯಿಂದಲೇ ಮತ್ತು ಬರಿಗೈಯಿಂದಲೇ ತೆಗೆಯುತ್ತಾನೆ. ಇದು ರಾತ್ರಿ ನಡೆಯುವ ಆಚರಣೆ. ದೇವರ ಕಟ್ಟೆ ಅಥವಾ ಗದ್ದಿಗೆಯಿಂದ ಹೊರಕ್ಕೆ ತೆಗೆಯುತ್ತಾರೆ. ಇದು ರಾತ್ರಿ ನಡೆಯುವ ಆಚರಣೆ. ದೇವರ ಕಟ್ಟೆ ಅಥವಾ ಗದ್ದಿಗೆಯಿಂದ ಹೊರಕ್ಕೆ ತೆಗೆಯುತ್ತಾರೆ. ಅಲ್ಲಿ ಅಮ್ಮ ಚಾಮುಂಡಿಯನ್ನು ಪೂಜಿಸಿಟ್ಟಿರುತ್ತಾರೆ. ಒಬ್ಬರು ಹಾಡು ಹೇಳುತ್ತಾ ದೇವರನ್ನು ಕರೆಯುತ್ತಾರೆ. ಗುಲಗಂಜಿಯಿಂದ ಇಡುವ ಶಾಸ್ತ್ರಕ್ಕೆ 'ವಧಾಹೊ ಮಾಂಡವಾನು' ಎಂದು ಕರೆಯುತ್ತಾರೆ. ಇದರರ್ಥ ಮಾತನಾಡುತ್ತಾ ದೇವರನ್ನು ಇಡುವುದು ಎಂದರ್ಥ.

ಇದರ ಲೆಖ್ಖದಂತೆ ಒಂದು ಹಿಡಿಗೆ ೧೫ ವಜೂರ್ ಗುಂಪಿಗೆ ಸರಿಯಾಗಿ ಐದೈದು ಬರಬೇಕು. ಅಲ್ಲಿಯವರೆಗೂ ಹಿಡಿ ಹಿಡಿದು ಇಡುವ ಕಾರ್ಯಮಾಡುತ್ತಲೇ ಇರುತ್ತಾರೆ.

ಹಕ್ಕಿಪಿಕ್ಕಿ(ಪಾರ್ಧಿ)ಯರ ದೇವರ ಕಾರ್ಯಗಳು

ಸಾವಂಡಿಯಾ ಎಂಬ ಬೆಡಗಿನವರ ಮನೆ ದೇವರು ಸರಕ್ ಸಾವಂಡಿಯಾ ಆಗಿದ್ದು, ಇವರ ಅಡ್ಡ ಹೆಸರು ಚೌಹ್ವಾಣ ಎಂದಿರುತ್ತದೆ. ಈ ಸಾವಂಡಿಯಾ ಬೆಡಗಿನವರನ್ನು ಸಾತ್‌ಮುಠಾನ್ ಬೆಡಗಿನವರೆಂತಲೂ ಕರೆಯುತ್ತಾರೆ. ಸಾವಂಡಿಯಾ ಬೆಡಗಿನವರು ಖುದ್ಧ (ಶಿವ), ಪಾರದಾನ್(ಗಂಗಾ)ದೇವಿ, ಅಜಮೀರ್‌ಖಿವಿ (ಚೋಡಲ ದೇವಿ) ಹಾಗೂ ಸೀಳ್(ಸುಂಕಲಮ್ಮ)ದೇವಿ ಈ ರೀತಿಯಾಗಿ ನಾಲ್ಕು ದೇವತೆಗಳ ಪೂಜೆಯನ್ನು ಬೇರೆ ಬೇರೆ ರೀತಿಯಲ್ಲಿಯೇ ಮಾಡುತ್ತಾರೆ.

ಸಾವಂಡಿಯಾ ಬೆಡಗಿನ ಎಲ್ಲಾ ಹಿರಿಯರು ಮತ್ತು ಪೂಜಾರಿಗಳು ಸೇರಿ ದೇವರ ಮನೆಯಲ್ಲಿ ಕುಳಿತು ದೇವರ ಹತ್ತಿರ ಇರುವ ಕೆಂಪು ಗುಲಗಂಜಿ ಅಥವಾ ಬಿಳಿ ಜೋಳದ ಕಾಳುಗಳ ಒಂದು ಹಿಡಿ ತಂದು ಅದರಲ್ಲಿ ಒಂದು ಚಿಟಿಕೆ ಹಿಡಿದು ತಮ್ಮ ಬಂತುಕೆಯ ಫಲ ವರವನ್ನು ಕೋರಿಕೊಂಡು, ತಮ್ಮ ಚಿಟಿಕೆಯಲ್ಲಿ ಹಿಡಿದ ಕಾಳುಗಳನ್ನು ನಾಲ್ಕು ಗುಂಪು ಮಾಡಿ ಕೊನೆಗೆ ಉಳಿಯುವ ನಾಲ್ಕು ಅಥವಾ ಎರಡು ಕಾಳು ಉಳಿದರೆ ಅದಕ್ಕೆ 'ಬಹು' ಎಂದು ಅರ್ಥ. ಒಂದು ಅಥವಾ ಮೂರು ಕಾಳುಗಳು ಉಳಿದರೆ ಅದನ್ನು ವಧಾವು ಎಂದು ಅರ್ಥ. ತಮಗೆ ಬೇಕಾದ ವರವನ್ನು ತಮ್ಮ ಮನದಲ್ಲಿ ತಿಳಿದುಕೊಂಡು ಅವುಗಳ ಗುಂಪು ಮಾಡಿ ಮುಂದಿನ ಕಾರ್ಯವನ್ನು ಮಾಡುತ್ತಾರೆ.

ಮೊದಲಿಗೆ ನಾಲ್ಕು ದೇವರುಗಳ ಗುಂಪನ್ನು ತೆರೆದು ಹೊಳೆ ನೀರಿನಲ್ಲಿ ಆ ಮೂರ್ತಿಗಳನ್ನು ತೊಳೆಯುತ್ತಾರೆ. ತೊಳೆದ ನಂತರ ಆ ಮೂರ್ತಿಗಳನ್ನೆಲ್ಲಾ ಗುಡಿಯಲ್ಲಿ ಕುಡಿಸುತ್ತಾರೆ. ಕುಡಿಸಿದ ನಂತರ ಆ ದೇವರುಗಳ ಹೆಸರಿನ ಮೇಲೆ ಗುಡಿಯ ಮೇಲೆ ಧ್ವಜವನ್ನು ಇರಿಸುತ್ತಾರೆ.

ಖುದ್ಧ(ಶಿವ)ದೇವ ಈ ದೇವರ ಹೆಸರಿನ ಮೇಲೆ ಗೋಧಿ, ಅಕ್ಕಿ, ಈ ಎರಡೂ ಧಾನ್ಯಗಳನ್ನು [illegible]

ಪೂಜಾರಿಯವರೇ ಸ್ವಸ್ತಿಕ ಆಕಾರದಲ್ಲಿ ನೆಲದ ಮೇಲೆ ಇಳಿಸುತ್ತಾರೆ. ಆ ಸ್ವಸ್ತಿಕ ಮೇಲೆ ಖಿದ್ದನ ಮೂರ್ತಿಯನ್ನು ಇಡುತ್ತಾರೆ. ಆ ಮೇಲೆ ತುಪ್ಪದ ದೀಪ ಹಚ್ಚಿ ೭ ಸಾರಿ ಬೆಳಗುತ್ತಾರೆ. ನಂತರ ಹೋತದ ಮರಿಯನ್ನು ಕುತ್ತಿಗೆಗೆ ತಿವಿದು ಬಲಿ ತೆಗೆದು ಕೊಳ್ಳುತ್ತಾರೆ. ಆಗ ಆ ಹೋತದಿಂದ ಬರುವ ರಕ್ತವನ್ನು ಖಿದ್ದ ಶಿವ ಮೂರ್ತಿಯ ಮುಖದ ಮೇಲೆ ನೈವೇಧ್ಯ ಮಾಡುತ್ತಾರೆ. ಆ ಹೋತದ ಮರಿಯನ್ನು ದೇಹದಿಂದ ತಲೆಯನ್ನು ಕತ್ತರಿಸಿ, ಸ್ವಸ್ತಿಕ ಚಿತ್ರದ ಮುಂದೆ ಇಡುತ್ತಾರೆ. ನಂತರ ಅದರ ಬಲಗಾಲನ್ನು ಕತ್ತರಿಸಿ ಹೋತದ ಬಾಯಲ್ಲಿ ಇಡುತ್ತಾರೆ. ಈ ರೀತಿಯಾಗಿ ಬಲಿಕೊಟ್ಟ ನಂತರ ಅದರ ಚರ್ಮವನ್ನು ಸುಲಿದು ಹೊಟ್ಟೆಯ ಬಲ ಬಾಗದಲ್ಲಿ ಇರುವ ಎಲ್ಲಾ ಅಂಗಾಂಗಗಳನ್ನು ಕೊಯ್ದು ತೆಗೆದು, ಗೋಧಿ ಚಪಾತಿಗಳನ್ನು ಎಣ್ಣೆಯಲ್ಲಿ ಸುಟ್ಟು, ನಂತರ ಆ ಏಳು ಚಪಾತಿಗಳನ್ನು ಸಾವಂಡಿಯಾ ಬೆಡಗಿನ ಎಲ್ಲರೂ ತಮ್ಮ ಎಲ್ಲಾ ಕೈಗಳನ್ನು ಗುಂಪು ಮಾಡಿಸಿ, ಆ ಕೈಗಳ ಮೇಲೆ ಚಪಾತಿಯನ್ನು ಅಗಲವಾಗಿ ಇಡಬೇಕು. ಇದರ ಮೇಲೆ ಬೇಯಿಸಿದದ ಹೋತದ ಅಂಗಗಳನ್ನು ಇಡಬೇಕು. ಅಕ್ಕಿಯ ಮುದ್ದೆ ಮಾಡಿ ಇವೆಲ್ಲದರ ಮಧ್ಯ ಇಡಬೇಕು. ನಂತರ ಇದನ್ನು ಸೇರಿದ ಎಲ್ಲರೂ ಸೇರಿ ಎಲ್ಲಾ ದೇವರುಗಳನ್ನು ಮನದಲ್ಲಿ ನೆನೆದು ದೇವರ ಮುಂದೆ ಇಡಬೇಕು. ಇಷ್ಟು ಮಾಡಿದ ನಂತರ ಖಿದ್ಧ ಶಿವ ದೇವರ ಕಾರ್ಯ ಮುಗಿದಂತೆ.

ಪಾರದಾನ್(ಗಂಗಮ್ಮ)ದೇವಿ ಈ ಪಾರಾದಾನ್ ದೇವಿಯನ್ನು ಗಂಗಾದೇವಿ ಎಂತಲೂ ಕರೆಯುತ್ತಾರೆ. ಈ ದೇವಿಯ ಪೂಜಾ ವಿಧಾನ ಹೇಗೆಂದರೆ, ಮೊದಲಿಗೆ ಎರೆ ಮಣ್ಣನ್ನು ತಂದು ಅದನ್ನು ಹದ ಮಾಡಿ ಅದರ ಮೂರು ಗುಂಡುಗಳನ್ನು ತಯಾರಿಸಿ ಅದರ ಒಲೆಯನ್ನು ಮಾಡಬೇಕು. ರಾತ್ರಿ ಒಂದು ಗಂಟೆಯ ಸುಮಾರಿಗೆ ಆ ಒಲೆಗೆ ಸುಂದರವಾಗಿ ಅಲಂಕಾರವನ್ನು ಮಾಡುತ್ತಾರೆ. ಇದಾದ ನಂತರ ಆ ಒಲೆಗೆ ಬೆಂಕಿ ಇಡುತ್ತಾರೆ. ನಂತರ ಕಡಾಯಿಯಲ್ಲಿ ತುಪ್ಪ ಹಾಕಿ, ತುಪ್ಪವನ್ನು ಕುದಿಸುತ್ತಾ ಅದರಲ್ಲಿ ಪೂಜಾರಿಯು ದೇವರ ಮೂರ್ತಿಗಳನ್ನು ನೆನೆಸುತ್ತಾರೆ. ಇಂಥ ಕುದಿಯುತ್ತಿರುವ ತುಪ್ಪದಲ್ಲಿ ಪೂಜಾರಿಯು ಹಾಗೆಯೇ ಕೈ ಹಾಕುತ್ತಿರುತ್ತಾನೆ. ನಂತರ ಅದೇ ಕಡಾಯಿಯಲ್ಲಿ ಗೋಧಿ ಹಿಟ್ಟಿನ ೭ ಚಪಾತಿಗಳನ್ನು ಮಾಡುತ್ತಾರೆ. ಮಧ್ಯಾನ್ಹ ಸುಮಾರು ೧೨ ಗಂಟೆಯ ಹೊತ್ತಿಗೆ ಒಂದು ಹೋತವನ್ನು ಅದರ ಕಾಲುಗಳನ್ನು ಕಟ್ಟಿ ಚೂರಿಯಿಂದ ಕುತ್ತಿಗೆ ಕೊಯ್ದು ದೇವರ ಮುಂದೆ ಮಣ್ಣಿನ ಕುಡಲ ಮಾಡಿ, ಆ ಕುಡಲದಲ್ಲಿ ಆ ಹೋತದ ರಕ್ತವನ್ನು ಹಾಕುತ್ತಾರೆ. ನಂತರ ಆ ರಕ್ತದಲ್ಲಿಯೇ ದೇವರನ್ನು ಕುಡಿಸುತ್ತಾರೆ. ಆ ರೀತಿ ಕುಡಿಸಿದ ನಂತರ ನೆರೆತ ಪೂಜಾರಿಗಳು ಆ ರಕ್ತವನ್ನು ತಮ್ಮ ಕೈಗಳಿಂದ ರಕ್ತವನ್ನು ಕುಡಿಯುತ್ತಾರೆ.

ಅಜಮೀರ್ ಖಿಡವೀ ಜೋಡಲಿದೇವಿ ಈ ದೇವರ ಪೂಜೆ ಮಾಡಬೇಕಾದರೆ, ಪಾರ್‌ದನ್ ದೇವಿಗೆ ಮಾಡಿದ ಒಲೆಗಳ ಮೇಲೆಯೇ ಬೆಂಕಿ ಹಚ್ಚುತ್ತಾರೆ. ಅಂದಿನ ರಾತ್ರಿ ೩ ಗಂಟೆಗೆ ೨೦ ಕೆ.ಜಿ. ಯಷ್ಟು ಕುದಿಯುವ ಪಾತ್ರೆಗಳನ್ನು ಒಲೆಯ ಮೇಲೆ ಇಡುತ್ತಾರೆ. ಅಜಮೀರ್ ಖಿಡವಿ ದೇವಿಯ ಮೂರ್ತಿಯನ್ನು ತಂದು ಪಾತ್ರೆಗವಾಗ ಬಾಯಿ ಮೇಲೆ ಇಟ್ಟು ತುಪ್ಪವನ್ನು ಪಾತ್ರೆಗದಲ್ಲಿ ಬಿಳುವಂತೆ ಹಾಕುತ್ತಾರೆ. ಬೆಲ್ಲ, ರವಾ, ತುಪ್ಪ, ಪಾತ್ರೆಗದಲ್ಲಿ ಹಾಕಿದ ನಂತರ ದೇವಿಯ ಮೂರ್ತಿಯನ್ನು ತಂದು ಪಾತ್ರೆಗದಲ್ಲಿ ಮೂರ್ತಿಯನ್ನು ಎದ್ದುತ್ತಾರೆ. ಈ ರೀತಿಯಾಗಿ ಎದ್ದಿದ ನಂತರ ದೇವರನ್ನು ಅದರ ಸ್ಥಳದಲ್ಲಿ ಕುಡಿಸಬೇಕು. ಕುಡಿಸಿದ ನಂತರ. ಬೆಲ್ಲ ಹಾಗೂ [illegible] ಪಾತ್ರೆಗದಲ್ಲಿ ಹಾಕಬೇಕು. ಇವೆಲ್ಲಾ ಹಾಕಿದ ನಂತರ ಅದನ್ನು ಚೆನ್ನಾಗಿ ಕುದಿಸುತ್ತಾರೆ. ಈ ರೀತಿಯಾಗಿ ಕುದ್ದ

ನಂತರ ಅದರಲ್ಲಿ ರವಾ, ಅಕ್ಕಿ, ಹಾಕಿ ಸೌಟಿನಿಂದ ತಿರುಗಿಸುತ್ತಾರೆ. ಈ ರೀತಿಯಾಗಿ ತಿರುವುತ್ತಿರುವಾಗ ತುಪ್ಪ ಕೂಡಾ ಸವರುತ್ತಾರೆ. ಈ ರೀತಿ ಮಾಡಿ ಚೆನ್ನಾಗಿ ಕುದಿಸಿದ ನಂತರ ಆ ಪಡಗವನ್ನು ಕುಂಕುಮದಿಂದ ಶೃಂಗಾರ ಮಾಡುತ್ತಾರೆ. ಸೂರ್ಯ ಉದಯದ ಸಮಯದಲ್ಲಿ ಪೂಜಾರಿಯು ದೇವರ ಬಟ್ಟೆಯನ್ನು ಗಾಗರಿ ಹಾಕಿಕೊಳ್ಳುತ್ತಾನೆ. ಮತ್ತು ನವಿಲಿನ ಗರಿಯನ್ನು ಹಿಡಿದು ದೇವರ ಕಟ್ಟೆಯ ಮೇಲೆ ಚೆನ್ನಾಗಿ ಕುಣಿಯುತ್ತಾನೆ. ಕುಣಿದು ಕುಣಿದು ಉದಯದ ಸಮಯದಲ್ಲಿ ಪೂಜಾರಿ ಒಂದು ಪಡಗದಲ್ಲಿ ಇರುವ ಸುಡುತ್ತಿರುವ ಹುಗ್ಗಿಯನ್ನು ಕೈಯಲ್ಲಿ ತೆಗೆದು ಸೂರ್ಯ ದೇವರಿಗೆ ತೋರಿಸಿ, ಮತ್ತೇ ಪಗಡದಲ್ಲಿ ೭ ಸಾರಿ ಕೈಯನ್ನು ಹಾಕಿ ತೆಗೆಯುತ್ತಾರೆ. ಮಣ್ಣಿನ ಪರಣೆಯಲ್ಲಿ ಎಡೆ ಮಾಡಿ ದೇವರ ಮುಂದೆ ಇಟ್ಟು, ಮಧ್ಯದಲ್ಲಿ ತುಪ್ಪ ಮತ್ತು ಬೆಲ್ಲದ ಚೂರನ್ನು ಇಡುತ್ತಾರೆ.

ಮಧ್ಯಾನ್ಹ ೧೨ ಗಂಟೆಗೆ ಕಸಿಮಾಡಿದ ಹೋತವನ್ನು ದೇವರಿಗೆ ಬಲಿ ಕೊಡುವ ಸಮಯದಲ್ಲಿ ಮೂರು ದೇವರು ಅಂದರೆ ಪಾರದಸ್ ದೇವಿ, ಅಗಕಡಿದೇವಿ ಮತ್ತು ಸೀಳ್‌ದೇವಿ ಈ ಮೂರು ದೇವರಗಳನ್ನು ಹಿಂದೆ ಮಾಡಿದ ಮಣ್ಣಿನ ಕುಂಡದಲ್ಲಿ ಇಡಬೇಕು. ಇಟ್ಟು ನಂತರ ಹೋತವನ್ನು ಚೂರಿಯಿಂದ ಕುತ್ತಿಗೆಗೆ ತಿವಿದು ರಕ್ತವನ್ನು ಆ ಕುಂಡದಲ್ಲಿ ಹಾಕುತ್ತಾರೆ.

ಸೀಳ್‌ದೇವಿ (ಸುಂಕಲಮ್ಮ) ಈ ದೇವಿಯ ಪೂಜೆ ಮಾಡಬೇಕಾದರೆ, ಮಧ್ಯಾನ್ಹ ೧೨ ಗಂಟೆಗೆ ಒಂದು ಆಡನ್ನು ಬಲಿಕೊಡುತ್ತಾರೆ. ಹಿಂದೆ ಮಾಡಿದ ಮಣ್ಣಿನ ಕುಂಡದಲ್ಲಿ ರಕ್ತವನ್ನು ಹಾಕುತ್ತಾರೆ. ಬೆಳಿಗ್ಗೆ ೫ ಗಂಟೆಗೆ ಮಣ್ಣಿನ ಒಲೆಯನ್ನು ಈ ದೇವಿಯಿಂದ ಬೇರೆ ಕಡೆಗೆ ಮಾಡಬೇಕು. ಈ ರೀತಿಯಾಗಿ ಬೇರೆ ಮಾಡಿದ ಒಲೆಯ ಮೇಲೆ ಒಂದು ಕಡಾಯಿಯನ್ನು ಇಟ್ಟು ಬೆಂಕಿ ಹಾಕಿ, ಕಡಾಯಿಯನ್ನು ಕಾಯಿಸಬೇಕು. ಆಗ ಈ ಕಡಾಯಿಯಲ್ಲಿ ಒಳ್ಳೆಣ್ಣೆಯನ್ನು ಹಾಕಿ ಅದನ್ನು ಚೆನ್ನಾಗಿ ಕುದಿಸಬೇಕು. ಕುದಿಸುತ್ತಿರುವ ಆ ವೇಳೆಯಲ್ಲಿ ೭ ಗೋಧಿ ಹುಂಡಿ ಗಳನ್ನು ಮಾಡಿ, ಒಂದು ಆ ದೇವಿಯ ಮುಂದೆ ಇಡಬೇಕು. ಮತ್ತು ಗೋಧಿ ಹಿಟ್ಟಿನ ೭ ಚಪಾತಿಗಳನ್ನು ಮಾಡಬೇಕು. ಇವುಗಳನ್ನು ಕೊರೆಯುವಾಗ ಯಾವುದೇ ಬೇರೆ ಕೈಯಿಂದ ತಿರುವುತ್ತ ಕೊರೆಯಬೇಕು. ಮತ್ತು ಪಾರದಸ್‌ದೇವಿ ಮತ್ತು ಸೀಳ್‌ದೇವಿಗೆ ಬಲಿ ಕೊಟ್ಟ ಹೊತ್ತಿನ ಬಲಭಾಗದಲ್ಲಿ ಇರುವ ಅಂಗಗಳು ೭ ಜಾತಿಯ ಮರದ ಬರಲಗಳನ್ನು ತಂದು ಅವುಗಳನ್ನು ಚೂಪು ಮಾಡಿ ಅವುಗಳಿಗೆ ತುಪ್ಪವನ್ನು ಸವರಿ ಒಲೆಯ ಮೇಲೆ ಚೆನ್ನಾಗಿ ಸುಡುತ್ತಾರೆ. ಸುಟ್ಟ ಕರಿಗಳ ಪೂಜಾರಿಗಳು ಅವುಗಳನ್ನು ಸುಡುವಾಗ ಮುಟ್ಟುತ್ತಾರೆ. ಹೀಗೆ ಮಾಡುವುದೇ ದೇವರಿಗೆ ನೈವೇಧ್ಯ ಮಾಡಿದಂತೆ.

ಇದು ನಂತರ, ಹಿಂದೆ ಮಾಡಿದ ದೇವರ ಕಾರ್ಯಗಳ ಎಡೆ ಮಾಡಿದ ಎಡೆಯನ್ನು ಎಲ್ಲರೂ ಸೇರಿ ಮತ್ತು ದೇವರ ಹೆಸರು ಹೇಳಿ ಮತ್ತೇ ಅಲ್ಲೇ ಇಡುತ್ತಾರೆ.

ಈ ರೀತಿಯಾಗಿ ಈ ಎಲ್ಲಾ ಕಾರ್ಯಕ್ರಮಗಳ ಮುಗಿದ ಮೇಲೆ ದೇವರ ಎಲ್ಲಾ ಮೂರ್ತಿಗಳನ್ನು ಬುಟ್ಟಿ ಗಳಲ್ಲಿ ಕಟ್ಟಿ, ಮತ್ತೆ ಅದೇ ಹಳೆಯ ಜಾಗದಲ್ಲಿ ಇಡುತ್ತಾರೆ. ಹಾಗೆ ಇಟ್ಟು ನಂತರ ತುಂಬಿದ ಚಂಬನ್ನು ತಂದು ಎಲ್ಲರ ಮೇಲೆ ನೀರನ್ನು ಚುಮುಕಿಸುತ್ತಾರೆ.

ಧಾನ್ಯಗಳಿಂದ ಮಾಡಿದ ಪಾರಬುತ್ತಿ ಕಸ್ಸಿಕ ಮತ್ತು ಎಣ್ಣೆಯ ಕುಡಾಲದಲ್ಲಿ ಮುಚ್ಚು ಬಿಡದೆ ಯಾವುದೇ ತರಹ ಮುಕ್ಕ ಹಾಕದಂತೆ ನೋಡಿಕೊಳ್ಳಬೇಕು.

ಮೂರು ದಿವಸಗಳ ನಂತರ ಸಾಯಂಕಾಲ ಎಲ್ಲರು ಸೇರಿ ಪೂಜಾರಿಯ ಮೈಮೇಲೆ ದೇವರು ಬಂದು ಚಬಕದಿಂದ ಕುಚಾರವನ್ನು ಹೊಡೆಯುತ್ತಾನೆ. ಎಡೆ ಮಾಡಿದ ಎಲ್ಲಾ ಪ್ರಸಾದವನ್ನು ಎಲ್ಲರಿಗೂ ಹಂಚುತ್ತಾರೆ.

ಪಿಂಪಳಾ ದೇವಿಯ ಪೂಜಾ ಕಾರ್ಯಕ್ರಮಗಳು

ಪಿಂಪಳಾಜ ದೇವಿಯ ಇತರೇ ಹೆಸರುಗಳು ಈ ಕೆಳಗಿನಂತಿವೆ

ಖದ್ದ (ಶಿವ)

ಪಿಂಪಳಾ ದೇವಿ (ಕಾಳಿ)

ಮುಡಿಯಂ

ಪಾರ್ಥನ್ ದೇವಿ (ಗಂಗಮ್ಮ)

ಸೀಳ್‌ದೇವಿ (ಸುಂಕಲಮ್ಮ)

ಈ ಮೇಲೆ ಕಾಣಿಸಿದ ೫ ದೇವತೆಗಳ ವಿವರವಾದ ಕಾರ್ಯಗಳು ಈ ಕೆಳಗಿನಂತಿವೆ. ಇವರ ಬೆಡಗು ಪಿಂಪಳಾಜ ಎಂದಿದ್ದು ಇವರ ಅಡ್ಡ ಹೆಸರು ಕಾಳೆ ಎಂದಿರುತ್ತದೆ. ಪಿಂಪಳಾಜ ಉಪಪಂಗಡದಲ್ಲಿ ಪೂಜೆ ಮಾಡಬೇಕೆಂದರೆ, ಪಿಂಪಳಾಜ ಬೆಡಗಿನವರು ಎಲ್ಲರೂ ಒಂದೆಡೆ ಸೇರಿ ದೇವರ ಗುಡಿ ಮುಂದೆ ಕುಳಿತು, ದೇವರ ಪೂಜೆಯನ್ನು ಮಾಡುತ್ತಾರೆ. ಪಿಂಪಳಾಜದ ಎಲ್ಲಾ ಬಂಧುಬಳಗವೆಲ್ಲಾ ಒಟ್ಟು ಸೇರಿ ಈ ಮೇಲೆ ತಿಳಿಸಿದ ಐದು ದೇವರ ಮೂರ್ತಿಗಳನ್ನು ತೆಗೆದುಕೊಂಡು, ಗಂಗಾಸ್ನಾನಕ್ಕೆ ಹೋಗುತ್ತಾರೆ. ಈ ದೇವರು ಗಂಗಾಸ್ನಾನ ಮಾಡಬೇಕೆಂದರೆ, ಪೂಜೆಗೆ ಬೇಕಾಗುವ ಸಾಮಾನುಗಳನ್ನು ಅಂದರೆ, ೧೦ ಕೆ.ಜಿ. ಗೋಧಿಹಿಟ್ಟು, ೫ ಕೆ.ಜಿ. ತುಪ್ಪ, ೫ ಕೆ.ಜಿ. ಬೆಲ್ಲ, ೫ ಕೆ.ಜಿ. ಲೋಬಾನ, ೫ ಕೆ.ಜಿ. ಕರ್ಪೂರ, ಹೂವು, ಕುಂಕುಮ, ಬಂಡಾರ ಇವು ಎಲ್ಲಾ ತೆಗೆದುಕೊಂಡು ಹೋಗಿ, ದೇವರ ಮೂರ್ತಿಗಳನ್ನು ನದಿಯ ದಡದ ಮೇಲೆ ಹೊಸ ಬಟ್ಟೆ ಹಾಕಿ, ಅದರ ಮೇಲೆ ಆ ದೇವರ ಮೂರ್ತಿಗಳನ್ನು ಸಾಲಾಗಿ ಇಡುತ್ತಾರೆ. ಆ ದೇವರ ಮೂರ್ತಿಗಳ ಮುಂದೆ ಒಂದು ಸಣ್ಣ ಕುಣಿತಗಳು ಅದರಲ್ಲಿ ಸುಮಾರು ೨೦ರಷ್ಟು ಕುಳ್ಳು ಹಾಕಿ ಅದಕ್ಕೆ ಬೆಂಕಿ ಹಚ್ಚುತ್ತಾರೆ. ಆ ಬೆಂಕಿಯು ಹಚ್ಚಿದ ಮೇಲೆ ಈ ಮೇಲೆ ಇರುವ ಸಾಮಾನುಗಳನ್ನು ತಂದು ಗೋಧಿ ಹಿಟ್ಟು, ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಕೈಯ ಮೇಲೆ ಚಪಾತಿ ಮಾಡಿ ಆ ಚಪಾತಿಯನ್ನು ಆ ಸುಡುವ ಬೆಂಕಿಯಲ್ಲಿ ಹಾಕುತ್ತಾರೆ. ಅದೇ ಬೆಂಕಿಯಲ್ಲಿ ಕುದಿಸುತ್ತಾರೆ. ಆ ಚಪಾತಿಗಳನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ಆ ದೇವರ ಮೂರ್ತಿಗಳ ಮುಂದೆ ಇಡುತ್ತಾರೆ. ಇದಾದ ಮೇಲೆ ಈ ಚಪಾತಿಗಳಲ್ಲಿ ಅತಿ ಮೆದುವಾದ ಚಪಾತಿಯನ್ನು ತುಪ್ಪದಲ್ಲಿ ಚೆನ್ನಾಗಿ ಉಂಡಿ ಮಾಡಿ, ಈ ಪಿಂಪಳಾಜ ಬೆಡಗಿನವರ ಹಿರಿಯ ಪೂಜಾರಿ ಆ ಉಂಡಿಯನ್ನು ತೆಗೆದು ನದಿಯ ನಡುವೆ ಹೋಗಿ ಮೈಮೇಲೆ ದೇವರು ಬಂದು ಸಾಕ್ಷ್ಯವಾದವರು ವಚನ ಕೊಟ್ಟು, ನೀರಿನಲ್ಲಿ ಮುಳುಗಿ ಆ ಉಂಡಿಯನ್ನು ಬಿಟ್ಟು ಬಿಡುತ್ತಾನೆ. ಆವಾಗ ನದಿಯಿಂದ ಹೊರಗೆ ಬಂದು ಆ ದೇವರ ಮೂರ್ತಿಗಳ ಚಪಾತಿಯನ್ನು ಚೆನ್ನಾಗಿ ಪುಡಿ ಮಾಡಿ ಆ ಬೆಲ್ಲದ ನೀರಿನಲ್ಲಿ ಕಲಿಸಿ, ಅಲ್ಲಿಗೆ ಬಂದಿರುವ ಭಕ್ತರಿಗೆಲ್ಲಾ ಪ್ರಸಾದವೆಂದು ಹಂಚುತ್ತಾರೆ.

ಪಿಂಪಳಾಜ ಬೆಡಗಿನಲ್ಲಿ ದೇವರ ಪೂಜೆ ಮಾಡುವ ವಿಧಾನ

ಪಾರ್ಧಿನ್‌ದೇವಿ (ಗಂಗಮ್ಮದೇವಿ) ಈ ದೇವಿಗೆ ಪೂಜೆ ಮಾಡಬೇಕಾದರೆ ೧೦ ಕೆ.ಜಿ. ಒಳ್ಳೆ ಅಕ್ಕಿ ತಂದು ಒಂದು ಹೊಸಗಡಿಗೆ ತಂದು ಆ ಗಡಿಗೆಯಲ್ಲಿ ಅನ್ನ ಮಾಡಿ, ಎರಡು ಮಣ್ಣಿನ ಕುಡಿಕೆ ತಂದು, ಎರಡು ದೇವರ ಮೂರ್ತಿಗಳು ಪಿಂಪಳಾದೇವಿ ಮತ್ತು ಪಾರ್ಧನ್ ದೇವಿ ಈ ದೇವರ ಮುಂದೆ ಒಂದೊಂದು ಕುಡಿಕೆ ಇಟ್ಟು, ಅದರ ಮೇಲೆ ಅನ್ನ ತೆಗೆದು, ಇದು ಆದ ಮೇಲೆ ಹಿರಿಯ ಪೂಜಾರಿ ಬಂದು ಆ ಎರಡು ತಟ್ಟೆಯ ಮೇಲೆ ತುಪ್ಪ ಹಾಕುತ್ತಾನೆ. ಅದಕ್ಕಾಗಿ ಇವರ ಬೆಡಗಿನಲ್ಲಿ ಯಾರಾದರೂ ಸಾರಾಯಿ ಕುಡಿದರೆ ಅನ್ನ ತಿನ್ನುವದಿಲ್ಲ. ಇದು ಪಾರ್ಧಿನ್ ದೇವಿಗೆ ಪೂಜೆ ಮಾಡುವ ವಿಧಾನವಾಗಿದೆ.

ಪಿಂಪಳಾ ದೇವಿ : ಈ ದೇವಿಗೆ ಪೂಜೆ ಮಾಡಬೇಕಾದರೆ, ಈ ದೇವಿಗೆ ಚೆನ್ನಾಗಿ ಇರುವ ಒಂದು ಹೋತ ತರುತ್ತಾರೆ. ಈ ಹೋತಕ್ಕೆ ಚೆನ್ನಾಗಿ ಕೊಂಬು ಇರಬೇಕು. ಮತ್ತು ಇದರ ಮೈ ಮೇಲೆ ಯಾವುದೇ ತರಹದ ಚುಕ್ಕೆಗಳಿರಬಾರದು. ಅಂಥಹ ಹೋತವನ್ನು ದೇವರ ಗುಡಿಯ ಮುಂದೆ ಕಟ್ಟುತ್ತಾರೆ. ಈ ಹೋತಿಗೆ ಕಟ್ಟಲು ಒಳ್ಳೆಯ ಬತ್ತಿಯನ್ನು ತರುತ್ತಾರೆ. ಈ ಬತ್ತಿಯನ್ನು ತುಪ್ಪದಲ್ಲಿ ಚೆನ್ನಾಗಿ ಕಲಿಸಿ, ಆ ಹೋತದ ಕೊಂಬಿಗೆ ಆ ತುಪ್ಪದಲ್ಲಿ ಕಲಿಸಿದ ಬತ್ತಿಯನ್ನು ಕಟ್ಟುತ್ತಾರೆ. ಆವಾಗ ಬೆಳಗಿನ ಜಾವದಲ್ಲಿ ಹಿರಿಯ ಪೂಜಾರಿಯ ಮೈ ಮೇಲೆ ಬಂದು ಆ ಕಟ್ಟಿದ ಬತ್ತಿಯನ್ನು ದೀಪ ಹಚ್ಚುತ್ತಾರೆ. ಆ ಸುಡುತ್ತಿರುವ ಬತ್ತಿಯನ್ನು ಪೂಜಾರಿಯು ಕೈಯಲ್ಲಿ ಆರಿಸುತ್ತಾನೆ. ಆರಿಸಿದ ಬತ್ತಿಯನ್ನು ಇಡುತ್ತಾರೆ. ಇದೆಲ್ಲಾ ಆದ ಮೇಲೆ ಆ ಹೋತವನ್ನು ಗುಡಿಯ ಹೊಸ್ತಿಲಿನಲ್ಲಿ ಕೊಯ್ಯುತ್ತಾರೆ. ಇದೆಲ್ಲಾ ಆದ ಮೇಲೆ ಚೆನ್ನಾಗಿ ಇರುವ ಮಾಂಸವನ್ನು ತೆಗೆದು ಜಾಲಿ ಮರದ ಸಣ್ಣ ಏಳು ಕಟ್ಟಿಗೆಗಳನ್ನು ತಂದು ಅದರಲ್ಲಿ ೭ ಕಟ್ಟಿಗೆಗಳನ್ನು ಒಂದೊಂದು ಕಟ್ಟಿಗೆಯಲ್ಲಿ ಮಾಂಸವನ್ನು ತೂರಿ ಚೆನ್ನಾಗಿ ಕಾಯಿಸಿ ಆ ದೇವರ ಮೂರ್ತಿಗಳ ಮುಂದೆ ಇಡುತ್ತಾರೆ. ಇದಾದ ಮೇಲೆ ಹಿರಿಯ ಪೂಜಾರಿಯು ಕರಿ ಮಣ್ಣಿನಲ್ಲಿ ಒಂದು ಒಲೆಮಾಡಿ, ಆ ಒಲೆ ಮೇಲೆ ತುಪ್ಪದ ಕಡಾಯಿ ಏರಿಸುತ್ತಾರೆ. ಆ ತುಪ್ಪದ ಕಡಾಯಿಯಲ್ಲಿ ಪೂಜಾರಿ ೭ ಚಪಾತಿ ಮತ್ತು ೭ ಸಣ್ಣ ಉಂಡಿಗಳನ್ನು ಮಾಡಿ ಆ ಕಾಸಿದ ತುಪ್ಪ ಚೆನ್ನಾಗಿ ಸುಟ್ಟು ಹೊರಗೆ ತೆಗೆದು ದೇವರ ಮೂರ್ತಿಗಳ ಮುಂದೆ ಇಡುತ್ತಾರೆ. ಆ ಹೋತದ ಮಾಂಸವನ್ನು ಚೆನ್ನಾಗಿ ತುಂಡು ತುಂಡು ಮಾಡಿ ಅಡುಗೆ ಮಾಡಿ ಸೇರಿ ಊಟ ಮಾಡುತ್ತಾರೆ.

ಶೀಳ್ ದೇವಿ : ಈ ದೇವಿಗೆ ಪೂಜೆ ಮಾಡಬೇಕಾದರೆ ಈ ದೇವಿಯ ಹೆಸರಿನ ಮೇಲೆ ಎಣ್ಣೆ ಕಡಾಯಿ ಏರಿಸಿ ಅದನ್ನು ಚೆನ್ನಾಗಿ ಕುದಿಸುತ್ತಾರೆ. ಈ ದೇವಿಯ ಹೆಸರಿನ ಮೇಲೆ ಒಬ್ಬನೆ ಒಬ್ಬ ಪೂಜಾರಿ ಕೆಲಸ ಮಾಡುತ್ತಾನೆ. ಈ ಪೂಜಾರಿಯು ಕೆಲಸ ಏರಿ ಮಣ್ಣನ್ನು ತಂದು ಒಂದು ಸಣ್ಣ ಕುಡಿಕೆಯನ್ನು ಮಾಡಿ, ಆ ಕುಡಿಕೆಯಲ್ಲಿ ಪಿಂಪಳಾದೇವಿ ಮತ್ತು ಪಾರ್ಧಿನ್ ದೇವಿ ಈ ಎರಡು ದೇವಿಗಳ ಮೂರ್ತಿಯನ್ನು ಆ ಕುಡಿಕೆಯಲ್ಲಿ ಇಡುತ್ತಾರೆ.

ಬಿದ್ದ ಶಿವ ಈ ಮೂರ್ತಿ ದೇವರ ಹೆಸರಿನ ಮೇಲೆ ಒಂದು ಕೋಣವನ್ನು ಕಟ್ಟುತ್ತಾರೆ. ಈ ಕೋಣವನ್ನು ಬೆಳಗಿನ ಜಾವದಲ್ಲಿ ಗುಡಿ ಹೊಸ್ತಿಲಿನಲ್ಲಿ ಕೋಣದ ಕುತ್ತಿಗೆಯನ್ನು ಕೊಯ್ದು [illegible] [illegible] [illegible] ಮೂರ್ತಿಯ ಮೇಲೆ ಪಾರಭತ್ತಿ ಆದರೆ ಎಲ್ಲಾ ಹೋತ ಅಥವಾ ಕೋಣದ ಮಾಂಸ ಚೆನ್ನಾಗಿ ಕಡಿದು [illegible]

ಗಡಗಿಯಲ್ಲಿ ಮಾಂಸವನ್ನು ಹಾಕಿ ಚೆನ್ನಾಗಿ ಕುದಿಸಿದ ಮೇಲೆ ಇದನ್ನು ತೆಗೆದು ಎಲ್ಲಾ ಪಿಂಪಳಾಜ ಬೆಡಗಿಃ ಪೂಜಾರಿ ಗುಡಿಯಲ್ಲಿ ಎಲ್ಲರೂ ಕುಳಿತು ಕೈಯಲ್ಲಾ ಚಾಚಿ ಆ ಕುದಿಸಿದ ಮಾಂಸ ತೆಗೆದು ಎಲ್ಲರ ಕೈಯ ಮೇಲೆ ಇಟ್ಟು ಎಲ್ಲಾ ಹಿರಿಯರ (ಸತ್ತ ಹೋದವರ) ಹೆಸರು ಹೇಳಿ ಲಾಲಾಯಿ ಹೇಳುತ್ತಾರೆ. ಇದು ಆದ ಮೇಲೆ ಲಾಲಾಯಿ ಮಾಡಿದ ಮಾಂಸ ಆ ದೇವರ ಮೂರ್ತಿಗಳ ಮುಂದೆ ಇಡುತ್ತಾರೆ. ಇದಕ್ಕೆ ಅವರು ಪಾರಬತ್ತಿ ಎನ್ನುತ್ತಾರೆ. ಇದು ಶಿವನ ಪೂಜೆಯ ಕೊನೆ ಎಂದು ಮುಗಿಸುತ್ತಾರೆ.

ಮುಡಿಯ : ಈ ಮೂರ್ತಿ ಹೆಸರ ಮೇಲೆ ಯಾವುದೇ ಪೂಜೆ ಮಾಡಬೇಕಾದರೆ, ಪಿಂಪಳಾದೇವಿ ಪೂಜೆ ಹೇಗೆ ಮಾಡುತ್ತಾರೋ ಹಾಗೆಯೇ ಈ ಮುಡಿಯ ದೇವಿಯ ಪೂಜೆಯನ್ನು ಸಹ ಮಾಡುತ್ತಾರೆ.

೩. ಖೋಡಿಯಾರ್ ದೇವಿಯ ಪೂಜಾ ವಿಧಿ ವಿಧಾನಗಳು

ಖೋಡಿಯಾರ್ ದೇವಿಯ ಇತರೇ ಹೆಸರುಗಳು ಈ ಕೆಳಗಿನಂತಿವೆ:

a. ಖಿದ್ಧ (ಶಿವ)

b. ಹರಕತಿಯಾದೇವಿ

c. ಖೋಡಿಯಾರ್‌ದೇವಿ

e. ಪಾಲ್‌ದೇವಿ

ಈ ಮೇಲೆ ಕಾಣಿಸಿದ ದೇವರ ಪೂಜೆ ಮಾಡುವ ವಿಧಾನ. ಹಕ್ಕಿಪಿಕ್ಕಿ(ಪಾರ್ಧಿ)ಯರಲ್ಲಿ ಖೋಡಿಯಾರ್ ಎಂಬುದು ಒಂದು ಬೆಡಗಾಗಿದ್ದು ಇವರಲ್ಲಿ ಗಂಗಾ ಪೂಜೆ ಮಾಡಬೇಕೆಂದರೆ, ಈ ಮೇಲೆ ತಿಳಿಸಿದ ದೇವರುಗಳನ್ನು ನದಿಯಲ್ಲಿ ತೊಳೆಯುವುದಿಲ್ಲ. ಬದಲಿಗೆ ನದಿಗೆ ಹೋಗಿ ನೀರನ್ನು ತಂದು ಮನೆಯ ಹತ್ತಿರದಲ್ಲೇ ತೊಳೆಯಬೇಕು. ಇದಾದ ನಂತರ ದೇವರ ಹೆಸರ ಮೇಲೆ ಕೊಬ್ಬರಿ, ಕರ್ಪೂರ, ತುಪ್ಪದಲ್ಲಿ ಈ ಮೂರು ವಸ್ತುಗಳನ್ನು ಸುಡುತ್ತಾರೆ.

ಅ. ಖಿದ್ಧ (ಶಿವ) : ಈ ದೇವರ ಮೂರ್ತಿಗಳ ಪೂಜೆ ಮಾಡಬೇಕೆಂದರೆ, ಖಿದ್ದ ಹೆಸರಿನ ಮೇಲೆ ಕೋಣವನ್ನು ಕಟ್ಟುತ್ತಾರೆ. ಮತ್ತು ಅಂದೇ ದೇವರ ಗುಡಿಗೆ ಝುಂಡಾ (ಬಾವುಟ) ವನ್ನು ಏರಿಸುತ್ತಾರೆ. ಇದಾದ ಮೇಲೆ ಈ ದೇವರ ಗುಡಿಯ ಒಂದು ಮೂಲೆಯಲ್ಲಿ ಗೋಧಿ, ಜೋಳ ಇವೆರಡನ್ನು ಕೂಡಿಸಿ ಸ್ವಸ್ತಿಕ ಬಿಡಿಸುತ್ತಾರೆ. ನಂತರ ಈ ಕೋಣವನ್ನು ಬೆಳಗಿನ ಜಾವದಲ್ಲಿ ಗುಡಿಯ ಹೊಸ್ತಿನಲ್ಲಿ ಕೋಣವನ್ನು ಕಡಿದು ಇದರ ರಕ್ತ ಖಿದ್ದ (ಶಿವನ) ಮೂರ್ತಿಯ ಮೇಲೆ ಚಿಮುಕಿಸುತ್ತಾರೆ. ಆಗ ಶಿವನ ಪೂಜಾರಿಯು ಮೈಯಲ್ಲಿ ದೇವರು ಬಂದು ಅವನು ಕೋಣದ ರಕ್ತವನ್ನು ಕುಡಿಯುತ್ತಾನೆ. ನಂತರ ಇದರ ಮಾಂಸವನ್ನು ಚೆನ್ನಾಗಿ ಕಡಿದು ಒಂದು ಚೀಲದಲ್ಲಿ ತುಂಬಿ ನದಿಯಲ್ಲಿ ಬಿಡುತ್ತಾರೆ. ಇದು ನಂತರ ಖಿದ್ದ (ಶಿವನ) ಪಕ್ಕದಲ್ಲಿ ಇನ್ನೊಂದು ದೇವರ ಮೂರ್ತಿ 'ಶೀಳ್‌ದೇವಿ' ಈ ದೇವಿಯ ಹೆಸರಿನ ಮೇಲೆ ಅವತ್ತಿನ ದಿನ ಸುಮಾರು ೧೦ ಗಂಟೆಯ ಸಮಯದಲ್ಲಿ ಒಲೆ ಮೇಲೆ ಎಣ್ಣೆ ಕಡಾಯಿ ಇರಿಸಿ ಚೆನ್ನಾಗಿ ಕುದಿಸಿ, ಶಿವನ ಪೂಜಾರಿ ಬಂದು ಆ ಕುದಿಯುತ್ತಿರುವ ಎಣ್ಣೆಯಲ್ಲಿ ಗೋದಿ ಚಪಾತಿ ಮಾಡಿದ ಖಿದ್ದ (ಶಿವನ) ಮೂರ್ತಿ ಮುಂದೆ ಇಡುತ್ತಾರೆ.

ಬ. ಹರಕತಿಯಾ ದೇವಿ ಮತ್ತು ಖೋಡಿಯಾರ್ ದೇವಿ : ಈ ದೇವಿಯ ಪೂಜೆ ಮಾಡಬೇಕಾದರೆ, ಈ ಕಾರ್ಯದಲ್ಲಿ ಖುದ್ದ ಶಿವ ಹೆಸರಿನ ಮೇಲೆ ೨ ಕೋಣ, ಒಂದು ಹೋತ, ಒಂದು ಮೇಕೆ ಇವುಗಳನ್ನೆಲ್ಲಾ ಸೀಳ್‌ದೇವಿಯ ಹೆಸರಿನ ಮೇಲೆ ಇಡುತ್ತಾರೆ. ಈ ದೇವಿಯ ಪೂಜಾ ಕಾರ್ಯದಲ್ಲಿ ಬೆಳಗಿನ ಜಾವಕ್ಕೆ ಕೋಣವನ್ನು ಕಡಿಯುತ್ತಾರೆ. ಮತ್ತು ಹರಕತಿಯಾ ದೇವಿಯ ಹೆಸರಿನ ಮೇಲೆ ಒಂದು ಕೋಣವನ್ನು ಕಟ್ಟುತ್ತಾರೆ. ಈ ಕೋಣವನ್ನು ಸುಮಾರು ಮಧ್ಯಾಹ್ನದ ೧೨ ಗಂಟೆಗೆ ಈ ದೇವಿಯ ಹೆಸರಿನ ಮೇಲೆ ಬಿಟ್ಟಿರುವ ಕೋಣವನ್ನು ಬಲಿಕೊಡುತ್ತಾರೆ, ಬಲಿಯಾದ ಕೋಣದ ದೇಹವನ್ನು ತುಂಡು ತುಂಡು ಮಾಡಿ ಚೀಲದಲ್ಲಿ ತುಂಬಿ ನದಿಯಲ್ಲಿ ಬಿಡುತ್ತಾರೆ. ಇದೇ ಸಮಯದಲ್ಲಿ ಹೋತವನ್ನು ಸಹ ಬಲಿಕೊಡುತ್ತಾರೆ ಬಲಿಯಾದ ಹೋತದ ಮಾಂಸವನ್ನು ಹದವಾಗಿ ಬೇಯಿಸಿ ಕುಲಬಾಂಧವರಿಗೆ ಪ್ರಸಾದವೆಂದು ಹಂಚುತ್ತಾರೆ. ಇದರಲ್ಲಿ ಇನ್ನೊಂದು ದೇವರ ಮೇಕೆಯನ್ನು ಬಲಿತೆಗೆದು ಆ ದೇವರ ಗುಡಿಯ ಒಂದು ಮೂಲೆಯಲ್ಲಿ ಕುಡಿಕೆ ಮಾಡಿ, ಆ ಕುಡಿಕೆಯಲ್ಲಿ ಸೀಳ್‌ದೇವಿಯ ಮೂರ್ತಿಯನ್ನು ಇಟ್ಟು ಬಲಿಯಾದ ಮೇಕೆಯ ರಕ್ತವನ್ನು ಮೂರ್ತಿಯ ಮೇಲೆ ಎರಚುತ್ತಾರೆ. ಆಗ ಬಲಿಯನ್ನು ರಕ್ತ ಎರಚಿದವರೆ ತೆಗೆದುಕೊಳ್ಳುತ್ತಾರೆ. ಯಾಕೆಂದರೆ, ಬೇರೆ ಬೆಡಗಿನವರು ಸಾರಾಯಿ ಕುಡಿಯುತ್ತಾರೆ. ಮತ್ತು ಕಲಬೆರಕೆ ಮಾಡುತ್ತಾರೆ. ಅದಕ್ಕೆ ಈ ಬೆಡಗಿನವರು ಸಾವಂಡಿಯಾ ಜಾತಿಗೆ ಮಾತ್ರ ಸೇರುತ್ತಾರೆ. ಯಾಕೆಂದರೆ, ಸಾವಂಡಿಯಾ ಬೆಡಗಿನಲ್ಲಿ ಅಷ್ಟೊಂದು ಸಾರಾಯಿ ಕುಡಿಯುವುದಿಲ್ಲ. ಅದಕ್ಕೆ ಇವರು ಸಾವಂಡಿಯ ಜಾತಿಯಲ್ಲಿ ಈ ಸೀಳ್‌ದೇವಿ ಹೆಸರಿನ ಮೇಲೆ ಇರುವ ಮೇಕೆಯನ್ನು ಕಡಿದು ಸಾವಂಡಿಯಾ ಜಾತಿಯಲ್ಲಿ ಕೊಡುತ್ತಾರೆ. ಇದು ಆದ ಮೇಲೆ ಸುಮಾರು ಮಧ್ಯಾಹ್ನ ೧ ಗಂಟೆಗೆ ಎಣ್ಣೆಕಡಾಯಿ ಏರಿಸಿ ಎಣ್ಣೆಯನ್ನು ಚೆನ್ನಾಗಿ ಕಾಯಿಸುತ್ತಾರೆ. ಆ ಸಮಯದಲ್ಲಿ ಖೋಡಿಯಾರ್ ಬೆಡಗಿನವರ ಪೂಜಾರಿಗಳು ಈ ಕುದಿಸಿದ ಎಣ್ಣೆಯಲ್ಲಿ ಎಲ್ಲರೂ ಕೈ ಹಾಕಿ ತಮ್ಮ ತಲೆಯ ಮೇಲೆ ಎಣ್ಣೆ ಕೈಗಳನ್ನು ಸವರಿಕೊಳ್ಳುತ್ತಾರೆ. ಇದು ಆದ ಮೇಲೆ ತುಪ್ಪದ ಕಡಾಯಿ ಏರಿಸುತ್ತಾರೆ. ಚೆನ್ನಾಗಿ ಕಾಯಿಸುತ್ತಾರೆ. ಆಗ ಎಲ್ಲಾ ಪೂಜಾರಿಗಳು ಕಡಾಯಿಯಲ್ಲಿ ಕೈಹಾಕಿ ತಲೆ ಮೇಲೆ ಸವರಿಕೊಳ್ಳುತ್ತಾರೆ.

ಕ. ಫಾಲ್‌ದೇವಿ : ಈ ದೇವಿಯ ಪೂಜೆಗೆ ಈ ದೇವರ ಹೆಸರ ಮೇಲೆ ಒಲೆ ಮೇಲೆ ತುಪ್ಪದ ಕಡಾಯಿಯನ್ನು ಏರಿಸುತ್ತಾರೆ. ಆ ಕಡಾಯಿಯಲ್ಲಿ ಫಾಲ್‌ದೇವಿಯ ಮೂರ್ತಿಯನ್ನು ಇಟ್ಟು, ತುಪ್ಪದಲ್ಲಿಯೇ ಮೂರ್ತಿಗೆ ಅಭಿಷೇಕ ಮಾಡುತ್ತಾರೆ ಮತ್ತು ಪಾಲ್‌ದೇವಿ ಹೆಸರಿನ ಮೇಲೆ ಒಲೆಯನ್ನು ಕಟ್ಟುತ್ತಾರೆ. ಇದನ್ನು ಸುಮಾರು ಮಧ್ಯಾಹ್ನ ೨ ಗಂಟೆಗೆ ಗುಡಿಯ ಹೊಸ್ತಿಲಿನಲ್ಲಿ ಪ್ರಾಣಿಬಲಿಕೊಡುತ್ತಾರೆ. ಇದು ಆದ ಮೇಲೆ ಬಲಿಯಾದ ಪ್ರಾಣಿಮಾಂಸವನ್ನು ಎಲ್ಲರಿಗೂ ಪ್ರಸಾದದ ರೀತಿಯಲ್ಲಿ ಹಂಚುತ್ತಾರೆ.

ಇದಾದ ನಂತರ ಆ ಕೋಣ ಮತ್ತು ಹೋತದ ಮಾಂಸವನ್ನು ಬೇಯಿಸುತ್ತಾರೆ. ಜೊತೆಗೆ ಅನ್ನಮಾಡುತ್ತಾರೆ. ನಂತರ ದೇವಿಯ ಸಂತೃಪ್ತಿಗೆ ತಾವು ಮಾಡಿದ ಮಾಂಸದ ಅಡಿಗೆಯನ್ನು ನೈವೇದ್ಯ ಮಾಡಲೆಂದು ದೇವರ ಗುಡಿಯಲ್ಲಿ ಎಲ್ಲರೂ ಸೇರಿ ತಮ್ಮ ತಮ್ಮ ಕೈಗಳ ಮೇಲೆ ಚಪಾತಿಗಳನ್ನು ಇಟ್ಟುಕೊಂಡು ಅವರ ಎಲ್ಲಾ ಹಿರಿಯರ ಸ್ಮರಣೆಗೆ ಮತ್ತು ಪೂಜಾರಿಗಳ ಹೆಸರುಗಳನ್ನು ಹೇಳುತ್ತ ಲಾಬಾಯ (ಪ್ರಾರ್ಥನೆ) ಮಾಡುತ್ತಾರೆ. ಇದು ಆದ ಮೇಲೆ ಮೂರ್ತಿಗಳ ಮುಂದೆ ನೈವೇದ್ಯ (ಎಡೆ) ಹಾಕುತ್ತಾರೆ. ಇದನ್ನು ಏಕೆ ಮಾಡುತ್ತಾರೆಂದರೆ,

ಈ ದೇವರ ಕಾರ್ಯದಲ್ಲಿ ಅಗಲಿದ ಹಿರಿಯರ ಹಾಗೂ ಪೂಜಾರಿಗಳ ಪುಣ್ಯಸ್ಮರಣೆಗಾಗಿ ಈ ಲಾಲಾಯಿ ಮಾಡುತ್ತಾರೆ.

ಇದು ಆದ ಮೇಲೆ ಈ ಖೋಡಿಯಾರ್ ಜಾತಿಯಲ್ಲಿ ಇದು ಅತಿ ಮುಖ್ಯವಾದ ಕಾರ್ಯವಾಗಿದೆ. ಈ ಮೇಲೆ ಕಾಣಿಸಿದ ಎಲ್ಲಾ ಕಾರ್ಯಗಳನ್ನು ಮಾಡಿದ ಮೂರು ದಿನಗಳಾದ ಮೇಲೆ ದೇವರ ಹೆಸರಿನಲ್ಲಿ ಸಾರಾಯಿಯ ಕೊಡಗಳನ್ನು ದೇವರ ಮೂರ್ತಿಯ ಮುಂದೆ ಅಂಗಳದಲ್ಲಿ ನೀರನ್ನು ಸಿಂಪಡಿಸಿದಂತೆ ಸಾರಾಯಿಯನ್ನು ಚಿಮ್ಮಿಕಿಸುತ್ತಾರೆ. ಪ್ರಶ್ನಿಸಿದರೆ, ಇದು ತಲತಲಾಂತರಗಳಿಂದ ನಡೆದು ಬಂದ ಪದ್ಧತಿ ಎನ್ನುತ್ತಾರೆ.

ಮರು ದಿವಸ ಆದ ಮೇಲೆ ಖೋಡಿಯಾರ್ ದೇವಿಯ ಹೆಸರ ಮೇಲೆ ಇರುವ ಪೂಜಾರಿ ಅವತ್ತಿನ ದಿನ ಉಪವಾಸ ಇರುತ್ತಾನೆ. ಈ ಎಲ್ಲಾ ಕಾರ್ಯಗಳು ಮುಗಿಸುವ ಸಮಯದಲ್ಲಿ ಇನ್ನೊಂದು ಕಾರ್ಯ ಮಾಡುತ್ತಾರೆ. ಇನ್ನೊಂದು ಕಾರ್ಯ ಅದೇನೆಂದರೆ, ೧೦ ಕೆ.ಜಿ.ಯಷ್ಟು ಕೊಬ್ಬರಿ, ೫೦ ರೂ.ಗಳ ತುಪ್ಪ ಇವು ಎಲ್ಲಾ ಖೋಡಿಯಾರ್ ಬೆಳಗಿನ ಜಾವದಲ್ಲಿ ಮಡಿಯಿಂದ ಜನಪದ ವಾದ್ಯಗಳ ಮೂಲಕ ಮೆರವಣಿಗೆ ಮಾಡುತ್ತಾರೆ. ದೇವಿಯ ಗುಡಿಯ ಪ್ರಾಂಗಣದಲ್ಲಿ ಖೋಡಿಯಾರ್‌ನವರು ಸೇರಿ ದೇವಿಯ ಒಲುಮೆಗಾಗಿ ತಮ್ಮ ಕೈಯಿಂದಲೇ ಕತ್ತಿಯಿಂದ ಎಡ, ಬಲ ಭುಜಗಳಿಗೆ ತಾಕಿಸಿಕೊಂಡು ಚಿಮ್ಮುವ ರಕ್ತವನ್ನು ದೇವಿಯ ಮೂರ್ತಿಗೆ ಅರ್ಪಿಸುತ್ತಾರೆ. ಇದು ಎಂತಹ ಭೀಭತ್ಸ! ಎಂತಹ ಭಕ್ತಿಯ ರೂಪ? ದೇವರ ಗುಡಿಯಲ್ಲಿ ದೀಪವನ್ನು ಹಚ್ಚುವುದಿಲ್ಲ. ಮತ್ತು ಯಾವುದೇ ಅಲಂಕಾರ ಕೂಡಾ ಮಾಡುವುದಿಲ್ಲ. ಅಂದಿನ ದಿನ ಗುಡಿಯ ಮುಂದೆ ಖೋಡಿಯಾರ್ ಬೆಡಗಿನವರು ನಿಶ್ಶಬ್ಧವಾಗಿರುತ್ತಾರೆ. ಮರುದಿನ ಮುಂಜಾನೆ ಅದಕ್ಕೆಂದೆ ಬೇಗನೆ ಎದ್ದು ಆ ಎಲ್ಲಾ ದೇವರ ಮೂರ್ತಿಗಳನ್ನು ಒಂದು ಪೆಟ್ಟಿಗೆಯಲ್ಲಿ ಇಟ್ಟು ಮುಚ್ಚುತ್ತಾರೆ.

ಕೋರ್‌ಬಿಯಾ ದೇವರ ಪೂಜಾ ಕಾರ್ಯಕ್ರಮಗಳು

೪. ಈ ಕೋರ್‌ಬಿಯಾ ದೇವರಿಗೆ ಇರುವ ಇತರೇ ಹೆಸರುಗಳು ಈ ಕೆಳಗಿನಂತಿವೆ :

ಅ. ಖಿದ್ಧ (ಶಿವ)

ಆ. ಪಾರ್ದನ್ ದೇವಿ (ಗಂಗಾದೇವಿ)

ಇ. ವಿಕೋತಿಯಾ ದೇವಿ (ತುಳಜಾ ಭವಾನಿ)

ಈ. ೧.ಮಲಪ್ರದೇವಿ ೨.ದೇವಜರ್‌ದೇವಿ ೩.ಸರಸ್ವತಿ ದೇವಿ ೪.ಪಾರ್ವತಿ ದೇವಿ

ಉ. ಸೀಳ್‌ದೇವಿ (ಸುಂಕಲಮ್ಮ ದೇವಿ)

ಈ ಮೇಲೆ ಕಾಣಿಸಿದ ದೇವರುಗಳ ಕಾರ್ಯಕ್ರಮದ ವಿವರಗಳು ಈ ಕೋರ್‌ಬಿಯಾ ದೇವಿಗೆ ಇವರ ಜಾತಿಯಲ್ಲಿ ಯಾರು ದೇವರ ಪೂಜೆಯನ್ನು ಮಾಡಬೇಕೆಂಬುದು ಗೊತ್ತಿಲ್ಲ. ಆವಾಗ ವಿಕೋತಿಯಾ ಬೆಡಗಿನ ಎಲ್ಲಾ ಸಹೋದರರು ಸೇರಿ, ತಮ್ಮ ಬೆಡಗಿನಲ್ಲಿ ಇರುವ ಹಿರಿಯ ಪೂಜಾರಿಯನ್ನು ಕರೆಯಿಸಿ ತಮ್ಮ ಸುಖ ದುಃಖ ಬಗ್ಗೆ ಹೇಳಿ ದೇವರ ಗುಡಿ ಮುಂದೆ ಕುಳಿತು ಕೆಂಪು ಗುಲಗಂಜಿ ಅಥವಾ ಗೋದಿ ಅಥವಾ ಬಿಳಿ

ಜೋಳ ಇವುಗಳಲ್ಲಿ ಯಾವುದಾದರು ಒಂದನ್ನು ತೆಗೆದುಕೊಂಡು, ಒಂದು ಹಿಡಿಯಷ್ಟು ಕಾಳು ಹಿಡಿದು ಅವುಗಳನ್ನು ನಾಲ್ಕು ಗುಂಪುಗಳನ್ನಾಗಿ ಉಳಿದರೆ ಅವುಗಳನ್ನು 'ವಾಧವು' ಎನ್ನುತ್ತಾರೆ. ಅಥವಾ ಎರಡು ಅಥವಾ ನಾಲ್ಕು ಬಂದರೆ ಅದಕ್ಕೆ 'ಬಹಂ' ಎಂದು ಹೇಳುತ್ತಾರೆ. ಅದರರ್ಥ ತಮ್ಮ ಮನದಲ್ಲಿ ಬಂದರೆ ಎಲ್ಲರೂ ಸೇರಿ ದೇವರನ್ನು ಪೂಜೆ ಮಾಡುತ್ತಾರೆ.

ಖಿದ್ದ (ಶಿವ) : ಈ ದೇವರ ಪೂಜೆ ಮಾಡ ಬೇಕಾದರೆ, ಗುಡಿಯಲ್ಲಿ ಒಂದು ಹೊಸ ಬಟ್ಟೆಯ ಮೇಲೆ ಕಟ್ಟಿಟ್ಟ ಎಲ್ಲಾ ದೇವರ ಮೂರ್ತಿಗಳು ಸಾಲಾಗಿ ಜೋಡಿಸುತ್ತಾರೆ. ಇದರಲ್ಲಿ ಮೊದಲನೆಯ ದೇವರು ಖಿದ್ದ (ಶಿವ) ಆಗಿದೆ.

ಈ ದೇವರ ಹೆಸರ ಮೇಲೆ ಮೊದಲಿಗೆ ಕೋಣವನ್ನು ಬಿಡುತ್ತಾರೆ. ಈ ಖಿದ್ದ ದೇವರನ್ನು ಮಾಡಬೇಕಾದರೆ ಸೋಮವಾರ ದಿವಸ, ರಾತ್ರಿ ೮ ಗಂಟೆಗೆ ಈ ದೇವರ ಗುಡಿಯ ಮುಂದೆ ಕೋಣ ಕಟ್ಟುತ್ತಾರೆ. ಇದಾದ ಮೇಲೆ ತುಪ್ಪದ ದೀಪವನ್ನು ಹಚ್ಚುತ್ತಾರೆ. ಜೋಳ, ಅಕ್ಕಿ, ಗೋದಿ ಈ ಮೂರು ಧಾನ್ಯಗಳನ್ನು ಬೆರೆಸಿ (ಪಾರಭತಿ) ಸ್ವಸ್ತಿಕ್ ಆಕಾರದಲ್ಲಿ ನೆಲದ ಮೇಲೆ ಹಾಕಿ ಅದರ ಮಧ್ಯದಲ್ಲಿ ಖಿದ್ದ (ಶಿವ) ದೇವರ ಮೂರ್ತಿ ಯನ್ನು ಇಡುತ್ತಾರೆ. ದೇವರು ಮೊದಲು ಇಟ್ಟ ಜಾಗದಲ್ಲಿ ಇರುವ ವಸ್ತ್ರವನ್ನು ಕೆಳಗೆ ಇಳಿಸಬೇಕು. ಇದಾದ ಮೇಲೆ ಬೆಳಗಿನ ಜಾವದಲ್ಲಿ ಕೋಣವನ್ನು ದೇವರ ಗುಡಿಯ ಮುಂದೆ ಒಂದು ಹೊಸ್ತಿಲಿನಲ್ಲಿ ಒಂದು ಸಣ್ಣ ಕುಣಿಯನ್ನು ತೆಗೆದು ಕೋಣವನ್ನು ಚೂರಿಯಿಂದ ಕುತ್ತಿಗೆಗೆ ತಿವಿದು ರಕ್ತವನ್ನು ಕಟ್ಟಿಗೆಯ ಕೊಣಗಿಯಲ್ಲಿ ರಕ್ತವನ್ನು ತೆಗೆದು ಆ ರಕ್ತವನ್ನು ಖಿದ್ದ (ಶಿವ) ಮೂರ್ತಿಯ ಮೇಲೆ ಚಿಮ್ಮುಕಿಸುತ್ತಾರೆ. ಕೋಣದ ತಲೆಯನ್ನು ಮೂರ್ತಿಯ ಮುಂದೆ ಇಡುತ್ತಾರೆ. ಕೋಣದ ಬಾಲವನ್ನು ಕೊಯ್ದು ಬಾಯಲ್ಲಿ ಇಡುತ್ತಾರೆ. ಕೃಪೆ : ಶಿಕಾರಿ ಮೋತಿ (೩೦) ತಂದೆ ರಾಮಪ್ಪ, ಕಂಪ್ಲಿ.

ಪಾರ್ಧಿಯರ ಕಲಾತ್ಮಕ ಬದುಕು

ಪಾರ್ಧಿಯರಲ್ಲಿ ಉಳಿದ ಬುಡಕಟ್ಟುಗಳಲ್ಲಿರುವಂತೆ ಹೆಚ್ಚಿನ ಪ್ರದರ್ಶಕ ಕಲೆಗಳು ಇರುವುದಿಲ್ಲ. ಆದರೆ ಮದುವೆ, ದೇವರ ಕಾರ್ಯ ಹಾಗೂ ಹಬ್ಬ ಹರಿದಿನಗಳಲ್ಲಿ ಇವರು ತಮ್ಮದೇ ಆದ ಅನೇಕ ಸಂಗೀತ ವಾದ್ಯಗಳೊಂದಿಗೆ ನೃತ್ಯವನ್ನು ಮಾಡುತ್ತಾರೆ. ಪಾರ್ಧಿಯರು ವೃತ್ತಿ ಪರವಾಗಿ ನೋಡಿದರೆ, ಪಾರ್ಧಿಯರದು ಸಾಂಸ್ಕೃತಿಕ ಬದುಕು ಅಲ್ಲ. ಅವರದು ಮುಖ್ಯವಾಗಿ ಬೇಟೆಯಾಡುವುದು ಹಾಗೂ ವ್ಯಾಪಾರಿ ಬದುಕಾಗಿರುವುದರಿಂದ ಇವರಲ್ಲಿ ಹೆಚ್ಚಿನ ರೀತಿಯ ಪ್ರದರ್ಶನ ಕಲೆಗಳಿಲ್ಲವೆಂದರೆ ತಪ್ಪಾಗಲಾರದು. ಪಾರ್ಧಿಯ ಗಂಡು ಹೆಣ್ಣು ಇಬ್ಬರು ಟೇಪ್‌ರಿಕಾರ್ಡರ್‌ಗಳಿಗೆ ಮಾಡುವ ನೃತ್ಯ ಮತ್ತು ಅವರು ಬದುಕುವ ರೀತಿಯೇ ಕಲೆಯಾಗಿ ಕಾಣುತ್ತದೆ. ಯಾರೊಂದಿಗಾದರೂ ಮಾತನಾಡಲು, ಕುಡಿಯಲು, ನರ್ತಿಸಲು ಸಂಕೋಚವಿಲ್ಲದ ಈ ಜನ ಕಲಾತ್ಮಕವಾದ ಅವಕಾಶಗಳಿಲ್ಲದೆ ಹಿಂದುಳಿದಿದ್ದಾರೆಂದೇ ಹೇಳಬೇಕಾಗುತ್ತದೆ.

ಪಾರ್ಧಿ ಬುಡಕಟ್ಟಿನವರ ದೇಹವು (ಹಕ್ಕಿಪಿಕ್ಕಿಯರು) ಒಂದು ತರಹದ [illegible] ವಾಸನೆ(Shoby)ಯನ್ನು ಹೊಂದಿದವರಾಗಿರುತ್ತಾರೆ. ಇವರ ಒಂದು ತರಹದ ಮೈವಾಸನೆಯಿಂದಲೇ ಹಕ್ಕಿಪಕ್ಷಿಗಳು ಇವರ ಹತ್ತಿರ ಬರುತ್ತವೆ ಎನ್ನುತ್ತಾರೆ. ಪಾರ್ಧಿಯರು ಹೇಳುವ ಪ್ರಕಾರ ಈ ಬುಡಕಟ್ಟಿನವರು ತಿನ್ನುವಷ್ಟು ಪ್ರಾಣಿ ಪಕ್ಷಿಗಳನ್ನು

ಬೇರೆ ಯಾವ ಜಾತಿ ಜನಾಂಗದವರು ತಿನ್ನುವುದಿಲ್ಲವಂತೆ. ಮನುಷ್ಯನ್ನು ಹೊರತುಪಡಿಸಿ ಎಲ್ಲಾ ಪ್ರಾಣಿ ಹಾಗೂ ಪಕ್ಷಿಗಳನ್ನು ಭಕ್ಷಿಸುತ್ತಾರೆ.

ಪಾರ್ಧಿಯರಲ್ಲಿಯ ಕೆಲವು ನಂಬಿಕೆಗಳು

೧. ಇವರು ನರಿಯನ್ನು ತಿನ್ನುತ್ತರಾದ್ದರಿಂದ ನರಿಯ ವಾಸನೆ ಯಾವಾಗಲೂ ಇವರೊಂದಿಗೇ ಇರುತ್ತದಂತೆ. ಹೀಗಾಗಿ ನಾಯಿಗಳು ಇವರನ್ನು ಕಂಡಕೂಡಲೇ ಬೊಗಳುತ್ತವೆಯಂತೆ!

೨. ಕೊಂಬುಗಳಿರುವ ನರಿಯು ಕೇವಲ ಅದೃಷ್ಟವಂತರಿಗೆ ಮಾತ್ರ ಸಿಗುತ್ತದೆಯಂತೆ.

೩. ಒಡ್ಡ ನರಿಯ ದಿಕ್ಕನ್ನು ಅಪಶಕುನ ಎಂದು ನಂಬುತ್ತಾರೆ.

೪. ಮೊಲ, (ದಾಂತಿ) ಬಲದಿಂದ ಎಡಕ್ಕೆ ಹೋದರೆ, ಹಾವು ಅಡ್ಡಬಂದರೆ, ಸೀನು ಹಾಗೂ ಖಾಲಿಕೊಡ ಎದುರಾದರೆ ಎದುರಾಂಥಹ ವ್ಯಕ್ತಿಗೆ ಕೆಟ್ಟದಾಗುತ್ತದೆಯೆಂದು ನಂಬುತ್ತಾರೆ.

೫. ದೇಹದ ಎಡಭಾಗಕ್ಕೆ ಗುದ್ದಿದಂತಾದರೆ ಬಹಳ ಹಕ್ಕಿಗಳು ಸಿಗುತ್ತದೆ ಎಂದು ಬಲಭಾಗಕ್ಕೆ ಗುದ್ದಿದಂತಾದರೆ ಕೆಟ್ಟದಾಗುತ್ತದೆ ಎಂದು ನಂಬುತ್ತಾರೆ.

೬. ಶನಿವಾರ, ಭಾನುವಾರ ಕೆಟ್ಟ ದಿನಗಳು! ಈ ದಿನಗಳಲ್ಲಿ ಬೇಟೆಗೆ ಹೋದರೆ ಹಕ್ಕಿಗಳು ಸಿಗುವುದಿಲ್ಲವಂತೆ.

ಪಾರ್ಧಿಯರ ಆಚರಣೆಗಳು

೧. **ದೃಷ್ಟಿ ತೆಗೆಯುವುದು :** ಕಾಲು ಧೂಳಾದರೆ ಮೂರು ಕಲ್ಲು ತಂದು ಮೂರುಸಲ ಒಟ್ಟಿಗೆ ನಿವಾಳಿಸುತ್ತಾ

"ಅವರ ಕಣ್ಣು

ಇವರ ಕಣ್ಣು

ಅವರ ಬಾಯಿಗೆ ಮಣ್ಣು ಬೀಳಾ", ಎಂದು ಹೇಳುತ್ತಾ ಮೂರು ದಾರಿ ಸೇರುವ ಕಡೆ ಉಡಿ ಪುಡಿಯಾಗುವಂತೆ ಆ ಕಲ್ಲುಗಳನ್ನು ಹೊಡೆದು ಹಾಕುತ್ತಾರೆ. ಕಾಲು ಧೂಳಿನಿಂದ ಆರೋಗ್ಯ ಕೆಡಿಸಿಕೊಂಡು ಹೊಟ್ಟೆ ಉಬ್ಬರ ಆಗದಿರಲೆಂದು ರಂಚು ಹಾಕುತ್ತಾರೆ. ತಟ್ಟೆಯಲ್ಲಿ ಸಗಣಿಯನ್ನು ಕಲಸಿದ ನೀರಿಗೆ ಕೆಂಡ ತುಂಬಿದ ಲೋಟವನ್ನು ದಬ್ಬಾಕುತ್ತಾರೆ. ಹೀಗೆ ಮಾಡುವದರಿಂದ ಆದಂತಹ ದೃಷ್ಟಿ ನಿವಾರಣೆಯಾಗುತ್ತದೆಯಂತೆ.

೨. **ನೀರಿಳಿಸುವುದು :** ಒಂದು ಮಡಿಕೆ ಚೊಂಬಿನಲ್ಲಿ ಒಂದು ತಟ್ಟೆಯ ಕೆಳಗೆ ಇಡುವುದು. ನಂತರ ಚೊಂಬನ್ನು ಕೈಯಲ್ಲಿ ಎತ್ತಿಕೊಳ್ಳುವುದು ಇದು ಮುಖ್ಯವಾಗಿ ಮಕ್ಕಳು ಹಸಿರಾಗಿ ಬೇಧಿ ಮಾಡುತ್ತಿದ್ದರೆ ಈ ಆಚರಣೆಯನ್ನು ಮಾಡುತ್ತಾರೆ. ನಾಲ್ಕೈದು ಈಚಲು ಚಾಪೆಗರಿಗಳಿಂದ ನಿವಾಳಿಸಿ ಏಳು ಗರಿಕೆ ಎಸಳಿಗೆ ಒಂದೊಂದು ಗಂಟು ಹಾಕುತ್ತಾ ಸುಟ್ಟು ಒಟ್ಟು ೭ ಗಂಟು ಹಾಕಿ ಸುಡುತ್ತಾರೆ. ಹೀಗೆ ನೀರಿಳಿಗೆ ಸುಡುವಾಗ

ಚೋದ್ ಬಾಂದು

ಚೋಡೋ ಬಾಂದು

ದಾಗರೋ ಬಾಂದು

ಧಾತರ್ ಬಾಂದು
ಬತೇರಿ ಬಾಂದು
ಚೋಟಿ ಬಾಂದು
ಲಾವಣ ಬಾಂದು
ಧಾಕಾಣ ಬಾಂದು
ಗರ್ಲಿ ಬಾಂದು
ಬಾರ್ಲಿ ಬಾಂದು ಎಂದೆಲ್ಲಾ ಹಾಡುತ್ತಾರೆ
ಹೀಗೆಂದರೆ, ಸೆರಗಾಕಟ್ಟು
ಲಂಗದ ಕಟ್ಟು
ಹಲ್ಲು ಕಟ್ಟು
ಹಲ್ಲಿನ ವಸಡುಕಟ್ಟು
ಜಡೆ ಕಟ್ಟು
ಜಾಕೀಟ್ ಕಟ್ಟು
ದೇವದ ಕಟ್ಟು
ಅಕ್ಕಪಕ್ಕದ ಮನೆಯ ಹೆಂಗಸರ ಕಟ್ಟು
ಹೊರಗೆ ಹೆಂಗಸರ ಕಟ್ಟು

ಎಂದು ಹೇಳುವುದರ ಜೊತೆಗೆ ಗಂಟು ಹಾಕುತ್ತಾರೆ. ಅದೇ ಮಂತ್ರ ಮತ್ತೊಮ್ಮೆ ಹೇಳಿ ಮತ್ತೊಂದು ಗಂಟು ಹಾಕುತ್ತಾರೆ. ಹೀಗೆ ೭ ಗಂಟು ಹಾಕಿ ೭ ಬಾರಿ ಕುದಿಯುವ ನೀರನ್ನು ನಿವಾಳಿಸಿ ತಟ್ಟೆಗೆ ಅರ್ಧ ಚೊಂಬಿನ ನೀರನ್ನು ನಿವಾಳಿಸಿ ದಬಾಕಿದಾಗ ಮೇಲೆ ಒಂದು ಕಬ್ಬಿಣದ ಪೀಸಿನಿಂದ ಈ ರೀತಿ ಗೆರೆ ಕೊರೆದು ತಟ್ಟೆಯಲ್ಲಿರುವ ನೀರೆಲ್ಲಾ ಚೊಂಬಿನ ನೀರನ್ನು ಹೋಗುವಂತೆ ಮಾಡುತ್ತಾರೆ. ಹೀಗೆ ಮಾಡಿದಾಗ, ಒಂದು ವೇಳೆ ದೃಷ್ಟಿಯಾಗಿದ್ದರೆ ಖಂಡಿತವಾಗಿಯು ಅದು ಹೊರಟು ಹೋಗುತ್ತದೆಯಂತೆ

೩. **ಎದೆಯ ಹಾಲಿನ ದೃಷ್ಟಿ :** ಎದೆಯ ಹಾಲನ್ನು ಕಪ್ಪೆ ಚಿಪ್ಪಿಗೆ ಹಾಕಿ ಬೆಂಕಿ ಮೇಲೆ ಇಟ್ಟು, ಕಾಯಿಸುತ್ತಾರೆ. ಆಗ ಅದು ಕೆಂಪಗೆ ಆದರೆ ಮಗುವಿಗೆ ಸೂತಕ ತಗುಲಿದೆ ಎಂದು ನಿರ್ಧರಿಸುತ್ತಾರೆ. ಬೆಳಿಗ್ಗೆ ಸಾಯಂಕಾಲ ೩ ಬಾರಿ ಈ ರೀತಿ ಹಾಲು ಸುಟ್ಟು ಬಿಟ್ಟರೆ ಆದ ಸೂತಕ ಹೋಗಿ ಬಿಡುತ್ತದೆಯಂತೆ.

೪. **ವೈರಿಗಳು ಅಥವಾ ದೆವ್ವಗಳು :** ನಡುರಾತ್ರಿ ಹೊತ್ತಿನಲ್ಲಿ ಓಡುತ್ತಿರುವಂತೆ ಅಂಥಹ ಸಂದರ್ಭದಲ್ಲಿ ಮನೆಯ ಮುಂದೆ ಅಕ್ಕೋಲೆ ಗಿಡದ ಕೊನೆಯನ್ನು ಸೂರಿನಲ್ಲಿ ಸಿಗಿಸಿರುತ್ತಾರೆ. ಇದರಿಂದ ದೆವ್ವ ಬಿಟ್ಟು ಓಡಿ ಹೋಗುತ್ತದೆ ಎಂದು ನಂಬಿಕೆ, ಇತ್ತೀಚೆಗೆ ಮಂತ್ರಿಸಿದ ತೆಂಗಿನ ಕಾಯಿ, ಬರೆಸಿದ ತಾಮ್ರದ ತುಂಡು, ಮಣ್ಣಿನ ಕುಡಿಕೆಗಳನ್ನು ಮಂತ್ರ ತಂತ್ರ ಮಾಡಿಸಿ ಕಟ್ಟುತ್ತಾರೆ.

ಆಧಾರಗಳು

ಪ್ರಹ್ಲಾದ ಬೇಟಗೇರಿ., ೧೯೯೩, 'ಅಡವಿಚೆಂಚರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಜಪ್ಪ ದಳವಾಯಿ., ೧೯೯೩, 'ಹಕ್ಕಿಪಿಕ್ಕಿಯರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಶಂಕರನಾರಾಯಣ ತೀ.ನಂ., (ಸಂ) 'ಕರ್ನಾಟಕ ಜನಪದ ಮಹಾಕಾವ್ಯಗಳು', ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಹಳದಿಪುರ ಎಸ್.ವಿ., ೧೯೧೪, 'ಮುಂಬಯಿ ಇಲಾಖೆಯ ದುರುಳರು',

ವಕ್ತೃಗಳು

ಹೆಸರು	ವಯಸ್ಸು	ಬೆಡಗು	ಸ್ಥಳ
ಮೋತಿ ತಂದೆ ರಾಮಪ್ಪ	೩೨	ಪಿಂಪಳಾಜ	ಕಂಪ್ಲಿ
ರಾಮು ತಂದೆ ಗನ್ನು	೩೦	ಕೊಡಿಯಾರ್	ಬಳ್ಳಾರಿ
ಶಿವಾಜಿ ಮಹಾಶಕ್ತಿ	೬೦	ಸಕತ್‌ವಾಲೆ	ಬಸವಕಲ್ಯಾಣ
ತಾರಚಂದ ಕೆ.ಸಿ.	೪೦	ಲಂಬಾಣಿ	ಧಾರವಾಡ
ಏಕಾಶಿಬಾಯಿ	೪೫	ಇಕೋತಿಯಾ	ಶಿವಮೊಗ್ಗ

ಅಧ್ಯಾಯ - ೪

ಪಾರ್ಧಿಯರ ಭಾಷೆ ಮತ್ತು ಸಾಹಿತ್ಯ

ಅ. ಭಾಷೆ

೧. ದಿನನಿತ್ಯದ ಬಳಸುವ ಭಾಷೆ

೨. ಸಂಬಂಧವಾಚಕ ಭಾಷೆ

೩. ಅಡಿಗೆಗೆ ಸಂಬಂಧಿಸಿದ ಪದಗಳು

ಆ. ಸಾಹಿತ್ಯ

೧. ಕಥೆಗಳು

೧. ಹಾಡುಗಳು

೨. ಗಾದೆಗಳು

೩. ಒಗಟುಗಳು

೪. ಬಯ್ಗಳು

೪. ಪಾರ್ಧಿಯರ ಭಾಷೆ ಮತ್ತು ಸಾಹಿತ್ಯ

ಮಾನವಶಾಸ್ತ್ರವೆಂಬುದು ಮಾನವನನ್ನೇ ಅಭ್ಯಾಸಮಾಡುವ ಒಂದು ಶಾಸ್ತ್ರವಾಗಿದೆ. ಹೀಗಾಗಿ ಸಾಂಸ್ಕೃತಿಕ ಮಾನವಶಾಸ್ತ್ರಕ್ಕೂ ಹಾಗೂ ಜಾನಪದ ಕ್ಷೇತ್ರಕ್ಕೂ ತೀರಾ ನಿಕಟವಾದ ಸಂಬಂಧವಿದೆ.

ಯಾವುದೇ ಜನಾಂಗವಿರಲಿ ಬದುಕಲು ಯೋಗ್ಯವಾದ ಪರಿಸರ ಇದ್ದಲ್ಲಿ ತಳವೂರಿ ತನ್ನ ಸಂಸ್ಕೃತಿಯನ್ನು ವರ್ಧಿಸಿಕೊಳ್ಳುತ್ತದೆ. ಪರಿಸರವೇ ನಾಶವಾದಗ ವಲಸೆಹೋಗುವುದು ಅನಿವಾರ್ಯವಾಗುತ್ತದೆ. ಇಂಥಹ ಸಮಯದಲ್ಲಿ ಸಮುದಾಯವು ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ರೀತಿಯಾಗಿ ವಲಸೆ ಹೋಗಿ ಒಂದು ಕಡೆ ನೆಲೆನಿಂತ ಜನರನ್ನು ಮಾನವಶಾಸ್ತ್ರಜ್ಞರು ಸಾಂಸ್ಕೃತಿಕವಾಗಿ 'ಕಸಿಕಟ್ಟಿದ ಜನ' ಎಂದು ಕರೆಯುತ್ತೇವೆ. ಸಾಂಪ್ರದಾಯಿಕವಾಗಿ ಮಾನವಶಾಸ್ತ್ರಜ್ಞರು ಮತ್ತು ಜಾನಪದ ತಜ್ಞರು ಸರಳ ಸಮಾಜ-ಸಂಸ್ಕೃತಿಗಳನ್ನು ಅದರಲ್ಲೂ ಮುಖ್ಯವಾಗಿ ಆದಿವಾಸಿ ಮತ್ತು ಜಾನಪದ ಗುಂಪುಗಳನ್ನು ಅಭ್ಯಾಸ ಮಾಡುತ್ತಾರೆ. ಮಾನವಶಾಸ್ತ್ರ ಒಂದು ಅಭ್ಯಾಸವಿಷಯವಾಗಿ ತನ್ನದೇ ಮಾರ್ಗ, ಅಭ್ಯಾಸ ಪದ್ಧತಿಗಲನ್ನು ತಂದುಕೊಳ್ಳುವ ಮುನ್ನ ಕುಲವರ್ಣಕಾರರು, ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿಯ ಆದಿವಾಸಿ ಮತ್ತು ಗ್ರಾಮೀಣ ಸಮುದಾಯಗಳನ್ನು ಅಭ್ಯಾಸ ಮಾಡಿದ್ದರು.

ಸುಮಾರು ಒಂದು ನೂರು ವರ್ಷಗಳಷ್ಟು ಇತಿಹಾಸ ಹೊಂದಿರುವ ಮಾನವಶಾಸ್ತ್ರಕ್ಕೆ "ಇದು ಮಾನವನನ್ನೇ ಅಭ್ಯಾಸ ಮಾಡುವ ಶಾಸ್ತ್ರ" ಎಂಬ ಸರಳ ವ್ಯಾಖ್ಯಾನವಿದೆ. ಈ ಮಾನವ ಯಾವ ಕಾಲಕ್ಕಾದರೂ, ಯಾವ ಪ್ರದೇಶಕ್ಕಾದರೂ ಸೇರಿದವನಿರಬಹುದು. ೧೯ನೇ ಶತಮಾನದಲ್ಲಿ, ಐರೋಪ್ಯ ರಾಷ್ಟ್ರಗಳು ಜಗತ್ತಿನಾದ್ಯಂತ ವಸಾಹತುಗಳನ್ನು ಸ್ಥಾಪಿಸಿದಾಗ, ಅವುಗಳ ಆಡಳಿತದ ಅವಶ್ಯಕತೆಯಾಗಿ, ಮಾನವಶಾಸ್ತ್ರ ಜನ್ಮತಾಳಿತು ಎಂದು ಹೇಳುತ್ತಾರೆ. ಹೀಗಾಗಿ ಇಂದು ಜಗತತಿನಲ್ಲಿ ಮಾನವಶಾಸ್ತ್ರಜ್ಞರಿಂದ ಅಭ್ಯಾಸವಾಗದ ಯಾವೊಂದು ಗುಂಪು (ಸಮುದಾಯ) ಉಳಿದಿಲ್ಲ ಎಂದು ಹೇಳಬಹುದು. ಆದಿವಾಸಿ ಮತ್ತು ಜಾನಪದ ಎರಡೂ ಸರಳ ಸಮಾಜಗಳಾದರೂ ಇವು ಸಂಸ್ಕೃತಿಯ ಬೇರೆ ಬೇರೆ ಪ್ರಕಾರಕ್ಕೆ ಸೇರಿದವು ಎಂಬುದು ಮಾನವಶಾಸ್ತ್ರಜ್ಞರ ವಾದ. ಏಕೆಂದರೆ ಪ್ರತಿಯೊಂದು ಆದಿವಾಸಿ ಗುಂಪು (Tribe) ತನ್ನದೇ ಆದ ಹೆಸರು, ಧರ್ಮ, ನಿವಾಸ ಪ್ರದೇಶ, ಭಾಷೆ ಮತ್ತು ಪ್ರಾಪಂಚಿಕ ದೃಷ್ಟಿ (World view)ಯನ್ನು ಹೊಂದಿರುವುದರ ಮೂಲಕ ಒಂದೊಂದು ಪ್ರತ್ಯೇಕ ಸಾಂಸ್ಕೃತಿಕ ಗುಂಪು. ಎರಡು ಆದಿವಾಸಿ ಗುಂಪುಗಳ ನಡುವೆ ಏನಾದರೂ ಸಂಬಂಧವೆಂಬುವದಿದ್ದರೆ ಇದು ವೈರತ್ವದ್ದು. ಇದಕ್ಕೆ ವಿರುದ್ಧವಾಗಿ ಜಾನಪದ ಸಮಾಜ ಅನೇಕ ಗ್ರಾಮೀಣ ಸಮುದಾಯಗಳಲ್ಲಿ ಪಸರಿಸಿದ ಒಂದೇ ಸಾಂಸ್ಕೃತಿಕ ಗುಂಪು.

ಹೀಗಾಗಿ ಒಂದು ಗ್ರಾಮದ (ನೆಲೆ) ಮೇಲಿನ ಅಭ್ಯಾಸಗಳು, ಹಬ್ಬ-ಜಾತ್ರೆಗಳು, ಜಗಳಗಳು, ಕಳ್ಳ-ಬಳ್ಳಿ (Clan) ಸಂಬಂಧಗಳು ಹೀಗೆ ಯಾವ ವಿಚಾರವನ್ನು ತೆಗೆದುಕೊಂಡರೂ ಅದು ಅಂತರ ಗ್ರಾಮೀಣ ಅಥವಾ ಅಂತರ ಬುಡಕಟ್ಟು ವಿಚಾರವಾಗಿ ಪಕ್ಕದ ಸಮುದಾಯಗಳಿಗೆ ಕರೆದೊಯ್ಯುತ್ತದೆ. ಮೂಲದಲ್ಲಿ ಅವರು ಒಂದು ಗುಂಪಿಗೆ ಸೇರಿದವರಿದ್ದು ನಂತರ ತಮ್ಮಲ್ಲಿ ಒಂದು ಜಗಳ ಅಥವಾ ಅನಾವೃಷ್ಠಿ, ಅತಿವೃಷ್ಠಿ, ರೋಗಗಳು ಮುಂತಾದವುಗಳಿಂದಾಗಿ ತಮಮ ಮೂಲ ಊರು ಬಿಟ್ಟು ತಮಗೆ ಅನುಕೂಲವಾದ ಕಡೆಗೆ ವಲಸೆ ಹೋದದ್ದು ಕಾರಣವಿದೆ.

ಮಾನವಶಾಸ್ತ್ರ ಪದ್ಧತಿಯಂತೆ ಸಮಗ್ರ ಅಭ್ಯಾಸಮಾರ್ಗ (Wholistic Approach: Redfield 1952) ಮತ್ತು ಐತಿಹಾಸಿಕ ಅಭ್ಯಾಸಮಾರ್ಗ(Historical approach: childe 1936, 1943)ಗಳನ್ನು ಅನುಸರಿಸಿದಾಗ ಯಾವುದೇ ಸಮುದಾಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಹೀಗಾಗಿ ಪ್ರಸ್ತುತ ಸಂಶೋಧಕ ಸಮಗ್ರ ಅಭ್ಯಾಸಮಾರ್ಗವನ್ನು ಬಳಸಿದ್ದಾರೆ. ಈ ಮೇಲಿನ ಮಾರ್ಗ(ನಂಬಿಕೆ)ದಂದೆ ಮಾನವ, ತನ್ನ ದೈಹಿಕ ಮತ್ತು ಬೌದ್ಧಿಕ ವಿಕಾಸ ಆದಂದಿನಿಂದ ತನ್ನದೆನ್ನುವ ಸಂಸ್ಕೃತಿಯನ್ನು ಹೊಂದಿರುತ್ತಾನೆ. ಇದು ಮುಂದುವರೆದು ತನ್ನಲ್ಲಿಯ ಬುದ್ಧಿವಂತ ಜನರಿಂದಾಗಿ, ಅಲ್ಲಿಯ ಸಂಪನ್ಮೂಲಗಳಿಂದಾಗಿ, ವಿಕಾಸಗೊಂಡು, ವಿಶೇಷವಾದ ಪ್ರಗತಿಪಡೆದು ಒಂದು ನಾಗರೀಕತೆಯಾಗಿ ಗುರುತಿಸಲ್ಪಟ್ಟಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಜಾನಪದ ಸಮಾಜ ಸಂಸ್ಕೃತಿಯಲ್ಲಿಯ ಅನೇಕ ವಿಚಾರಗಳು ಸೂಕ್ತವಾಗಿ ಅರ್ಥವಾಗುತ್ತವೆ.

ಪ್ರತಿಯೊಂದು ಭಾಷೆಯನ್ನು ಅನೇಕ ಪಂಗಡ ಹಾಗೂ ಜಾತಿಗಳು ಬಳಸುತ್ತಿವೆ. ಹಾಗೆಯೇ ವಾಗ್ರಿಭಾಷೆಯನ್ನು ಪಾರ್ಧಿಯರು ಬಳಸುತ್ತಿದ್ದಾರೆ. ಒಂದು ಭಾಷೆಯ ಸಹಾಯದಿಂದಲೇ ತಮ್ಮಲ್ಲಿರುವ ಸುಖ-ದುಃಖ, ಆಶೆ-ಆಕಾಂಕ್ಷೆಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಭೂಮಿ ಮೇಲಿನ ಸಕಲಕೋಟಿ ಪ್ರಾಣಿಗಳಲ್ಲಿ ಮಾನವ ಮಾತನಾಡುವ ಪ್ರಾಣಿಯಾಗಿದೆ. ಬೇರೆ ಪ್ರಾಣಿ ಪಕ್ಷಿಗಳು ಕೇವಲ ಶಬ್ಧ ಮಾಡುತ್ತವೆ (ಒದರುತ್ತವೆ) ಮಾತು ಅಥವಾ ಭಾಷೆಯೆಂಬುದು ದೇವರು ಮನುಷ್ಯನಿಗೆ ಕೊಟ್ಟ ಒಂದು ದೊಡ್ಡ ವರದಾನವಾಗಿದೆ.

ಭಾರತದ ಸಂವಿಧಾನದಲ್ಲಿ ಮನ್ನಣೆ ಪಡೆದ ೧೭ ಬೇರೆ ಬೇರೆ ಭಾಷೆಗಳಿಗೆಲ್ಲಾ ತಮ್ಮದೇ ಆದ ಲಿಪಿ ಇವೆ. ಆದರೆ ಪಾರ್ಧಿಯರು ಆಡುವ ಮಾತಿಗೆ ಯಾವುದೇ ಲಿಪಿ ಇಲ್ಲ. ಇಲ್ಲಿ ಕೇವಲ ಮಾತು ಮಾತ್ರ ಇದೆ. ಆದರೆ ಆ ಮಾತಿಗೆ ಬರವಣಿಗೆ ಇಲ್ಲ.

ಮಾತಿನ ಕಲೆ ರೂಢಿಸಿಕೊಂಡ ಮಾನವನು ಇನ್ನುಳಿದ ಪ್ರಾಣಿಗಳಿಗಿಂತ ಭಿನ್ನವಾಗಿ 'ಶ್ರೇಷ್ಟ ಪ್ರಾಣಿ' ಎನಿಸಿಕೊಂಡಿದ್ದಾನೆ.

ಪಾರ್ಧಿಯರ ಭಾಷೆ 'ವಾಗ್ರಿ' ಆಗಿದೆ. ಇದನ್ನು ಅವರು ವಾಗರಿಬೋಲಿ ಎಂದು ಹೇಳುತ್ತಾರೆ. ಈ ಭಾಷೆಯ ಅಧ್ಯಯನಕ್ಕೆ ಇತಿಹಾಸವಾಗಲಿ, ಪರಂಪರೆಯಾಗಲಿ ಇದರ ಬಗ್ಗೆ ಯಾವೊಬ್ಬ ಪಾರ್ಧಿಯರಲ್ಲಿ ಯಾವುದೇ ನಿಖರ ಮಾಹಿತಿಯಾಗಲಿ ಅಥವಾ ದಾಖಲೆಯಾಗಲಿ ಲಭ್ಯವಿಲ್ಲ. ಈ ವಾಗ್ರಿ ಭಾಷೆಯು ಅನೇಕ ಪ್ರಾದೇಶಿಕ ಭಾಷೆಗಳೊಂದಿಗೆ ಮಿಶ್ರಣವಾಗಿದೆ. ಇವರು ತಮಿಳು, ತೆಲುಗು, ಗುಜರಾತಿ, ಮರಾಠಿ, ಹಿಂದಿ, ಉರ್ದು, ಈ

ರೀತಿಯಾಗಿ ಅನೇಕ ಭಾಷೆಗಳನ್ನು ಮಿಶ್ರಮಾಡಿ ಒಂದು ರೀತಿಯ ಮಿಶ್ರಣ ಭಾಷೆಯಂತೆ ಮಾತನಾಡುತ್ತಾರೆ. ಇವರು ಇಡುವ ಹೆಸರುಗಳನ್ನು ನೋಡಿದರೆ ಇವರ ಭಾಷೆಯಲ್ಲಿ ಇಂಗ್ಲೀಷ್ ಸಹ ಸೇರಿದೆ ಅಂತ ಹೇಳಬಹುದು.

ಮೈಸೂರು, ಬೆಂಗಳೂರು ಕಡೆಯಲ್ಲಿಯ ಪಾರ್ಧಿಯರ (ಹಕ್ಕಿಪಿಕ್ಕಿಯರ) ಹೆಸರುಗಳು, Division, Lawyer, Express, Inspector, Chamcham ಎಂತೆಲ್ಲಾ ಇವೆ.

ಇವರು ಬಹುತೇಕ ಪ್ರಾದೇಶಿಕ ಭಾಷೆಗಳ ಮಿಶ್ರಣ ಮಾಡಿ ಮಾತಾಡುವುದರ ಜೊತೆಗೆ ಇವರು ಯಾವ ರಾಜ್ಯದಲ್ಲಿ ಜೀವನ ಮಾಡುತ್ತಾರೋ ಆ ರಾಜ್ಯದ ಸ್ಥಳೀಯ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿರುತ್ತಾರೆ. ಉದಾಹರಣೆಗೆ ಹೇಳಬೇಕಾದರೆ, ಕರ್ನಾಟಕದಲ್ಲಿ ವಾಸಿಸುತ್ತಿರುವ ಎಲ್ಲಾ ಪಾರ್ಧಿಯರು ಕನ್ನಡ ಭಾಷೆಯನ್ನು ಸುಲಲಿತವಾಗಿ ಮಾತನಾಡುತ್ತಾರೆ. ಕೆಲವೇ ಕೆಲವರು ಮಾತ್ರ ಅಸ್ಪಷ್ಟವಾದ ಕನ್ನಡವನ್ನು ಮಾತನಾಡುತ್ತಾರೆ. ವ್ಯಾಪಾರದ ಕಾರಣದಿಂದಾಗಿ ಉತ್ತರ ಭಾರತದಲ್ಲಿ ಇರುವವರು ಕನ್ನಡವನ್ನು ಕಷ್ಟಪಟ್ಟು ಅಸ್ಪಷ್ಟವಾಗಿ ಮಾತನಾಡುತ್ತಾರೆ. ಮತ್ತೆ ಕೆಲವರು ತಮಗೆ ಕನ್ನಡವೇ ಬರೋದಿಲ್ಲವೋನೋ ಎಂಬುವಷ್ಟರ ಮಟ್ಟಿಗೆ ಅಸ್ಪಷ್ಟವಾಗಿ ಮಾತನಾಡುತ್ತಾರೆ.

ಇವರು ಅನೇಕ ಭಾಷೆಗಳ ಪ್ರದೇಶಗಳಲ್ಲಿ ಅಲೆಮಾರಿಗಳಾಗಿರುವುದರಿಂದ ಅಕ್ಷರಸ್ಥರಾಗಲಿ ಅಥವಾ ಅನಕ್ಷರಸ್ಥರಾಗಲಿ ೨-೩ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಾರೆ. ಅವರು ತಮ್ಮ ಭಾವನೆ, ಯೋಚನೆ ಮತ್ತು ಅನುಭವಗಳನ್ನು ತಮ್ಮ ವಾಘ್ರಿ ಭಾಷೆಯಲ್ಲಿ ಹೇಳಿಕೊಂಡಷ್ಟು (ಹಂಚಿಕೊಂಡಷ್ಟು) ನಿರರ್ಗಳವಾಗಿ ಕನ್ನಡದಲ್ಲಿ ಹಂಚಿಕೊಳ್ಳಲಾರರು. ಅವರು ಹಿಂದೂಸ್ಥಾನಿಯನ್ನು ತಮ್ಮ ಭಾಷೆಯ ನಂತರದ ಸ್ಥಾನದಲ್ಲಿ ಬಳಸುವ ಶಕ್ತಿಯಿದ್ದರೆ ಅವರು ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಪಾರ್ಧಿಯರು ಸಾಮಾನ್ಯವಾಗಿ ಉತ್ತರದ ಭಾಷೆಗಳಿಗಿಂತ ದಕ್ಷಿಣದ ಭಾಷೆಗಳನ್ನೇ ಅವರು ಹೆಚ್ಚಾಗಿ ಬಳಸುತ್ತಾರೆ. ಇದಕ್ಕೆ ಕಾರಣ ಸ್ಪಷ್ಟವಾಗಿದೆ ಪಾರ್ಧಿಯರಲ್ಲಿ ಬಹಳಷ್ಟು ಅಲೆಮಾರಿಗಳಿರುವುದಲ್ಲದೆ ದಕ್ಷಿಣ ಭಾರತದ ಪರಿಸರಕ್ಕೆ ಹೆಚ್ಚು ಸೀಮಿತವಾಗಿದ್ದಾರೆ. ಈ ಸಮುದಾಯವು ಒಂದು ಬಹುಭಾಷಿಯ ಸಮುದಾಯವಾಗಿದ್ದರೂ ಸಹ ವಾಗ್ರಿ ಹಿಂದೂಸ್ತಾನಿ, ಹಾಗೂ ಕನ್ನಡ ಭಾಷೆಗಳು ಇವರ ಪ್ರಮುಖ ಭಾಷೆಗಳಾಗಿವೆ. ಇವರಾಡುವ ಕನ್ನಡದ ಉಚ್ಚಾರವು ಸಹ ವಾಗ್ರಿ ಭಾಷೆಯನ್ನೇ ಅವಲಂಬಿಸಿರುತ್ತದೆ ಸಾಮಾನ್ಯವಾಗಿ 'ದ' ಕಾರವು 'ಡ' ಕಾರವಾಗಿರುತ್ತದೆ.

ಇವರಾಡುವ ವಾಗ್ರಿ ಭಾಷೆಯಲ್ಲಿ ಕನ್ನಡದ ಪದಗಳು, ವಾಕ್ಯಗಳ ರಚನೆಗಳು ಬಹುವಾಗಿ ಪ್ರಭಾವ ಬೀರಿವೆ. ಇದರಿಂದಾಗಿ ಇವರ ಭಾಷೆ ಇತರರಿಗೆ ಅರ್ಥವಾಗದೆ ಇರುವ ಕಾರಣ ಇವರು ಯಾವುದೋ ಗುಪ್ತ ಭಾಷೆ ಮಾತನಾಡುತ್ತಿದ್ದಾರೆಂದು ಇವರು ಯಾರೋ ಕಳ್ಳರೇ ಇರಬೇಕು ಅದಕ್ಕಾಗಿ ಈ ರೀತಿಯಾಗಿ ಮಾತನಾಡುತ್ತಿದ್ದಾರೆಂದು ಅನೇಕ ಕಡೆ ಅನೇಕ ರೀತಿಯ ಅನಾಹುತಗಳು ಆದ ನಿದರ್ಶನಗಳು ಸಾಕಷ್ಟಿವೆ.

ಬ್ರಿಟಿಷರ ಆಡಳಿತದ ಅವಧಿಯಲ್ಲಿ ಇವರನ್ನು ಕ್ರಿಮಿನಲ್ ಬುಡಕಟ್ಟು ಎಂದು ಕರೆಯುತ್ತಿದ್ದರಿಂದ ಈಗಲೂ ಅನೇಕರು ಹಾಗೂ ಪೋಲಿಸ್‌ನವರು ಇವರನ್ನು ಅಪರಾಧಿಗಳ ಸಮಾಜ ಎಂತಲೇ ಕರೆಯುತ್ತಿರುವುದು ಶೋಚನೀಯ. ಇಂಥಹ ಒಂದು ಬುಡಕಟ್ಟನ್ನು ಅಧ್ಯಯನ (ಸಂಶೋಧನೆ) ಅಷ್ಟೇನು ಸುಲಭದ ಕೆಲಸವೇನೂ

ಅಲ್ಲ. ಅಲ್ಲದೇ ಈಗಾಗಲೇ ತಿಳಿಸಿರುವಂತೆ ಇವರು ಬಹಳಷ್ಟು ಸಂಶಯದ ಜನರು ತಮಗೆ ನಂಬಿಕೆ ಬರದ ಹೊರತು ಬೇರೆಯವರೊಂದಿಗೆ ಸುಲಭವಾಗಿ ಬೆರೆಯುವುದು ಇಲ್ಲ, ಮಾತನ್ನೂ ಆಡುವುದಿಲ್ಲ. ಒಳ್ಳೇ ಬಟ್ಟೆ ಹಾಕಿಕೊಂಡು ಇವರ ಥಾಂಡಕ್ಕೆ ಹೋದರೆ ಅವರು ಖಂಡಿತವಾಗಿಯು ಅಂಥಹ ವ್ಯಕ್ತಿಯನ್ನು ಯಾರೋ ಪೋಲೀಸ್‌ನವರೆಂತಯೋ ಅಥವಾ ಅಬಕಾರಿ ಇಲಾಖೆಯವರೆಂತಲೋ ಅಥವಾ ಗುಪ್ತಚಾರ ಇಲಾಖೆಯವರೆಂತಲೋ ಎಂದು ಅನುಮಾನಿಸುತ್ತಾರೆ. ಹಾಗೂ ಅವರೊಂದಿಗೆ ಮಾತನಾಡದೇ ಅವರ ಮೇಲೆ ಹಲ್ಲೆ ಮಾಡಲೂ ಹೇಸುವುದಿಲ್ಲ. ಕಾರಣ ಸಂಶೋಧಕನಾದವನು ಒಬ್ಬ ಪರಿಚಿತರೊಂದಿಗಾಗಲಿ ಅಥವಾ ಈ ಸಮುದಾಯದ ಮುಖಂಡನೊಂದಿಗಾಗಲಿ ಕ್ಷೇತ್ರ ಕಾರ್ಯಕ್ಕೆ ಹೋಗಬೇಕು. ಆದರೆ ಈ ಅನುಕೂಲ ಪ್ರತಿಸಲ ಮತ್ತು ಪ್ರತಿ ಊರಿನಲ್ಲಿ ಸಿಗುವುದಿಲ್ಲ. ಆ ಕಾರಣಕ್ಕಾಗಿ ಇವರೊಂದಿಗೆ ಒಂದು ಉತ್ತಮ ಬಾಂಧವ್ಯ ಬೆಳೆಸುವ ನಿಟ್ಟಿನಲ್ಲಿ ಹಾಗೂ ಇವರೊಂದಿಗೆ ಬೆರೆತು ಸಂಪೂರ್ಣವಾಗಿ ಮಾಹಿತಿಯನ್ನು ಪಡೆಯುವ ನಿಟ್ಟಿನಲ್ಲಿ ಸಂಶೋಧಕನಾದ ನಾನು ಇವರಾಡುವ ವಾಗ್ರಿ ಭಾಷೆಯನ್ನು ಕಲಿತಿರುವೆ. ನಾನು ಕಲಿತ ವಾಗ್ರಿ ಭಾಷೆಯಕೆಲ ವಾಕ್ಯಗಳನ್ನು ನಮೂದಿಸಲು ಇಷ್ಟಪಡುವೆ.

೧. ಪಜ್ಜೆ ಪಡುಸ್ ಎಂದರೆ

ನಾನು ನಿಮಗೆ ಕೈಮುಗಿಯುತ್ತೇನೆ ಅಥವಾ ನಮಸ್ಕಾರ ಎಂದರ್ಥ.

೨. ತಾರು ನಾಂ ಶ್ಯುಂ? ಎಂದರೆ

ನಿನ್ನ ಹೆಸರೇನು? ಅಂತ.

೩. ಧಾನ್ ಖಾದ್ಯುಂ? ಅಂದರೆ

ಊಟ ಮಾಡಿದ್ದೀರಾ? ಎಂದರ್ಥ.

೪. ರೊಟ್ಟು ಖಾದ್ಯುಂ ಯಾ ಭೊಟ್ಟು ಖಾದ್ಯುಂ?

ಅಂದರೆ ರೋಟಿ ಊಟ ಮಾಡಿದ್ದೀರಾ? ಅಥವಾ ಮಾಂಸದ ಊಟ ಮಾಡಿದ್ದೀರಾ? ಎಂದರ್ಥ.

೫. ಮಾ ಆವೇಲಿ ಟೈಮು ತು ಚಹಾಜೋತೋ?

ಅಂದರೆ ನಾನು ನಿಮ್ಮಲ್ಲಿಗೆ ಬಂದಾಗ ನೀವು ಎಲ್ಲಿಗೆ ಹೋಗಿದ್ದಿರಿ? ಎಂದರ್ಥ.

ಈ ರೀತಿಯಾಗಿ ಇನ್ನು ಅನೇಕ ವಾಕ್ಯಗಳನ್ನು ಅಥವಾ ಮಾತುಗಳನ್ನು ಇವರ 'ವಾಗ್ರಿಭಾಷೆ' ಯಲ್ಲಿ ಮಾತನಾಡಬಲ್ಲವನಾಗಿದ್ದೇನೆ.

ಪಾರ್ಧಿಯರ ವಾಘ್ರಿ ಭಾಷೆ

ವಾಘ್ರಿ	ಕನ್ನಡ	ವಾಘ್ರಿ	ಕನ್ನಡ
೧. ಧನ್	ಮೋಡ	೨೧. ಪಕ್ಕೂ	ಹಣ್ಣು
೨. ಶುಕ್ಕರ್	ನಕ್ಷತ್ರ	೨೨. ಫೂಲ್	ಹೂವು

೩.	ರಾತ್	ಕತ್ತಲು
೪.	ಉಜಾಳು	ಬೆಳಕು
೫.	ಪಾಣಿ	ನೀರು
೬.	ವಾದಳೋ	ಆಕಾಶ
೭.	ಪಡದೊ	ಪರದೆ
೮.	ಗರ್ (ಘರ್)	ಮನೆ
೯.	ಬಾಕಲ್	ಬಾಗಿಲು
೧೦.	ಖೊಖಡು	ಚಪ್ಪಲಿ
೧೧.	ಚಾದ್ದರಿ	ಹಾಸಿಗೆ (ಚಾಪೆ)
೧೨.	ಗಡಾನ್	ಬೇಗನೆ
೧೩.	ಉಖಾನ್	ಸಾರು
೧೪.	ಧಾನ್	ಅನ್ನ
೧೫.	ದಟ್ಟಾ	ಬಾಣಂತಿ
೧೬.	ಚುಲ್ಲೊ	ಒಲೆ
೧೭.	ಜಾಡಿ	ಕಾಡು
೧೮.	ಕೋಡ್ಕು	ಸೌದೆ
೧೯.	ಪಾಂದಡು	ಎಲೆ
೨೦.	ಕಚ್ಚು	ಕಾಯಿ
೨೩.	ಚೋಟಿ	ಜಡೆ
೨೪.	ತಡಕೋ	ಬಿಸಿಲು
೨೫.	ಚಾಳೋ	ನೆರಳು
೨೬.	ಐನೊ	ಕನ್ನಡಿ
೨೭.	ಈಕಡ್	ಈಕಡೆ
೨೮.	ಐಕಡ್	ಆಕಡೆ
೨೯.	ಖಾಮಣಿ	ಮುಂದೆ
೩೦.	ಪಾತ್ಸಳ್	ಹಿಂದೆ
೩೧.	ವಾಯಿರೋ	ಗಾಳಿ
೩೨.	ಚಂದರ್ಮೊ	ಚಂದ್ರಮಾಮ
೩೩.	ಸೂರ್ಯಸ್	ಸೂರ್ಯ
೩೪.	ಖೊಳ್ಳಿಯೋ	ಹೆಂಡತಿಯನ್ನು ಕರೆಯಲು ಬಳಸುವ ಪದ.
೩೫.	ಕೊಳ್ಯಾಯೋ	ಗಂಡನನ್ನು ಕರೆಯಲು ಬಳಸುವ ಪದ.
೩೬.	ಬಾವಣ್,	ರಾಂಡ್, ಶೀತ್, ಇವೆಲ್ಲವು ಹೆಂಡತಿಗೆ ಕರೆಯುವ ಬೇರೆ ಬೇರೆ ನಮೂನೆಗಳು.
೩೭.	ಬಾವರಿ	ಗಂಡನಿಗೆ ಗೌರವ ಸೂಚಕವಾಗಿ ಕರೆಯುವ ಶಬ್ದ.
೩೮.	ಖಾಳ್	ಭಾವ
೩೯.	ಭುಕ್ಯಾಶ್	ಕೋಣ
೪೦.	ಭೋಲ್	ಹೇಳು.

ಪಾರ್ಧಿಯರು ತಾವು ತೊಡುವ ಉಡುಪುಗಳನ್ನು ಈ ಕೆಳಗಿನಂತೆ ಕರೆಯುತ್ತಾರೆ

ಪಾರ್ಧಿ	ಕನ್ನಡ
೧. ಖುಡುತು	ಅಂಗಿ
೨. ಪಂಚಿ	ಪಂಚೆ
೩. [illegible]	ಕುಪ್ಪಸ

೪. ಖಾಡಿ ಸೀರೆ

೫. ಗಾಗ್ರೊ ಲಂಗ

೬. ಚೌಕೋ ಕರಚಿಫು

೭. ಮುಸಲ್ಡಿ ಕಾಲು ಚೀಲ

೨. ಪಾರ್ಧಿಯರ ಸರ್ವನಾಮಗಳು ಮತ್ತು ಸಂಬಂಧ ವಾಚಕಗಳು

ವಾಘ್ರಿ	ಕನ್ನಡ	ವಾಘ್ರಿ	ಕನ್ನಡ
೧. ಯೋ	ಅವನು/ಅವಳು	೯. ನಾನು ಬೈ (ಚೊಟಬೈ)	ತಮ್ಮ
೨. ಯೋ	ಚೊಕರಿ/ಅವಳು	೧೦. ಮೊಟಿ ಬೆಹನ್	ಅಕ್ಕ
೩. ಐರಿತೆ	ಇವನು	೧೧. ನಾನಿ (ಚೋಟಿ) ಬೆಹನ್	ತಂಗಿ
೪. ಐರಿತೆ	ಇವಳು	೧೨. ಚ್ಚಿಯೋ	ಮಗ
೫. ಅವಣೆಖಾರು	ಇವರು	೧೩. ಚ್ಯೋರಿ	ಮಗಳು
೬. ಬಾ	ಅಪ್ಪ	೧೪. ಪುಯ್ಯಿ	ಅತ್ತೆ
೭. ಆಯಿ	ಅಮ್ಮ	೧೫. ವಹೂ	ಸೊಸೆ
೮. ಮೋಟುಬೈ	ದೊಡ್ಡಣ್ಣ.	೧೬. ಖಾಳಿ	ನಾದಿನಿ
೧೭. ಬೊಸ್ಸಾಯಿ	ಅತ್ತಿಗೆ		

೩. ಅಡಿಗೆ ಸಾಮಗ್ರಿಗಳ ಪಟ್ಟಿ

ವಾಘ್ರಿ	ಕನ್ನಡ	ವಾಘ್ರಿ	ಕನ್ನಡ
೧. ಹಂಡೋ	ಹಂಡೆವು	೬. ಡೋಯೋ	ಸೌಟು
೨. ಡಕ್ಕನು	ಮುಚ್ಚಳ	೭. ದಾನ್‌ಹಂಡಕು	ಅನ್ನದ ಪಾತ್ರೆ
೩. ಮೀಳ್ಳಿ	ಬಟ್ಟಲು	೮. ತ್ರಾಳಿ	ತಟ್ಟೆ
೪. ಡೋಯಿ	ಲೋಟ	೯. ಖೇಳಿ	ಬಿಂದಿಗೆ
೫. ಹಿಟ್ಟಕರಾನು	ಲಾಕುಡು ಮುದ್ದೆ ಮಾಡುವ ಕೋಲು		

ಮಾನವನ ಶರೀರದ ಅಂಗಗಳು

ವಾಘ್ರಿ	ಕನ್ನಡ	ವಾಘ್ರಿ	ಕನ್ನಡ
೧. ಮುಡಿಕ್ಕು	ತಲೆ	೮. ಖಂಬರ್	ಸೊಂಟ
೨. ಡೋಳೋ	ಕಣ್ಣು	೯. ಪೇಟ್	ಹೊಟ್ಟೆ

೩. ನಾಕ್	ಮೂಗು		೧೦. ನ್ಯಾಥಿ	ಎದೆ
೪. ಕಾನ್	ಕಿವಿ		೧೧. ಪೀಠ್	ಬೆನ್ನು
೫. ಹಾತ್	ಕೈ		೧೨. ಡುಕಣಿ	ಮೊಣಕೈ
೬. ಗೊಡೊ	ಕಾಲು		೧೩. ಹಥೇಳಿ	ಅಂಗೈ
೭. ಜಾಂಗ್	ತೊಡೆ			

ಈ ಮೇಲೆ ತಿಳಿಸಿದ ಈ ಎಲ್ಲಾ ಶಬ್ದಗಳನ್ನು ನೋಡಲಾಗಿ, ಈ ವಾಗ್ರಿ ಭಾಷೆಗೂ ಮತ್ತು ಹಿಂದಿ, ಉರ್ದು ಭಾಷೆಗೂ ಏನೂ ಹೆಚ್ಚಿನ ವ್ಯತ್ಯಾಸವಿಲ್ಲವೆನ್ನಬಹುದು. ಇವರ ಬಹುತೇಕ ಶಬ್ದಗಳು ಕನ್ನಡ ಭಾಷೆಗೂ ಹತ್ತಿರದಲ್ಲಿವೆ.

ಪಾರ್ಧಿಯರ ಸಾಹಿತ್ಯ ಬಹುವಾಗಿ ಗುಜರಾತಿ ಮತ್ತು ಮರಾಠಿ ಭಾಷೆಯಲ್ಲಿರುವುದರಿಂದ ಅದನ್ನು ಸಂಗ್ರಹಿಸುವುದು ಅಷ್ಟು ಸುಲಭವೇನಲ್ಲ.

ಇವರ ಸಾಹಿತ್ಯ ಸಂಪದ್ಭರಿತವಾಗಿದ್ದರೂ ಸಹ, ಸಾಹಿತ್ಯದ ಹಲವಾರು ಪ್ರಕಾರಗಳನ್ನು ಹೇಳುವ ಸಾಮರ್ಥ್ಯವುಳ್ಳವರಾದರು ಸಹ ಕನಿಷ್ಟ ಒಂದು ಗಂಟೆಯವರೆಗೆ ಕುಳಿತು ಹಾಡು, ಕತೆಗಳನ್ನು ಹೇಳುವವರು ಅಪರೂಪ. ಇನ್ನೂ ಇವರ ಸಾಹಿತ್ಯದ ಸ್ವರೂಪ ಒಟ್ಟಾರೆಯಾಗಿ ಇವರ ಬದುಕನ್ನೇ ಪ್ರತಿಬಿಂಬಿಸುತ್ತದೆ. ಇವರಲ್ಲಿ ಅವರ ಬೇಟೆ ಮತ್ತು ಮಾನವ ಸಂಬಂಧಗಳು ಮುಖ್ಯವಾಗಿ ಎದ್ದು ಕಾಣುತ್ತವೆ. ಒಂದಿಲ್ಲೊಂದು ಬಗೆಯಲ್ಲಿ ಯಾವಾಗಲೂ ಕ್ರಿಯಾಶೀಲವಾಗಿರುವ ಇವರ ಮನಸ್ಸು ಸದಾ ಹೊಸದನ್ನೇ ಕಟ್ಟುತ್ತಿರುತ್ತದೆ. ಅಲ್ಲದೇ ಅವರ ಸಾಹಿತ್ಯ, ಭಾಷೆಗಳ, ಅನುಭವಗಳ ಮಿಶ್ರಣ. ಇವರ ಸಮಗ್ರ ಸಾಹಿತ್ಯದ ಅಧ್ಯಯನದಿಂದ ಭಾಷಾಶಾಸ್ತ್ರ ವಿಭಾಗದಲ್ಲಿ ಒಂದು ಭಾಷಿಕ ಅಧ್ಯಯನವೋ ಅಥವಾ ಒಂದು ಸಂಶೋಧನೆಯೋ ಸಾಧ್ಯವಿದೆ ಎಂದರೆ ತಪ್ಪಾಗಲಾರದು.

ಆ. ಸಾಹಿತ್ಯ

೧. ಕಥೆಗಳು

ಅ. ಚಾಮುಂಡಿ ಕತೆ

ರಾಯಚೂರಿನ ಕೊಣವೇಗೌಡ ಒಂದು ಕೋಣ ಸಾಕಿದ್ದ. ಅಂದರೆ ಮಗನ್ನ ಸಾಕಿದಂಗೆ ಸಾಕಿದ್ದ. ಅವಾಗೆನಾಯ್ತು, ಹೊಳೆದಂಡೆಗೆ ಹೋಳಿ ಕುಂತಕಂಡಾಗ ಕೋಣನು ಅದ್ನ ನೀರಿಗೆ ನಿಂತುಬಿಡ್ತು. ಅವಾಗ ಕೆರಿಗೆ ಅದ್ನ ಏರಿ ಹಾಕಿದಂಗಾಗಿಬಿಡ್ತು. ಅಲ್ಲಿ ಏಳು ದೇವರ ಮೂರ್ತಿಗಳು ಚಾಮುಂಡಿ, ಕಾಳಿ, ಮಂಕಾಳಿ, ಭದ್ರಕಾಳಿ, ಅವೆಲ್ಲ ಇದ್ದವು, ಅವೆಲ್ಲ ಬರ್ತಾ ಇರುವಾಗ ನೆರಳು ಕೋಣನ ಮೇಲೆ ಬಿದ್ದು ಬಿಡ್ತು. ಅದನ್ನು ನೋಡಿ ಹೆದರಿ ಎದ್ದು ನಿಂತು ಬಿಡ್ತು. ನೋಡಿದರೆ ಇವರು 'ಥೂ ಇವನವ್ವನು ಬೋಸುಡನಾದ. ಇದನ್ನು ನೋಡಿ ನಾವು ಹೆದರಿಬಿಟ್ಟೆವಲ್ಲ' ಅಂತ ಸಿಟ್ಟು ಬಂದುಬಿಡ್ತು ಇವರಿಗೆ ಅದ್ರಾಗೂ ಕೊನೆಗೆ ತಂಗಿ ಚಾಮುಂಡಿಗೆ ಬಹಳ ಸಿಟ್ಟು ಬಂತು. 'ನೋಡಿ ನೋಡಿ ಅಕ್ಕ ಇಂಥ ಕೆಟ್ಟ ಮಾತಾಡಬೇಕಾದರೆ [illegible]'. [illegible]

ಮಾತು ಮಾಡಿಕೊಂಡ್ರೆ ಮಾಡಿಕೊಳ್ಳಿ ಹೋಗಣ ಬಾರೆ, ಇಲ್ಲ ಅಮ್ಮ ನಾ ಬರಲ್ಲ. ನೀವು ನಡಿರಿ. ನಾನು ಏನೈತಿ ಅದ ನೋಡಿಕಂಡೆ ಬರ್‍ತೀನಿ. ಬಾಯಲ್ಲಿ ಏನು ನುಡಿದನೋ ಅದ ಮಾಡಿಕೊಂಡೆ ಬರದು ಅಂತ ಹೇಳಿದ ಮೇಲೆ ಚಾಮುಂಡಿ ರಾಯಚೂರು ಕೊಣವೇಗೌಡನ ಹತ್ತಿರ ಹೋಯಿತು. ರಾಯಚೂರು ಕೊಣವೇಗೌಡನಿಗೆ 'ಮಾವ ನಿನ್ನ ಮಗನಿಗೆ ನಾನು ಲಗಣ ಆಗ್ತೀನಿ' ಅಂತ ಹೇಳಿ ಬಿಡ್ತು. 'ಹೇಮುಂಡೆ ಏ ನೀನ್ಯಾವಳು ನನ ಮಗನಿಗೆ ಲಗಣ ಆಗಕ್ಕೆ ನೀ ಹೋಗು' ಅಂತೇಳಿ ಅಲ್ಲಿದ್ದವರು ಹೇಳಿದರು. ಈ ಮುಂಡೆಗೆ ಇಲ್ಲಿಂದ ಕಳಿಸು ಅನ್ನಲು ಸೇವಕರು ಕಳಿಸಿದ್ರು. ತಿರುಗಿ ಬಂದು ನಿಂತು ಬುಡ್ತು 'ಮಾವನ ಮಗ ರಾಯಚೂರು ಕೊಣವೇಗೌಡ ನಿನ್ನ ಏಳು ಕೋಟೆಯು ಚೆನ್ನದೆ, ಏಳು ಬಾಕುಲು ಚೆನ್ನದೆ. ಅಂದ ಮೇಲೆ ನಿನ್ನ ಮಗನಿಗೆ ನಾನು ಮದುವೆ ಆಗ್ತೀನಿ. ಅಂತೇಳಿದ್ರೆ ಮತ್ತೆ ಗೌಡಗೆ ಸಿಟ್ಟು ಬಂತು. 'ಹೇ, ಈ ಮುಂಡೆಗೆ ಕಡೆದು ತಿಪ್ಪೆ ಗುಂಡಿಗೆ ಬಿಸಾಕರಿ' ಅನ್ನಲು ಹಮಾಲಿಗಳು ಬಂದು ಕಡದು ವಗಾಸಿದ್ರು. ತಕ್ಷಣ ಈ ಅಮ್ಮ ಬಂದು 'ಮಾವ ಮಾವ ನಿನ ಮಗನಿಗೆ ಲಗಣ ಆಕ್ತೀನಿ ಅಂದರೆ ನಿನ್ನ ಆಕಳ ಗೂಟನು ಚೆನ್ನದೆ, ರಾಗಿ ಬೀಸೊ ಕಲ್ಲೂ ಚೆನ್ನದೆ ಆದ್ದರಿಂದ ನಿನ್ನ ಮಗನಿಗೆ ಲಗಣ ಆಗ್ತೀನಿ. 'ಹೇ, ಈ ಮುಂಡೆ ಹಿಂಗೆ ಹುಚ್ಚುತನ ಮಾಡ್ತಾಳೆ. ಈಕಿಗೆ ಹುಚ್ಚಾಗೈತಲ ಹುಚ್ಚಾನೆಗೆ ಹುಲ್ಲಸುತ್ತಿ ಬಾಯಿಗೆ ಕೊಡಿ ತಿಂದು ಬಿಡಲಿ ಅಂತೇಳಲು, ಹಮಾಲಿಗಳು ಬಂದು ಹಿಡಿದು ಹುಲ್ಲದಗೆ ಕಲಸಿ ಬಾಯಿಗಿಟ್ಟರು. ಬಾಯಿಗಿಟ್ಟ ತಕ್ಷಣವೆ ದೇವರು ಅಂತ ಗಂಟಲು ಹಿಡಿದು ಬಿಡ್ತು. ಅದೇ ಮಾತಿಂದ ತಗೊಂಡು ಹೋಗಿ ಸ್ನಾನ ಮಾಡಿಸಿ ಆ ಮೇಲೆ ಬೆನ್ನಿನ ಮೇಲೆ ಕೂರಿಸಿ ಮತ್ತೂ ಬಂತು. 'ಮಾವ ಮಾವ ನಿನ ಮಗನಿಗೆ ನಾನು ಲಗಣ ಆಗ್ತೀನಿ' ಮತ್ತು ನೋಡಿದ. 'ಅಯ್ ಈ ಹುಚ್ಚು ಮುಂಡೆಗೆ ಏನು ಏನು ಬಂತು. ಈಕಿಗೆ.... ಥೂ ಮುಂಡೇದೆ ನೀನು ಏನಾರ ಮಾಡಿಕೊ ಹೋಗು ಅಂತ ನೋಡಿದಂಗೆ ಮಡುವಿಗೆ ಚಪ್ಪರ ಹಾಕಿದರು. ಚಪ್ಪರ ಹಾಕಿದ ತಕ್ಷಣ ಬೆಳಿಗ್ಗೆ ಮದಿವಿ ಮಾಡದು ಅಂತ ಬಿಟ್ಟುಬಿಟ್ಟರು. ಈಕೆಗೆ ರಾತ್ರಿ ಮದಿವಿ ಮಾಡಿಕೊಬೇಕು ಅಂತ ಗೊತ್ತಿಲ್ಲ. ಆಮೇಲೆ ತಕ್ಕೊಂಡ್ಲು, ಅಮೇಲೆ ಅರಿಷಿಣ ಕಲಸಿ ತ್ರಿಶೂಲ ತಕ್ಕೊಂಡ್ಲು ಏಳು ಸುತ್ತು ತಿರಗಾಡಿ ಆಮೇಲೆ ಅರಿಷಿಣ ತಗಂಡು ಚಿನ್ನದ ಮೇಲೆ ಹೊಡೆದಾಡಿದಂಗಾಗಿ ಬಿಡ್ತು. ಹೊ ಇದೇನ ಐತಿ ಅಂತ ಅವನಿಗೆ (ಕೋಣನಿಗೆ) ಹೆದ್ರಿಕೆ ಬರಕೆ ಶುರುವಾಯಿತು. ಆ ಮೇಲೆ ಏಳು ಸುತ್ತು ತಿರಗಾಡಿ ಅಮೇಲೆ ತಿರಶೂಲದಿಂದ ಹೊಡಿತು ನೋಡು. ಗುರುತಾಯಿತು, ಬೆನ್ನಿಗೆ ಹೊಡಿತು ನೋಡು ಗುರುತು ಮಾಡಿಕೊಂಡು ಹೋ ಇದು ಮನುಷ್ಯ ಅಲ್ಲ ಇದು ರಾಕ್ಷೇಸ ಅಂತ ಗೂಟ ಕಿತ್ಕಂಡು ಹೋಡ್ತು. ಅದರ ಜೊತಿಗೆ ಇದೂ ಹೋಡ್ತು. ಹೋಡ್ತ ಹೋಡ್ತ ಎಲ್ಲಿಗೋದ್ರು ಸಿಕ್ಕಂಗಿಲ್ಲ. ಅಷ್ಟರಗೂನು ಹಿಡಿದು ಬಿಡ್ತು. ಒಡ್ಲು ತಿನ್ನಬೇಕಂದ್ರೆ ಅವಾಗ ಹೇಳ್ತು 'ತಿನ್ನದು ತಿಂತೀಯ ತಾಯಿ, ಈ ನನ್ನ ಚರ್ಮನಾರೆ ಮಂಡಿಗೆ ಕಳಿಸಬೇಕ, ವ್ಯಾಪಾರಕ್ಕೆ ಕಳಿಸಬೇಕ' ಅಂತ ಕೇಳ್ತು 'ಕಳುಸ್ತೀನಿ' ಅಂತ ಹೇಳ್ತು. ಆಮೇಲೆ ಎಲ್ಲಾ ಹಕ್ಕಿಗಳಿದ್ದವು. ರಾಮ ಲಕ್ಷ್ಮಣನ ಜಗಳ ನೋಡ್ದ ಹಕ್ಕಿಗಳು. ಈ ರಕ್ತ ಹರಿತಾ ಇರದ್ನ ನೋಡಿಕೊಂಡು ಎಲ್ಲಾ ಹಕ್ಕಿಗೂ ರಕ್ತ ಕುಡಿತಾ ಕುಡಿತಾ ಅವುಗಳ ಮೂಗಿಗೂ ರಕ್ತ ಸಿಡೀತು. ಎಲ್ಲೆಲ್ಲಿ ಜಗಳ ನೋಡಿದೆ. ರಾಮಲಕ್ಷ್ಮಣರ ಜಗಳ ನೋಡಿದೆ. ಎಷ್ಟೆಷ್ಟು ಜಗಳ ನೋಡಿದೆ ಈ ಅಮ್ಮನ ಜಗಳದ ಮೇಲೆ ಜಗಳನೆ ಇಲ್ಲ. ಕುಡಿತ ಕುಡಿತ ಎಮ್ಮ ಮೂತಿಗೂ ಸೈತ ರಕ್ತ ತಗಲಿಬಿಡ್ತು ಅಂತೇಳಿ ಆ ಹಕ್ಕಿಗಳು ಮಾತಾಡಿಕೊಂಡವು.

ಆ. ನರಿಕತೆ

ಒಂದು ನರಿ ಏನು ಮಾಡ್ತು ಅಂದ್ರೆ, ಒಂದು ಕುರಿ ಮರಿ ಹಾಕಿಬಿಡ್ತು, ಅದು ಗಂಡು ಮರಿ ಹಾಕಿ ಹೋಗಿಬಿಡ್ತು. ಕುರಿ ಅಂದ್ರೆ ಕಂಬಳಿ ಕುರಿ. ನರಿ ಅಲ್ಲಿಗೆ ಬಂತು. ಆ ನರಿ ಬಂದು ಏನು ಹೇಳ್ತು. 'ಹೇ ಮರಿ ನಾನು ತಿನ್ನಲೇನೊ ನಿನಗೆ' ಅಂತ ಕೇಳ್ತು. ಆಗ ಆ ಮರಿ 'ಇಲ್ಲ ಕಣಯ್ಯ. ನಾನೆಷ್ಟಿದಿನಿ ನೀನು ತಿಂದ್ರುನು ಎಷ್ಟು ರುಚಿ ಬರುತ್ತೆ? ರುಚಿ ಒಂದೆರಡು ತಿಂಗಳು ಬಿಟ್ಟು ಬಂದು ನನ್ನ ತಿಂದರೆ ನಿನಗೂ ಒಂಥರ ತಿಂದಂಗಾಕುತೆ' ಅಂತ ಹೇಳ್ತು 'ಹೂ ಆಯ್ತು ಕಣಯ್ಯ ನಿನ್ನ ಮಾತೆ ಆಗಲಿ. ನಾನು ಹೋಗ್ತೀನಿ ಅಂತ ಹೋಯ್ತು. ಹೋಗಿದಾಂತರ ಎರಡು ತಿಂಗಳು ಹಂಗೂ ಹಿಂಗೂ ಕುರಿಮರಿ ಇಲ್ಲೆ ಇಷ್ಟಾಗಿ ಬಿಡ್ತು. ಆ ನರಿ ಆಸೇಲಿ ತಿನ್ನಬೇಕು ಅಂತ ಎರಡು ತಿಂಗಳು ತುಂಬಿದ ನಂತರ ಬಂದು 'ಏನೊ ಕುರಿಮರಿ ತಿನ್ನಲೇನೊ?' ಅಲ್ಲ ಕಣಯ್ಯ ಈಗೀಗ ರಕ್ತ ತುಂಬ್ತೈತೆ ಮಯ್ಯಿಗೆ. ಈಗ ತಿಂದರೆ ನಿನಗೆ ಸುಖ ಸಿಗಲ್ಲ. ರಕ್ತ ತುಂಬಿ ಮಯ್ಯಿಗೆ ಮಾಂಸ ತುಂಬಿದಂಗಾಗಿ ಬಿಟ್ಟರೆ ಅವಾಗ ಅಂದ್ರೆ ಇನ್ನೊಂದೆರಡು ತಿಂಗಳು ಬಿಟ್ಟು ಬಂದರೆ ನಿನಗೂ ತಿನ್ನಕೆ ಚೆನ್ನಾಗಿರುತ್ತೆ ಅಂತೇಳಿ ಬಿಡ್ತು. ಹೋ ಹೌದಲ್ವೆ. ಇವನ ಮಾತು ಬಾರಿ ಚೆನ್ನಾಗಿದೆ. ಕೇಳಬೇಕು ಮಾತ ಅಂತ ಅಂದುಕೊಂಡು 'ಹೂ ಕಣಯ್ಯ ನಾನು ಹೋಗ್ತೀನಿ' ಅಂತ ಹೋಯ್ತು. ಹೋಗಿ ಹಂಗೆ ಎರಡು ತಿಂಗಳು ತಿರುಗ್ಯಾಡ್ತು. ಅಷ್ಟತ್ತಿಗೆ ಕುರಿ ಒಳ್ಳೆ ಗೆಲುವಾಗಿ ಓಡಾಡೋದು. ಆಮೇಲೆ ಕುರಿ ಹತ್ತಿರ ಬಂದು 'ಹೇ ತಿನ್ನಲೇನೋ' 'ಹೇ ಇಲ್ಲ ಕಣಯ್ಯ ಆಗಿನು ಸ್ವಲ್ಪ ರಕ್ತ ಅಡಿ ನಾನು ಸ್ವಲ್ಪ ಗೆಲುವಾಗ್ತದಿನಿ ಇನ್ನು ಒಂದಾರು ತಿಂಗಳು ಬಿಟ್ಟು ಬಾ. ಆಮೇಲೆ ನೀನು ತಿಂದರೂ ಸುಖಾ ಸಿಕ್ತತೆ. ಅದರ ವಯಸ್ಸು ಬರೋತನಕ ಮಾತಾಡ್ತ ಇರದೆ ಈಗ ವಯಸ್ಸು ಇಲ್ಲ. ತಿಂದು ಬಿಡ್ತನೆ. ವಯಸ್ಸು ಬಂದ ಮೇಲೆ ನಾನೇನಾದರೂ ಜಗಳ ಮಾಡೇನು ಅಂತ ಅವನ ಅಭಿಪ್ರಾಯ ಎತ್ತಿಕೊಂಡು ನರಿಗೆ ಮಾತಾಡ್ತು. ಆ ಮೇಲೆ ವರ್ಷನೆ ಬಿಟ್ಟೆ ಬಂತು. ಅಷ್ಟತ್ತಿಗೇನಾಗಿತ್ತು ಕುರಿ ಕೊಂಬುಗಳು ಆಕಡೆ ತಿರುಗಿ ಹೊಲ್ಬಿದ್ದವು. ಕುರಿ ಹೊಲ್ಡಾಡದು, ಕುಸ್ತಿ ಆಡಿದಂಗೆ ಆಡದು, ತಿರುಗ್ಯಾಡದು ಮಾಡ್ತಿತ್ತು. ಆಮೇಲೆ ನರಿ ಬಂದು 'ಹೇ ನೀನೆಯೇನೊ ಕುರಿಮರಿ, ತಿನ್ನನೇನೊ' ಎನ್ನಲು. 'ಅಲ್ಲ ಕಣಯ, ಬಂದ್‌ಬಂದು ತಿನ್ನನೇನೊ ಕುರಿಮರಿ ತಿನ್ನನೇನೊ ಅಂತ ಕೇಳ್ತಿಯಲ್ಲ ಏನ್ ಬಾರಿ ಸಾಕಿಬಿಟ್ಟಿದ್ದೀಯಾ ನನಿಗೆ. ನನಿಗೇನು ಎತ್ತಿಕಂಡು ತಿರುಗಾಡಿಸಿಬಿಟ್ಟದಿಯ ನೀನು. ನೀನು-ನಾನು ಮೂರು ಮೂರು ಪಂಥ ಕಟ್ಟಿಕೊಳನ. ನಾನು ಸೋತರೆ ನೀನು ತಿನ್ನು ಅಥ್ವಾ ನೀನು ಸೋತೆ ನಾನೇನು ಮಾಡಬೇಕೊ ಅದ ಮಾಡ್ತೀನಿ' ಅಂತು. 'ಹೂ ಕಣಯ ಹಂಗೆ ಆಗ್ಲಿ' ಅಂತ ನರಿ ಒಪ್ಪಿಕೊಳ್ತು. ಕುರಿ ಆಗೇನ್ಮಾಡ್ತು ಕೆಸರಗೆ ಮೈಕಲಸಿ ಕುಳಿತು ಬಿಡ್ತು. ಮೊದಲು ತಿನ್ನತೀನಿ ಅಂತ ಒಪ್ಪಿಕೊಂಡದ್ದಕ್ಕೆ ಹೋಗಿ ಕೆಸರ ಮಾಡಿಕೊಂಡು ಬಿಡ್ತು. ನರಿ ವಷ್ಟು ದೂರ ಓಡಿ ಹೋಗಿ ಬಂದು ಗಪ್ ಅಂತ ಹಿಡಿಯಿತು. ಬಾಯಿಗೆ ಕೆಸರು ಸಿಕ್ಕಿತು. ಸಿಕ್ಕಿದ ತಕ್ಷಣ ಈಗೇನ್ ಮಾಡದು ಅಂತ ಬಾಯಿ ಕೊಡಪಿಕಂಡು ವಾಪಸ್ಸು ಹೋಗೋದು ಒಳ್ಳೆಯಂದೆಂದು ಚಿಂತಿಸುತ್ತಿತ್ತು. 'ಹೇ ಒಂದಾಯಿತು ನೋಡು' ಅಂತ ಎಚ್ಚರಿಕೆ ಕೊಡ್ತು ಕುರಿ. ನರಿ ಮತ್ತೆ ಹೋಗದು, ತಿರುಗಿ ಬಂದು ಗಪ್ ಅಂತ ಹಿಡಿಯಿತು. ಹಿಡಿದ ತಕ್ಷಣ ಬರೆ ಕೂದಲು ಕೆಲಸು. ಮತ್ತೆ ಕ್‌ಕ್‌ಕ್‌ಕ್ ಅಂತಕಂತ ವಾಪಸ್ಸು ಹೋಗದು. ಕುರಿ 'ಎರಡಾಗೈತಿ ಇನ್ನೊಂದು ಉಳಕಂಡೈತಿ' ಅಂತು. ಆಮೇಲೆ ಮತ್ತೊಂಗಿ ಇನ್ನೊಂದು ಬೈದು ಸಾರಿಗೇ ಮಾಡ್ತು, ಅವಾಗಲೂ ಏನಿಲ್ಲ ಬರೇ ಕೆಸರು ಸಿಕ್ಕಿದಂಗಾಯಿತು. 'ಕಂತಕಲಯ್ಯ, ನೀನಿಲ್ಲಿ,

ನಾನೋಗ್ತಿನಿ. ಅಂತು ಕುರಿ. ಹೋಗಿದೆ ಪಲ್ಪಿ ಹೊಡಕಂತ ಹೋಗಿ ರೊಯ್ಯಂತ ಬಂದು ನರಿಗೆ ಒಂದ್ಸರಿ ಗುದ್ದುತು ನೋಡು ಕೋಡಿಂದ. ಒಂದು ವಡತಕ್ಕೆ ಬ್ಯಾಡಪ ನಿನ್ನ ಸವಾಸ ಅಂತ ಓಟ! ಓಟ ವಡಿತ ಹೆದರಿಬಿಡ್ತು. ಈಗ ಏನಮಾಡಬೇಕು? ಏಳು ಜನ ಎಮ್ಮೆ ಕಾಯೊ ಹುಡುಗರಿಗೆ ಜೊತೆ ಮಾಡಿಕೊಂಡು 'ಹೇ ನಾನೊಂದು ಮಾತೇಳ್ತಿನಿ ಕೇಳ್ತಿರೆನೊ?' ಎಂದಿತು. ಹುಡುಗ್ರು 'ನರಿರಾಯ ಕೇಳ್ತೀವಿ' ಅಂದ್ರು. ನೋಡು ನಾನೊಂದು ತೋರುಸ್ತೀನಿ ಅದನ್ನು ನೀವೇನಾರ ಮಾಡಿ ಗಪ್ ಅಂತ ಹಿಡಿದು ಕಡದುಬಿಡ್ರಿ. ಕಡದು ನಾವೆಲ್ಲ ಬೇಯಿಸಿಕೊಂಡು ತಿನ್ನೋಣ ಎನ್ನಲು 'ಏನು?' ಎಂದು ಕೇಳಿದರು. 'ಕುರಿ' ಎಂದಿತು ನರಿ. ತಕ್ಷಣ ಎಲ್ಲರೂ ಒಗ್ಗಟ್ಟಾದರು. ಒಂದಾದ ಮೇಲೆ ಒಂದೊಂದು ಮನಿಗೆ ಕಳಿಸಿ ಪಾತ್ರೆ, ಚೊಂಬು ಎಲ್ಲ ತರಿಸಿಬಿಟ್ಟ ನರಿಯಣ್ಣ. ಮತ್ತೆ ಅಕ್ಕಿ, ಮೆಣಸಿನಕಾಯಿ ಅಂತವ್ನೆಲ್ಲ ತರಿಸಿಬಿಟ್ಟ. ತರಿಸಿದ ಮೇಲೆ ಅವನ ನೋಡ್ರಿ ಅಂತ ತೋರಿಸಿದ. ಹುಡುಗರು ಹೋಗಿ ಕುರಿ ಮುಂದೆ ಹುಲ್ಲ ತೋರಿಸಿದ್ರು. ಅವನು ಎದ್ದು ಬಂದ. ಬಂದ ತಕ್ಷಣ ಹಿಡಕಂಡು ಕಡುದ್ಬರು. ಇದ್ನೆಲ್ಲ ನರಿ ಹುಡುಗ್ರ ಕೈಲಿ ಮಾಡಿಸಿದ. ಕೆಲ್ಸ ಮಾಡಿ ಅಡಿಗೆಲ್ಲ ರೆಡಿ ಅಂದ್ರೆ ಅಡಿಗೆ ಪಡಿಗೆ ತುಂಡೆಲ್ಲ ರೆಡಿ. ಹುಡುಗ್ರ ಎಮ್ಮೆಗಳು ಏನ ಮಾಡಿದ್ವೂ ಮೆದೆಗೆ ನುಗ್ಗಿ ಹುಲ್ಲನೆಲ್ಲ ತಿನ್ನಕ್ಕೆ ಶುರುಮಾಡ್ತವು. 'ಅಲ್ಲ ಕಣಯ್ಯ ನರಿರಾಯ ನಾವೆಷ್ಟು ಕೆಲ್ಸ ಮಾಡ್ತಾ ಅದಿವಿ. ಎಮ್ಮೆ ನೋಡಯ ಎಲ್ಲಿ ಮೆಯ್ತದವೆ. ಹೋಗಿ ಹೊಡ್ಕಂಬಾರಯ'. 'ಇಲ್ಲ ಕಣಯ ನಾನೇನು ಕೋಲ ಹಿಡ್ಕಮಕಾಯ್ತದ? ಏನು ಮಾಡಂಗೈತೆ? ಅವೇನು ಹೆದರಂಗೈತ? ನಾನು ಇಲ್ಲೆ ನೋಡ್ಕಳ್ತ ಇದ್ದೀನಿ. ನೀವು ಹೋಗಿ ಹೊಡಕಂಡು ಬರೋಗ್ರಿ'. ಹುಡುಗ್ರು 'ಹ್ನಾ ಇಲ್ಲ ನೀನೆ ಹೋಗಬೇಕು. ಈ ಉರಿತೈತಲ್ಲ ಬೆಂಕಿದು ಕೊಳ್ಳಿ ಅದ ಕೊಟ್ಟುಬಿಡ್ರಿ ಎಮ್ಮೆಗಳ ಮುಕಳಿಗೆ ಹಚ್ಚಿ ಓಡಿಸಿಕೆಂಡು ಬಂದುಬಿಡ್ತೀನಿ'. ಅಂತ ಹೇಳಿ, ಹಲ್ಲಗೆ ಕೊಳ್ಳಿ ಹಿಡಕಂಡು ಓಡಿ ಹೋಗಿ ಎಮ್ಮಿಗೆ ಹಚ್ಚ ಬದಲು ಮೆದಿಗೆ ಹಚ್ಚಿಬಿಡ್ತು. ತಕ್ಷಣ ಹುಡುಗ್ರು 'ಅಯ್ಯಯ್ಯೋ ಬೆಂಕಿ ಹಾಕಿಬಿಟ್ಟ ಮೆದೆ ಒಳಕೆ' ಅಂತೇಳಿ ಓಡಿಬಿಟ್ಟರು. ಇವನು ಬಂದಿದ್ದೆ ತಿಂದ ತಿಂದ. ಹುಡುಗರು ಹೆದರಿ ಎಮ್ಮೆ ವಡಕಂಡು ಪರಾರಿ. ಇವನೇನ್ಮಾಡಿದ ನರಿ, ಸಕತ್ತಗೆ ತಿಂದು ಮಿಕ್ಕುದ್ದ ಇಟಕಂಡು ಕುಂತಿದ್ದ. ಒಬ್ಬನು ರಾಜ ಕುದುರೆ ಮೇಲೆ ಕುಂತುಕಂಡು ಅದೇ ದಾರೀಲಿ ಬರ್ತಿದ್ದ. ಅಲ್ಲ ಕಣಯ ಉಪಾಸ 'ರೊಟ್ಟಿ ಕಡಿತಾ ಹೋಗ್ತಿದಿಯಲಯ. ನಾನು ಮಾಡಿದಿನಿ ತಿಂದು ನೋಡಿದರೆ ನೀನು ಎಷ್ಟು ಸಂತೋಷಪಡಬಹುದು. ನೋಡ್ತ, ಭಾರೀ ಸಂತೋಷಪಟ್ಟ. 'ಕರೆಕ್ಟ್ ನಾನು ಇಳದು ತಿನ್ನಬೇಕಲ ಅಂತ ಇಳಕಂಡ. ತಿನ್ನಕೆ ಕೂತಕಂಬಿಟ್ಟ. ಇವನು ಕುದುರೆ ಮೇಲೆ ಕುಂತಕಬಿಟ್ಟ. ಈ ನರಿ. 'ಹೇ ಬ್ಯಾಡಕಣಯ ಕುತಕಬ್ಯಾಡ' ಎನ್ನಲು ರಾಜ 'ಇಲ್ಲ ಕಣಯ ನೀ ಊಟ ಮಾಡತನಕ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಹೋಗಿ ಬರ್ತೀನಿ. ನಾನೂ ಸ್ವಲ್ಪ ನೋಡ್ತೀನಿ ಕುದುರೆ ಹೆಂಗೈತೆ ಅಂತ. ಅತ್ತಕಡಿಂದ ಹೋದ ಇತ್ತಕಡಿಂದ ಹೋದ. ತಕ್ಕೋ ಜೋರಾಗಿ ಹೊಡಕಂಡು ಹೋಗೇಬಿಟ್ಟ. ರಾಜ ತಿನ್ನವಷ್ಟ ತಿಂದ. ಈಗ ಬರ್ತನೆ ಆಗ ಬರ್ತನೆ ಅಂತ ಕಾಯ್ತನೆ ಇದ್ದ. ನರಿಯಣ್ಣ ಪತ್ತೆನೇ ಇಲ್ಲ.

೯. ಹುಲಿ ಮತ್ತು ಕುದುರೆ ಕತೆ

ಒಂದ್ಸಾರಿ ಕುದುರೆ ಗಂಡು ಮರಿ ಹಾಕ್ತು. ಗಂಡು ಮರಿ ಹಾಕಿ ಅಡವಿಗೆ ಹೋಗಿಬಿಡ್ತು. ಹುಲಿ ಅಲ್ಲಿಗೆ ಬಂದು ಬಿಡ್ತು. ಅವಾಗಲೆ ಹೇಳ್ತು ಅದು ಕುದುರೆ ಮರಿಗೆ 'ಹೇ ಕುದುರೆ ಮರಿ ನಿನಗೆ ನಾನು ತಿನ್ನಲೇಬೇ

ಅಂತು. 'ಅಲ್ಲ ಕಣಯ್ಯ ಈಗ ತಿಂದರೆ ಏನು ಸುಖ. ಒಂದಾರು ತಿಂಗಳು ಬಿಟ್ಟು ಬಂದು ತಿನ್ನು' ಎಂದಿತು ಕುದುರೆ ಮರಿ. 'ಹೂ ಕಣಯ್ಯ ನಿನ್ನ ಮಾತೆ ಆಗ್ಲಿ' ಅಂತ ಹುಲಿ ಹೋಯ್ತು. ಹುಲಿ ಹೋಗಿದ್ವಾಗ ಅದೇ ಆರು ತಿಂಗಳು ಸುತ್ತಾಡಿ ಮತ್ತು ಬಂತು. ಇದು ತಿರುಗಾಡದ ಶಕ್ತಿ ತಗಳೊದು ಮಾಡ್ತು. 'ಏನಯ್ಯ ತಿನ್ನಲೇನಯ್ಯ' ಅಂತ ಕೇಳ್ತು. 'ಇಲ್ಲ ಕಣಯ್ಯ ನಾನು ಈಗಿನು ರಕ್ತತುಂಬಿಕೋಳ್ತಾ ಇದಿನಿ ಈಗ ತಿಂದರೆ ನಿನಗೇನು ಸುಖ ಒಂದು ವರ್ಷ ತಿರುಗಾಡಿ ಬಾ. ಆಗ ನೀನು ತಿಂದ್ರೂನು ಚೆನ್ನಾಗಿರ್ತದೆ. ಅಂತ ಹೇಳ್ತು. ಹೂಂ ಕಣಯ್ಯ ನಿನ್ನ ಮಾತೆ ಚೆನ್ನಾಗೈತಿ ಅಂತ ಹೋಯ್ತು. ಹೋಗಿ ಅದೇ ವರ್ಷ ಹಂಗೂ ಹಿಂಗೂ ತಿರುಗಾಡಿ ಕಾಲ ತಳ್ಳಿ ಮತ್ತೆ ಗ್ಯಾನ ಬಂದು ಬಿಡ್ತು. ಅದೇ ದಾರಿ ಹಿಡಿದು ಬಂದು 'ಏಯ್ ಕುದುರೆ ತಿನ್ನಲೇನಯ' ಇಲ್ಲ ಕಣಯ್ಯ ಇನ್ನೂ ಸ್ವಲ್ಪ ಗೆಲವಾಗಬೇಕು. ಇನ್ನೂ ಮಾಂಸ ಚೆನ್ನಗಾಗಲಿ. ಇನ್ನು ಒಂದು ವರ್ಷ ಬಿಟ್ಟು ಬಾ ತಿನ್ನಂತೆ' ಎಂದಿತು. ಆ ಮೇಲೆ ಕುದುರೆ ಅಡವೆಗೆ ತಿರುಗಾಡ್ತು ಸುಖವಾಗಿ ತಿನ್ನದು ಜೋರಾಗಿ ಒಂಥರಾ ತಿರುಗಾಡ್ತು. ಹುಲಿಗೆ ಇದರದೇ ಚಿಂತೆ ಆಗಿಬಿಡ್ತು. ಯಾವಾಗ ತಿಂದೇನೊ! ಮತ್ತೆ ವರ್ಷವಾಗ್ತಾ ಬಂತು. ಇದು ಸರಿಯಾದ ಕುದುರೆ ಆಗಿಬುಡ್ತು. ಯಾರೂ ಬಗ್ಗಿ ಸಂಗಿಲ್ಲ. ಅಂತ ಕುದುರೆ ಮುಂದೆ ನಿಂತು ಹುಲಿ 'ಈಗ ತಿನ್ನಲೇನಯ್ಯ?' ಎಂದು ಕೇಳಿತು. ಆಗ ಕುದುರೆ ಅಲ್ಲ ಕಣಯ್ಯ ತಿನ್ನನ ತಿನ್ನನ ಅಂತ ಹೇಳ್ತಿಯಲ್ಲ ನೀನೇನು ನನ್ನ ಸಾಕಿದಿಯ? ಅಂದುದ್ಕೆ 'ಎಷ್ಟು ಜೋರು ಮಾಡ್ತೀಯ? ಅವಾಗ ತಿನ್ನನ ಅಂದುದ್ಕೆ ಸ್ವಲ್ಪ ದೊಡ್ಡನಾಗ್ತಿನಿ ಅಂತ ಹೇಳಿಬಿಟ್ಟೆ. ಈಗ ನೋಡಿದರೆ ಇಷ್ಟು ಮಾತಾಡ್ತೀಯ? ಅಂಗಿಲ್ಲ ಈಗ ನಾನು ನೀನು ಮೂರು ಮೂರು ಸಲ ಜೂಜಾಡಮ. ಅದರಗೆ ನಾನು ಸೋತರೆ ನೀನೆ ತಿನ್ನು. ಇಲ್ಲ ನೀನು ಸೋತರೆ ನನ್ನ ವಡತ ತಿಂದು ಹೋಗು' ಅಂತ ಹೇಳ್ತು. ಹೇಳಿದಾಗ ಹೂಂ ಕಣಯ್ಯ ಆಯ್ತು ಅಂತ ಮದ್ಲು ಕುದುರೆ ಕೆಸರಿನಲ್ಲಿ ಕಲಸಿ ಹೂತು ಹೋಯಿತು. ಹುಲಿ ತಿನ್ನಲು ಹೋದಾಗ ಬರೀ ಕೆಸರು. ಗೋಮಾಳೆ ತಿನ್ನಕ್ಕೆ ಹಿಡಿಸಲಿಲ್ಲ. ಅವಾಗ ಕುದುರೆ 'ನೋಡಯಾ ಒಂದು ಸಾರಿ ಆಗಿದೆ' ಎಂದಿತು. ಇನ್ನೊಮ್ಮೆ ಹಾಗೆ ಮಾಡಿತು ಹುಲಿ ಎರಡು ಸಲವಾಗಿದ್ದಕ್ಕೆ ಕುದುರೆ ಎಚ್ಚರಿಸಿತು. ಮತ್ತೂ ಹಾಗೇ ಆಯಿತು. ಹುಲಿಗೆ ಕುದುರೆ ಆಗ 'ಕುಂತಕಳಯ ನೀನು ಈಗ' ಅಂತೇಳಿ ವಪ್ಪು ದೂರ ಹೋಗಿ ಏನಮಾಡಿಬಿಡ್ತು. ಕುದುರೆ ತನ್ನ ಸಾಮಾನನ್ನ ಉದ್ದುಕ್ಕೆ ತಗುದುಬಿಟ್ಟಿತು. ಹುಲಿ ಅದನ್ನು ನೋಡ್ತ ನೋಡ್ತ ಆಷ್ಚರ್ಯ ಆಗಿಬಿಡ್ತು. ಅದರ ಎದೆ ದಸಕ್ಕಂತು. ಕುದುರೆ ತನ್ನ ಸಾಮಾನ ನಿಗರಿಸಿ ತನ್ನ ಎದಿಗೆ ತಾನೆ ಹೊಡಕಳ್ತಾ ಇತ್ತು. 'ಅಯ್ಯೋ ಅಯ್ಯೋ ಅಷ್ಟು ಹೊಡ್ತಾನ ಅವನೇ ತಿಂದನಲ್ಲ ಆ ವಡತಗಳು ನನಿಗೆ ಎಷ್ಟು ಬೀಳ್ತವೊ ದೇವರೇ. ಸಾಇಲ್ಲಿದ್ರೂ ಏನೂ ಸುಖವಿಲ್ಲ ಬ್ಯಾಡಪ ಇವನ ಸಹವಾಸ ಅಂತ ಓಡಿತು. ಓಟ ಓಟ ಓಡಿಬಿಡಿತು. ಅದರ ಹಿಂದೆ ಕುದುರೆಯೂ ಓಟತೊಡಗಿತು. ಅಲ್ಲೊಂದು ಮನಿ ಇತ್ತು. ಅಲ್ಲಿ ಇಬ್ಬರಿದ್ದರು. ಹುಲಿ ಅವರಿಗೆ ನೋಡು ಇಂಥವನೊಬ್ಬ ಬರ್ತನೆ. ಅವನಿಗೆ ಹುಲಿ ಇಲ್ಲೇನಾರ ಬಂದಿತ್ತೆ ಅಂತ ಹೇಳಿಬಿಟ್ಟರೆ ಗಂಡ ಹೇಣ್ತಿ ಇಬ್ಬರಿಗೂ ಸಿಗಿದು ಸಾಕಿಬುಡ್ತೀನಿ ಅಂತ ಹೆದರಿಸಿಬಿಟ್ಟಿತು. ಮನೆಯವರು ಇಲ್ಲಪ್ಪ ನಾವೇಳಲ್ಲ, ನಾವೇಳಲ್ಲ ಅಂತ ಹೇಳಿದರು. ಆಮ್ಮ ಅಂತ ಅಲ್ಲಿ ನೋಡಿಕಂಡು ಕುದುರೆ ಹೋಯ್ತು. ಕುದುರೆಗೆ ಅವರು ಹೇಳಲಿಲ್ಲ. ಆಮೇಲೆ ಇವರಿಗೆ ಆಶ್ಚರ್ಯ ಇಂಥ ಹುಲಿ ಸ್ವಲ್ಪವೂ ಧೈರ್ಯವಿಲ್ಲ. ಇದನ್ನ ಹೆದರಿಸಿದ ಕುದುರೆ ಯಾಗಿರಬೈದು. ಕುದುರೆಗೆ ಹೋಗಿ ಹೇಳಿ ಬಿಡಬೇಕು ಅಂತ ಮನಸಾಯಿತು. ಮಾತಾಡಿಕಂಡರು. ಇದನ್ನ ಕಿವಿಗೊಟ್ಟು ಹುಲಿ ಕೇಳಿದ.

ಆಮೇಲೆ ರಾತ್ರಿ ಮಂಟ ರಡಿ ಇತ್ತು. ಗಂಡ ಹೆಂಡತಿ ಇಬ್ಬರು ಮಲಗಿದರು. ಹುಲಿ ಮಂಚ ಸಮೇತ ಅವರಿಬ್ಬರನ್ನೂ ಎತ್ತಿಕೊಂಡು ಹೋಯಿತು. ಇವರನ್ನ ಬೆಳಿಗ್ಗೆ ಮಾತಾಡಿಸಿಯೆ ತಿನ್ನೋಣ ಎಂದುಕೊಂಡು ಸುಮ್ಮನಿತ್ತು. ಸ್ವಲ್ಪ ಹೊತ್ತಿಗೆ ಗಾಳಿ ಬಂದುಬಿಡ್ತು. ಪಾಪ ಹೆಂಡತಿ ಮೇಲಿದ್ದ ಬಟ್ಟೆ ಹಾರಿಬಿಡ್ತು. ಆಗ ಏನೊ ಹಾರ್ತಲ್ಲ ಅಂತ ಹುಲಿ ನೋಡಿದ. ತಕ್ಷಣ ಹೆದರಿಬಿಡ್ತು. ಅಲ್ಲಿ ಕುದುರೆ ಹತ್ತಿರ ಏನೊ ನೋಡಿದ್ದೆ. ಇಲ್ಲಿ ಏನೊ ಇರಂಗೈತಲ್ಲ ಎಂದು ಹೆದರಿ ಗಂಡನನ್ನು ಎಬ್ಬಿಸುತ್ತಾನೆ. ಹೇ ಏಳಯ, 'ಅದೇನದು ಅದು' ಅಂತ ಆತನ ಹೆಂಡತಿಯ ಕಾಲಸಂದಿ ಕಡೆ ಹುಲಿ ಕೈತೋರಲು, ಅಲ್ಲ ಕಣಯ, 'ಅಲ್ಲಿಂದ ಏಳು ಕುದುರೆಗಳು ಬರ್‍ತವೆ ಕಣಯ. 'ಅಂತ ಅಂದ ಗಂಡ. 'ಹಂಗರೆ ಭದ್ರವಾಗಿ ಮುಚ್ಚಯ್ಯ ನಾನು ಓಡ್ತೀನಿ' ಅಂತು ಹುಲಿ. 'ಇಲ್ಲ ಒಂದು ಬಂದು ಬಿಡ್ತು ಹೊರಗಡೆ' ಎಂದ ಗಂಡ. ಅಯ್ಯಯ್ಯೋ ಗಟ್ಟಿಗೆ ಮುಚ್ಚಿಬಿಡು ನಾನು ಓಡ್ತೀನಿ. ನಿನ್ನ ಸುದ್ದಿಗೆ ಬರಲ್ಲ. ನಿನ್ನ ಸಹವಾಸವೆ ಬೇಡ. 'ಹೋ ಯಲ್ಡು ಬಂದು ಬಿಡ್ತು. ಇಲ್ಲ ಕಣಯ ನಾನು ದೇಶಾಬಿಟ್ಟು ಓಡಿಬಿಡ್ತಿದಿನಿ. ನಿನ್ನ ಸುದ್ದಿ ಬರಲ್ಲ' ಅಂತ ಓಡಿ ಬಿಡ್ತು. ಆ ಮೇಲೆ ಎಚ್ಚರ ಆಯ್ತು 'ಅಲ್ಲ ಕಣೆ ನೀನಿದ್ದೆ ಅಂತ ನಾ ಉಳುಕೊಂಡೆ. ನೀ ಇರಲಿಲ್ಲ ಅಂದರೆ ನಾನಿರ್‍ತಿರಲಿಲ್ಲ. ಮನೆ ಬಿಟ್ಟು ನಾವು ಹಿಂಗೆ ದೂರದಿವಿ. ನಮ್ಮನ್ನ ಹುಲಿ ತಿಂದುಬಿಡ್ತುತ್ತು. ಏನ ನಡಿ, ಅಂದುಕಳ್ತೆ ಮನಕಡೆ ನಡದ್ರು.

ಈ . ಮತ್ತೊಂದು ಕತೆ

ಏಕ್ ದೇಖ್‌ನೊ ಏಕ್ ರಾಜಾತೊ ಯೊ ರಾಜಾ ಏಕ್‌ದಿನ್ ಇನೊ ಮಂತ್ರಿ ಸೇನಾಧಿಪತಿ ಯೊ ಗಾಂನ್ನೂ ಅದ್ಮಿ ಖಾರು ಮಳೀನ್ ಏಕ್ ಸಭೆ ಉಯ್ಯಿತೂ. ಯೊ ಸಭೆಮಾ ದೇಖ್‌ನಿ ಸಮಾಚಾರ್ ಚಾಲಿ ಬಿಜು ಉಯ್ಯಿತೂ ಏಕ್ ಮಾಡ್ಕಿ ಖೇಲಾಡಿಯೊ ತೊ ಘಣು ಅಚ್ಛೂ ಖೇಲಿ. ಮಂತ್ರಿ ಸೇನಾಧಿಪತಿ ಯೊಗಾಂನೂ ಲೋಕ್ ಯೊ ಮಾಡ್ಕೀನಾ ಹೊನ್ನು ರೂಪು ಧಾನ್ಯ ಖಾರೂದ್ದಿದು. ರಾಜಾನೆ ಯೊ ಮಾಡ್ಕಿನ ತೂ ಘಣು ಅತ್ಸೂಖೇಲಿ ಮಾರಾ ಮಂತ್ರಿನೆ ಮಾರಾ ಸೇನಾಧಿಪತಿನೇ ಮಾರಾ ದೇಖ್ನೂ ಆದ್ಮಿನೆ ಖಾರೂ ವೈಢೂರ್ಯ ಧಾನ್ಯ ದಿಡು ಮೇ ತೂ ಶಾತ್‌ಭೋಲಸ್ ಯೊ ದೇವಾನಾ ಮೆ ತಯಾರ್, ಯೊ ರಾಣಿನೇ ಬೋಲಿ ಮೆ ಬೋಲಿಶ್ ತೂ ಖಿಮ್‌ಜಿಸ್ ಕಿ ಶೂ ರಾಜಾ ಒಪ್ಪಿಗೊ, ತೂ ಶಾತ್ ಭೋಲಸ್ ಮೆ ಖಂಜಾನಾ ತಯಾರ್ ಯೊ ಖೇಲಿತೆ ಮಾಡ್ತಿನೆ ಬೋಲಿ ತಾರಿ ಸಿಂಹಾಸನಾ ಘರ್ ಮೆ ಅಂಗ್‌ನೂ. ಸಭೆ ಸೇರಿ ರಹಿದೇಖ್ ತ್ಕ್ಯಾ ಟೇಂಪರ್ ತದೆ ರಾಜಾನಾ ಘಣು ಮಾನಾಜಾಸ್ ತದೆ ಯೋಚನೆಕರಸ್ ಮೇರಾಜ್ಯಾತ್ತೊ ಮೆಹಲಿಜಾನು ನಕೊತೊ ಮಾರಿ ಸಿಂಹಾಸನಾಘರ್ ಯೊ ಖೇಲಾವಳಿ ಮಾಡ್ಕಿ ಅಂಗ್ಸು. ಬೇ ತೀರ್ಮಾನ್ ಉಯ್ಯಿಗಿಬೇರೂಸ್ ಟೈಂ ಲಿದೊ ಸೋಚೊ ಕಿಂ ಕರು ತ್ಯೊ ದಿನ್ ಅಸ್ ದೇಖ್ ದೇಖ್ ನಾ ರಾಜಾನಾ ಅವಾತ್ ಭೋಲಿ ಮೋಕುಲಿಯೊ. ಕೋಣ್‌ಬಿ ಉತ್ತರಕೋಡ್ಯೋಣಿ ಏಕ್ ದೇಖ್‌ನೊ ಮಂತ್ರಿಯೊ ಪ್ರಸ್ನೇನಾ ಕಂಜೀನ್ ಇನೆ ಉತ್ತರ ಶೋಚೊ ಇನೆ ಬಲರಾಕಿತ್ತೆ ಶಾತ್ ಸಿಂಹಾಸನಾಘರ್ ಅಂಗುಸಾಕ್ರಿಖಾಲಿ. ಶಾತ್ ತೋಬಿ ಏಕ್ ತೊಟ್ ಕೊ ಬಿ ಜಾಬ್ತರ್ ಘಡಿಗೂತೊ ಇನೆ ಯಾಸ್‌ಘರಿ ಖಿತರ್‌ನಕ್‌ದೇನೂ. ಯೊ ರಾಜಾನಾ ಅವಾತ್ ಬೋಲಿಮೋಕ್‌ಲಿಯೊ ಸಭೆ ಸೇರಿಗೊ ರಾಜಾ ಮಂತ್ರಿ ಸೇನಾಧಿಪತಿ ದೇಖ್‌ನೂ ಆದ್ಮಿ ಅಕ್ಕು ಸೇರಿಗಯ ಮಾಡ್ಕಿಲಿಯ್, ಸಬೆಮಾ ರಾಜಾ ಮಂತ್ರಿನಾ ಭೋಲಿಯೊ ಮಂತ್ರಿ ಅಪ್ನಿ ಕಂಡೀಷನ್ ಭೋಲ್ ಮಂತ್ರೀನೆ ದೇಕ್‌ಲಿ ಖೇಲಾವಳಿ ಮಾಡ್ಕಿ ತಾತ್‌ತೊಬಿ ತೂ ಬೋಲ್ ರಾಕೀತೆ ಹಂಗಾನ ಶಾತ್‌ತೊಬಿ ಏಕ್ ತೊಟ್

ಮುತ್ತರ್ ಪಡಿಉತೊ ತುನಾಆಸ್ ಕತರ್‌ಸಕ್ ದೀಶ್, ಭೋಲ್ ದ್ಯಾವಾಮ ಯೊ ಮಾಡ್ಕಿ ಡರೀಗಿ. ಜಿಜೂ ಉತ್ತರಾಕಿನೆ ಭೋಲಿಯೂ ಮಂತ್ರಿನೇ ಭೋಲಿಯೂ ತದೆ ಯೊ ಮಾಡ್ಕಿ ಯೊ ಮಂತ್ರೀಸ್‌ನಾ ಒಪ್ಪೀಸ್ ಯಾ ಕರ್ಲೀಸ್, ರಾಜಾನಾ ಕೊ ಒಪ್ಪಾನಿ ರಾಜಾ ಕೆತ್ರೂ ಭೋಲಾತೊಭಿ ಯೊ ರಾಜಾನಾ ಯಾ ಕೊಕರಾನಿ. ಯೊ ಕರಸ್ತೆ ಯಹಾ ಮಂತ್ರೀನೆ ಜೈನ್.

ಕತೆಯ ಕನ್ನಡ ಅನುವಾದ

ಒಂದು ದೇಶದಲ್ಲಿ ಒಬ್ಬ ರಾಜ ಇದ್ದ. ಒಂದು ದಿನ ರಾಜನ ಮಂತ್ರಿ ಸೇನಾಧಿಪತಿ ಆ ದೇಶದ ಜನರು ಒಟ್ಟಾಗಿ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ದೇಶದ ಕಷ್ಟ ಸುಖದ ಬಗ್ಗೆ ಮಾತನಾಡಿದರು. ಮಾತನಾಡಿ ಕೊನೆಯಲ್ಲಿ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಒಂದು ಹೆಂಗಸು ಸಂಗೀತ ನಾಟ್ಯವನ್ನು ಆ ಸಭೆಯಲ್ಲಿ ಆಡಿ ತೋರಿಸಿದಳು. ಆ ಸಭೆಯಲ್ಲಿ ಮಂತ್ರಿ ಸೇನಾಧಿಪತಿ ಆ ದೇಶದ ಜನರು ಅವಳ ನೃತ್ಯವನ್ನು ನೋಡಿ ಮೆಚ್ಚಿ ಅವಳಿಗೆ ಚಿನ್ನ ಬೆಳ್ಳಿ, ಬಂಗಾರ ದವಸ ಧಾನ್ಯಗಳನ್ನು ಕೊಟ್ಟರು. ಆದರೆ ಆ ದೇಶದ ರಾಜ ಅವಳಿಗೆ ಕೇಳಿದನು 'ನಮ್ಮ ದೇಶದ ಜನರು, ಸೇನಾಧಿಪತಿ, ಮಂತ್ರಿಯರು ಎಲ್ಲವನ್ನೂ ಕೊಟ್ಟಿದ್ದಾರೆ. ಆದರೆ ನೀನು ನನಗೆ ಏನು ಕೇಳುತ್ತೀಯೆ ಕೇಳು ಅದನ್ನು ನಾನು ಕೊಡಲು ಸಿದ್ಧನಾಗಿದ್ದೇನೆ'. ಎನ್ನಲು, ಆಗ ಆ ನೃತ್ಯದ ಹೆಂಗಸು 'ನಾನು ಕೇಳಿದ್ದನ್ನು ಕೊಡಲು ಸಿದ್ದನಿದ್ದೀಯ' ಎಂದು ಮತ್ತೊಮ್ಮೆ ಪ್ರಶ್ನಿಸಿದಳು. ಅದಕ್ಕೆ 'ಆಯಿತು ನೀನು ಏನು ಕೇಳುತ್ತೀಯ ಅದನ್ನು ಕೊಡಲು ಸಿದ್ಧನಾಗಿದ್ದೇನೆ' ಎಂದು ಹೇಳಿದನು. ಆಗ ನೃತ್ಯದ ಹೆಂಗಸು 'ನಾನು ಈ ಸಭಾಂಗಣದಲ್ಲಿಯೇ ನಿನ್ನ ಸಿಂಹಾಸನದ ಮೇಲೆ ಹೇಲಬೇಕು' ಎಂದು ಕೇಳುತ್ತಾಳೆ. ಆದರೆ ರಾಜನಿಗೆ ಇದು ಅವಮಾನದ ಮಾತಾಗಿರುತ್ತದೆ. ಅದನ್ನು ಸಹಿಸಿಕೊಂಡು ಎರಡು ದಿನ ಸಮಯವನ್ನು ಕೇಳುತ್ತಾನೆ. ಆ ಎರಡೂ ದಿನಗಳಲ್ಲಿ ದೇಶದೇಶದ ರಾಜರುಗಳಿಗೆ ಮತ್ತು ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸುತ್ತಾನೆ. ಆದರೆ ಇದಕ್ಕೆ ಉತ್ತರ ಯಾರಿಂದಲೂ ಬರುವುದಿಲ್ಲ. ಅವನ ಮಂತ್ರಿಯೆ ಇದನ್ನು ಯೋಚನೆ ಮಾಡಿ ಅವಳು ಹೇಳಿರುವುದು ಹೇಲಲು ಮಾತ್ರ. ಆದರೆ ಒಂದು ತೊಟ್ಟು ಸಹ ಉಚ್ಚೆಯನ್ನು ಹೊಯ್ಯುವಂತಿಲ್ಲ ಎಂದು ರಾಜನಿಗೆ ಸಲಹೆ ಕೊಟ್ಟನು. ಮಾರನೆಯ ದಿನ ಸಭೆ ಸೇರಿತು. ಆ ನೃತ್ಯದ ಹೆಂಗಸು ಸಹ ಬಂದಳು. ಅವಳ ಮುಂದೆ ಮಂತ್ರಿ ಈ ಉತ್ತರವನ್ನು ತಿಳಿಸಿದನು. ಅದಕ್ಕೆ ಅವಳು ಹೆದರಿ ರಾಜನಿಗೆ ಮೆಚ್ಚಿಗೆ ಕೊಡದೆ ಮಂತ್ರಿಗೆ ಮೆಚ್ಚಿಗೆ ಕೊಟ್ಟು, ತನ್ನ ಮನಸ್ಸನ್ನು ಅವನಿಗೆ ಒಪ್ಪಿಸುತ್ತಾಳೆ. ರಾಜ ಅವಳನ್ನು ಮದುವೆಯಾಗಲು ಹೇಳುತ್ತಾನೆ. ಆದರೆ ಅವಳು ಒಪ್ಪದೆ ಮಂತ್ರಿಯನ್ನು ಮದುವೆಯಾಗುತ್ತಾಳೆ.

೨. ಹಾಡುಗಳು

೧. ಕಾಡುಕೋಳಿ ಜೋಡಿ ನವಲು
ವಾಗಲಮ್ಮ ವಾಂಗಲೆ ಡಿಯಾಲಮ್ಮ
ಸಣ್ಣಸೂಜಿ ದಪ್ಪಪಟಣ
ವಾಂಗಲಮ್ಮ ವಾಂಗಲೆ ಡಿಯಾಲಮ್ಮ
ಮ್ಯಾಲೆ ಚಪ್ಪರ ಕೆಳಿಕೆ ಬಕರ
ವಾಂಗಲಮ್ಮ ವಾಂಗಲೆ ಡಿಯಾಲಮ್ಮ

೨. ಏಕ್‌ದೊ ಪಿತುವಾ ಪೀಪಲ್‌ಕಾ ಪಿತುವ
ಬಟುವಾ ಉಡು ಉಡುಜಾ
ಅಡಿ ಬಾಲಂರೇ ಜೋಬನ
ಬಟ್‌ವಾ ಉಡು ಉಡು ಜಾ
ನದಿಕೀ ಕಿನಾರೆ ಡೇರಾ ಬಿಚುವಾ
ಪಾಯಲ್ ಉಡು ಉಡು ಜಾ

೩. ಧೋಳು ಧೋಳುವಾದಳೊ
ಅಪಣೆ ಕಾರು ಪಾಣಿಮಾ
ಗಂಬಳ ಖೇಲಿಯೆ
ಬಿಳಿ ಬಿಳಿ ಮೋಡ ನಾವೆಲ್ಲರೂ ಸೇರಿ ಮಳೆಯಲ್ಲಿ ಆಟ ಆಡೋಣ.

೪. ಝುಂಗಳ ತಿತರೊ ವಾಕ್‌ತೊತೊ
ಕೇಬರಂ ಕುಂಯ್ಯ ಕಠತೀತಿ
ಕಾಡಿನ ಹಕ್ಕಿ ಕೂಗುತಾ ಇತ್ತು ಸೋರಕ್ಕಿ ಕುಯ್ಯೊ ಅಂತಿತ್ತು

೫. ಚ್ಯಾಲಿಬಾಯ್
ಚ್ಯಾಲಿಬಾಯ್
ಬೀರೇ ಪೀಯಾಸ್ ಕಿ ಬ್ರಾಂಡಿ ಪಿಯ್ಯೆಸ್
ಪಾವೇ ಖಾಸಕೀ ತೂ ಬಾಜಿ ತೂಖಾಸ್ ಕೀ
ದೇವಿಕೊಯಿತೀನ್ ತಾರಾಕನಾ ಜಮೀನ್ ಕೊಯಿನಿ
ತರಗನಾ ಆಸ್ತೀನ್ ಕ್ವೊಯಿಂತೆ ಮೆ ಕಿಂಮೆ ನಂಬು
ಕಿಂ ಕರ್‌ಶೂ ಅಪನು ಜೋಡು ಉಯ್ಯಿಗುತೊ
ನಡಿರಿ ಅಕ್ಕ
ನಡಿರಿ ಅಕ್ಕ ಬೀರು ಕುಡಿಯಣ ಬನ್ನಿ
ಬ್ರಾಂದಿ ಕುಡಿಯಣ ಬನ್ನಿ
ಸೊಪ್ಪು ತಿಂತೀರಾ ಮಾಂಸಾ ತಿಂತೀರಾ
ನಿಮ್ಮತ್ರ ದೇವರೂ ಇಲ್ಲ ಜಮೀನೂ ಇಲ್ಲ
ನಿನ್ನಾತ್ರ ಆಸ್ತಿ ಇಲ್ಲವಲ್ಲಾ
ನಿನ್ನ ಹೇಗೆ ನಂಬಲಿ
ನಾವು ಜೊತೆಯಾದರೆ ಏನು ಮಾಡೋದು

೬. ಕಾಳು ಕಾಳು ವಾದಳೊ ಹಾಯುನಿಲಾಬಿ
ಠಂಡು ಠಂಡು ವಾಯರೊ ವಾಗ್‌ಯೊನಿಲಾಬಿ
ಪಾಣಿಮಾ ಅಪಣೆ ಖಾರ ಜುಂಜರಕೇಲಿಯೆ
ಹಾಖ್ತ್ರ ಹಾಖ್ತ್ರ ಹೊಯ್ ಖೇಲ್ತ ಹೋಯ್
ಕರೆ ಕರೆ ಮೋಡ ಬಂದುಬಿಡ್ತು
ತಂಪಿನಗಾಳಿ ಬೀಸಿತು

ನೀರಿನಲ್ಲಿ ನಾವು ನೀವು ಸೇರಿ
ಆಟ ಆಡೋಣ ಬನ್ನಿರಿ

೭. ಲಾಲ್‌ದೋರೆ ಮೆಟ್ಟು ಪಳ್ಯಾಮ್
ದಾತಿಬೇಟೋಸ್ಲ ಚಿರಮಿಲಾಗಳ್ಳ
ದಾತಿಉತೋವ ಹೊಳೆ ಓಜಾಯ
ಬಂಡೋಶ್‌ಕುಂಗಲ
ಇವನೆ ಇವನೆ ಮೊಲ ಕುಂತಕಂಡಿತ್ತೆ
ಬಲೆ ತಗಂಡುಬಾ. ಬಲೆ ಸರಿಮಾಡು ಬಲೆ ಹಾಕನ.
ಎದ್ದು ಹೋಗಿಬಿಡ್ತು ಮೊಲದ ತೊಲ್ಡ ತಿನ್ನು

೮. ಹರಸಮಂಡ ಲೇತಲ್ಲೆ
ಸೊಪಾರಿಕೆ ಜಲ್ಲೆ
ಬಯಿ ನಿಕಲಾ ಸಂರಗತಕು
ಮಾಯಿರೆ ಧಾತಲಂಗಯೆ

೯. ಸರಾಕೊ ಬುಲಾಯಿ
ಪಲ್ಲಂಕೊ ಸುಲಾಯಿ
ಸಾಸು ಉಠುಕೊ ಸವಾರಿ
ಸಸರ್ ಠಾಂಗ್ ಪಸಾರೆ

೧೦. ಸರಾಕೊ ಬುಲಾಯಿ
ಪಲ್ಲಂಕೊ ಸುಲಾಯಿ
ಪರ್‍ಯೆಮೊಕಾ ಪೂತು
ಕ್ಯಾಶಿಮ್ಯಾರೆ ಚೂತು

೧೧. ಹಾರೆ ಲಾಯಿರೇ ದೋಂಗಾರೆ ಉಪರ್
ಏನವಾಗಜಾಯೆ ಲಾಯಿ ಮಾರೊ ಜೀಮಣ ಹಾರೊ
ಖುಷಿಗಯೊ, ಮಾನಾವರೇಪುನ ಸಾಯ ಬಜಾಯ
ಡೋಲ್‌ನಾಯೆ
ಹಾರೆ ಲಾಯಿರೇ ಸುಳಾತೂ ಭೂಂಜೇ
ಏನವಾಗಜಾಯೆ

೧೨. ಉದುಬತ್ತಿ ಜಲಾಲೆ ಹಾಸನಕೇವುಡಾ
ಮಾತಾಕೆ ನಾಮ್ ಬಾಯ್ ಇಂಗಲಾದೇರಿ
ಸೋಲಾಪುರಿಸಿ ಆಯಿರಿ ಮಾತಾ ಸದ್ವರ್ ಸವಾನಿ
ಮಾತಕೇ ನಾಮ್ ಬಾಯ್ ಇಂಗಲಾದೇರಿ
ತೊಳಜಾಪುರ್‌ಸಿ ಆಯಿರಿ ಮಾತಾ ಸದ್ವರ್ ಸವಾನಿ
ಮಾತಕೇ ನಾಮ್ ಬಾಯ್ ಇಂಗಲಾದೇರಿ

ಚಾವಂಡಿಗಡಸಿ ಆಯಿರಿ ಮಾತಾ ಸದ್ದರ್ ಸವಾನಿ
ಮಾತಾಕೇ ನಾಮ್ ಬಾಯ್ ಇಂಗಲಾದೇರಿ
ಮಹವರ್‌ಗಡಸಿ ಆಡಿರಿ ಮಾತಾ ಸದ್ದರ್ ಸವಾನಿ
ಮಾತಾಕೇ ನಾಮ್ ಬಾಯ್ ಇಂಗಲಾದೇರಿ

೧೩. ಚಂಬುಮಾಂಗ ದಾನಮಾ ಜೇಜೇ ಭೋಲೋ ಜೈ ಭುವಾನಿ
ಸೌಂಭೇಸೆ ಗಂಗ್ ಸಾನುಮಾ ಜೇಜೇ ಭೋಲೊ ಜೈಭುವಾನಿ
ಸೌಭಕರೇ ಗಂಗ್ ಸಾನಮಾ ಜೇಜೇ ಭೋಲೊ ಜೈಭುವಾನಿ
ಸೌಮೋಂಡು ಗಂಗ್ ಸಾನಮಾ ಜೇಜೇ ಭೋಲೊ ಜೈಭುವಾನಿ
ಜಡಿಯರಿ ಬಾಲನಾ ಘಾಟಮಾ ಜೇಜೇ ಭೋಲೊ ಜೈಭುವಾನಿ

೧೪. ತೂಪು ಪಳೆಂಪು
ಪಟ್ಲಾರೆಗೆ ಕೊಳೆಂದೆ
ತಾಳಂಗೆ ಪೂಂ ಪೂಂ ಪಶ್

೧೫. ಅಚ್ಚಚ್ಚು
ಬೆಲ್ಲದಚ್ಚು
ಯಾವ ಬೆಲ್ಲ
ಯಾವ ಕಪ್ಪು
ಮಡಕೆ ಕಪ್ಪು
ಯಾವ ಮಡಕೆ
ಅನ್ನ ಮಡಕೆ
ಯಾವ ಅನ್ನ
ತಿನ್ನೊ ಅನ್ನ
ಯಾವ ತಿನ್ನೊ
ಏಟು ತಿನ್ನೊ
ಯಾವ ಏಟು
ದೊಣ್ಣೆ ಏಟು
ಯಾವ ದೊಣ್ಣೆ
ದಪ್ಪ ದೊಣ್ಣೆ
ಯಾವ ದಪ್ಪ
ನಿನ್ನ ಹೊಟ್ಟೆದಪ್ಪ

೩. ಗಾದೆಗಳು

೧. ತೀನ್‌ವಾರ ಬರೋವಣೊ
ತದೇ ತಾರೊ ಖರಾಜ್ ಪೀಟ್‌ನು
ಮೂರು ವಾರ ಕೊಡಬೇಕು
ನಿನ್ನ ಸಾಲ ತೀರಬೇಕು.

೨. ಆಜಾಸೆ ದೇವ್‌ನೂ ಮಾರು ಜಾವಳಾನೂ ಜಾಸೆ
ಮಾರುಷಾದ್ ಜಾವನು ಖೊಯಿನಂಖ್
ಹೋದರೆ ದೇವರದು ಹೋಯ್ತು
ಪೂಜಾರಿದೇನು ಶಂಟ ಹೋಯ್ತು

೪. ಒಗಟುಗಳು

೧. ಖಡಾ ಬಲ್ನಾಪರ್ ಟಾಂಚಿರಿ ಪಡೀಸ್
ಮೈದಾನದಾಗೆ ಕಾಲು ತೆರೆದು ಬಿದ್ದಿದ್ದಾಳೆ
ಮಗರಿ (ಪುರಲಕ್ಕ ಬಲೆ)

೨. ಖಡಾ ಬಲ್ನಾಪರ್ ಗೋಳೊ ರಡತ್ತೊ ವಳವಾಸ್
ವೈದಾನದಾಗೆ ಬೆಲ್ಲದಕಾಯಿ ಬಿದ್ದಿತ್ತು
ಬೆಂಕವೀಲ್ (ಬೆಲ್ಲದ ಕಾಯಿ)

೩. ವೈದಾನ್‌ಮೊ ಟೋಪಿ ಲಗಾಡಿ ಬೇಟೊ
ವೈದಾನದಲ್ಲಿ ಯಾರೊ ಟೋಪಿ ಹಾಕಿ ಕುಳಿತಿದ್ದಾರೆ
ಗಾಜ್ (ಹಣಬೆ)

೪. ಏಕ್ ಶೀಶ್‌ಮಾ ದೊ ರಂಗ್ ಕಾ ಪಾನಿ
ಒಂದೇ ಸೀಸೆಯಲ್ಲಿ ಎರಡು ಬಣ್ಣದ ನೀರು
ಮೊಟ್ಟೆ

೫. ಗದ್ದೆಮಾ ಪಾಣೆ
ಪಾಣೆಮಾ ಝಾಡ್
ಝಾಡ್‌ಮಾ ಆಗ್
ಗದ್ದೆಯಲ್ಲಿ ನೀರು ನೀರಿನಲ್ಲಿ ಬೇರು ಬೇರಿನಲ್ಲಿ ಬೆಂಕಿ
ಲಾಟೀನು (ದೀಪ)

೬. ಕೈಚೆ ಡೋರಿ
ಚಮಂ ಕೇ ತಾರಾ
ಹತ್ತಿ

೭. ಮಾದಂತ್ರಿ ಬಾಪ್ ಜೀತ್ರ
ಉಸ್‌ಕಾ ಬೇಟಾ ಕಾ ಬಚ್ಚ
ಮಾನಿಕ್ ಟುಕುಡಾ
ತಾಯಿ ಹಲ್ಲಿನವಳು ತಂದೆ ಜುಟ್ಟಿನವನು ಮಗ ಮುತ್ತಿನಂಥವನು
ಹಲಸಿನ ಹಣ್ಣು (ಸ್ವಾದೆ, ತೊಳೆ, ಮುಳ್ಳು)

೮. ಬಾನಾ ರುಮಾಲ್ ಬಾನ್ ತಾ ಕೊವನಿ
ಆಯನಾ ಚಾದ್ರಿ ಪುಂಗಳಿ ಕರ್ತ ಕೊವಾನಿ
ಚೀ ಯಾನ ಪೈಶಾ ಗಣತಾ ಕೊವಾನಿ
ತಂದೆಗೆ ಪೇಟ ಕಟ್ಟಲು ಆಗುವುದಿಲ್ಲ
ತಾಯಿಗೆ ಚಾಪೆ ಮಡಿಸಲು ಗೊತ್ತಿಲ
ಮಗನಿಗೆ ದುಡ್ಡು ಎಣಿಸಲಾಗುವುದಿಲ್ಲ
ವಾದಳು, (ಜಮೀನ್, ತಾರೊ ಆಕಾಶ, ಭೂಮಿ, ನಕ್ಷತ್ರ)

೯. ಸೌಸೂದಿ
ಸೌ ಉಲ್ಟಿ
ನೂರು ಸೀದಾ
ನೂರು ಉಲ್ಟಾ
ಕಾಳು ಹಂಚ್ (ಕರಿಹೆಂಚು)

೧೦. ಧೋಳೊ ಗೋಡೊ
ಜಾಬ್ರೊ ಡೆಂಡೊ
ಬಿಳಿ ಕುದುರೆ ಹಸಿರುಬಾಲ
ಮೂಲೊ (ಮೂಲಂಗಿ)

೧೧. ಕಾಳು ಆದ್ಮಿ
ಧೋಳೊ ಧಾತ್
ಕರಿ ಮನುಷ್ಯ ಬಿಳೀ ಹಲ್ಲು
ಬವಾಳಿಯನೂ ಜಾಡ್ (ಜಾಲಿಮರ)

೧೨. ನಾನೂ ಗರಮಾ
ನಾನಿ ಬೀಗ
ಚಿಕ್ಕಮನಿಗೆ ಚಿನ್ನದ ಬೀಗ
ಟಿಕಲಿ (ಮೂಗಿನ ಬೇಸರಿ)

೧೩. ಏಕ್ ಮಹಲಮಾ
ಏಕಸ್ ಜಟ್ಟಿ
ಒಂದು ಮನೆಗೆ ಒಬ್ಬನೆ ಜಟ್ಟಿ
ಹಾರೆಗಾಯ್ (ಬಸವನಹುಳು)

೧೪. ಗುಂಗುಡಿ ಹೋಡಿ ಪಡೊರೇಸ್
ಕಂಬಳಿ ಹೊದ್ದು ಮಲಗಿರುವವರು ಯಾರು
ಭೋಪ್ಪು (ಕುಂಬಳಕಾಯಿ)

೧೫. ವಾಕ್ಕು ಸೊಕ್ಕು ಕಡಮ ಭಿಂಗು

ಖಂದಾರು (ಗೌಜಹಕ್ಕಿಯ ಬಲೆ)

೧೬. ಅಡಿಕ್ಕು ಉಪ್ಪರ್ ಬೋಟಿ ಮೈ
ಅಡಿಕ್ಕು ಉಪ್ಪರ್ ಖೇಖ್
ಬೋಟೀನು ಮಯಿ ಪಾಣಿ
ಮೂಳೆ ಒಳಗಡೆ ಮಾಂಸ ಮೇಲೆ ಮೂಳೆ ಮೇಲೆ
ಕೂದಲು ಮಾಂಸದ ಒಳಗೆ ನೀರು

ನಾರೇಳ್ (ತೆಂಗಿನ ಕಾಯಿ)

೧೭. ಏಕ್ ಖೊಳಮ್
ಏಕ್ ಡೊಕುಳೊ
ಒಂದು ಕೆರೇಲಿ ಒಂದೇ ಮೀನು

ಜೀಬ್ (ನಾಲಗೆ)

೧೮. ಏಕ್ ರಾಜಾ
ಏಕ್ ಬಾವಡಿಕನಗಯೊ
ಖಿಡ್ತು ಚಡ್ನಿ ಕಾಡೆವೊ
ಪಡಿಗಯತೆ ಆಯೊ ಖೊಯನಿ ಪಾತ್ಸೊ
ಒಬ್ಬ ರಾಜಾ ಒಂದು ಬಾವಿ ಹತ್ತಿರ ಹೋಗಿದ್ದ
ಬಟ್ಟೆನೆಲ್ಲ ಬಿಚ್ಚಾಕಿ ಬಾವೀಲಿ ಬಿದ್ದ ವಾಪಸ್ಸು ಎದ್ದು
ಬರಲೇ ಇಲ್ಲ

ಖೇಳು (ಬಾಳೆಹಣ್ಣು)

೧೯. ಏಕ್ ಜನೊ ಬೇಟೊ
ಏಕ್ ಮಾಡಿಸ್ಸಿವಳಿ ಅವ್‌ತಿತೀ
ಯೊ ಮಾಡ್‌ಕಾಖನ್ ಬೇಸಿಗಿ
ಮಾಡ್ಕು ಬೊಲೂ ಕರ್ರುತ್ತೂ ಬೇಖ್ ಜರಾ
ಮಾಡ್ಸಿ ಬೊಲೂ ಕರ್ರೀತಿ ಬಶ್‌ಬಶ್
ಮಾಡ್ಕು ಬೋಲೂ ಕರ್ ತೂ ತೂ ಉಯ್‌ಗೂ ಉಯ್‌ಗೂ
ಒಬ್ಬ ಮನುಷ್ಯ ಕುಂತಿದ್ದ ಅವನ ಹತ್ತಿರ ಒಬ್ಬಳು ಹೆಂಗಸು ಬರುತ್ತಿದ್ದಳು
ಅವನ ಹತ್ತಿರ ಬಂದು ಕುಂತಿದ್ದಳು ಅವಳು ಸಾಕು ಸಾಕು ಎಂದಳು
ಇವನು ಆಯ್ತು ಆಯ್ತು ಎಂದನು

ಚೂಡಿಯಾ (ಬಳೆ)

೨೦. ಬಜಾರ್ ತೂ ಲಾಯಿತೊ ಗರೇ
ವಹಾಡಿ ತೊ ರೋವಾಲಗಾನು

ಸಂತೆಯಿಂದ ಮನೆಗೆ ತರೋದು
ಮುಂದೆ ಇಟ್ಟುಕೊಂಡು ಆಳೋದು
ಖಾಂದೊ (ಈರುಳ್ಳಿ)

೨೧. ಅಟ್ಟದ್ನೂ ಉಪ್ಪರ್
ನಾನೂ ಲಕ್ಷ್ಮೀ
ಹಟ್ಟದ ಮೇಲೆ ಪುಟ್ಟ ಲಕ್ಷ್ಮೀ
ಟೀಕು (ಕುಂಕುಮ)

೨೨. ಖರೀನ್ ಉಕ್ಕಯಿನ್
ಲೀಗೊತೊ ಬಜಾರ್‌ಮಾ
ಎಕ್ಕಸ್ ಗಡೀಮಾ ಯೇಚ್ಚಯಿಜಾವಾನು
ಮಾಡಿ ಒಣಗಿಸಿ
ಸಂತೆಗೆ ತಗೊಂಡೋದರೆ
ಜಲ್ದಿ ಮಾರಾಟವಾಗುತ್ತದೆ.
ಮಾಡೀನೂ ಅಂಡಿಕಿ (ಮಡಕೆ)

೨೩. ಏಕ್ ಗೌಂನ್ ಪೊಣ್ಣಾಕಿದಿನ್
ಠೊಕರೊ ಬರೀನ್ ಹೋಳಿಗೆ ಕರೀನ್
ಅಕ್ಕಾ ಆದ್ಮಿನಾ ಖಿಡ್ಯೆನ್ ಬಸಂ ಉಜ್ಯೆನ್ ಉಬ್ರಸ್
ಒಂದು ಗೋದಿಗೆ ಒಡೆದು ಹಾಕಿ
ಕುಕ್ಕೆ ತುಂಬ ಹೋಳಿಗೆ ಮಾಡಿ
ಎಲ್ಲರಿಗೂ ತಿನ್ನಿಸಿ ಮತ್ತೂ ಉಳಿಯುತ್ತದೆ
ಆಗನ್‌ಡಬ್ಬೊ (ಬೆಂಕಿಪೊಟ್ಟಣ)

೨೪. ಮಾರಾಖೇಡೇಚ ಏಕ್ ಆದ್ಮಿ ಕದೇಬಿರೇಸ್
ನನ್ನ ಜೊತೆ ಯಾವಾಗಲೂ ಒಬ್ಬ ಇದ್ದೇ ಇರುತ್ತಾನೆ
ಸ್ಟಾಳಿ (ನೆರಳು)

೨೫. ಗಾಗ್ರೊ ಖಾಡಿ ನಾಕೀನ್
ಶೀಟೂ ತರದೀನ್ ದಾಣಖಾಡಿನ್ ಖಾವಾನೂ
ಲಂಗ ಬಿಚ್ಚಿ ಶಾಟ ತರದಿ
ಕಾಳೆಲ್ಲ ತಗದು ತಿನ್ನುವುದು
ಮಕ್ಕೊ (ಜೋಳ)

೨೬. ಕಾಕೂನಿ ಗಾಂಡಮಾ
ಜಮ್ಯೆನೂ ಚಿನ್ನೂ
ಬೀಗ

೨೭. ಏಕ್ ಗಾಯಿ ಕೆಲ್ನು ನಾಖಾನಾ ಅಗಾಡಿ
ದೂದ್ ದೇನು
ಹಸು ಕರು ಹಾಕುವ ಮುಂಚೆ ಹಾಲು ಕೊಡುತ್ತದೆ
ಖಾಟೋ (ಕಬ್ಬು)

೨೮. ಏಕ್ ಚೌಕ್‌ಮಾ ತೀನ್ ಮೂರ್ತಿ
ಯೊ ಮಹಾತ್ಮಾಗಾಂಧಿ, ಇಂದಿರಾಗಾಂದಿ,
ಜವಹರಲಾಲ್ ನೆಹರೂನೂ ಗೊಂಬೆಥೂ
ಯೊ ತೀನ್‌ನಾ ಗಲೇಂಡಾಮಾ ಪೂಲ್‌ನೇಹಾರ್ ತೀ
ಮೇಂಡೂ ಖಾತೊಖಾತೊ ಆಯಿನ್ ಇಂದ್ರಗಾಂಧಿ ಅಜು
ಜವಹರಲಾಲ್ ನೆಹರೂನಾ ಗಲೆಂಡಾಮಾನು ಪೂಲ್ ಕೈಯಿಂದು
ಮಹಾತ್ಮಾಗಾಂಧಿನಾ ಗಲೆಂಡಾಮಾನೂ ಕೆಯಿಕಾದೂನಿ ಶಾನಾ ಖಾಜೆ
ಒಂದು ಚೌಕದಲ್ಲಿ ಮೂರು ಮೂರ್ತಿಗಳಿದ್ದವು
ಮಹಾತ್ಮಗಾಂಧಿ ಇಂದಿರಾಗಾಂಧಿ ಜವಹರಲಾಲ್ ನೆಹರೂಗಳವು
ಅವರ ಕತ್ತಿನಲ್ಲಿ ಮೂರು ಹಾರಗಳಿದ್ದವು
ಒಂದು ಕುರಿ ಮೇಯುತ್ತ ಬಂದು ಇಂದಿರಾಗಾಂಧಿ
ಜವಹರಲಾಲ್ ನೆಹರೂ ಕೊರಳಿನ ಹೂವಿನ ಹಾರವನ್ನು ತಿಂದು ಹಾಕಿತು,
ಮಹಾತ್ಮಾ ಗಾಂಧಿಯ ಕತ್ತಿನ ಹಾರವನ್ನು ಏಕೆ ತಿನ್ನಲಿಲ್ಲ.
ಶಾನಖಾಜೆಕತೊ ಇನ ಹಾತ್‌ಮ ಲಾಕ್ಡಿ ಛೆ
(ಯಾಕೆಂದರೆ ಅವನ ಕೈಲಿ ಕೋಲಿತ್ತು)

೨೯. ಏಕ್ ಅಮ್ಮಾನಾ ಏಕ್ ಚಿಯ್ಯೊತೊ
ಅಮ್ಮಾ ಪಾಣಿ ಬರ್ಲಿನ್ ಆವಾನಿ ಟೇಂಪರ್
ಪಟ್ಟಕಯಿಗಯಿ ತದೇ ಚೀಯ್ಯೊ ಉಠಾಳನಿ ಟೇಂಪರ್
ಅಮ್ಮಾನೆ ಚಿಯಾ ತರಾಖಾನೆ ಚಿಮೇಕೊಯಿನ್ತೆ
ಜಗೋದರಿನ್ ಉಠಾಡ್
ಉಟ್‌ಲಿಅಮ್ಮಾ (ಎದ್ದೇಳಮ್ಮ)

೩೦. ಏಕ್ ಪಹಡ್ನೂ ಘಾಖ್ ವಹಡಾನೂ
ವೀಖ್ ಆದ್ಮೀನೂ ಮುಡಿಕ್ಯಾ ಖತ್ರಾನೂ
ಬೇ ಆದ್ಮಿ ಪಳ್ಳಿ ಜಾವಾನೂ
ಒಂದು ಬೆಟ್ಟದ ಹುಲ್ಲನ್ನು ಕತ್ತರಿಸುವುದು
ಇಪ್ಪತ್ತು ಜನರ ತಲೆ ಕಡಿಯುವುದು
ಇಬ್ಬರಾಳು ಒಬ್ಬನಿಗೆ ಹೊತ್ತುಕೊಂಡು ಹೋಗುವುದು
ಖೀಖ್‌ಕತ್ರಾನೂ, ನಖ್ಖುರ್‌ವಾಡಾನೂ, ಚಪ್ಪಲ್‌ಗಲ್ಲಿ ಜಾವಾನೂ
(ತಲೆಕಟಿಂಗ್ ಉಗುರು ಕತ್ತರಿಸುವುದು, ಚಪ್ಪಲಿ ಹಾಕಿಕೊಂಡು ಹೋಗುವುದು)

೩೧. ಅಪಣಿ ರಾಂಡ್ ಅಕ್ಕೀ ಟೇಮ್
ಶಾತ್‌ಬೋಲ್ ತ್ರ್ಯೊದೇಸ್
ಪಣಕೀ ಏಕ್ ಟೇಮ್ ಏಕ್ ಶಾಚೂ ಕೊಯಿದೇನಿ
ನಮ್ಮ ಹೆಂಡರು ಎಲ್ಲಾ ಟೇಮು
ಏನು ಬೇಕಾದರೂ ಕೊಡುತ್ತಾರೆ
ಒಂದು ಟೇಮು ಮಾತ್ರ ಒಂದು ವಸ್ತು ಕೊಡುವುದಿಲ್ಲ
ಖಾಂದೂ ದೇಯಿಕೊಯಿನಿ ಅಪಣಿ ಮರ್ಯಾತೊ
(ನಾವು ಸತ್ತಾಗ ಭುಜ ಕೊಡೋದಿಲ್ಲ)

೩೨. ಬಹರ್ ಮಿಠ್ಠೊ ಮಹೀ ಪಿಕ್ಕೊ
ಬಹರ್ ಪಿಕ್ಕೊ ಮಹೀ ಮಿಠ್ಠೊ
ಅಕ್ಕೊ ಮಿಠ್ಠೊ
ಹೊರಗಡೆ ಸಿಹಿ ಒಳಗಡೆ ಸಪ್ಪೆ
ಮೇಲೆ ಸಪ್ಪೆ ಒಳಗಡೆ ಸಿಹಿ
ಪೂರಾ ಸಿಹಿ
ಪೇಂಡ್‌ಖಜೂರ್, ಖೇಳೂ, ಗೋಳ್ (ಖರ್ಜೂರ, ಬಾಳೆಹಣ್ಣು, ಬೆಲ್ಲ)

೩೩. ಏಕ್ ರಾಜಾ ಏಕ್ ಟೇಮ್ ಖುಡುತ್ ತೂ
ಕಾಡಿಯೊತೊ ಬಿಜ್ಜಕ್ ಟೇಮ್ ಪೆಹರಾಖೊಯಿನಿ
ಒಬ್ಬ ರಾಜ ಒಂದು ಸಲ ಷರ್ಟ್ ಬಿಚ್ಚಾಕಿದರೆ
ಇನ್ನೊಂದು ಸಲ ಇಕ್ಕೊಳಕ್ಕಿಲ್ಲ
ಖಾಪ್ (ಹಾವು ಪೊರೆ ಬಿಡೋದು)

೩೪. ಏಕ್ ರಾಜಾ ಅರಮನೆ ಭಾಂದೇತೊ
ಇನಿ ಪೀಠ್ನೋ ಪರಸ್ ಪಳ್ಳಿ
ಚಲೆ ಇಂಡಾನೊ
ಒಬ್ಬ ರಾಜಾ ಅರಮನೆ ಕಟ್ಟಿದರೆ
ತನ್ನ ಬೆನ್ನ ಮೇಲೇನೆ ಹೊತ್ತುಕೊಂಡಿರುತ್ತಾನೆ
ಖಾರೇಗಾಯ್ (ಬಸವನಹುಳು)

೩೫. ಏಕ್ ದೇವ್‌ನಾ ಕಾಡಿಪೆಹರಾನಾ ಖೊಯಿನಿ
ಏಕ್‌ದೇವ್‌ನಾ ಟೀಕು ಲಗಾಡೆನಾ ಖೊಯಿನಿ
ಏಕ್ ದೇವ್‌ನಾ ಭೋಲಿ ಧೊವಾನಾ ಖೊಯಿನಿ
ಒಂದು ದೇವರಿಗೆ ಸೀರೆ ಉಡಸಲಿಕ್ಕಾಗಲ್ಲ
ಒಂದು ದೇವರಿಗೆ ಕುಂಕುಮ ಹಾಕಕ್ಕಾಗಲ್ಲ
ಒಂದು ದೇವರಿಗೆ ತಿಕ ತೊಳಿಯಕ್ಕಾಗಲ್ಲ
ಆಗ್, ಪಾಣಿ ಕಾಯ್ (ಬೆಂಕಿ ನದಿ, ಹಸಿ)

೩೬. ಬಾನಾ ರುಂಬಾಲ್ ಬಾಂದಾನಾ ಖೊಯಿವಹಿನೀ
ಅಮ್ಮಾನಾ ಖಾಡಿಪೆಹರಾನಾ ಖೊಯಿವಹಿನೀ
ಚೀಯಾನಾ ಪೈಶಾಗಣಾನಾ ಖೊಯಿವಹಿನೀ
ತಂದೆಗೆ ಪೇಟ ಕಟ್ಟಕ್ಕಾಗಕ್ಕಿಲ್ಲ
ತಾಯಿಗೆ ಸೀರೆ ಉಡಕ್ಕಾಗಕ್ಕಿಲ್ಲ
ಮಗನಿಗೆ ಹಣ ಎಣಿಸುವುದಕ್ಕೆ ಬರುವುದಿಲ್ಲ
ಮಾರಗ್, ವಾದುಳು, ಶುಕ್ಕರ್ (ದಾರಿ, ಆಕಾಶ, ನಕ್ಷತ್ರ)

೩೭. ಛಾತಿಮಾ ಡೋಳಾ
ಎದೆಯಲ್ಲಿ ಕಣ್ಣು
ಖೊಖಡೊ (ಏಡಿ)

೫. ಬಯ್ಗಳು

ಹಕ್ಕಿಪಿಕ್ಕಿಯರ ಮಾತಿನಲ್ಲಿ ಬಯ್ಗಳು ಸಹಜವಾಗಿಯೆ ಬಳಕೆಯಾಗುತ್ತವೆ. ಅವುಗಳಲ್ಲಿ ಬಹುತೇಕ ನಿಶಿದ್ದವಾಗಿದೆ. ಎಷ್ಟೋ ಬಾರಿ ಬಯ್ಗಳಗಳ ಕಾರಣದಿಂದಾಗಿಯೆ ಅವರ ಮನುಷ್ಯ ಸಂಬಂಧಗಳು ಕೂಡ ಹಾಳಾಗುವುದೂ ಉಂಟು. ಅವರಲ್ಲಿ ಹಿರಿಯರು ಕಿರಿಯರೆಂಬ ಯಾವ ಭೇದ ಭಾವಗಳಿಲ್ಲದೆ ಇವು ಬಳಕೆಯಾಗುತ್ತವೆ. ಈ ಬಯ್ಗಳಗಳು ಕೇವಲ ಬಯ್ಗಳ ಮಟ್ಟಕ್ಕೇ ನಿಲ್ಲದೆ ಸಾಂಸ್ಕೃತಿಕ ಆಯಾಮವನ್ನು ಪಡೆದಿವೆ. ಅಲ್ಲದೆ ಇವು ಅವರ ಬದುಕಿನ ಸಹಜವಾದ ಅಂಗಗಳಾಗಿದೆ.

೧. ತಾರಾ ಬಾನು ಮಡಿಕ್ಕು
ಬಾರ ಲೋಹಿಮಾ ಕಲಮಾ
ನಿನ್ನಪ್ಪನ ತಲೇನ ನನ್ನ ರಕ್ತದೊಳಗೆ ಹಾಕ

೨. ತಾರಾ ಬಾನ ಮರಿ ಚಪ್ಪಲ ಖಡಾವೊ
ನಿನ್ನಪ್ಪನಿಗೆ ನನ್ನ ಚಪ್ಪಲಿ ತಿನ್ನಿಸಾ

೩. ತಾರಿ ದೇವಿ ಮಾರಾ ಲೋಹಿಮಾ ಕಲಂ
ನಿನ್ನ ದೇವರಿಗೆ ನನ್ನ ರಕ್ತ ಕುಡಿಸಲಿ

೪. ತುನಾಗಾಗ್ರ ಮಾರೀಸ್
ನಿನಗೆ ನನ್ನ ಲಂಗದಿಂದ ಹೊಡಿತೀನಿ

೫. ಅಲ ತೂ ಮನ ಮಾರ್ತೆತೊ
ಲಾಂಗ್ ತೀ ಮರೀಶ್
ನಿನಗೆ ನನ್ನ ಮುಟ್ಟಾದ ಲಂಗದಿಂದ ಹೊಡಿತೀನಿ

೬. ಜತ್ತಿ ಬಹರ್ ನಿಕ್ಲಿಲಿ ಜಾನು
ಲಂಗದಿಂದ ಹೊಡೆದರೆ ಜಾತಿಯಿಂದ ಹೊರಹೋಗಬೇಕು

೭. ತು ಡೇಡಿಯಾ ವೈಸಿ ಜಾಣು
ಇವಳ ಲಂಗದಲ್ಲಿ ಹೊಡೆದರೆ ಹೊಲೆಯೋರ ಜಾತಿಗೆ ಸೇರಬೇಕು

೮. ಎತ್ತಿ ಬೀಡಿ ಕ್ಯೂ ಜಾತ್ ಪಿಯಾಕಿ
ತೀನ ಖಾಲಿ ಕೇಕ್ ಮೂಂಡೀಸ್
ಮರಿ ಗಾಣ್ಣಮ ಗಲ್ಲೀಸ್

ಭಾಷೆಗೂ ಮತ್ತು ಲಿಪಿಗೂ ಏನೂ ಸಂಬಂಧವಿಲ್ಲ. ಮಾನವನ ಅಭಿವ್ಯಕ್ತಿಗೆ ಭಾಷೆ ಎಂಬುದು ಒಂದು ವಿಶಿಷ್ಟ ಮಾಧ್ಯಮವಾಗಿದೆ, ಲಿಪಿ ಇರದ ಭಾಷೆಗೂ, ಲಿಪಿಯ ಭಾಷೆಗೆ ಯಾವುದೇ ಸಂಬಂಧವಿರದು. ಆದರೂ ಭಾಷೆಗೂ ಮತ್ತು ಲಿಪಿಗೂ ಕೇವಲ ಯಾದೃಚ್ಛಿಕ ಸಂಬಂಧವಿದೆ. ಅಂದರೆ ಭಾಷೆ ಅಂವ ಮೇಲೆ ಅದಕ್ಕೆ ಲಿಪಿ ಇರಲೇಬೇಕೆಂದೆನ್ನು ಅರ್ಥವಲ್ಲ. ಲಿಪಿ ಇಲ್ಲದಂತಹ ಭಾಷೆಯವರು ಸಹ ತಮ್ಮ ಕಷ್ಟಸುಖಗಳನ್ನು ತಮ್ಮದೆ ಆದ ಲಿಪಿ ರಹಿತವಾದ ಭಾಷೆಯಿಂದ ತಿಳಿಸಬಲ್ಲವರಾಗಿದ್ದಾರೆ.

ಆಧಾರಗಳು

ಪ್ರಹ್ಲಾದ ಬೇಟಗೇರಿ., ೧೯೯೩, 'ಅಡವಿಚೆಂಚರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ರಾಜಪ್ಪ ದಳವಾಯಿ., ೧೯೯೩, 'ಹಕ್ಕಿಪಿಕ್ಕಿಯರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಕ್ತೃಗಳು

ಹೆಸರು	ವಯಸ್ಸು	ಬೆಡಗು	ಸ್ಥಳ
ದೇವದಾಸ	೪೦	ಪಿಂಪಳಾಜ	ಬಿಜಾಪುರ
ಗೌರವ ದಲ್ಲಾಪ್ಪ ಕಟ್ಟಿಮನಿ	೫೫	ಸಾವಂಡಿಯಾ	ಜೈಭಾರತ ಕಾಲೋನಿ
ಜಹಾಂಗಿರ್	೫೦	ಪಿಂಪಳಾಜ	ಗುಲ್ಬರ್ಗಾ
ಫುಲ್ಯ ತಂದೆ ಲಗ್ಮು	೮೦	ಪವಾರ್	ಗುಲ್ಬರ್ಗಾ

ಅಧ್ಯಾಯ - ೫

ಪಾರ್ಧಿಯರ ಜೀವನ ಮತ್ತು ಕಸುಬುಗಳು

೧. ಊಟ-ಉಪಚಾರದ ರೀತಿಗಳು

೨. ವಸತಿ ರೀತಿಗಳು

೩. ವೇಷ-ಭೂಷಣಗಳ ರೀತಿ

೪. ಒಳಾಡಳಿತ ರೀತಿ

೫. ಇತರೇ ನಿರ್ಬಂಧಗಳು

೬. ಹೆಸರುಗಳಲ್ಲಿಯ ವೈಶಿಷ್ಟ್ಯತೆಗಳು

೭. ಕುಲ ಕಸುಬುಗಳು

೮. ವ್ಯಾಪಾರದ ರೀತಿಗಳು

೫. ಪಾರ್ಧಿಯರ ಜೀವನ ಮತ್ತು ಕಸುಬುಗಳು

ಮಾನವ ಸಮಾಜವು ಮಾನವೀಯ ಸಂಬಂಧಗಳ ಬದುಕಿನ ಸೆಲೆ. ವ್ಯಕ್ತಿಗಳ ನಡುವೆ ಪರಸ್ಪರ ಸಂಬಂಧ ಏರ್ಪಡುವ ಪ್ರಕ್ರಿಯೆಯು ವ್ಯವಸ್ಥೆಯೊಂದನ್ನು ಹೋಲುತ್ತಿದ್ದು ಅಂತಹ ವ್ಯವಸ್ಥೆಯನ್ನು 'ಸಾಮಾಜಿಕ ವ್ಯವಸ್ಥೆ' ಎಂದು ಕರೆಯಬಹುದಾಗಿದೆ. ಇದೊಂದು ಸಮಾಜದ ಘಟಕಗಳಾದ ಅಥವಾ ಭಾಗಗಳಾದ ಸಾಮಾಜಿಕ ಸಂಬಂಧಗಳ ಕ್ರಮಬದ್ಧ ವ್ಯವಸ್ಥೆಯಾಗಿದೆ. ಪಾರ್ಧಿ ಬುಡಕಟ್ಟುಗಳ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯು ಲೋಕರೂಢಿಗಳು, ಸಂಪ್ರದಾಯಗಳು, ಪರಸ್ಪರ ಸಹಕಾರ, ವಿವಿಧ ನಿಯಮಗಳು, ವರ್ಗಗಳು, ಉಡಿಗೆ-ತೊಡಿಗೆ, ಆಹಾರ, ವಸತಿ, ವೃತ್ತಿ, ಬೆಡಗುಗಳು, ವಿವಾಹ, ಕುಟುಂಬ, ನ್ಯಾಯ ಪದ್ಧತಿ ಹಾಗೂ ಸಾಮಾಜಿಕ ನಿಯಂತ್ರಣವನ್ನೊಳಗೊಂಡ ಕ್ರಮಬದ್ಧ ವಾದ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇತರ ಹಲವಾರು ಉಪ ವ್ಯವಸ್ಥೆಗಳಿದ್ದು, ಇವೆಲ್ಲವೂ ತನ್ನದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ. ಈ ಕಾರ್ಯ ನಿರ್ವಹಣೆಯಲ್ಲಿ ಕ್ರಮಬದ್ಧತೆ ಇರುತ್ತದೆ.

ಪ್ರಸ್ತುತ ಪಾರ್ಧಿ ಬುಡಕಟ್ಟಿನವರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗುಗಳು, ರಕ್ತಸಂಬಂಧ, ಕುಟುಂಬ, ನ್ಯಾಯ ಪದ್ಧತಿ ಮತ್ತು ವಿಧಿ-ನಿಷೇಧಗಳನ್ನು ಮಾನವಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಭೌಗೋಳಿಕ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಈ ಬುಡಕಟ್ಟು ಜನರ ಸಂಸ್ಕೃತಿ ನಿಂತಿದೆ. ಆದರೂ ಚಡ್ಡಿ ಚಲ್ಲಣ ತೊಟ್ಟು, ಮಾತೃಭಾಷೆಯನ್ನೇ ಅಪಭ್ರಂಶವಾಗಿ ಮಾತನಾಡುವ, ನೂರಾರು ಬೆಡಗುಗಳನ್ನು ಹೊಂದಿದ, ರಕ್ತ ಸಂಬಂಧಕ್ಕೆ ಮಹತ್ವ ಕೊಟ್ಟು ಹತ್ತಿರದ ರಕ್ತ ಸಂಬಂಧದಲ್ಲಿ ವಿವಾಹ ಮಾಡಿಕೊಳ್ಳುವ, ಗುಡಿಸಲುಗಳಲ್ಲಿ ವಾಸಿಸುವ, ಬೇಟೆಗಾರರಾಗಿ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಲ್ಲಿ ನ್ಯಾಯ ತೀರ್ಮಾನ ಮಾಡಿಕೊಳ್ಳುವ, ಬಡತನದ ಬೇಗೆಯಲ್ಲಿ ಬಳಲುತ್ತಿರುವ, ಪ್ರಾಚೀನ ಕಾಲದ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡಿರುವ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣಕ್ಕೆ ಒಳಗಾಗದಂಥ ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ ಪ್ರಸ್ತುತ ಪಾರ್ಧಿಯರಲ್ಲಿ ಕಂಡು ಬರುತ್ತದೆ. ಆದ್ದರಿಂದ ಕರ್ನಾಟಕ ರಾಜ್ಯದ ಅನೇಕ ಜಿಲ್ಲೆಯ ತಾಲೂಕುಗಳಲ್ಲಿ ಹರಿದು ಹಂಚಿ ಹೋಗಿರುವ ಪಾರ್ಧಿಯರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಊಟದ ರೀತಿ : ಪಾರ್ಧಿಯರು ಮೂಲತಃ ಬೇಟೆಗಾರರಾಗಿರುವುದರಿಂದ ಅವರ ಆಹಾರ ಪದ್ಧತಿಯು ಸಹ ಬೇಟೆಗಾರಿಕೆಯನ್ನೇ ಅವಲಂಬಿಸಿರುತ್ತದೆ. ಇವರ ಆಹಾರ ಪದ್ಧತಿಯು ತುಂಬಾ ಸರಳವಾಗಿದೆ. ಈ ತರಹದ

[illegible]

ಸರಳತನಕ್ಕೆ ಕಾರಣ ಅವರ ಬಡತನ. ಸಸ್ಯಹಾರವಾಗಿರಲಿ ಅಥವಾ ಮಾಂಸಹಾರವಾಗಿರಲಿ ಯಾವುದೇ ಅಡುಗೆಗಳಾದರೂ ಇವರಲ್ಲಿ ಸರಳ. ಇವರಲ್ಲಿ ಹೆಚ್ಚಿನ ಜನ ಅನ್ನವನ್ನು ಪ್ರಮುಖವಾಗಿ ತಿನ್ನುತ್ತಾರೆ. ಒಂದು ದಿನಕ್ಕೆ ಒಂದೇ ಊಟವನ್ನು ಮಾಡುವ ಪಾರ್ಧಿಯರು ತುಂಬಾ ಗಟ್ಟಿಗರು ಹಾಗೂ ಆರೋಗ್ಯವಂತರು. ಇವರಲ್ಲಿ ಸಾಮಾನ್ಯವಾಗಿ ಬೆಳಿಗ್ಗೆ ಯಾರು ಒಲೆಗಳನ್ನು ಹೊತ್ತಿಸುವುದಿಲ್ಲ. ತಮ್ಮ ಕಾಲೋನಿಗಳಲ್ಲಿ ಇಲ್ಲವೇ ಪಕ್ಕದ ಊರುಗಳಲ್ಲಿರುವ ಹೋಟಲುಗಳಿಗೆ ಹೋಗಿ ತಿಂಡಿ ತಿನ್ನುತ್ತಾರೆ. ಹೆಚ್ಚಾಗಿ ಇಷ್ಟಪಡುವ ತಿಂಡಿ ಇಡ್ಲಿ. ದೊಡ್ಡವರು ಕೇವಲ ಇಡ್ಲಿ ಚಟ್ನಿಯನ್ನು ತಿಂದರೆ, ಮಕ್ಕಳಿಗೆ ಇಡ್ಲಿ ಚಟ್ನಿಯ ಜೊತೆಗೆ ಬ್ರೆಡ್ಡು ಚಹವನ್ನು ತಿನ್ನಿಸುತ್ತಾರೆ.

ಈ ತರಹದ ಪದ್ಧತಿಯನ್ನು ವ್ಯವಸಾಯ ಮಾಡುವ ಪಾರ್ಧಿಯರು ಅನುಸರಿಸುವುದಿಲ್ಲ. ಆದರೆ ವಾಸ್ತವದಲ್ಲಿ ಬಹುತೇಕ ಪಾರ್ಧಿಯರಿಗೆ ಸರ್ಕಾರ ಜಮೀನನ್ನು ಕೊಟ್ಟಿದ್ದರೂ ಅವರು ಕೃಷಿಯನ್ನು ಮಾಡುವುದಿಲ್ಲ ಎಂಬುದು ಇಲ್ಲಿ ಗಮನಾರ್ಹ. ಇವರು ರೈತರಂತೆ ಆಹಾರವನ್ನು ಮನೆಯಲ್ಲೇ ತಯಾರಿಸುತ್ತಾರೆ. ಆದಾಗ್ಯೂ ಹೋಟೆಲ್‌ನಲ್ಲಿ ಇಡ್ಲಿ ಬ್ರೆಡು ತಿನ್ನುವುದು ಮತ್ತು ಚಹಾ ಕುಡಿಯುವುದು ಪಾರ್ಧಿಯರ ಬದುಕಿನ ಅಭಿರುಚಿಯ ಅವಿಭಾಜ್ಯ ಅಂಗವಾಗಿದೆ. ಈ ವಿಚಿತ್ರ ನಡವಳಿಕೆಯು ಎಷ್ಟೋ ಬಾರಿ ಮನುಷ್ಯನ ಸಂಬಂಧಗಳನ್ನು ಕೂಡಿಸಲು ಮತ್ತು ಆ ಸಂಬಂಧಗಳನ್ನು ಮುರಿಯಲೂ ಅವರಲ್ಲಿ ಬಳಕೆಯಾಗುತ್ತದೆ. ಒಬ್ಬಳು ಅತ್ತೆಗೆ ಅಳಿಯನಾದವನು ತಿಂಡಿ ತಿನ್ನಿಸಿ ಚಹಾ ಕುಡಿಸದಿದ್ದರೆ, ಅತ್ತೆಯಾದವಳು ತನ್ನ ಮಗಳನ್ನು ಗಂಡನ ಮನೆಯಿಂದ ತನ್ನ ಮನೆಗೆ ತಂದಿಟ್ಟುಕೊಂಡು ಅವನಿಗೆ (ಅಳಿಯನಿಗೆ) ಹೆಂಡತಿಯಿಲ್ಲದಂತೆ ಮಾಡಿ ಬಿಡುತ್ತಾಳೆ!

ಆ ಕೆಟ್ಟು ಹೋದ ಸಂಬಂಧ ಮತ್ತೇ ಸುಧಾರಿಸಬೇಕೆಂದರೆ, ಅಳಿಯನಾದವನು ಮತ್ತೆ ತನ್ನ ಅತ್ತೆ ಮತ್ತು ಮಾವಗೆ ಹೋಟೆಲ್‌ನಲ್ಲಿ ತಿಂಡಿ ತಿನಿಸಿ ಚಹಾ ಕುಡಿಸಬೇಕು. ಇಲ್ಲವೇ ಸರಾಯಿ ಕುಡಿಸಿ ಕೋಳಿ ತಿನ್ನಿಸಿದರೆ ಮಾತ್ರ ಮುರಿದು ಹೋದ ಸಂಬಂಧ ಸರಿಹೋಗುತ್ತದೆ.

ವ್ಯಾಪಾರವನ್ನೇ ಪ್ರಮುಖ ಕಸುಬನ್ನಾಗಿಸಿಕೊಂಡಿರುವ ಪಾರ್ಧಿಯರು ಮಧ್ಯಾಹ್ನ ೧೧ ಗಂಟೆಯಿಂದ ಅದೇ ಮಧ್ಯಾಹ್ನದ ೩ ಗಂಟೆಯವರೆಗೆ ಒಂದು ಊಟವನ್ನು ಮಾಡುತ್ತಾರೆ ಹಾಗೂ ಸಂಜೆ ಹೊತ್ತು ಒಂದು ಬ್ರೆಡ್ ಮತ್ತುಚಹಾ ಸೇವಿಸಿ ಸುಮ್ಮನಿರುತ್ತಾರೆ. ಬೇಟೆಗೆ ಹೋಗುವ ಪಾರ್ಧಿಯರು ತಮ್ಮ ಮನೆಗಳಲ್ಲಿ ರಾತ್ರಿ ಹೊತ್ತು ಮಾಂಸದ ಊಟವನ್ನು ತಯಾರು ಮಾಡುತ್ತಾರೆ. ಯಾಕೆಂದರೆ, ಸಾಮಾನ್ಯವಾಗಿ ಮನೆಯಲ್ಲಿ ಬೇಟೆಯನ್ನು ಕೊಯ್ದು ಪಾಲು ಹಾಕಿ ಅಡುಗೆಗೆ ಸಿದ್ಧ ಪಡಿಸುವುದೇ ತಡವಾಗುವುದರಿಂದ ರಾತ್ರಿಗೆ ಮಾಂಸಹಾರವನ್ನು ಸಿದ್ಧ ಪಡಿಸುತ್ತಾರೆ. ಆದರೆ ಬಿಗಿಯಾದ ಅರಣ್ಯ ನೀತಿಯಿಂದ ಇತ್ತೀಚಿನ ದಿನಗಳಲ್ಲಿ ಕತ್ತಲಾದ ನಂತರವೇ ಬೇಟೆಗೆ ಹೋಗಿ ಮರುದಿನ ನಸುಕಿನಲ್ಲಿ ಕೈಗೆ ಸಿಕ್ಕಬೇಟೆಯನ್ನು ತರುತ್ತಿದ್ದಾರೆ. ಮುಂಚೆ ಹೆಂಡ ಸಾರಾಯಿ ಸಿಗುತ್ತಿದ್ದಾಗ ಬೆಳಗಿನ ಜಾವದಲ್ಲಿಯೇ ಸಾಮೂಹಿಕವಾಗಿ ಎಲ್ಲರೂ ಕುಡಿದು ಬಿಡುತ್ತಿದ್ದರು. ಆದರೆ ಈಗ ಸಾರಾಯಿ ಗುತ್ತಿಗೆದಾರ ಪೋಲೀಸರ ಹಾಗೂ ಅಬಕಾರಿ ಇಲಾಖೆಯ ಕಿರುಕುಳ ಮತ್ತು ಒತ್ತಡಗಳಿಂದ ಬಹುತೇಕ ಪಾರ್ಧಿಯರು ಹೆಂಡವನ್ನು ಭಟ್ಟಿ ಇಳಿಸುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ಹೀಗಾಗಿ ಇತ್ತೀಚೆಗೆ ಸಾಯಂಕಾಲ ೬ ಗಂಟೆಯ ನಂತರವೇ ಸಾರಾಯಿಯನ್ನು ಕುಡಿಯುತ್ತಿದ್ದಾರೆ. ಆದರೆ ದುರ್ದೈವದ ವಿಷಯವೇನೆಂದರೆ ಪಾರ್ಧಿ

ಪುರುಷರ ಜೊತೆಗೆ ಅನೇಕ ಪಾರ್ಧಿ ಮಹಿಳೆಯರೂ ಹೆಂಡ ಸಾರಾಯಿಯನ್ನು ಕುಡಿಯುತ್ತಿರುವುದು ವಿಪರ್ಯಾಸ ಹಾಗೂ ದುಃಖದ ವಿಷಯವೇ ಸರಿ.

ಕೇವಲ ಸಂಶೋಧಕನಾಗದೆ ಬುಡಕಟ್ಟಿನ ಬಗ್ಗೆ ಕಳಕಳಿಯಿರುವ ನಾನು ಈ ಬುಡಕಟ್ಟನ್ನು ಹುಡುಕಿಕೊಂಡು ಹೋದಲ್ಲೆಲ್ಲಾ ಸೇಂದಿ ಸಾರಾಯಿ ಕುಡಿಯದಂತೆ ಅದರಲ್ಲೂ ಮಹಿಳೆಯರಿಗೆ ವಿಶೇಷವಾಗಿ ಈ ಕುಡಿತದಿಂದ ಆಗುವ ದುಷ್ಪರಿಣಾಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಾ ಮಧ್ಯವನ್ನು ಕುಡಿಯದಂತೆ ಮನ ಒಲಿಸಿದ್ದೇನೆ.

ಪಾರ್ಧಿ ಗಂಡಸರು ಅಲೆಮಾರಿಗಳಾಗಿ ಊರೂರು ಸುತ್ತುತ್ತಿರುವಾಗ, ಪಾರ್ಧಿ ಹೆಂಗಸರು ಊರೂರುಗಳಲ್ಲಿ ತಮ್ಮ ವ್ಯಾಪಾರಕ್ಕೆ ಬರುವುದು ಒಂದು ಮುಖವಾದರೆ, ಮತ್ತೊಂದು ಮುಖದಲ್ಲಿ ಅವರು ಮನೆಮನೆಗಳಲ್ಲಿ ಭಿಕ್ಷೆ ಎತ್ತುತ್ತಾರೆ. ಮುದ್ದೆ ಸಾರು, ಅನ್ನ, ರೊಟ್ಟಿ, ಸಿಹಿ ತಿಂಡಿಗಳು ತಂಗಳು ಇಲ್ಲವೆ ಬಿಸಿ ಹೀಗೆ ನಾನಾ ಬಗೆಯ ಆಹಾರವನ್ನು ತಿನ್ನುತ್ತಾರೆ ಹಳ್ಳಿಯ ಜನರು, ಅತಿಯಾಗಿ ಕಾಡುತ್ತಿದ್ದಾರೆಂದು ಬೈಯುತ್ತಾ, ಮರುಗುತ್ತಾ ಈ ಪಾರ್ಧಿಯರಿಗೆ ಬಿಕ್ಷೆಯನ್ನು ಹಾಕುತ್ತಾರೆ. ಈ ಅವಧಿಯಲ್ಲಿ ಗಂಡಸರು ಬೇಟೆಯಾಡಿ ತಂದ ಪ್ರಾಣಿ ಪಕ್ಷಿಗಳನ್ನು ಬೇಯಿಸಿ ಸಂಜೆ ಸಾಧ್ಯವಾದರೆ ಮಾಂಸವನ್ನು ತಿನ್ನುತ್ತಾರೆ. ಇಲ್ಲವೆ ಅದೇ ಮಾಂಸವನ್ನು ಮರುದಿನಕ್ಕೆ ಇಟ್ಟು ಕೊಂಡಿರುತ್ತಾರೆ. ಭಿಕ್ಷೆಯಿಂದ ಬಂದ ಆಹಾರವನ್ನು ಬಹುಶಃ ಎಲ್ಲರೂ ಸೇರಿ ಹಂಚಿಕೊಂಡು ತಿನ್ನುತ್ತಾರೆ. ಈಗಾಗಲೇ ಹೇಳಿರುವಂತೆ, ಪಾರ್ಧಿಯರು ತಿನ್ನುವಷ್ಟು ಬಗೆಬಗೆಯ ಆಹಾರವನ್ನು ಬಹುಶಃ ಬೇರಾವ ಬುಡಕಟ್ಟಿನವರು ತಿನ್ನಲಾರರು. ಇವರು ತಿನ್ನುವ ಸಸ್ಯಹಾರ ಪದ್ದತಿಯು ಮುಖ್ಯವಾಗಿ ಔಷಧಿಯುಕ್ತವಾಗಿದ್ದಾಗಿದೆ. ಇದಕ್ಕೆ ಕಾರಣ ಪಾರ್ಧಿಯರ ಮುಖ್ಯ ಕಸುಬುಗಳಲ್ಲಿ ವೈದ್ಯ ಪದ್ಧತಿಯು ಒಂದಾಗಿದೆ.

ಪಾರ್ಧಿಯರು ತಿನ್ನುವ ಆಹಾರ ಪದ್ಧತಿಯನ್ನು ನಾಲ್ಕು ಬಗೆಗಳಾಗಿ ವಿಂಗಡಿಸಬಹುದಾಗಿದೆ. ಈ ನಾಲ್ಕು ವಿಭಾಗಗಳು ಅವರ ಸಾಮಾಜಿಕ ಜೀವನ ಪದ್ಧತಿಯನ್ನೇ ಅವಲಂಬಿಸಿರುತ್ತದೆ.

೧. ಸಾಮಾನ್ಯ ಅಡುಗೆಗಳು

೨. ಸಸ್ಯಹಾರ ಆಡುಗೆಗಳು

೩. ಮಾಂಸಹಾರ ಅಡುಗೆಗಳು

೪. ಇತರೆ ಸಿಹಿ ತಿನಿಸುಗಳು.

೧) ಸಾಮಾನ್ಯ ಅಡುಗೆಗಳು

ಪಾರ್ಧಿಯರು ಸಹ ನಮ್ಮ ಸಮಾಜದ ಇತರರು ತಿನ್ನುವಂತಹ ಕೆಲವು ಸಾಮಾನ್ಯ ಅಡುಗೆಗಳನ್ನು ತಮ್ಮ ದಿನನಿತ್ಯದ ಜೀವನಕ್ಕೆ ಮಾಡಿಕೊಳ್ಳುತ್ತಾರೆ. ಮುದ್ದೆ, ಅನ್ನ, ಸಾರು, ಇಡ್ಲಿ, ಚಿತ್ರಾನ್ನ, ಪಾಯಸ, ಚಟ್ನಿ, ರೊಟ್ಟಿ ಮುಂತಾದವುಗಳು. ಈ ಅಡಿಗೆಗಳಲ್ಲಿ ಅಂಥಹ ವ್ಯತ್ಯಾಸವೇನೂ ಕಾಣುವುದಿಲ್ಲವಾದರೂ ಅವರ ಅಡುಗೆಗಳಲ್ಲಿ ಇತರರಿಗಿಂತ ವಿಶೇಷವಾದುದೆಂದರೆ, ಹೆಚ್ಚು ಖಾರವಾಗಲಿ ಅಥವಾ ಹೆಚ್ಚು ಉಪ್ಪಾಗಲಿ ಇರುವುದಿಲ್ಲ. ಇತ್ತೀಚೆಗೆ ಪಾರ್ಧಿ ಹೆಣ್ಣು ಮಕ್ಕಳು ಬೇರೆ ಬೇರೆ ರುಚಿಗಳ ಪ್ರಭಾವದಿಂದಾಗಿ ಬಗೆಬಗೆಯ ಆಹಾರಗಳನ್ನು ಯಾವುದೇ ಒಂದು ಪ್ರಧಾನ ರುಚಿ ಇರದೇ ಅದು ಹೆಚ್ಚು ಸಪ್ಪೆಯಾಗಿರುತ್ತದೆ ಎಂದರೂ ತಪ್ಪಾಗಲಾರದು.

೨) ಸಸ್ಯಹಾರದ ಅಡುಗೆಗಳು

ಪಾರ್ಧಿ ಜನರು ಮಾರುಕಟ್ಟೆಯಲ್ಲಿ ಸಿಗುವ ಪ್ರತಿಯೊಂದು ತರಕಾರಿಯನ್ನು ಅಡುಗೆಗೆ ಬಳಸುತ್ತಾರೆ. ಅಲ್ಲದೆ ಬಗೆಬಗೆಯ ಧಾನ್ಯಗಳನ್ನು ತಮ್ಮ ಸಸ್ಯಹಾರ ಊಟ ಪದ್ಧತಿಯಲ್ಲಿ ಬಳಸಿಕೊಳ್ಳುತ್ತಾರೆ. ವಿಶೇಷವೆಂದರೆ, ಅವರ ಸೊಪ್ಪಿನ ಸಾರು ಬಹುಶಃ ಅವರ ಅಲೆಮಾರಿ ಜೀವನವು ಹಲವಾರು ಸೊಪ್ಪುಗಳನ್ನು ತಿನ್ನುವಂತೆ ಮಾಡಿದೆ ಎನಿಸುತ್ತದೆ. ಇವರು ತಿನ್ನುವ ಸೊಪ್ಪುಗಳನ್ನು ನೋಡಿದರೆ ಈ ಬುಡಕಟ್ಟಿನವರನ್ನು 'ಆಡಿಗೆ' ಹೋಲಿಸಬಹುದಾಗಿದೆ. ಏಕೆಂದರೆ, ಆಡು ಮುಟ್ಟದ ಸೊಪ್ಪುಹೇಗೆ ಇಲ್ಲವೋ, ಅದೇ ರೀತಿಯಲ್ಲಿ ಪಾರ್ಧಿಯರು ತಿನ್ನದೇ ಇರುವ ಸೊಪ್ಪು ಇಲ್ಲವೆನ್ನಬಹುದು. ನಾಡಿಗಿಂತ ಕಾಡಿನ ಜೀವನವೇ ಹೆಚ್ಚಾಗಿ ಅನುಭವಿಸಿದ ಈ ಬುಡಕಟ್ಟು, ಕಾಡಿನಲ್ಲಿರುವ ಎಲ್ಲಾ ಸೊಪ್ಪುಗಳನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತಾರೆ. ಇವರು ತಿನ್ನುವ ಸೊಪ್ಪಿನ ಸಾರುಗಳೆಂದರೆ, 'ದೇವರದಾರಿನ ಬಾಜಿ' ಎಂಬುದು ಮುಖ್ಯವಾದದ್ದು. ಇದು ಕಾಡಿನಲ್ಲಿ ಸಿಗುವ ಒಂದು ಬಗೆಯ ಸೊಪ್ಪಾಗಿದ್ದು, ಇದರಿಂದ ಸಾರು, ಪಲ್ಯ, ಚಟ್ನಿಗಳನ್ನು ಮಾಡುತ್ತಾರೆ.

'ಪಂಚೊಡಾನಿಬಾಜಿ': ಈ ಸೊಪ್ಪು ಸೇಂಗಾ ಸೊಪ್ಪಿನ ತರಹವೇ ಇರುತ್ತದೆ. (ನೆಲಗಡಲೇ ಕಾಯಿಯ ಗಿಡದಂತೆ) ಇದು ಒಂದು ತರಹ ಕೆಟ್ಟ ವಾಸನೆಯನ್ನು ಹೊಂದಿರುತ್ತದೆ ಎಂದು ಹೇಳುತ್ತಾರೆ. ಜೊತೆಗೆ ಸ್ವಲ್ಪ ಉಪ್ಪುಪ್ಪು ಆಗಿರುತ್ತದೆ. ಇದನ್ನು ಚೆನ್ನಾಗಿ ಬೇಯಿಸಿ ಎರಡು ಮೂರು ಬಾರಿ ಹಿಂಡಿ ಅದರ ರಸವನ್ನು ತೆಗೆಯುತ್ತಾರೆ. ಉಪ್ಪು, ಹುಣಸೆಹಣ್ಣು, ಬೆಳ್ಳುಳ್ಳಿ, ಮೆಣಸಿನಕಾಯಿ, ಕಾಯಿಚೂರು ಜೊತೆಗೆ ಎಣ್ಣೆ, ಈರುಳ್ಳಿ ಒಗ್ಗರಣೆ ಮಾಡಿ ಪಲ್ಯವಾಗಿ ಊಟಕ್ಕೆ ಬಳಸುತ್ತಾರೆ.

ಅಂಬೋಡಾನಿಬಾಜಿ ಅಥವಾ (ಪುಂಡಿಪಲ್ಯೆ): ಇದು ಹುಳಿ ಹುಳಿಯಾದ ಪುಂಡಿಪಲ್ಯೆ ಆಗಿದೆ. ಇದರಿಂದ ಸಾರು ಹಾಗೂ ಚಟ್ನಿ ಎರಡನ್ನೂ ಮಾಡುತ್ತಾರೆ.

ಗಾಡರಗುಮ್ಮ (ತುಂಬೆಸೊಪ್ಪು): ಕಾಗಲಾನಿ ಬಾಜಿ. (ದೊಡ್ಡಕನ್ನೆ ಸೊಪ್ಪು). ಪನ್‌ಗಡವೆಬಾಜಿ ಈ ಸೊಪ್ಪಿನ ತುದಿ ಮಾತ್ರ ಮುರಿದು ಹಾಕಿ ರೊಟ್ಟಿಗಾಗಿ ಉಪ್ಪು ಹಾಕಿ ಬೇಯಿಸಿದ ಸಾರು ಅಥವಾ ಪಲ್ಯವನ್ನು ಕಾಟಾನಿ ಬಾಜಿ ಅಂದರೆ ಮುಳ್ಳಿನ ಸೊಪ್ಪು ಇದರ ಗಣ್ಣು ಗಣ್ಣಿಗೂ ಮುಳ್ಳು ಇರುತ್ತದೆ.

'ದಗಲ್‌ಗುರಾನಿ ಬಾಜಿ' ಇದರ ತುದಿಯಲ್ಲಿ ಉದ್ದನೆಯ ಬೀಜದ ಗೊಂಚಲಿರುತ್ತದೆ. ಆ ಬೀಜಗಳಿಂದಲೇ ಇವರು ಚಟ್ನಿ ಮತ್ತು ಸಾರನ್ನು ಮಾಡಿ ಸಸ್ಯಹಾರವಾಗಿ ಇದನ್ನು ಸೇವಿಸುತ್ತಾರೆ.

ಶೇಮುಡಿ ಬಾಜಿ ಅಂದರೆ ಉಣ್ಣೆ ಸೊಪ್ಪು ಎಂದರ್ಥ. ಕಾಮುಣಿನಿ ಬಾಜಿ ಎಂದರೆ ಗೆಣಿಕೆ ಸೊಪ್ಪು ಅಥವಾ ಮಧ್ವಟಿ ಸೊಪ್ಪು ಎಂದರ್ಥ. ಈ ಸೊಪ್ಪಿನ ಸಾರು ಅಥವಾ ಪಲ್ಲೆ ತಿನ್ನುವುದರಿಂದ ಸಣ್ಣ ಮಕ್ಕಳಿಗೆ ಚರ್ಮ ಸುಲಿದು ಬರುವ ರೋಗವಾದ 'ಕೆಂಜಾರ್' ಎಂಬುದು ಬರುವುದಿಲ್ಲ. ಗರ್ಭಿಣಿಯರಿಗೆ ಹುಟ್ಟುವ ಮಗು ಚೆನ್ನಾಗಿರಲೆಂದು ಮತ್ತು ಮಕ್ಕಳ ಮುಖ ಕಪ್ಪಾಗದಿರಲೆಂದು ಈ ಸೊಪ್ಪನ್ನು ಸ್ತ್ರೀಯರಿಗೆ ಹೆಚ್ಚು ತಿನ್ನಿಸುತ್ತಾರೆ.

ಮಾಂಗ್ಯಾನಿ ಬಾಜಿ ಎಂದರೆ ನುಗ್ಗೆಸೊಪ್ಪು ಎಂದರ್ಥ. ಇವುಗಳ ಜೊತೆಗೆ ಅರಿಬೆಸೊಪ್ಪು, ಕಾಗಲೆ ಸೊಪ್ಪು, ಕಲುಮಲಿ ಸೊಪ್ಪು ಮತ್ತು ಇನ್ನೂ ಮುಂತಾದ ಸೊಪ್ಪುಗಳನ್ನು ಅಡಿಗೆಗಾಗಿ ಇವರು ಬಳಸುತ್ತಾರೆ.

ಮೇಲೆ ಹೇಳಿದ ಅನೇಕ ಸೊಪ್ಪುಗಳ ಜೊತೆಗೆ ತರಕಾರಿ ಹಾಗೂ ಕಾಯಿಗಡ್ಡೆಗಳಾದ ಕೋಸುಗಡ್ಡೆ, ಗಜ್ಜರಿ ಆಲೂಗಡ್ಡೆ (ಪಿಂಡಾಳು), ಸೋರೆಕಾಯಿ (ಖದ್ದು), ಹಿರೇಕಾಯಿ (ತೊರೆಯಾಲ್), ಬದನೆಕಾಯಿ (ಮೆಂಗಣ್), ಹೂಕೋಸು (ಗೋಬಿ), ಬೆಳ್ಳುಳ್ಳಿ (ಲಬಾಣು), ಪುದಿನಾ, ಈರುಳ್ಳಿ (ಖಾಂದೊ) ಇನ್ನೂ ಮುಂತಾದ ತರಕಾರಿ ಮತ್ತು ಕಾಯಿಗಡ್ಡೆಗಳನ್ನು ಅಲಸಂದಿ (ಲೋಭಿಯೋ), ಅವರೆಕಾಳು (ಬಲ್ಲರ್), ಹುರುಳಿಕಾಳ್ (ಕುಲ್ತಿ), ಹಾಗೂ ಇನ್ನೂ ಮುಂತಾದ ಕಾಳುಗಳನ್ನು, ಜೀರಿಗೆ (ಕಾಳಿಮಂಜೀರ್), ಗಸಗಸೆ (ಕಸ್‌ಕಸ್), ಲವಂಗ, ಚಕ್ಕೆ, (ಲೊಂಗೋ ಪಟೆ), ಕೋತಂಬ್ರಿ ಬೀಜ (ಮಖಾಲೋ), ಜೊತೆಗೆ ಇನ್ನೂ ಮುಂತಾದ ಸಾಂಬಾರಾ ಪದಾರ್ಥಗಳನ್ನು ಒಳ್ಳೆಣ್ಣೆ ಮಿಠುತೇಲ್, ಸೇಂಗಾ ಬಿಲ್ಲಾತಿ, ಎಳ್ಳು ತಿಲ್ಲಿ ಮುಂತಾದ ಎಣ್ಣೆ ಪದಾರ್ಥಗಳನ್ನು ತಮ್ಮ ಊಟದಲ್ಲಿ ಪಾರ್ಧಿಯರು ಬಳಸುತ್ತಾರೆ. ತೆಂಗಿನ ಕಾಯಿಯನ್ನು ನಾರೇಳ್ ಸಹ ಸಾಮಾನ್ಯವಾಗಿ ತಮ್ಮ ಅಡಿಗೆಯಲ್ಲಿ ಇವರು ಬಳಸುತ್ತಾರೆ.

ಪಾರ್ಧಿ ಸಮುದಾಯದವರು ಬೇಟೆಯನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡು ಎಲ್ಲಾ ತರಹದ ಪ್ರಾಣಿ ಪಕ್ಷಿಗಳನ್ನು ತಮ್ಮ ಅಡಿಗೆಗೆ ಬಳಸಿಕೊಳ್ಳುತ್ತಾರೆ. ಎಷ್ಟೋ ಜನರು ಮಾಂಸದ ಊಟವಿಲ್ಲವೆಂದರೆ ತಮ್ಮ ಊಟವೇ ಅತೃಪ್ತಿ ಎಂದು ಭಾವಿಸುವವರು ಇದ್ದಾರೆ. ಇವರು ಆಡಿದ ಬೇಟೆಯನ್ನು ಬೇರೆಯವರಿಗೆ ಮಾರಾಟ ಮಾಡುವುದಕ್ಕಿಂತ ಹೆಚ್ಚಾಗಿ ತಾವು ತಮ್ಮ ಊಟಕ್ಕಾಗಿಯೇ ಬಳಸಿಕೊಳ್ಳುತ್ತಾರೆ. ಇವರು ತಿನ್ನುವ ಬಗೆಬಗೆಯ ಮಾಂಸದ ಸಾರನ್ನು (ಭೊಟ್ಟುಸಾರ್) ಗಮನಿಸಿದರೆ, ನೋಡುಗರಿಗೆ ಆಶ್ಚರ್ಯ ಆಗದೇ ಇರದು. ಈ ರೀತಿಯ ಅವರ ಆಹಾರ ಕ್ರಮ ಅವರ ಅಲೆಮಾರಿತನ, ಅವರ ಕಾಡಿನ ಜೀವನ ಹಾಗೂ ಅವರ ಆರ್ಥಿಕ ಪರಿಸ್ಥಿತಿಯನ್ನೇ ಅವಲಂಬಿಸಿದೆ ಎಂಬುದನ್ನು ಯಾರೊಬ್ಬರೂ ಮರೆಯುವ ಹಾಗಿಲ್ಲ.

ಸಂಶೋಧಕನಾಗಿ ಇವರ ಕಡೆ ಹೋದಾಗ ನಾನೂ ಸಹ ಅನೇಕ ಪ್ರಾಣಿ ಪಕ್ಷಿಗಳ ಮಾಂಸದ ಊಟವನ್ನು ಈ ಜನರೊಂದಿಗೆ ಮಾಡಿರುತ್ತೇನೆ. ನಾನು ಇವರೊಂದಿಗೆ ಊಟಮಾಡಿದ ಪ್ರಾಣಿ ಪಕ್ಷಿಗಳೆಂದರೆ, ಚಿಗರೆ ಮಾಂಸ (ಹರಣ್ ಭೊಟ್ಟು) , ಮೊಲದ ಮಾಂಸ (ದಾಂತಿಬೊಟ್ಟು), ಕಾಡು ಹಂದಿ (ಡುಕರ್ ಭೊಟ್ಟು) ಮತ್ತಿತ್ಯಾದಿ.

ಪಾರ್ಧಿಯರು ತಮ್ಮ ದಿನನಿತ್ಯ ಜೀವನದಲ್ಲಿ ತಿನ್ನಲು ಬಳಸುವ ಪ್ರಾಣಿ ಪಕ್ಷಿಗಳ ಪಟ್ಟಿಯನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಭೋಕತಾನಿ ಬೋಟಿ ಆಡಿನ ಮಾಂಸದ ಸಾರು

೨. ಮುರಗಾನಿ ಬೋಟಿ ಕೋಳಿ ಮಾಂಸದ ಸಾರು. ಮುರಗಾನಿ ಬೋಟಿಯನ್ನು ಕುಕ್ಕಡಿ ಬೋಟಿ ಎಂತಲೂ ಹೇಳುತ್ತಾರೆ.

೩. ಮೇಡಾನಿಕಿ ಬೋಟಿ ಕುರಿಯ ಮಾಂಸ. ಇದನ್ನು ಭೋಕಡಿ ಭೊಟ್ಟು ಎಂತಲೂ ಹೇಳುತ್ತಾರೆ.

೪. ಭೇಖೋನಿ ಬೋಟಿ ಕೋಣದ ಮಾಂಸ.

೫. ಸೂರಿ ಬೋಟಿ ಗುಳ್ಳೇನರಿ ಮಾಂಸ.

೬. ಮುಂಗಸ್ ಬೋಟಿ ಮುಂಗಸಿ ಮಾಂಸ.

೭. ಬಿಲ್ಲಾತಾನಿ ಬೋಟಿ ಕಾಡುಬೆಕ್ಕಿನ ಮಾಂಸ.

೮. ಧಾತಿನಿ ಬೋಟಿ ಮೊಲದ ಮಾಂಸ.

೯. ತಿತರೋನಿ ಬೋಟಿ ಗೌಜಹಕ್ಕಿಯ ಮಾಂಸ.

೧೦. ಗೇಜರಾನಿ ಬೋಟಿ ಕಾಡು ಹಕ್ಕಿ ಮಾಂಸ.

೧೧. ಲೋಖಡ್‌ನಿ ಬೋಟಿ ಸಣ್ಣ ನರಿ ಠಕ್ಕನರಿ ಮಾಂಸ.

೧೨. ಜಹಕ್‌ನೀ ಕತ್ತೆಕಿರುಬ ಮಾಂಸ.

೧೩. ಗರ್‌ದನಿ ರಣಹದ್ದಿನ ಮಾಂಸ.

೧೪. ಗೋಯಿನಿ ಉಡದ ಮಾಂಸ.

೧೫. ಗಿಲ್ಲೋರಿ ಅಳಿಲಿನ ಮಾಂಸ.

೧೬. ಚಕತಾಂಡೋ ಸಣ್ಣಗೂಬೆ ಹಾಲಕ್ಕಿ ಮಾಂಸ.

೧೭. ಗುಗ್ಗೂನಿ ಗೂಬೆ ಮಾಂಸ.

೧೮. ದೌಳುಹುನಿ ಗರುಡನ ಮಾಂಸ.

೧೯. ಕೊಂಗಾನಿ ಬಿಳಿಕೊಕ್ಕರೆ ಮಾಂಸ.

೨೦. ಶಾಮ್‌ಮುರಗನಿ ಕರಿತಲೆಯ ಬಾತುಕೋಳಿಮಾಂಸ ಮಾಂಸ.

೨೧. ಖೇಕಡಿನಿ ಏಡಿಮಾಂಸ.

೨೨. ಮಾತ್ಸುಲುನಿ ಮೀನುಮಾಂಸ.

೨೩. ಮಗರಮಚ್ ಮೊಸಳೆಮಾಂಸ.

೨೪. ಕಾಚ್‌ರ್‌ನಿರಿ ಆಮೆಯಮಾಂಸ.

೨೫. ಗೂಬ್‌ನಿ ಹೆಗ್ಗಣದಮಾಂಸ.

೨೬. ಪಾಣುಮಾನು ಖುತ್ತ್ಯಾನಿ (ನೀರ್‌ನಾಯಿ ಮಾಂಸ).

೨೭. ಲಕ್ಕಡ್‌ಪೋಡನಿ (ಮರಕುಟಕ ಪಕ್ಷಿಯ ಮಾಂಸ).

೨೮. ಪರ್‍ಯಾವೋ (ಪಾರಿವಾಳದ ಮಾಂಸ).

೨೯. ಪಿದ್ದಿ (ಜೋಳದ ತೆನೆಯ ಮೇಲೆ ಕೂರುವ ಚಿಕ್ಕ ಹಕ್ಕಿಯ ಮಾಂಸ).

ಈ ರೀತಿಯಾಗಿ ಈ ಬುಡಕಟ್ಟಿನವರು ಎಲ್ಲಾ ಬಗೆಯ ಪಶು ಪಕ್ಷಿಗಳನ್ನು, ಮಾಂಸಹಾರವನ್ನಾಗಿ ಸೇವಿಸುತ್ತಿದ್ದು ಮನುಷ್ಯನೆಂಬ ಪ್ರಾಣಿಯನ್ನು ಮಾತ್ರ ತಿಂದಿಲ್ಲವೆನ್ನುತ್ತಾರೆ.

ಆದರೆ ಕರ್ನಾಟಕದಲ್ಲಿ ಈಗ್ಗೆ ಮೂರು ವರ್ಷಗಳಿಂದ ಮಳೆಯಿಲ್ಲದೇ ಬೆಳೆಯೆಲ್ಲಾ ನಾಶವಾಗಿ ರೈತರು ಹಾಗೂ ಎಲ್ಲಾ ಜನತೆ ಕಂಗಾಲಾಗಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ, ಬಹುಶಃ ಮನುಷ್ಯನೆಂಬ ಪ್ರಾಣಿಯನ್ನೂ ಸಹ ತಿಂದರು ತಿನ್ನಬಹುದೇನೋ (ಅದು ಕಾಲವೇ ನಿರ್ಧರಿಸುತ್ತದೆ).

ಪಾರ್ಧಿಯರು ತಿನ್ನುವ ಇತರೇ ತಿನಿಸುಗಳು

ಈ ಕೆಳಗೆ ವಿವರಿಸುವ ತಿನಿಸುಗಳನ್ನು ಪಾರ್ಧಿಯರು ವಿಶೇಷ ಅಡುಗೆಗಳು ಇಲ್ಲವೆ ತಿನಿಸುಗಳು ಎನ್ನಬಹುದು. ಯಾಕೆಂದರೆ ಅವರು ಕೆಲವು ಪದಾರ್ಥಗಳನ್ನು ಬೇಯಿಸದೆ ಅಂಥಹ ತಿನಿಸುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧ **ಬಾಜಿನನೋ ಹಿಟ್ಟು (ಸೊಪ್ಪಿನ ಮುದ್ದೆ):** ಇದನ್ನು ಮೊದಲಿಗೆ ನೀರಿನಲ್ಲಿ ಚೆನ್ನಾಗಿ ಬೇಯಿಸುತ್ತಾರೆ. ಸಾಧ್ಯವಾದರೆ ಈರುಳ್ಳಿಯ ಚೂರುಗಳನ್ನು ಹಾಕುತ್ತಾರೆ. ಹಿಟ್ಟು ಹೆಚ್ಚು ಇತ್ತೆಂದರೆ ಅದರಿಂದ ಮುದ್ದೆ ಮಾಡುತ್ತಾರೆ. ಸ್ವಲ್ಪ ಉಪ್ಪನ್ನು ಹಾಕಿರುವ ಈ ಜಾಜಿನೋ ಹಿಟ್ಟು ಹಕ್ಕಿಪಿಕ್ಕಿಯರ ಒಂದು ವಿಶೇಷ ಅಡುಗೆಯಾಗಿದೆ. ಅವರ ಅಲೆಮಾರಿ ಜೀವನ ವ್ಯವಸ್ಥೆಯ ಮೇಲೆ ಇದು ಹೆಚ್ಚು ಪ್ರಭಾವವನ್ನು ಬೀರಿದೆ. ಸಾರು ಇಲ್ಲದೆಯೆ ಹಿಟ್ಟನ್ನು ತಿನ್ನುವ ಈ ಅಡುಗೆ ಅಷ್ಟೇ ರುಚಿಕಟ್ಟಾಗಿರುತ್ತದೆ ಮತ್ತು ಅಷ್ಟೇ ಅಧಿಕ ಪ್ರಮಾಣದ ಪೌಷ್ಟಿಕಾಂಶಗಳನ್ನು ಸಹ ಇದರಲ್ಲಿದೆ.

೨. **ಗುಲ್ಲರ್‌ನೂ ಹಾಟೋ ಹಿಟ್ಟು ಕರೀನ್ ಖಾದ್ :** ಹತ್ತಿಯ ಕಾಯಿಗಳನ್ನು ಆಯ್ದು ತಂದು ಎಲ್ಲವನ್ನು ಜಜ್ಜಿ ಒಣಗಿಸುತ್ತಾರೆ. ಆಮೇಲೆ ಒಣಗಿದ ಆ ಕಾಯಿಗಳನ್ನು ಕುಟ್ಟಿ ನಂತರ ಬೀಸೆಕಲ್ಲಿನಲ್ಲಿ ಬಿಸಿ ಮುದ್ದೆ ಇಲ್ಲವೇ ಗಂಜಿಯನ್ನು ಮಾಡಿ ಸೇವಿಸುತ್ತಾರೆ.

೩ **ಖವಾಳಿ :** ಇದು ಪಾರ್ಧಿಯರು ತಿನ್ನುವ ಒಂದು ವಿಶೇಷವಾದ ತಿನಿಸು. ಇದು ಗೋಧಿ ಅಕ್ಕಿ ಬೆಲ್ಲಗಳನ್ನು ಬೆರೆಸಿ ಸರಿಯಾಗಿ ಕಲಸಿ ಎಣ್ಣೆಯಲ್ಲಿ ಕರಿಯುತ್ತಾರೆ. ಖವಾಳಿ ಹಬ್ಬವೆಂದರೆ, ಅದು ಸಿಹಿ ಊಟದ ಹಬ್ಬವೇ ಆಗಿದೆ. ಇದಕ್ಕೆ ಕಜ್ಜಾಯವೆಂತಲೂ ಕರ್ಜಿಕಾಯಿ ಎಂತಲೂ ಕರೆಯುತ್ತಾರೆ. ಅವರವರ ಕುಲದೇವತೆಗಳಿಗಾಗಿ ಈ ಹಬ್ಬವನ್ನು ಮಾಡುತ್ತಾರೆ. ಕಡಾಯಿಯಲ್ಲಿ ಒಂಬತ್ತು ಕಜ್ಜಾಯಗಳನ್ನು ಇಟ್ಟು ಕೆಳಗಡೆ ಉರಿಯನ್ನು ಹಾಕುತ್ತಾರೆ. ಈ ಹೊಸ ರೂಪದ ಒಲೆಯನ್ನು ಈ ತಿನಿಸು ಮಾಡಲಿಕ್ಕಾಗಿಯೇ ಮೂರು ಕಲ್ಲುಗಳನ್ನು ಹೂಡಿ ಇಟ್ಟಿರುತ್ತಾರೆ. ಈ ಒಲೆಯ ದೇವರ ಕಟ್ಟೆಯ ಮುಂದುಗಡೆಯೇ ಇದ್ದು 'ದೇವಾಯು' (ದೇವರು ಮೈ ಮೇಲೆ ಬಂದ ವ್ಯಕ್ತಿ) ಒಂಬತ್ತು ಕಜ್ಜಾಯಗಳನ್ನು ಕಡಾಯಿಯಿಂದ ತೆಗೆಯುತ್ತಾನೆ. ಈ ವ್ಯಕ್ತಿಯು ಸುಡುತ್ತಿರುವ ಎಣ್ಣೆ ಕಡಾಯಿಯಲ್ಲಿ ಯಾವುದೇ ಚಮಚೆಯ ಸಹಾಯವಿಲ್ಲದೇ ಬರಿ ಕೈಯಿಂದಲೇ ಆ ಕಜ್ಜಾಯಗಳನ್ನು ತೆಗೆಯುತ್ತಾನೆ. ವ್ಯಕ್ತಿಯು ಮೈಯಲ್ಲಿ ದೇವರು ಬಂದಿರುವುದರಿಂದ ಆ ವ್ಯಕ್ತಿಗೆ ಆ ಕ್ಷಣಕ್ಕೆ ಕೈಸುಡದೇ ಅವನು ಸುರಕ್ಷಿತನಾಗಿರುತ್ತಾನೆ. ಆದರೆ ಅದೇ ವ್ಯಕ್ತಿ ಖಾಲಿ ಸಮಯದಲ್ಲಿ (ಮೈ ಮೇಲೆ ದೇವರು ಬರದೆ ಇರುವಾಗ) ಈ ರೀತಿ ಮಾಡುವ ಹಾಗಿಲ್ಲ. ಆವಾಗ ಏನಾದರೂ ಅದೇ ರೀತಿಯಲ್ಲಿ ಸುಡುವ ಕಡಾಯಿಗೆ ಕೈ ಹಾಕಿದರೆ, ಅವನ ಕೈಯು ಸಂಪೂರ್ಣ ವಾಗಿ ಸುಟ್ಟು ಹೋಗುತ್ತದೆ. ಕಜ್ಜಾಯ ಮಾಡಿದ ಮರುದಿನ ಬೆಳಿಗ್ಗೆ ದೇವರು ಬರುತ್ತವೆಯಂತೆ ಅಲ್ಲಿಗೆ ಕೇಳಿದಾಗ ಆ ದೇವರು ಮುನಿಯುತ್ತದೆ. ನಂತರ ಪಧಾಹೊ ಮಾಂಡವಾಸು (ಮಾತನಾಡುತ್ತಾ ಇರುವುದು) ಮಾಡುತ್ತಾನೆ.

ಗುಲಗಂಜಿಯನ್ನು ಕೈಯ ಹಿಡಿಯಲ್ಲಿ ತೆಗೆದುಕೊಂಡು ಹಾಸಿಕೊಂಡ ಒಂದು ವಿಶೇಷ ಬಟ್ಟೆಯ ಪಟದ ಮೇಲೆ ಎಣಿಸುತ್ತಾ ಇಡುವ ಒಂದು ಶಾಸ್ತ್ರ ಇದಾಗಿದೆ. ಇದೆಲ್ಲಾ ಆದ ನಂತರವೇ ಖವಾಳಿಯನ್ನು ಎಲ್ಲರಿಗೂ ಹಂಚಿ ತಿನ್ನುತ್ತಾರೆ.

೪ **ಮಂಡಗಳ್ಳಿ ಹಣ್ಣು :** ಇದನ್ನು ಪಾರ್ಧಿಯರು ಆಹಾರದೋಪಾದಿಯಲ್ಲಿ ತಿನ್ನುತ್ತಾರೆ. ಇದನ್ನು ತಿಂದರೆ ವಾಯಿರೋಗ ಬರುವುದಿಲ್ಲವೆಂಬುದು ಇವರ ನಂಬಿಕೆ. ಜೊತೆಗೆ ಎಷ್ಟೋ ಸಾರಿ ಆಹಾರದ ಅಭಾವದಿಂದಾಗಿ ಅನಿವಾರ್ಯವಾಗಿ ಇದನ್ನು ತಿನ್ನುತ್ತಾರೆ.

೫. **ಹುಣಸೇ ಬೀಜ :** ಇದನ್ನು ಒಂದು ಗರಂ ಬಿಸಿ ತಿನಿಸಿನಂತೆ ತಿನ್ನುತ್ತಾರೆ. ಈ ಪಾರ್ಧಿಯರು. ಹುಣಸೆ ಬೀಜ ಆಯ್ದು ತಂದು ಚೆನ್ನಾಗಿ ಹಂಚಿನಲ್ಲಿ ಹುರಿಯುತ್ತಾರೆ ಆಗ ಬೀಜಗಳ ಮೇಲಿರುವ ಸಿಪ್ಪೆಯನ್ನೆಲ್ಲಾ ಬಿಟ್ಟು ಹೋಗುತ್ತದೆ. ಆಗ ಅದರೊಳಗಿನ ಬಿಳಿಯ ಹೋಳುಗಳನ್ನು ತಿನ್ನುತ್ತಾರೆ. ಇಲ್ಲವೇ ಮತ್ತೊಮ್ಮೆ ಹಂಚಿನ ಮೇಲೆ ಹಾಕಿ ಹುರಿದು ತಿನ್ನುತ್ತಾರೆ.

ಹೀಗೆ ಬಗೆಬಗೆಯ ಆಹಾರ ಪದ್ಧತಿಯನ್ನು ಹೊಂದಿರುವ ಪಾರ್ಧಿ (ಹಕ್ಕಿಪಿಕ್ಕಿ)ಯರಲ್ಲಿ ಆಹಾರದ ಬಗ್ಗೆ ಹತ್ತು ಹಲವು ನಿಯಮ ಅಥವಾ ಪದ್ಧತಿಗಳೂ ಇವೆ.

ಗುಜರಾತ್ಯೋಗಳಲ್ಲಿ ಕೋಣದ ಮಾಂಸವನ್ನು ತಿನ್ನುವುದಿಲ್ಲ. ಮೇವಾಡೊನ ಮಗಳು ಸಹ ಕೋಣವನ್ನು ತಿನ್ನುವಂತಿಲ್ಲ. ಆದರೆ ಮೇವಾಡೋನ ಮನೆಗೆ ಸೊಸೆಯಾಗಿ ಬಂದವಳು ಕೋಣದ ಮಾಂಸವನ್ನು ತಿನ್ನುತ್ತಾಳೆ

ಮೇವಾಡೊಗಳು ಆಡನ್ನು ತಿನ್ನುತ್ತಾರೆ. ಕಾಳಿವಾಳೋಗಳು ಮದುವೆಯಾದವರು ಕೋಣವನ್ನು ತಿನ್ನುವುದಿಲ್ಲ. ಸಿಗಡಿ ಚಟ್ನಿ ಪುಂಡಿ ಸೊಪ್ಪಿನ ಚಟ್ನಿ, ಮುದ್ದೆ ಚಟ್ನಿ, ಉಪ್ಪು ಮುದ್ದೆ, ಇವು ಸಾಮಾನ್ಯವಾಗಿ ಎಲ್ಲಾ ಪಾರ್ಧಿಯರ ನೆಚ್ಚಿನ ತಿನಿಸುಗಳಾಗಿವೆ.

ಪಾರ್ಧಿಯರು ಅಲೆಮಾರಿಗಳು ಹಾಗೂ ಬಡವರೂ ಆಗಿರುವ ಕಾರಣ ಇವರು ಯಾವ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದಿಲ್ಲ. ಪುನರ್‌ವಸತಿ ಆಹಾರ ಕಾಯಂ ಆಗಿ ಉಳಿದುಕೊಂಡಿರುವ ಊರುಗಳಲ್ಲಿ ಸಹ ಇವರೇನು ವರ್ಷಕ್ಕಾಗುವಷ್ಟು ಆಹಾರವನ್ನು ಒಟ್ಟಿಗೆ ಸಂಗ್ರಹಿಸಿಡುವುದಿಲ್ಲ. ಬಹುತೇಕ ಪಾರ್ಧಿಯರು 'ತಾಜಾ ರೋಜಗಾರಿ' ಎನ್ನುವಂತೆ ಅಂದಿನ ಅಡುಗೆಗೆ ಏನೇನು ಬೇಕೋ ಅದನ್ನು ಅಂದಂದೆ ಅಂಗಡಿಯಿಂದ ತೆಗೆದುಕೊಂಡು ಬಂದು ಬಿಡುತ್ತಾರೆ. ಹೀಗಾಗಿ ಅವರ ಆಹಾರಗಳು ತುಂಬಾ ಸರಳವಾಗಿರುತ್ತವೆ.

ಪಾರ್ಧಿಯರು ಆಹಾರಕ್ಕಾಗಿ ಬಳಸುವ ಸಾಮಗ್ರಿಗಳು

'ಹಂಡಕಾ' : ಎಂಬುದು ಅಡುಗೆ ಮಾಡಲು ಬಳಸುವ ಒಂದು ಮಡಿಕೆ. 'ಕುಂಡಿ' ಎಂಬುದು ಆಹಾರವನ್ನು ಒಟ್ಟೊಬ್ಬರು ತಿನ್ನಲು ಬಳಸುವ ಒಂದು ಸಾಮಗ್ರಿಯಾಗಿದೆ. 'ಖಾಟಿಕ್' ಎಂಬುದು ಊಟ ಮಾಡಲು ಬಳಸುವ ಪಾತ್ರೆ ಆಗಿದೆ. ಇದರಲ್ಲಿ ಮನೆಯವರೆಲ್ಲಾ ಸೇರಿ ಒಟ್ಟಿಗೆ ಊಟ ಮಾಡುತ್ತಾರೆ. ಸಿಲ್ವರ್ ಸ್ಟೀಲ್ ಅಲ್ಯುಮಿನಿಯಂನಂಥಹ ಆಧುನಿಕ ಸಾಮಗ್ರಿಗಳಿಂದ ಹಿಡಿದು ಮಡಿಕೆಯವರೆಗೆ, ಪ್ರೆಷರ್ ಕುಕ್ಕರ್‌ನಂಥಹ ಆಧುನಿಕ ಸಾಮಗ್ರಿಗಳನ್ನು ಬಳಸುತ್ತಾರೆ. ಚಟ್ನಿ, ಸಾರಿಗೇ ಖಾರ ಅರೆಯುವ ಸಲುವಾಗಿ ಗುಂಡುಕಲ್ಲುಗಳು ಸಾಮಾನ್ಯವಾಗಿ

ಬಳಸುವುದು ಕಂಡು ಬಂತು. ಹಾಗೆಯೇ ಎಷ್ಟೋ ಮನೆಗಳಲ್ಲಿ ಆಧುನಿಕತೆಯ ಮಿಕ್ಸಿಯನ್ನು ಬಳಸುವುದು ಕಂಡುಬಂತು. ಕಟ್ಟಿಗೆಯಿಂದ ಉರಿಯುವ ಒಲೆಯಿಂದ ಹಿಡಿದು ಸೀಮೆಎಣ್ಣೆ ಸ್ಟವ್, ಇದ್ದಲಿನ ಒಲೆಗಳು, ಹಾಗೂ ಇತ್ತೀಚಿನ ಗ್ಯಾಸ್ ಸ್ಟವ್‌ಗಳು ಸಹ ಕೆಲವು ಕಡೆ ಬಳಕೆಯಾಗುತ್ತಿರುವುದು ಕಂಡುಬಂತು. ಹಾದಿಬದಿಯ ಹಲವು ಬಗೆಯ ಕುಳ್ಳು ಕಟ್ಟಿಗೆಗಳನ್ನು ಆಯ್ದು ತಂದು ಅಡುಗೆ ಮಾಡಿದಂತೆಯೇ ಸೀಮೆಎಣ್ಣೆ ಸ್ಟವ್‌ಗಳನ್ನು ಹಲವು ಬಗೆಯ ತಂತ್ರಗಳಿಂದ ಬೇಗ ಅಡುಗೆ ಆಗುವಂತೆ ಮಾಡಿಕೊಂಡಿರುತ್ತಾರೆ. ಅಡುಗೆ ಕೋಣೆಯಲ್ಲಿಯ ಗೋಡೆಗೆ ಹತ್ತು ಅಡಿಗಳಷ್ಟು ಎತ್ತರದಲ್ಲಿ ಪ್ಲಾಸ್ಟಿಕ್ ಕ್ಯಾನೊಂದರಲ್ಲಿ ಸೀಮೆಎಣ್ಣೆಯನ್ನು ತುಂಬಿಸಿಟ್ಟು ನೆಲದ ಮೇಲೆ ಇಟ್ಟಿರುತ್ತಾರೆ. ಇದರಿಂದ ಎಣ್ಣೆ ಒತ್ತಡ ಹೆಚ್ಚಾಗಿರುವುದರಿಂದ ಅಡುಗೆ ಬೇಗನೆ ಆಗುತ್ತದೆ.

೨. ಪಾರ್ಧಿಯರ ವಾಸದ ರೀತಿ

ಹಿಂದಿನ ಕಾಲದಲ್ಲಿ ಮತ್ತು ಈಗಲೂ ಕೆಲವು ಪಾರ್ಧಿಯರು ಅಲೆಮಾರಿಗಳಾಗಿರುವುದರಿಂದ ಅವರಿಗೆ ಖಾಯಂ ಆದ ವಸತಿಗಳಿರುವುದು ಕಡಿಮೆಯೇ. ಆದರೆ ಬರಬರುತ್ತಾ ಈ ಪದ್ಧತಿಯ ಸಡಿಲಗೊಳ್ಳುತ್ತಿದ್ದು ಖಾಯಂ ಆಗಿ ಮಣ್ಣು, ಇಟ್ಟಿಗೆಗಳಿಂದ ನಿರ್ಮಿಸಿದ ಗೋಡೆಗಳ ಮೇಲೆ ಚಾವಣಿಗೆ ಹೆಂಚು ಇಲ್ಲವೇ ತಗಡಿನ ಟನ್ ಇಲ್ಲವೆ ತೆಂಗಿನ ಗರಿಗಳನ್ನು ಬಳಸಿ ಚಿಕ್ಕ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಇದು ಅವರುಗಳು ಕಾಯಂ ಆಗಿ ನೆಲೆನಿಂತ ಊರಿನಲ್ಲಿ ಕಾಣುವ ಅಂಶವಾದರೂ, ಊರಿಂದ ಊರಿಗೆ ಅಲೆಯುವಾಗ ಅವರು ತಮ್ಮ ಮಾಮುಲು ಗುಡ್ಡಲು ಅಥವಾ ಗುಡಾರ್‌ಗಳಲ್ಲಿಯೇ ವಾಸಿಸುತ್ತಿದ್ದಾರೆ. ಮೊದಮೊದಲಿಗೆ ಗುಡಿಸಲುಗಳ ನಿರ್ಮಾಣಕ್ಕೆ ಹಳ್ಳಿಗಳಲ್ಲಿ ಸಿಗುತ್ತಿದ್ದ ಆಪಿನ ಕಡ್ಡಿಗಳನ್ನು ಕೊಯ್ದು ಆಯ್ದು ತಂದು, ಅವನ್ನು ಚೆನ್ನಾಗಿ ಒಣಗಿಸಿ, ಒಂದಕ್ಕೊಂದನ್ನು ಸೇರಿಸಿ ದಬ್ಬಣದಿಂದ ಹೊಲೆದು ಉದ್ದನೆಯ ಚಾಪೆಯ ರೀತಿ ತಟ್ಟಿಗೆ ತಯಾರಿಸಿ, ನೆಟ್ಟಿಗಿರುವ ಗೂಟಗಳಿಗೆ ಅಡ್ಡಲಾಗಿ ಹಾಕಿದ ಬಿದಿರುಗಳ ಮೇಲೆ ಬಿಚ್ಚಿ ಹರಡಿದರೆ ಅದು ಒಂದು ತಾತ್ಕಾಲಿಕ ಟೆಂಟು ಆಗುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಈ ತಟ್ಟಿಗೆಗೆ ಸುತ್ತುವ ಅಥವಾ ಮಡಿಚಿ ಅಡಕ ಮಾಡಿಕೊಳ್ಳಲು ಅನುಕೂಲವಿರುವಂತೆ ಇರುತ್ತದೆ.

ಈ ರೀತಿಯಾದ ಗುಡ್ಡಲಿಗಳನ್ನು ತಯಾರಿಸಲು ಬೇಕಾಗುವ ಸಾಮಗ್ರಿಗಳೆಂದರೆ, ಎರಡು ಬಿದಿರಿನ ಗಳಗಳು, ಅವೆರಡನ್ನು ಕೂಡಿಸಲು ಒಂದು ಅಡ್ಡಗಳ ಮತ್ತು ನಾಲ್ಕು ಸಣ್ಣ ಗೂಟಗಳು. ಇವುಗಳಿಗೆ ಮೇಲಿನ ಮುಚ್ಚಳದ ಆಪಿನ ತಟ್ಟಿಗೆಯ ನಾಲ್ಕು ತುದಿಗಳಲ್ಲಿರುವ ದಾರದಿಂದ ಸಣ್ಣ ಗೂಟಗಳಿಗೆ ಬಿಗಿಯಾಗಿ ಕಟ್ಟುತ್ತಾರೆ. ಆಗ ಆ ಟೆಂಟು ಒಳ್ಳೇ ಬಂದೊಬಸ್ತಾಗಿರುತ್ತದೆಯಲ್ಲದೇ, ಗಾಳಿ ಮಳೆಗೂ ಸಹ ಬೀಳುವುದಿಲ್ಲ. ಈ ಗುಡ್ಡಲಿನ ಹಿಂಭಾಗಕ್ಕೆ ಸಹ ಆಪಿನ ಕಡ್ಡಿಗಳಿಂದ ಜೋಡಿಸಿ ಹೊಲಿದ ತಟ್ಟಿಗೆಗಳನ್ನು ಮುಚ್ಚಳದ ರೀತಿಯಲ್ಲಿ ಮುಚ್ಚುತ್ತಾರೆ. ಮುಂದಿನ ಮುಖ್ಯದ್ವಾರಕ್ಕೆ ಯಾವುದೇ ಅಡೆಯನ್ನು ಮುಚ್ಚುವುದಿಲ್ಲ. ಅದು ಯಾವಾಗಲೂ ತೆರೆದೇ ಇರುತ್ತದೆ.

ಅಂದಿನ ದಿನಗಳಲ್ಲಿ ಹಳ್ಳಿಗಳಲ್ಲಿ ಸಮೃದ್ಧಿಯಾಗಿ ಬೆಳೆದ ಆಪಿನಿಂದ ಇಂಥಹ ತಟ್ಟಿಗೆಗಳನ್ನು ಮಾಡಿ ಕೊಳ್ಳುತ್ತಿದ್ದರು. ಈ ಟೆಂಟುಗಳ ಮತ್ತೊಂದು ವಿಶೇಷವೆಂದರೆ ಊರಿಂದ ಊರಿಗೆ ಒಯ್ಯುವಾಗ ಹಗುರವಾಗಿ ಪಾರ್ಧಿಯರ ಜೀವನಕ್ಕೆ ಉಪಯುಕ್ತವಾಗುತ್ತಿತ್ತು. ಆದರೆ ಇದರ ರಚನೆ ಸ್ವಲ್ಪ ಪ್ರಯಾಸವಾದುದಾಗಿದೆ. ಪ್ರತಿಯೊಂದು ಆಪಿನ ತುದಿಗೆ ಇನ್ನೊಂದು ಆಪಿನ ಕಡ್ಡಿಯನ್ನು ಹೊಲೆದು ಮಾಡುವ ಈ ತಟ್ಟಿಗೆ ಸುಮಾರು ಒಂದು ತಿಂಗಳಿಂದ ಹಿಡಿದು ಮೂರು ತಿಂಗಳುಗಳ ಕಾಲ ಸಮಯ ತಿನ್ನುತ್ತಿತ್ತು. ಇದನ್ನು (ಪಾರ್ಧಿಯರು) ಎಲ್ಲಾ

ಸದಸ್ಯರು ಸೇರಿ ರಚಿಸುತ್ತಿದ್ದರು. ಹತ್ತಾರು ಜನ ಸೇರಿ ಇದನ್ನು ರಚಿಸುತ್ತಿದ್ದುದರಿಂದ ಇದರ ಕಾರ್ಯ ಬೇಗ ಮುಗಿಯುತ್ತಿತ್ತು.

ಇನ್ನೂ ಕೆಲವು ಪಾರ್ಧಿಯರು ಸಣ್ಣ ಬಿದಿರಿನಿಂದ ಮಾಡಿದ ಕಮಾನಿಕಾರದ ಟೆಂಟುಗಳಲ್ಲಿಯೂ ಕೂಡಾ ವಾಸಿಸುತ್ತಿದ್ದರು. ಇದಕ್ಕೆ ಕಾರಣ ಗಾಳಿ ಮಳೆಗೆ ಬೆಚ್ಚಗಿರುತ್ತದೆ ಮತ್ತು ಬಿದಿರು ಹೇರಳವಾಗಿ ಸಿಗುತ್ತದೆಂಬುವದಾಗಿದೆ. ಅಲ್ಲದೆ ಗುಡ್ಡ ಗಾಡುಗಳಲ್ಲಿ ಅವು ಸಿಗದಿರುವ ಜಾಗದಲ್ಲಿ ಬಿದಿರಿನ ಗುಡಿಸಲುಗಳು ಹೆಚ್ಚು ಬಳಕೆಯಾಗುತ್ತಿದ್ದವು. ಇದು ಆಪಿನ ತಟ್ಟೆಗೆ ಗುಡಿಸಲಿಗಿಂತ ಪ್ರಾಚೀನವಾದ ವಸತಿ ವ್ಯವಸ್ಥೆ ಆಗಿದೆ. ಎಷ್ಟೋ ಬಾರಿ ಈ ಬಿದಿರು ಗುಡಿಸಲಿನ ಮೇಲೆ ಆಪಿನ ತಟ್ಟೆಗೆಗಳ್ನು ಹೊಂದಿಸಿರುತ್ತಾರೆ. ಅಲ್ಲದೇ ಆಪಿನ ತಟ್ಟೆಗೆ ಇಲ್ಲದ ಕಡೆ ಮರದ ರೆಂಬೆ ಕೊಂಬೆಗಳ ಹಸಿರನ್ನು ಹೊದಿಕೆಯಾಗಿ ಹೊಚ್ಚುತ್ತಾರೆ. ಈ ವ್ಯವಸ್ಥೆಗಳಿಂದ ಗುಡಿಸಲಿನೊಳಗೆ ನೆರಳಾಗುವುದಷ್ಟೇ ಅಲ್ಲದೇ ಮಳೆಗೆ ಸೋರದಂತೆಯು ಇವು ರಕ್ಷಣೆ ನೀಡುತ್ತಿವೆ ಎಂಬುದು ಗಮನಾರ್ಹವಾದದ್ದು.

ಇತ್ತೀಚಿನ ದಿನಗಳಲ್ಲಿ ಈ ರೀತಿಯ ಗುಡಿಸ್ಲುಗಳು ಪಾರ್ಧಿಯರಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ. ಕಾರಣ ಈ ಬಗೆಯ ಸಾಮಗ್ರಿಗಳನ್ನು ಊರಿಂದ ಊರಿಗೆ, ಬಸ್ಸು, ರೈಲುಗಳಲ್ಲಿ ಸಾಗಿಸುವುದು ತುಂಬಾ ಕಷ್ಟದ ಕೆಲಸವಾಗಿದ್ದರಿಂದ ಅಂದಿನ ಸಾರಿಗೆಯ ಸಾಧ್ಯತೆಗಳ್ನು ಅನುಸರಿಸಿ ಅವರ ವ್ಯವಸ್ಥೆಯ ಸಾಮಗ್ರಿಗಳೂ ಬಗೆಬಗೆಯಾಗಿ ಬದಲಾಗಿವೆ. ಈಗ ಹಕ್ಕಿ ಪಿಕ್ಕಿಯರ ವಸತಿ ವ್ಯವಸ್ಥೆಯು ತುಂಬಾ ಸರಳ ಹಾಗೂ ಅಚ್ಚುಕಟ್ಟಾಗಿದೆಯಲ್ಲದೇ ಇದನ್ನು ಒಂದೂರಿನಿಂದ ಇನ್ನೊಂದೂರಿಗೆ ಸಾಗಿಸಲು ತುಂಬಾ ಸುಲಭವಾಗಿದೆ.

ಆಪಿನ, ಬಿದಿರಿನ ಗುಡ್ಡಲುಗಳಿಂದ ಮುಂದುವರಿದು ಖೌದಿ ಹೊದಿಸಿದ ಗುಡ್ಡಲು, ತಾಡಪಾಲು ಹೊದಿಸಿದ ಗುಡ್ಡಲು, ಈಗ ಇತ್ತೀಚೆಗೆ ಗೊಬ್ಬರದ ಚೀಲಗಳನ್ನು ಕೂಡಿಸಿ ದೊಡ್ಡದಾಗಿ ಹೊಲಿದ ಹಾಳೆಯನ್ನು ಹೊದಿಸಿದ ಗುಡಿಸಲುಗಳನ್ನು ಕಾಣಬಹುದಾಗಿದೆ. ಈ ರೀತಿಯ ಕ್ರಮಗಳು ಪಾರ್ಧಿಯರ ವಸತಿ ವ್ಯವಸ್ಥೆಯ ಬೆಳವಣಿಗೆಯನ್ನು ತಿಳಿಸುವುದಲ್ಲದೆ, ಅವರು ಕಾಲಕಾಲಕ್ಕೆ ಹೇಗೆ ತಮ್ಮ ವ್ಯವಸ್ಥೆಯನ್ನು ಬದಲಿಸುತ್ತಾ, ಅನುಕೂಲತೆಗಳ ಕಡೆಗೆ ಹೆಜ್ಜೆ ಹಾಕುತ್ತಿದ್ದಾರೆ ಎಂಬುದನ್ನು ಇತ್ತೀಚಿನ ಅವರ ವಸತಿ ವ್ಯವಸ್ಥೆಯನ್ನು ಯಾರಿಗಾದರೂ ಅರ್ಥವಾಗುತ್ತದೆ. ಇತ್ತೀಚಿನ ಅವರ ಪ್ಲಾಸ್ಟಿಕ್ ಚೀಲದ ಗುಡಿಸಲುಗಳಿಗೆ ಅವರು 'ಟೆಂಟ್' ಎಂತಲೂ ಬಳ್ಳಾರಿ ಕಡೆಯ ಪಾರ್ಧಿಯರು (ಹಕ್ಕಿಪಿಕ್ಕಿಯರು) 'ಗುಡಿಶ್ಯಾಂ' ಎಂತಲೂ ಕರೆಯುತ್ತಾರೆ.

ಪಾರ್ಧಿಯರು ತಮ್ಮ ಸಂಚಾರಿ ಜೀವನದಲ್ಲಿ ಟೆಂಟುಗಳನ್ನು ಹಾಕಿಕೊಳ್ಳುವಾಗ ಇರುವ ನಿರ್ಬಂಧಗಳು :

ಈ ಬುಡಕಟ್ಟು ತಮ್ಮ ಸಂಚಾರಿ ಜೀವನದಲ್ಲಿ ತಮ್ಮ ತಾತ್ಕಾಲಿಕ ವಸತಿಗಾಗಿ ಅನೇಕ ಕಡೆ ಟೆಂಟುಗಳನ್ನು ಹಾಕಿಕೊಳ್ಳುವಾಗ ಅವರು ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.

೧) ಇವರು ಟೆಂಟುಗಳನ್ನು ಹಾಕಿಕೊಳ್ಳುವಾಗ ಒಂದೇ ಸಾಲನ್ನು ಅನುಸರಿಸುವುದರ ಜೊತೆಗೆ ಎದುರು ಬದಿರಿಗೆ ಟೆಂಟುಗಳನ್ನು ಹಾಕಿಕೊಳ್ಳಬೇಕು.

೨) ಒಬ್ಬರ ಟೆಂಟಿನ ಹಿಂದೆ ಇನ್ನೊಬ್ಬರು ಯಾವುದೇ ಕಾರಣಕ್ಕೂ ಟೆಂಟನ್ನು ಹಾಕಿಕೊಳ್ಳುವ ಹಾಗಿಲ್ಲ.

೩) ಎರಡೂ ಕಡೆಗಳಲ್ಲಿ ತಲೆಯನ್ನು ಎದುರಿನ ಟೆಂಟಿನವರ ಕಡೆಯೇ ಹಾಕಿ ಮಲಗಬೇಕು. ಯಾವ ಕಾರಣಕ್ಕೂ ಕಾಲನ್ನು ಎದುರಾಗಿ ನೀಡುವಂತಿಲ್ಲ.

೪) ಇದಕ್ಕೆ ಕಾರಣ ಎದುರಿಗೆ ಕಾಲು ನೀಡಿದವರಿಗಿಂತ ಅವನ ಕಡೆ ಇರುವವನು ತಾನು ಅವನಿಗಿಂತ ಕೀಳಾಗಿ ಬಿಟ್ಟೆ ಎಂದುಕೊಳ್ಳುತ್ತಾನೆ.

೫) ಹೀಗೆ ಯಾರಾದರೂ ಅಪ್ಪಿತಪ್ಪಿಯಾದರೂ ಇನ್ನೊಬ್ಬರ ಗುಡ್ಡಲು ಕಡೆಗೆ ಕಾಲು ಹಾಕಿ ಮಲಗಿದರೆ ಅಥವಾ ಬೇರೆಯವರಿಗೆ ಅವರಿಂದ ಅವಮಾನ ಮಾಡಿದಂತೆ ಎಂದು ಇವರು ಭಾವಿಸುತ್ತಾರೆ.

೬) ಈ ರೀತಿಯಾಗಿ ಅವಮಾನವನ್ನು ಮಾಡಿದವರಿಗೆ ಎಲ್ಲರೂ ಸೇರಿ ಹೊಡೆಯುತ್ತಾರೆ. ಮತ್ತು (ಹಡೇ ಚಬ್ಬೀಸ್) ಅಂದರೆ (೪೦+೧೦ ರೂ ಎಂದರ್ಥ) ಒಟ್ಟು ೫೦ ರೂ ದಂಡವನ್ನು ಹಾಕುವ ಪದ್ಧತಿಯು ಇದೆ.

೭) ಕೆಲವರಿಗೆ ದೇವರು ಮೈಮೇಲೆ ಬರುತ್ತಿರುತ್ತದೆ ಹಾಗೂ ಕೆಲವು ಹೆಣ್ಣು ಮಕ್ಕಳು ಮುಟ್ಟಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಗಾಗಿ ಯಾರೂ ಕಾಲನ್ನು ಎದುರಿಗೆ ಹಾಕಿ ಮಲಗುವ ಹಾಗಿಲ್ಲ.

೩. ಪಾರ್ಧಿಯರ ವೇಷ ಭೂಷಣಗಳು

ಪಾರ್ಧಿಯರಲ್ಲಿ ಉಡುಗೆ ತೊಡುಗೆ ವೇಷಭೂಷಣಗಳು ಇತರ ಬುಡಕಟ್ಟುಗಳ ರೀತಿಯಲ್ಲಿ ಒಂದೇ ನಿಗದಿತ ಚೌಕಟ್ಟಿಗೆ ಒಳಗಾಗಿರುವುದಿಲ್ಲ. ಏಕೆಂದರೆ ಅವರ ಅಲೆಮಾರಿ ಜೀವನದೊಂದಿಗೆ ಅವರನ್ನು ಕಿತ್ತು ತಿನ್ನುವ ಬಡತನವೂ ಕಾರಣವಾಗಿದೆ. ಇವರಲ್ಲಿ ವಯಸ್ಸು, ಲಿಂಗ, ಮತ್ತು ಸಂದರ್ಭಗಳಿಗನುಸಾರವಾಗಿ ಅವರ ವೇಷ ಭೂಷಣಗಳು ಬದಲಾಗುತ್ತಿರುತ್ತವೆ. ಇವರು ಕಾಡಿನಲ್ಲಿದ್ದಾಗ ಗಂಡಸರು ಕೇವಲ ಕಚ್ಚೆ (ಪಿಚ್ಚೂರಿ) ಯನ್ನಷ್ಟೇ ಧರಿಸಿರುತ್ತಾರೆ. ಆದರೆ ಪಟ್ಟಣಗಳಿಗೆ ಹೋಗುವಾಗ, ಅಥವಾ ಬೇರೆ ಬೇರೆ ಊರುಗಳಿಗೆ ಹೋಗುವಾಗ ಲುಂಗಿ ಅಂಗಿಗಳನ್ನು ತೊಡುತ್ತಾರೆ. ಅಥವಾ ಬೇರೆ ಊರಗಳ ಕಾಡಿಗೆ ಬೇಟೆಯಾಡಲು ಹೋಗುವ ಸಂದರ್ಭಗಳಲ್ಲಿ ರೈತರ ರೀತಿ ಪಂಚೆ ಮತ್ತು ಅಂಗಿಗಳನ್ನು ಧರಿಸುತ್ತಾರೆ. ಸಾಮಾನ್ಯವಾಗಿ ಪಾರ್ಧಿ ಯುವಕರು ಪಟ್ಟಣ ಪ್ರದೇಶ ಗಳಿಗೆ ಹೆಚ್ಚಾಗಿ ಹೋಗುವುದರಿಂದ ಅವರು ಪ್ಯಾಂಟು ಹಾಗೂ ಅಂಗಿಗಳನ್ನು ಧರಿಸುತ್ತಾರೆ. ಮದುವೆ ಮತ್ತು ಇತರೇ ವಿಶೇಷ ಸಂದರ್ಭಗಳಲ್ಲಿ ಕುಡುತಾ (ಅಂಗಿ), ರುಮಾಲು, ಪಂಚೆ ಮುಂತಾದವುಗಳನ್ನು ಉಡುಗೊರೆಯಾಗಿ ಧರಿಸಿಕೊಳ್ಳುತ್ತಾರೆ. ಕೆಲವೇ ಕೆಲವು ಜನರು ಟೈ ಮತ್ತು ಕೋಟುಗಳನ್ನು ಸಹ ಬಳಸುತ್ತಾರೆ.

ದೇವರನ್ನು ಪೂಜಿಸುವಾಗ ದಪ್ಪನೆಯ ಕೆಂಪು ಬಣ್ಣದ ಬಟ್ಟೆಯನ್ನು ಸ್ಕರ್ಟ್ ರೀತಿಯಲ್ಲಿ ಧರಿಸುತ್ತಾರೆ. ಇದಕ್ಕೆ ಅವರು 'ದೇವಾನುಗಾಗರೋ' ಎಂತಲೂ ಹೇಳುತ್ತಾರೆ. ಈ ಗಾಗರೋ ತೊಟ್ಟಿರುವಾಗ ಸೊಂಟಕ್ಕೆ ಗೆಜ್ಜೆ ಪಟ್ಟಿಯನ್ನು ಕಟ್ಟಿಕೊಂಡಿರುತ್ತಾರೆ. ಗಂಡಸರಿಗೆ ದೇವರ ಜಡೆ ಇರುವುದರಿಂದ ಅದು ಮೇಲೆ ಕಾಣದಂತೆ ತಲೆಗೆ ಟವೆಲನ್ನು ಸುತ್ತಿಕೊಳ್ಳುತ್ತಾರೆ. ಬಾಂಬೆ ಗೋವಾ ಮತ್ತು ಇತರೇ ಕಡೆ ಪ್ರವಾಸ ಮತ್ತು ದೊಡ್ಡ ನಗರಗಳ ಸಂಪರ್ಕ ಇರುವ ಪಾರ್ಧಿಯರು Ding Dong ಚೆಡ್ಡಿಗಳನ್ನು ಹಾಗೂ Discoshirt ಗಳನ್ನು ಧರಿಸುತ್ತಾರೆ. ಜೊತೆಗೆ ಬಗೆಬಗೆಯ ಬಣ್ಣದ ಅಂಗಿಗಳನ್ನು ಹಾಗೂ ಕೇವಲ ಬನಿಯನ್‌ಗಳನ್ನು ಧರಿಸಿ ಇವರು ಇರುತ್ತಾರೆ.

ಇವರಲ್ಲಿ ಬಹುತೇಕರ ವೇಷಭೂಷಣಗಳು ರಂಗು ರಂಗಿನಿಂದ ಕೂಡಿರುವುದರ ಜೊತೆಗೆ ಇವರು ಸಿನಿಮಾ ನಟನಟಿಯರನ್ನು ಅನುಕರಣೆ ಹೆಚ್ಚು ಮಾಡುತ್ತಾರೆ.

ಹಿಂದಿನ ಕಾಲದ ತೀರಾ ಬಡತನದ ಪರಿಸ್ಥಿತಿಯಲ್ಲಿ ಪಾರ್ಧಿ ಹೆಣ್ಣಿಗೆ ಒಂದು ಸೀರೆಯನ್ನು ಕೊಟ್ಟರೆ ಅದನ್ನು

ಅವಳು ನಾಲ್ಕು ತುಂಡುಗಳನ್ನಾಗಿ ಮಾಡಿಕೊಂಡು ಒಂದು ತುಂಡನ್ನು (ಘೌನು) ಲಂಗವನ್ನಾಗಿ ಸೊಂಟದ ಕೆಳ ಭಾಗಕ್ಕೆ, ಇನ್ನೊಂದು ತುಂಡನ್ನು ಎದೆಗೆ ಜಾಕೆಟ್ (ಕಾಂಚಲಿ) ಯಾಗಿಯೂ, ಮೂರನೆಯ ತುಂಡನ್ನು ಹಣೆ ಸೇರಿದಂತೆ ತಲೆಗೆ ಚೂರೋ ಎಂದು ಕಟ್ಟಿಕೊಳ್ಳುತ್ತಾರೆ. ಉಳಿದ ಕೊನೆಯ ತುಂಡನ್ನು ಮಗುವಿಗೆ ಹೋರುವ ಜೋಳಿಗೆಯನ್ನಾಗಿ ಬಳಸುತ್ತಾರೆ. ಈಗಲೂ ಬಾಣಂತಿಯರು ಸಹ ಇತರರ ರೀತಿ ಸೀರೆ ಕುಪ್ಪಸ ತೊಟ್ಟರೂ ಸಹ ಕೊನೆಯ ತುಂಡನ್ನು ಹಾಗೆಯೇ ಉಳಿಸಿಕೊಂಡಿರುತ್ತಾಳೆ. ಮಗುವಿಗೆ ಜೋಳಿಗೆಯಲ್ಲಿ ಹಾಕಿಕೊಂಡು ಅಲೆಯುವ ಈ ಪದ್ಧತಿಯು ಕೇವಲ ಪಾರ್ಧಿಯರಲ್ಲಿ ಮಾತ್ರವೇ ಇರದೆ ಇದು ಬಹುತೇಕ ಅಲೆಮಾರಿ ಜನರಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯಾಗಿದೆ. ಈ ಜೋಳಿಗೆಯ ಮುಖ್ಯ ಉದ್ದೇಶವೇ ಭಾರವನ್ನು (ತಾವು ಹೊರುವ) ಕಡಿಮೆ ಮಾಡುವದಾಗಿದೆ. ಈ ತರಹದ ಉಡುಪನ್ನು ಸಾಮಾನ್ಯವಾಗಿ ಮದುವೆಯಾದ ಎಲ್ಲಾ ಸ್ತ್ರೀಯರು ಈ ರೀತಿಯಲ್ಲಿ ತೊಡುತ್ತಾರೆ. ಹಿಂದಿನ ದಿನಗಳಲ್ಲಿ ಪಾರ್ಧಿ ಹೆಣ್ಣು ಮಕ್ಕಳು ತಮ್ಮ ಲಂಗವನ್ನು ತಾವೇ ಹೊಲಿದು ಕೊಳ್ಳುತ್ತಿದ್ದರು. ಎದೆಗೆ ಕೇವಲ ಜಾಕಿಟ್ ಅಷ್ಟೇ ಇರುತ್ತದೆ. ಇತ್ತೀಚಿನ ಹೆಣ್ಣು ಮಕ್ಕಳು ಮೇಲೆ ಸೆರಗನ್ನು (ದಾವಣಿ)ಯನ್ನು ಹಾಕಿಕೊಳ್ಳುತ್ತಾರೆ. ಸೆರಗಿನ ವಿಷಯದಲ್ಲಿ ಪಾರ್ಧಿ ಹೆಣ್ಣು ಮಕ್ಕಳು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಇತ್ತೀಚಿನ ಪಾರ್ಧಿ ಹೆಣ್ಣು ಮಕ್ಕಳು ನೈಟಿಯನ್ನು ತುಂಬಾನೇ ಧರಿಸುತ್ತಿದ್ದಾರೆ. ಜೊತೆಗೆ ಬಣ್ಣ ಬಣ್ಣದ ಸೀರೆ ಗಳನ್ನು ಉಡುತ್ತಿದ್ದಾರೆ.

ಬಹುತೇಕ ಪಾರ್ಧಿಯರ ಚಿಕ್ಕ ಮಕ್ಕಳು ಬೆತ್ತಲೆಯಾಗೇ ಇರುತ್ತವೆ. ಶಾಲೆಗೆ ಹೋಗುವ ಮಕ್ಕಳು ಮಾತ್ರ ಅಂಗಿ ಚೆಡ್ಡಿಯನ್ನು ಹಾಕಿಕೊಳ್ಳುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯ ಗಿರಿಜನ ಉಪಯೋಜನೆ ಅಡಿಯಲ್ಲಿ (T.S.P) ಶಾಲಾ ಮಕ್ಕಳಿಗೆ ಪುಕ್ಕಟೆ ಯಾಗಿ ಉಡುಪುಗಳನ್ನು ಹಾಗೂ ಇನ್ನೂ ಕೆಲವು ಸವಲತ್ತುಗಳನ್ನು ಒದಗಿಸಲಾಗಿದೆ.

ಪಾರ್ಧಿಯರು ಉಡುಪುಗಳಲ್ಲಿ ಹೇಗೆ ಸರಳರೋ ಹಾಗೆಯೇ ಅವರು ತೊಡುವ ಆಭರಣಗಳಲ್ಲಿಯು ಅವರು ಸರಳರೇ. ಹೆಚ್ಚಿನ ಸಂಖ್ಯೆಯ ಪುರುಷರು ಆಭರಣಗಳನ್ನು ಧರಿಸುವುದಿಲ್ಲ. ಆದರೆ ಬಿಸಿ ರಕ್ತದ ಯುವಕರು ಮಾತ್ರ ಕೊರಳಿಗೆ ಮೂರು ಹವಳಗಳನ್ನು ಪೋಣಿಸಿದ ಸರವನ್ನು ಹಾಕಿಕೊಳ್ಳುತ್ತಾರೆ. ಹಾಗೆಯೇ ಹಣೆ, ಎದೆಯ ಬಲ ಮತ್ತು ಎಡ ಭಾಗಕ್ಕೆ ಕೈಯ ಎಡ ಮತ್ತು ಬಲಭಾಗಕ್ಕೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಕೆಲವು ಗಂಡಸರು ತಮ್ಮ ಕಿವಿಗಳಿಗೆ 'ಹಂತಿ' ಎಂಬ ಓಲೆಗಳನ್ನು ಹಾಗೂ 'ಅಂಗುಟಿ' ಎಂಬ ಬೆರಳಿನ ಉಂಗುರವನ್ನು ಧರಿಸುತ್ತಾರೆ. ಇವರ ಹೆಣ್ಣು ದೇವರನ್ನು ಬೆಳ್ಳಿಯಿಂದ ತಯಾರು ಮಾಡಿರುವುದರಿಂದ ಯಾವ ಪಾರ್ಧಿ ಹೆಣ್ಣು ಮಕ್ಕಳು ಅಪ್ಪಿತಪ್ಪಿಯೂ ಬೆಳ್ಳಿಯ ಆಭರಣಗಳನ್ನು ಸೊಂಟದ ಕೆಳಗಿನ ಅಂಗಾಂಗಗಳಿಗೆ ಧರಿಸುವುದಿಲ್ಲ. ಹಾಗೇನಾದರೂ ಬೆಳ್ಳಿಯ ಆಭರಣಗಳನ್ನು ಧರಿಸಿದರೆ ಅವರ ದೇವರಿಗೆ ಅವಮಾನ ಮಾಡಿದಂತಾಗುತ್ತದೆ ಎಂದು ಇವರು ನಂಬುತ್ತಾರೆ.

ಇನ್ನು ಆಭರಣಗಳ ಬಗ್ಗೆ ಹೆಂಗಸರ ವಿಷಯ ಬಂದರೆ, ಮದುವೆಯಾದ ಹೆಂಗಸರು ಕೊರಳಿಗೆ ಕಪ್ಪು ಸರವನ್ನು ಧರಿಸುತ್ತಾರೆ. ಇದಕ್ಕೆ ಅವರು ಅವರ ಪಾರ್ಧಿ ಭಾಷೆಯಲ್ಲಿ 'ಕಾಲಿಪಟ್ಟು' ಎಂದು ಕರೆಯುತ್ತಾರೆ. ಈ ಕಾಲಿಪಟ್ಟು ಎಂಬುದು ಗಂಡು ಹೆಣ್ಣಿಗೆ ಮದುವೆಯ ಸಂದರ್ಭದಲ್ಲಿ ಕಟ್ಟಿದ ಒಂದು ಬಂಧನವಾಗಿರುತ್ತದೆ. ಇದು

ಇವರು ಮಾಡುತ್ತಿರುವ ಅತ್ಯಂತ ಹಳೆಯ ಪದ್ಧತಿಯೇನಲ್ಲ. ದಕ್ಷಿಣ ಭಾರತದ ಮದುವೆಯ ಸಂದರ್ಭದಲ್ಲಿ ತಾಳಿಯೇ ಇದಕ್ಕೆ ಪ್ರಭಾವ ಬೀರಿದೆ ಎಂದರೆ ತಪ್ಪಾಲಾರದು. ಇವರು ಆಭರಣಗಳನ್ನು ಕೇವಲ ಅಲಂಕಾರಕ್ಕಾಗಿ ಧರಿಸದೆ, ತಮ್ಮನ್ನು ತಾವು ಗುರ್ತಿಸಿಕೊಳ್ಳಲು ಮತ್ತು ಮದುವೆಯ ಧಾರ್ಮಿಕ ಸಂಬಂಧಗಳ ಘನತೆಯನ್ನು ಎತ್ತಿ ಹಿಡಿಯುವ ಸಲುವಾಗಿ ಕೆಲವರು ಬಂಗಾರದ ಆಭರಣಗಳನ್ನು ಧರಿಸುತ್ತಾರೆ. ಕೆಲವು ಸಲ ಹಣದ ತೊಂದರೆಯಾದರೆ ಇವೇ ಆಭರಣಗಳನ್ನು 'ಗಿರವಿಗೆ' ಇಟ್ಟು ನಿರಾಭರಣ ಸುಂದರಿಯರಾಗುತ್ತಾರೆ. ಹೆಂಗಸರು ಮೂಗಿಗೆ ಟಿಕಲಿ, ಕಿವಿಗೆ ಆಪು, ಕಿವಿಯ ಮೇಲ್ಭಾಗಕ್ಕೆ ಕೊಪ್ಪುವಾಳಿ ಎಂಬ ರಿಂಗ್, ಕೊರಳಿಗೆ ಒಂದು ಹವಳ ಹಾಗೂ ಅದರ ಆಚೆ ಬಂಗಾರದ ಗುಂಡುಗಳನ್ನು ಸೇರಿಸಿ ಮಾಡಿಕೊಂಡ ಸರವನ್ನು ಹಾಕಿಕೊಳ್ಳುತ್ತಾರೆ.

ಇಲ್ಲವೆ ಚಿಕ್ಕ ಶಂಖಗಳ ಸರವನ್ನು ಧರಿಸುತ್ತಾರೆ. ಕೈಗಳಿಗೆ ಅಪರೂಪಕ್ಕೆಂದು 'ಖಾಖಿಣಿ' ಎಂಬ ಬೆಳ್ಳಿಯ ಬಳೆಗಳನ್ನು ಧರಿಸುತ್ತಾರೆ. ಹಾಗೆಯೇ ಹಿತ್ತಾಳೆಯ ಜಡೆ ಬಿಲ್ಲಿಯನ್ನು ಧರಿಸುತ್ತಾರೆ.

ಹಚ್ಚೆ ಹಾಕಿಸಿಕೊಳ್ಳುವಿಕೆ

"ಮನುಷ್ಯ ಬರುವಾಗ (ಹುಟ್ಟುವಾಗ) ಬೆತ್ತಲೆ ಹೋಗುವಾಗ (ಸತ್ತಾಗ) ಬೆತ್ತಲೆ. ಆದರೆ ಬರಿ ಮೂರು ದಿನಗಳು ಮಾತ್ರ ಕತ್ತಲೇ" ಜೀವನ ಎನ್ನುವ ದಾಸರ ವಾಣಿಯಂತೆ, ಮನುಷ್ಯ ಎಷ್ಟೇ ಶ್ರೀಮಂತವಾಗಿರಲಿ ಅಥವಾ ಅವನಲ್ಲಿ ಏನೇ ಐಶ್ವರ್ಯ ಇರಲಿ ಅವನು ಸತ್ತಾಗ ತನ್ನ ಜೊತೆಗೆ ಏನನ್ನೂ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿ ಸತ್ತಾಗ ತನ್ನ ಜೊತೆಯೇ ತೆಗೆದುಕೊಂಡು ಹೋಗುವ ಒಂದು ವಸ್ತು ಇದೆ. ಅದುವೇ ಹಚ್ಚೆ.

ಸಾಮಾನ್ಯವಾಗಿ ಪಾರ್ಧಿ ಹೆಣ್ಣು ಮಕ್ಕಳು ಅಷ್ಟೇ ಅಲ್ಲದೇ ಎಲ್ಲಾ ಸಮಾಜದ ಸ್ತ್ರೀಯರು ತಮ್ಮ ಎರಡೂ ಹುಬ್ಬಿನ ನಡುವೆ ನಾಮದಂತೆಯೇ ಅಥವಾ ಒಂದು ಚಿಕ್ಕ ಚುಕ್ಕೆಯಂತೆಯೇ ಒಂದು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಇವರ ಭಾಷೆಯಲ್ಲಿ ಹಚ್ಚೆಗೆ 'ಗೊಂಡನ್' ಎಂದು ಕರೆಯುತ್ತಾರೆ. ಕೆಲವರಿಗೆ ಹಣೆ, ಕೆಲವರಿಗೆ ಕಣ್ಣಿನ ಪಕ್ಕದಲ್ಲಿ, ಕೆಲವರಿಗೆ ಗಲ್ಲದ ಮೇಲೆ, ಇನ್ನೂ ಕೆಲವರಿಗೆ ಕೈ ಅಥವಾ ಕಾಲಿನ ಮೇಲೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಈ ಹಚ್ಚೆಗಳನ್ನು ಬಟ್ಟೆಯಿಂದ ಮರೆ ಮಾಚುವ ಸ್ಥಳಗಳಿಗಿಂತ ಬೇರೆಯವರಿಗೆ ಕಾಣುವಂಥಹ ಅಂಗಾಂಗಗಳಿಗೆ ಹೆಚ್ಚು ಹಾಕಿಸಿಕೊಳ್ಳುತ್ತಾರೆ.

೪. ಪಾರ್ಧಿಯರ ಒಳಾಡಳಿತ ರೀತಿ

ಪಾರ್ಧಿ ಬುಡಕಟ್ಟಿನ ಕುಟುಂಬಗಳು ಮಾತೃಪ್ರಧಾನವು ಆಗಿರದೇ ಪಿತೃಪ್ರಧಾನವೂ ಆಗಿರದೇ ಇವು ಇಬ್ಬರಿಗೂ ಸಮನಾದ ಅಧಿಕಾರವನ್ನು ಹೊಂದಿರುವ ಕುಟುಂಬಗಳಾಗಿವೆ. ಈ ಬುಡಕಟ್ಟಿನಲ್ಲಿ ಗಂಡಿಗೆ ಯಾವ ರೀತಿಯ ಸ್ಥಾನಮಾನವಿದೆಯೋ ಹೆಚ್ಚು ಕಡಿಮೆ ಹೆಣ್ಣಿಗೂ ಅದೇ ರೀತಿಯ ಸ್ಥಾನವನ್ನು ಕೊಟ್ಟಿದ್ದಾರೆ. ಇವರಲ್ಲಿ ಮನೆಯ ಹೆಚ್ಚು ಕಡಿಮೆ ಜವಾಬ್ದಾರಿಯೆಲ್ಲಾ ಆಕೆ ಮೇಲೆಯೇ ಇರುತ್ತದೆ. ಗಂಡಸು ಕೇವಲ ಬೇಟೆ ಮತ್ತು ವ್ಯಾಪಾರ ಮಾಡುವುದರಲ್ಲಷ್ಟೇ ಪ್ರಮುಖ ಪಾತ್ರವಹಿಸುತ್ತಾನೆ. ಇವರಲ್ಲಿ ತಾನು ದುಡಿದು ತಂದ ವರಮಾನವನ್ನೆಲ್ಲಾ ಹೆಂಡತಿಯ ಕೈಗೆ ಒಪ್ಪಿಸುತ್ತಾನೆ. ಮಕ್ಕಳು ಮತ್ತು ಸೊಸೆಯಂದಿರ ಮೇಲೆ ಮನೆಯ ಯಜಮಾನತಿಯೇ ಹೆಚ್ಚು ನಿಯಂತ್ರಣವನ್ನು ಹೊಂದಿರುತ್ತಾಳೆ.

ಚಿಕ್ಕಮಕ್ಕಳ ಪೋಷಣೆಯನ್ನು ಬಹುತೇಕವಾಗಿ ಮುದುಕರ ಜವಾಬ್ದಾರಿಯಾಗಿರುತ್ತದೆ. ಹುಟ್ಟಿದ ಮಗು ಸುಮಾರು ೧೦-೧೨ ವರ್ಷಗಳ ವರೆಗೆ ಅಜ್ಜ ಅಜ್ಜಿಯವರ ನಿಯಂತ್ರಣದಲ್ಲಿರುತ್ತವೆ. ಸ್ವತಂತ್ರವಾಗಿ ವ್ಯಾಪಾರ ಇಲ್ಲ ಗುಡಿಕೈಗಾರಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಗಂಡು ಆ ವಯಸ್ಸಿಗಾಗಲೆ ಮದುವೆಯ ವಿಷಯದಲ್ಲಿ ತನ್ನ ಕುಟುಂಬದವರ ನಿಯಂತ್ರಣದಲ್ಲಿರುತ್ತಾನೆ. ಅಥವಾ ಸ್ವಂತ ನಿರ್ಧಾರದಲ್ಲಿರುತ್ತಾನೆ ಈ ಅಂಶ ಹೆಣ್ಣಿಗೂ ಅನ್ವಯಿಸುತ್ತದೆ. ಪಾರ್ಧಿಯವರಲ್ಲಿ ಕೌಟುಂಬಿಕವಾಗಿ ಬಹುತೇಕ ಶಿಥಿಲತೆ ಇದೆಯೆಂದು ಹೊರನೋಟಕ್ಕೆ ಕಂಡುಬಂದರೂ ಇವರು ಹೆಚ್ಚು ನಿಯಂತ್ರಿತ ಸಂಕೀರ್ಣ ವ್ಯವಸ್ಥೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

ಹೆಚ್ಚು ಕಡಿಮೆ ಪ್ರತಿಯೊಂದು ಜೋಡಿಯೂ ಪ್ರತ್ಯೇಕವಾಗಿ ಬದುಕಲು ಇಷ್ಟಪಡುತ್ತವೆ. ಹೀಗಿದ್ದೂ ಅನೇಕ ದಂಪತಿಗಳು ಕೂಡಿಯೇ ಬಾಳುತ್ತಿರುವುದನ್ನು (Joint Family) ಕಂಡುಬರುತ್ತದೆ. ಹೀಗಿದ್ದೂ ಆ ದಂಪತಿಗಳ ಮಕ್ಕಳನ್ನು ಅಲೆಮಾರಿ ಜೀವನದಲ್ಲಿ ಖಾಯಂ ಆಗಿ ನೆಲೆನಿಂತ ಮನೆಗಳಲ್ಲೇ ಮುದುಕರ ಆಶ್ರಯದಲ್ಲಿ ಬೆಳೆಯುತ್ತವೆ.

ಪಾರ್ಧಿಯವರಲ್ಲಿ ಅನಾಥತೆ ಅಥವಾ ಏಕಾಂತತೆ ಅಥವಾ ಒಂಟಿತನ ಎಂಬುದು ತುಂಬಾ ಕಡಿಮೆ. ಸುಮಾರು ೬೦ ವರ್ಷದ ಮುದುಕ ಮುದುಕಿಗೆ ಸಹ ಅದೇ ವಯಸ್ಸಿನ ವ್ಯಕ್ತಿಗಳನ್ನು ಸಮಾಜದವರೆಲ್ಲಾ ಕೂಡಿ ಜೊತೆ ಮಾಡುತ್ತಾರೆ. ಇವರಲ್ಲಿ ಯಾರು ಹೆಚ್ಚು ಕಾಲ ಏಕಾಂಗಿಯಾಗಿರುವುದಿಲ್ಲ. ಒಬ್ಬ ಗಂಡನಿಗೆ ಹೆಂಡತಿ ಬಿಟ್ಟರೆ ಅಥವಾ ಸತ್ತು ಹೋದರೆ ವಾರ, ತಿಂಗಳಲ್ಲಿ ಇನ್ನೊಂದು ಹೆಣ್ಣನ್ನು ಜೊತೆ ಮಾಡಿಬಿಡುತ್ತಾರೆ. ಹೆಣ್ಣಿಗೂ ಇದೆ ಸ್ಥಿತಿಯೇ ಇರುತ್ತದೆ. ಈ ಸಮುದಾಯದ ಒಟ್ಟು ಧೋರಣೆಯ ಗುಂಪು ಜೀವನವಾಗಿ ಕಂಡರೂ ಕೌಟುಂಬಿಕ ವ್ಯವಸ್ಥೆಯಲ್ಲಿ ಅಷ್ಟೇ ಪ್ರತ್ಯೇಕತೆಯನ್ನು ನಾವು ಕಾಣಬಹುದಾಗಿದೆ.

ವಯಸ್ಸಾದ ಹಿರಿಯರು ಮಕ್ಕಳನ್ನು ಸಾಕುವುದು ತಮ್ಮ ಆದ್ಯ ಕರ್ತವ್ಯವೆಂದು ತಿಳಿದಿರುತ್ತಾರೆ. ತಮ್ಮ ಸ್ವಂತ ಮೊಮ್ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಾರೊ ಹಾಗೆಯೇ ಬೇರೆಯವರ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಇವರಲ್ಲಿ ಮಕ್ಕಳ ಸಂಖ್ಯೆ ಸ್ವಲ್ಪ ಹೆಚ್ಚು ಇರುವುದರಿಂದ ಕೆಲವರ ಮನೆಗಳು ನೋಡಲು ಒಂದು ರೀತಿಯಲ್ಲಿ ಬಾಲವಾಡಿ ತರಹ ಕಾಣುತ್ತಿರುತ್ತವೆ. ವ್ಯಾಪಾರದ ಕಾರಣಕ್ಕೆ ಅಲೆಮಾರಿಗಳಾದ ತಂದೆ ತಾಯಿಗಳ ಮಕ್ಕಳು ಅನಾಥವಾಗಿಯೇ ಇರುತ್ತವೆ. ಆದರೆ ಬೇರೆಯವರ ಪ್ರೀತಿ ವಿಶ್ವಾಸದಿಂದಾಗಿ ಈ ಅನಾಥತೆ ಹೆಚ್ಚು ಕಾಡುವುದಿಲ್ಲ ವೆಂಬುದನ್ನು ಗಮನಿಸಬೇಕಾಗಿದೆ.

ಇತರೇ ಜಾತಿಯ ಅನಾಥ ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆಯೇ ಸಾಕಿ ತಮ್ಮಲ್ಲೇ ಮದುವೆ ಮಾಡಿ ಕೊಂಡಿರುವ ಉದಾಹರಣೆಗಳು ಪಾರ್ಧಿಯವರಲ್ಲಿ ಇರುವುದರಿಂದ ಮೂಲತಃ ಇವರು ಕಾಡು ಜನರಾದರೂ ನಿಜವಾದ ಅರ್ಥದಲ್ಲಿ ನಾಡ ಜನರೇ ಸರಿ.

೫. ಪಾರ್ಧಿಯವರ ಇತರೆ ನಿರ್ಬಂಧಗಳು

೧. ಹಿಂದಿನ ಕಾಲದಲ್ಲಿ ಪಾರ್ಧಿಯರು ಮಾದಿಗರು ಮತ್ತು ಮುಸ್ಲಿಂರ ಮನೆಗಳಲ್ಲಿ ನೀರು ಕುಡಿಯುತ್ತಿದ್ದಿಲ್ಲ. ಹಾಗೇನಾದರೂ ಯಾರಾದರೂ ಕುಡಿದರೆ ಅಂಥವರಿಗೆ ೨೦ ರೂಪಾಯಿಗಳಿಂದ ೧೦೦ ರೂ.ಗಳವರೆಗೆ ದಂಡ ವಿಧಿಸುತ್ತಿದ್ದರು. ಯಾಕೆಂದರೆ, ನಾವು ಕ್ಷತ್ರಿಯವಂಶದವರಾಗಿದ್ದು ಅವರುಗಳು ಶೂದ್ರರಾಗಿದ್ದಾರೆ ಎಂದು ಇವರ ವಾದ.

ಆದರೆ ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಈ ನಿರ್ಬಂಧನೆಗಳಲ್ಲಿ ಸಡಿಲತೆ ಕಂಡುಬರುತ್ತಿದ್ದು. ಇಂದು ಎಲ್ಲರೂ ಎಲ್ಲರ ಮನೆಗಳಲ್ಲಿ ನೀರನ್ನು ಕುಡಿಯುತ್ತಿದ್ದಾರೆ.

೨. ಇಬ್ಬರು ಸೇರಿ ಬೇಟೆಗೆ ಹೋದಾಗ ಏನಾದರೂ ಮಾರುವ ಸಾಮಾನುಗಳಿದ್ದರೆ ಅವುಗಳಲ್ಲಿ ಪಾಲು ಮಾಡಿಕೊಳ್ಳುವ ಪದ್ಧತಿ ಇರುವುದಿಲ್ಲ. ಅದು ಅವರಿಬ್ಬರಿಗೂ ಪ್ರತ್ಯೇಕವಾಗಿ ಸೇರಿದ್ದಾಗಿರುತ್ತದೆ. ಆದರೆ ಮನೆಗೆ ತಂದು ತಿನ್ನುವ ಸಾಮಗ್ರಿಯಲ್ಲಿ ಮಾತ್ರ ಸ್ವಲ್ಪವೂ ವ್ಯತ್ಯಾಸ ಆಗುವಂತಿಲ್ಲ. ಬೇಟೆಗೆ ಹೋಗದೇ ಇದ್ದರೂ ಸರಿ ಅವರಿಗೆ ಸಿಗಬೇಕಾದ ಪಾಲನ್ನು ಕೊಡಬೇಕು. ಯಾರಿಗೆ ಪಾಲು ಸಿಕ್ಕಿರುವುದಿಲ್ಲವೊ ಅಂಥವರನ್ನು ಪಂಚಾಯಿತಿಯನ್ನು ಕೂರಿಸಿ ದಂಡವನ್ನು ಹಾಕಿಸುತ್ತಾನೆ.

೩. ಅವರ ಸಮಾಜದಲ್ಲಿ ಯಾರಾದರೂ ತಪ್ಪು ಮಾಡಿದರೆ, ಅಂಥಹವರನ್ನು ಪತ್ತೆ ಹಚ್ಚಲು ಅಥವಾ ಶಿಕ್ಷಿಸುವ ನಿಟ್ಟಿನಲ್ಲಿ ಕೊಡಲಿಯನ್ನು ಕೆಂಪಗೆ ಕಾಯಿಸಿ ಅಪರಾಧಿ ಎನ್ನುವವರ ಅಂಗೈಯ ಮೇಲೆ ಒಂದು ವಿಳೆದಲೆ ಇಟ್ಟು ಅದರ ಮೇಲೆ ಕೊಡಲಿ ಇಡುತ್ತಾರೆ. ಆ ವ್ಯಕ್ತಿ ತಪ್ಪು ಮಾಡದಿದ್ದರೆ ಕೈ ಸುಡುವುದಿಲ್ಲ. ಒಂದು ವೇಳೆ ಅವನು ತಪ್ಪು ಮಾಡಿದರೆ ಕೂಡಲೇ ಕೈ ಸುಟ್ಟು ಬಿಡುತ್ತದೆ. ಇದು ಅಲ್ಲದೆ. ಒಲೆಯ ಮೇಲೆ ಕಡಾಯಿ ಒಂದನ್ನು ಇಟ್ಟು ಅದರಲ್ಲಿ ಎಣ್ಣೆಯನ್ನು ಹಾಕಿ ಚೆನ್ನಾಗಿ ಕಾಯಿಸುತ್ತಾರೆ. ಇಲ್ಲಿಯೂ ಸಹ ಅವರ ತಪ್ಪನ್ನು ಪರೀಕ್ಷಿಸುವ ನಿಟ್ಟಿನಲ್ಲಿ ಆ ಎಣ್ಣೆಯಲ್ಲಿ ತಪ್ಪಿತಸ್ಥನನ್ನು ಕೈ ಹಾಕಲು ಹೇಳುತ್ತಾರೆ. ಆತ/ಆಕೆ ತಪ್ಪು ಮಾಡದಿದ್ದಲಿ ಅವರ ಕೈ ಸುಡುವುದಿಲ್ಲ. ಒಂದು ವೇಳೆ ತಪ್ಪು ಮಾಡಿದ್ದರೆ. ಅವರ ಕೈ ಕೂಡಲೇ ಸುಟ್ಟು ಹೋಗಿ ಬಿಡುತ್ತದೆ ಎಂದು ಇವರು ಬಲವಾಗಿ ನಂಬಿರುತ್ತಾರೆ.

೪. ಅಷ್ಟೇ ಏಕೆ ಯಾರಾದರೂ ಬೇರೆಯವರು ಆರೋಪಿಸಿದರೆ, ನ್ಯಾಯ ಮಾಡುವಾಗ ನೋಡಿದವರು ಕೂಡಾ ಅದನ್ನು ಸಾಬೀತುಪಡಿಸಬೇಕು. ಅಪರಾಧ ಮಾಡಿದವರೂ ಪರೀಕ್ಷೆಗೆ ಒಳಗಾಗಬೇಕು.

೫. ಬೇಟೆಗೆ ಹೋದಾಗ ಒಬ್ಬ ಬೇಟೆಯಾಡುತ್ತಿದ್ದಾಗ, ಇನ್ನೊಬ್ಬ ಅವನಿಗೆ ಅಡ್ಡಬಂದು ಒಬ್ಬನಿಗಾಗುತ್ತಿದ್ದ ಬೇಟೆಯನ್ನು ತಾನು ಬೇಟೆಯಾಡಿದರೆ, ಆ ಬೇಟೆ ಇಬ್ಬರಿಗೂ ದಕ್ಕದೆ ಕುಲಾಚಾರರ ಪಾಲಾಗುತ್ತದೆ. ಅಂಥಹ ಸಂದರ್ಭದಲ್ಲಿ ಕುಲಾಚಾರರು ಅದನ್ನು ಪಾಲುಮಾಡಿ ಬಂದ ಹಣದಿಂದ ಸಾರಾಯಿಯನ್ನು ಕುಡಿಯುತ್ತಾರೆ.

೬. ಇವರಲ್ಲಿ ಮಾಡಿದ ತಪ್ಪುಗಳನ್ನು ಕಂಡು ಹಿಡಿಯಲು ಇನ್ನೂ ಅನೇಕ ತಂತ್ರಗಳನ್ನು ಬಳಸುತ್ತಾರೆ. ಉದಾಹರಣೆಗೆ ಕುಲಪಂಚಾಯಿತಿ ಎದುರು ಪಾತ್ರೆಯೊಂದರಲ್ಲಿ ಸಗಣಿ ನೀರನ್ನು ಚೆನ್ನಾಗಿ ಕಾಯಿಸಿ ಅದರಲ್ಲಿ ಉಂಗುರ ಅಥವಾ ದುಡ್ಡು ಹಾಕಿ ಕುಲಚಾರರು ಅದನ್ನು ತೆಗೆಯುವಂತೆ ಅಪರಾಧಿ ಅಥವಾ ತಪ್ಪಿತಸ್ಥ ಎನಿಸಿಕೊಂಡವನಿಗೆ ಹೇಳುತ್ತಾರೆ. ಆಗ ಅದನ್ನು ತೆಗೆಯುವಾಗ ಅವರು ತಪ್ಪಿತಸ್ಥರಲ್ಲದಿದ್ದರೆ ಚರ್ಮ ಸುಡುವುದಿಲ್ಲ. ಒಂದು ವೇಳೆ ತಪ್ಪು ಮಾಡಿದ್ದರೆ ಅವರ ಚರ್ಮಸುಡುತ್ತದೆಂದು ನಂಬುತ್ತಾರೆ.

೭. ದಾಸ್ಸಿ ಜಂಗಮರು ಭಿಕ್ಷೆ ಅಥವಾ ವ್ಯಾಪಾರಕ್ಕೆಂದು ಹೊರಗೆ ಹೋದಾಗ ತಮ್ಮ ಗುಡ್ಲು ಅಥವಾ ಟೆಂಟನ್ನು ಬಿಟ್ಟು ರಾತ್ರಿ ಹೊತ್ತು ಬೇರೆಲ್ಲೂ ಉಳಿದುಕೊಳ್ಳುವಂತಿಲ್ಲ. ಹಾಗೇನಾದರೂ ಇದ್ದರೆ ಅದನ್ನು ಮೈದಿಗೆ ಉಂಡು ಬರುತ್ತಾರೆ. ಗಂಡಾಗಲಿ ಅಥವಾ ಹೆಣ್ಣಾಗಲಿ ಹೊರಗೆ ಉಳಿದುಕೊಂಡರೆಂದರೆ ಅವರು ಯಾರದೋ

ಜೊತೆಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾರೆಂದೇ ಭಾವಿಸುತ್ತಾರೆ. ಹೊರಗೆ ಕಟ್ಟು ನಿಟ್ಟಾಗಿಲ್ಲದಿದ್ದರೆ ಹೆದರಿಕೆಯಿಂದಾಗಿ ಅಂಥಹವರಿಗೆ ಕಾಯಿಲೆ ಬರುತ್ತದೆಯಂತೆ ಜೊತೆಗೆ ಇಡೀ ಸಮಾಜವೇ ಒತ್ತಾಯ ಮಾಡುತ್ತದೆ. ಆಗ ತಪ್ಪನ್ನು ಮಾಡದಿದ್ದರೂ ಒತ್ತಾಯದಿಂದ ಅದನ್ನು ಒಪ್ಪಿಕೊಳ್ಳಲಾಗುತ್ತದೆ. ಇಲ್ಲವೇ ಅದನ್ನು ಪ್ರಮಾಣ ಮಾಡಿಸುತ್ತಾರೆ. ಈ ಎಲ್ಲಾ ಪರೀಕ್ಷೆಗಳಿಗಾಗಿ ಅನೇಕ ರೀತಿಯ ಕ್ರೂರವಾದ ಪರೀಕ್ಷೆಗಳಿಗೆ ಒಳಪಡಿಸುತ್ತಾರೆ. ಅಂಥಹ ಕ್ರೂರ ಪರೀಕ್ಷೆಗಳನ್ನು ಈಗಾಗಲೇ ಮೇಲೆ ಎರಡು ಮೂರು ಉದಾಹರಣೆಗಳನ್ನು ನೀಡಲಾಗಿದೆ.

೮. ಉಟ್ಟು ಬಿಟ್ಟ ಲಂಗವನ್ನು ಗಂಡಸರಿಗೆ ತಾಗುವಂತೆ ಇಟ್ಟರೆ ಅಂಥಹ ಹೆಂಗಸರಿಗೆ ೧೦೧ ರೂ.ವರಗೆ ದಂಡ ಹಾಕುತ್ತಾರೆ. ಇನ್ನೂ ಋತುಮತಿಯಾಗದ ಹುಡುಗಿಯಾಗಿದ್ದರೆ ಅವಳಿಗೆ ಸ್ವಲ್ಪ ರಿಯಾಯ್ತಿ ಇದೆ. ಈ ರೀತಿ ಅವರು ಯಾಕೆ ಮಾಡುತ್ತಾರೆಂದರೆ ಮಡಿ ಮೈಲಿಗೆಗಳ ಬಗ್ಗೆ ಅವರು ತುಂಬಾ ಕಟ್ಟು ನಿಟ್ಟಿನವರಾಗಿದ್ದಾರೆ.

೯. ಪ್ರತಿ ತಿಂಗಳು ಋತುಸ್ರಾವವಾದಾಗ ಅಂಥಹ ಹೆಂಗಸು ಈಗಲೂ ಹೊರಗಡೆಯೇ ಕೂಡಬೇಕಾಗುತ್ತದೆ. ಅವಳು ಯಾವುದೇ ಕಾರಣಕ್ಕೂ ಅಡಿಗೆ ಮಾಡುವ ಹಾಗಿಲ್ಲ. ಹಾಗೆಯೇ ಇತರೇ ಕೆಲಸಕಾರ್ಯಗಳು ಮಾಡುವಂತಿಲ್ಲ. ಈ ಮೂರು ದಿನಗಳಲ್ಲಿ ಪುರುಷರೇ ಎಲ್ಲ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಇದು ಕಟ್ಟುನಿಟ್ಟಾಗಿದೆ.

೧೦. ಗಂಡ ಹೆಂಡತಿಯ ಜಗಳದಲ್ಲಿ ಗಂಡ ಹೆಂಡತಿಗೆ ಹೊಡೆದನೆಂದರೆ, ಹೆಂಡತಿಯಾದವಳು ಯಾವುದೇ ಸಂದರ್ಭದಲ್ಲಿ ಗಂಡನಿಗೆ ತಿರುಗಿ ಹೊಡೆಯುವಂತಿಲ್ಲ, ಒಂದು ವೇಳೆ ಆಕಸ್ಮಿಕ ಅವಳು ಹೊಡೆದರೆ ೧೦೧ ರೂ.ವರಗೆ ದಂಡವನ್ನು ಹಾಕುತ್ತಾರೆ. ದಂಡವನ್ನು ಕಟ್ಟಲು ಅಗದಿದ್ದರೆ ಅಥವಾ ನಿರಾಕರಿಸಿದರೆ ಅಂಥಹವಳನ್ನು ಜಾತಿಯಿಂದ ಹೊರಗೆ ಹಾಕಿ ಅವಳು ಆ ದಂಡವನ್ನು ಕಟ್ಟಿದ ನಂತರವೇ ಅವಳನ್ನು ಜಾತಿಯ ಒಳಗೆ ಸೇರಿಸಿಕೊಳ್ಳುತ್ತಾರೆ.

೧೧. ಒಬ್ಬ ಗಂಡಸು ಅಪ್ಪಿತಪ್ಪಿ ತನ್ನ ತಂಗಿ ಅಥವಾ ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಅತ್ತಿಗೆ ಇಂಥವರೊಂದಿಗೆ ಲೈಂಗಿಕ ಸಂಬಂಧವನ್ನಿಟ್ಟುಕೊಂಡರೆ ಅವರನ್ನು ತೀವ್ರವಾದ ದಂಡನೆಗೆ ಒಳಪಡಿಸುತ್ತಾರೆ. ಏಕೆಂದರೆ ಈ ತರಹದ ಸಂಬಂಧಗಳಿಗೆ ಇವರಲ್ಲಿ ತುಂಬಾ ಕಟ್ಟುನಿಟ್ಟಿನ ಕ್ರಮವಿದೆ. ಇಂಥವರಿಗೆ ವಿಧಿಸುವ ದಂಡದ ಹಣ ಕೂಡ ಬೇರೆ ಬೇರೆ ಯಾಗಿರುತ್ತದೆ.

ಅಕ್ಕ/ತಂಗಿಯವರೊಂದಿ(ಬೆಹನ್ ಚೋದ್)ಗೆ	ರೂ. ೬೦೦ ರಿಂದ ೮೦೦
ಅತ್ತಿಗೆಯೊಂದಿಗೆ	ರೂ. ೩೦೦ ರಿಂದ ೪೦೦
ಚಿಕ್ಕಮ್ಮ/ದೊಡ್ಡಮ್ಮಳೊಂದಿಗೆ	ರೂ. ೬೦೦ ರಿಂದ ೭೦೦
ಹೆಣ್ಣು ಕೊಟ್ಟ ಅತ್ತೆಯೊಂದಿಗೆ	ರೂ. ೧೦೦೦ ವರಗೆ

ಪುರುಷರಿಗೆ ದಂಡ ವಿಧಿಸಿದರೆ, ಈ ಅವ್ಯವಹಾರದಲ್ಲಿ ಸಿಕ್ಕಿಬಿದ್ದ ಹೆಂಗಸಿಗೆ ಹತ್ತು ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಹಬ್ಬ ಬಂದಾಗ ದೇವರ ಮುಂದೆ ಕೂರಿಸಿ ತಲೆಗೆ ಸಗಣಿಯನ್ನು ಬಳಿದು

ಶುದ್ಧಿಮಾಡಿ, ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಇಡೀ ಕುಲದವರೆಲ್ಲಾ ಸೇರಿ ಕುಡಿದು ತಿಂದು ಆ ಹೆಣ್ಣನ್ನು ಕುಲಕ್ಕೆ ಸೇರಿಸಿಕೊಳ್ಳುತ್ತಾರೆ.

೧೨. ಇವರಲ್ಲಿ ಚಪ್ಪಲಿಯಿಂದ ಹೊಡೆದವನಿಗೂ ಹಾಗೂ ಹೊಡೆಸಿಕೊಂಡವನಿಗೆ ಇಬ್ಬರಿಗೂ ದಂಡವನ್ನು ಹಾಕುತ್ತಾರೆ. ತಪ್ಪಿಲ್ಲದೇ ಹೊಡೆಸಿಕೊಂಡವನಿಗೆ ರೂ. ೧೦೦ಗಳ ದಂಡ ವಿಧಿಸಿದರೆ, ಚಪ್ಪಲಿಯಿಂದ ಹೊಡೆದವನಿಗೆ ರೂ. ೫, ೧೦ ರೂ. ದಂಡವನ್ನು ವಿಧಿಸುತ್ತಾರೆ. ಇಂಥಹ ಸಂದರ್ಭದಲ್ಲಿ ಕೇವಲ ದಂಡವನ್ನು ಹಾಕಿ ಕೈ ತೊಳೆದುಕೊಳ್ಳುತ್ತಾರೆಯೇ ಹೊರತು ಕುಡಿ ತಿನ್ನುವ ಯಾವ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುವುದಿಲ್ಲ.

೧೩. ಹೆಂಗಸು ಗಂಡಸಿಗೆ ಕಾಲಿನಿಂದ ಒದ್ದರೆ, ಅಂತಹ ಹೆಣ್ಣಿಗೆ ೫೦೦.೦೦ ರೂ.ಗಳವರೆಗೆ ದಂಡ ಹಾಕುತ್ತಾರೆ. ಆ ಹಣದಿಂದ ಕುಲಸ್ಥರೆಲ್ಲಾ ಸೇರಿ ಕುಡಿದು, ತಿಂದು ಕುಪ್ಪಳಿಸುತ್ತಾರೆ. ಆಗ ಅವರ ತಪ್ಪು ಮುಗಿಯುತ್ತದೆ. ಹೆಂಗಸಿನ ಕಾಲಿನಿಂದ ಒದೆಸಿಕೊಂಡವನಿಗೆ ಅವರ ಭಾಷೆಯಲ್ಲಿ "ಲಾತ್‌ನಾ ಮಾರ್‌ಕಾ ಘುತೆಲೊ" ಎಂದು ಕರೆಯುತ್ತಾರೆ.

೧೪. ಹೆಂಡತಿಯ ಬಾಣಂತಿತನ ಮುಗಿಯುವ ಮೊದಲೆ ಸುಮಾರು ಮೂರು ತಿಂಗಳಿನ ಒಳಗಾಗಿ ಆಕೆಯೊಂದಿಗೆ ಸಂಭೋಗಕ್ಕೆ ತೊಡಗಿದ ಗಂಡಸನ್ನು "ಮೊಹೊವ್ ವಾಳೊವ್" ಎಂದು ಕರೆಯುತ್ತಾರೆ. ಇದರ ಅರ್ಥ ಹೆಂಡತಿಯ "ರಕ್ತದೊಳಗೆ ಕಲಸಿಬಿಟ್ಟೆ" ಎಂದು. ಇದು ಇವರಲ್ಲಿ ಬಹುದೊಡ್ಡ ತಪ್ಪಾಗಿ ಪರಿಗಣಿತವಾಗುತ್ತದೆ.

ಗುಜರಾತಿಯೊಳಗು ಕೋಣವನ್ನು ಕಡಿದು ಚಾಮುಂಡಿ ಹಬ್ಬವನ್ನು ಮಾಡಬೇಕಾಗುತ್ತದೆ. ಪವಾರೊಗಳು ಚಾಮುಂಡಿ ಹಬ್ಬವನ್ನು ಮಾಡುವುದಿಲ್ಲವಾದರೂ, ಕೋಣವನ್ನು ಕಡಿದು ಊಟಕ್ಕೆ ಹಾಕಬೇಕಾಗುತ್ತದೆ. ಮೇವಾಡೊಗಳು ಎಲ್ಲಮ್ಮನಿಗೆ ಹೋತವನ್ನು ಕಡಿಯಬೇಕಾಗುತ್ತದೆ. ಕಾಳಿವಾಳೋಗಳು ಹೋತವನ್ನು ಕೊಯ್ಯಬೇಕಾಗುತ್ತದೆ.

೧೫. ಅಂದಿನ ದಿನಗಳಲ್ಲಿ ಮುಟ್ಟಾದ ಹೆಂಗಸನ್ನು ಮೂರು ದಿವಸಗಳ ಕಾಲ ಮುಟ್ಟುವಂತಿಲ್ಲ. ಹಾಗೇನಾದರೂ ಮುಟ್ಟಿದರೆ ಅಂತಹ ಗಂಡಸಿಗೆ ೨೦೦.೦೦ ರೂಗಳವರಗೆ ದಂಡ ಹಾಕುತ್ತಾರೆ. ಅಷ್ಟೇ ಏಕೆ ಅಂತಹ ಪುರುಷರನ್ನು ಜಾತಿಯಿಂದಲೇ ಒಂದು ತಿಂಗಳು ಕಾಲ ಹೊರಗೆ ಇಡುತ್ತಿದ್ದರು. ಈ ಅಪರಾಧ ಮಾಡಿದ ಗಂಡಸಿಗೆ ಅವರ ಭಾಷೆಯಲ್ಲಿ "ಬಾರ್‌ಲುಯ್ ಬಾಯಿಕೋನ ಚೂದು ಲೊಹೆವ್ ವಾಳೊವ್" ಎಂದು ಕರೆಯುತ್ತಾರೆ. ಆದರೆ ಇಂದು ಈ ನಿಯಮಗಳು ತಮ್ಮ ಸಡಿಲತೆಯನ್ನು ಕಳೆದುಕೊಂಡಿವೆ.

೧೬. ಬೇರೆಯವರ ಹೆಂಡತಿಯನ್ನು ಅಪಹರಿಸಿದವನನ್ನು 'ಚೊಟ್ಟಿಚೋದು ಉಪರೀನ ಉಡಾಯ್‌ಲಿಗೊ' ಎಂದು ಕರೆಯುತ್ತಾರೆ. ಅಪಹರಿಸಿದ ಹೆಣ್ಣಿನೊಂದಿಗೆ ವಾಪಸ್ಸು ಬಂದರೆ, ಅಂಥವರಿಗೆ ಕುಲಸ್ಥರೆಲ್ಲಾ ಸೇರಿ ಅವರನ್ನು ಹಿಡಿದು (ಇಬ್ಬರನ್ನು) ಬೆತ್ತಲು ಮಾಡಿ ಕಂಬಕ್ಕೆ ಕಟ್ಟಿ, ಚರ್ಮದ ಬಾರುಕೋಲಿನಿಂದ ಘಟಗೀರರ ಕೈಲಿ ಗಂಡಿಗೆ ಹನ್ನೆರಡು (೧೨) ಹಾಗೂ ಹೆಣ್ಣಿಗೆ ಇಪ್ಪತ್ತೈದು (೨೫) ಏಟುಗಳನ್ನು ಹೊಡೆಸುತ್ತಿದ್ದರು. ನಂತರ ಆ ಗಂಡಿಗೆ ಇನ್ನೇ ಹೆಣ್ಣು ಬೇಕೆ? ಅಥವಾ ಆಕೆಯ ಗಂಡನಿಗೆ ಆಕೆಯನ್ನು ಇಟ್ಟುಕೊ? ಎಂದು ಕೇಳಿ ಆಕೆಯನ್ನು ನೀವೆ ಇಟ್ಟುಕೊಳ್ಳುದಾದ್ರೆ ಆಕೆಯ ಗಂಡನಿಗೆ ಬೇರೆ ಲಗ್ನ ಮಾಡಿಸಿಕೊಡು ಎಂದು ಕುಲಸ್ಥರೆಲ್ಲಾ

ಸೇರಿ ಕೇಳುತ್ತಾರೆ. ಈ ಸಂದರ್ಭದಲ್ಲಿ ದಂಡವನ್ನು ಕಟ್ಟಿಸಿಕೊಂಡು ಆ ಹೆಣ್ಣನ್ನು ಕುಲದಲ್ಲಿ ಸೇರಿಸಿಕೊಂಡು ಮೊದಲ ಗಂಡನಿಗೆ ಬಿಟ್ಟು ಕೊಡಬಹುದು. ಅಥವಾ ಅಪರಾಧಿ ಗಂಡಿನೊಂದಿಗೆ. ಕೂಡಿಸಿ ಮೊದಲ ಗಂಡನಿಗೆ ಬೇರೆ ಮದುವೆಯನ್ನು ಮಾಡಬಹುದಾಗಿದೆ. ಅಪರಾಧಿಗಳಿಬ್ಬರೂ ಒಂದೇ ಕುಲದವರಾಗಿದ್ದರೆ. ಕುಲಸ್ಥರೆಲ್ಲರಿಗೂ ಅವರ ತಪ್ಪಿನ ದಂಡಕ್ಕಾಗಿ ಕುಡಿತ ಮತ್ತು ಊಟವನ್ನು ಮಾಡಿಸಿದ ಮೇಲೆ ಹೆಣ್ಣಿನ ಕೈಯಿಂದ ಗಂಡಿನ ತಲೆಗೆ ಎಣ್ಣೆ ಹಾಕಿಸುತ್ತಾರೆ. ಇದನ್ನು ಹಾಕಲು ಕಾರಣ ಇನ್ನೂ ಮುಂದೆ ಈ ಹೆಣ್ಣನ್ನು ಕೆಟ್ಟ ದೃಷ್ಟಿಯಿಂದ ನೋಡದಿರಲೆಂದು ನಂತರ ಆ ಗಂಡನಿಗೆ ೫೦೦ ರಿಂದ ೬೦೦ ರೂ.ವರೆಗೆ ದಂಡವನ್ನು ವಿಧಿಸುತ್ತಾರೆ. ಈ ಗಂಡನಿಗೆ "ಜಿನಿರಾಂಡ್ ತಿನ್ ಮೆಹಲಿದಿದೊ" (ತನ್ನ ಹೆಂಡತಿಯನ್ನು ಬೇರೆಯವನಿಗೆ ಕೊಟ್ಟವನು) ಎಂದೂ ಮತ್ತು 'ತೆಲ್ ಗಲಾಯೊ' ಎಣ್ಣೆ ಹಚ್ಚಿಸಿ ಕೊಂಡವನು ಎಂದೆಲ್ಲಾ ಕರೆಯುತ್ತಾರೆ. ಹೀಗೆ ಕರೆಯಿಸಿಕೊಳ್ಳುವುದು ಕೆಟ್ಟ ಅವಮಾನವಾಗುತ್ತದೆ.

೧೭. ಲಗ್ನಕ್ಕಿಂತ ಮೊದಲೇ ಒಂದು ಹೆಣ್ಣು ಅನೈತಿಕವಾಗಿದ್ದಾಳೆಂಬ ಅನುಮಾನವೇನಾದರೂ ಕುಲಸ್ಥರಿಗೆ ಬಂದರೆ, ಆ ಹೆಣ್ಣನ್ನು ಪರೀಕ್ಷಿಸುವ ವಿಧಾನವಂತೂ ಬಹಳ ನಾಚಿಕೆಗೇಡಿನದಾಗಿದೆ. ಅದೇನೆಂದರೆ, ಅಂಥಹ ಹುಡುಗಿಯನ್ನು ಪರೀಕ್ಷಿಸಲು ಹೆಂಗಸರನ್ನು ಬಿಟ್ಟು ಅಪರಾಧಿ ಎನಿಸಿಕೊಂಡ ಹೆಣ್ಣಿನ ಯೋನಿಯೊಳಗೆ ಕೋಳಿ ಮೊಟ್ಟೆಯನ್ನು ತುರುಕುವ ಮೂಲಕ ಪರೀಕ್ಷೆ ಮಾಡುತ್ತಾರೆ. ಮೊಟ್ಟೆ ಯೋನಿ ಒಳಗೆ ಹೋಗದಿದ್ದರೆ ಆ ಹೆಣ್ಣು ಯಾರೊಂದಿಗೂ ಸಂಭೋಗ ಮಾಡಿಸಿಕೊಂಡಿಲ್ಲವೆಂತಲೂ, ಮೊಟ್ಟೆ ಒಳಗೆ ಹೋಗಿಬಿಟ್ಟರೆ ಅವಳು ಬೇರೆಯವರೊಂದಿಗೆ ಸಂಭೋಗ ಮಾಡಿಸಿಕೊಂಡಿದ್ದಾಳೆಂದು ತಿಳಿದು ಆಕೆಗೆ ದೇವಿನಾ ಟೀಕ್‌ಬಂದ್ ಅಂದರೆ ದೇವಿಯ ಆಶೀರ್ವಾದದ ಬೊಟ್ಟು ಇಲ್ಲವೆಂದು ನಿರ್ಧರಿಸುವುದರಿಂದ ಯಾರೂ ಆಕೆಯನ್ನು ಮದುವೆ ಮಾಡಿಕೊಳ್ಳದೆಯೆ ಹಾಗೇ ಇರಬೇಕಾಗುತ್ತದೆ.

ಆದರೆ ಆಕೆ 'ಸೀರುಡಿಕೆ' ಮಾಡಿಕೊಳ್ಳುವ ಅವಕಾಶವಿದೆ. ಇದಕ್ಕೆ ದಂಡವಾಗಿ ಮದುವೆಯಲ್ಲಿ ಕುಲಕ್ಕೆ ಊಟ ಹಾಕಿಸಿ ಆ ಹೆಣ್ಣು ತನ್ನ ಕುಲದವರಿಗೆಲ್ಲರಿಗೂ ವೀಳೆದೆಲೆ ಕೊಡಬೇಕಾಗುತ್ತದೆ. ಇದೇ ಅವಳಿಗೆ ವಿಧಿಸುವ ದಂಡ. ಹೀಗೆ ವಿಳೆ ಕೊಟ್ಟವಳನ್ನು 'ಕವಾರೆ ಚೋದಿ' ಅಂದರೆ (ಲಗ್ನಕ್ಕಿಂತ ಮೊದಲೆ ನಡತೆಗೆಟ್ಟವಳು) ಎಂದು ಕರೆಯುತ್ತಾರೆ.

೧೮. ತಮ್ಮ ಅಲೆಮಾರಿ ಬದುಕಿನಲ್ಲಿ ತಮ್ಮ ಊರಿನಿಂದ ಬೇರೆ ಊರಿಗೆ ಹೋದಾಗ ಅವಳು ಬೇರೆಯವರೊಂದಿಗೆ ಅನೈತಿಕ ಸಂಬಂಧ ಹೊಂದಿದವಳಿಗೆ 'ಬಹರ್ ಪಹಿಲೆ ಚೋದ ಪ್‌ಗಯ್' ಎಂದು ಕರೆಯುತ್ತಾರೆ. ಮತ್ತು ಅಂತಹ ಹೆಣ್ಣು ಮಕ್ಕಳಿಗೆ ೧೦೧ ರೂ. ದಂಡ ಹಾಗೂ ತಪ್ಪಿನ ಕುಡಿತ, ಹಾಗೂ ಅದರ ದಂಡದ ರೂಪದಲ್ಲಿ ಊಟವನ್ನು ಕುಲಸ್ಥರೆಲ್ಲಾ ಪಡೆಯುತ್ತಾರೆ.

ಯಾರಾದರೂ ಇವರ ಜಾತಿ ಹೆಸರಿಡಿದು ಬೈದರೆ ಅಂಥವರಿಗೆ ೧೫ ರೂ. ದಂಡ ಹಾಕುತ್ತಾರೆ.

ಈ ಮೇಲೆ ತಿಳಿಸಿದ ಎಲ್ಲಾ ನಿಬಂಧನೆಗಳು ಈಗಲೂ ಹೆಚ್ಚು ಕಡಿಮೆ ಚಾಲ್ತಿಯಲ್ಲಿವೆ. ಕೆಲವು ನಿಬಂಧನೆಗಳಲ್ಲಿ ಸ್ವಲ್ಪ ಸಡಿಲಿಕೆಯೂ ಕಂಡು ಬರುತ್ತಿದೆ. ಕೆಲವು ಮಾತ್ರ ಪೂರ್ತಿಯಾಗಿ ಕೈಬಿಟ್ಟು ಹೋಗಿವೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಈ ಸಾಮಾಜಿಕ ಬದಲಾವಣೆಗಳ ನಡುವೆ ಈ ಬದಲಾವಣೆಗಳು ಸಹಜವಾದುವು. ದಿನದಿಂದ ದಿನಕ್ಕೆ ಸರಳವಾಗುತ್ತಿರುವ ಪಾರ್ಧಿಯರ ಜೀವನದಂತೆ ಅವರ ನ್ಯಾಯ ನಿಯಮಗಳೂ ಸರಳವಾಗುತ್ತಿವೆಯೆಂದೇ ಹೇಳಬಹುದು.

೬. ಹೆಸರುಗಳಲ್ಲಿಯ ವೈಶಿಷ್ಟ್ಯತೆಗಳು

ಈಗಾಗಲೇ ಹಿಂದೆ ತಿಳಿಸಿರುವ ಹಾಗೆ ಈ ಬುಡಕಟ್ಟಿನಲ್ಲಿ ಒಟ್ಟು ಆರು ಗೋತ್ರಗಳಿದ್ದು, ಪ್ರತಿಯೊಂದು ಗೋತ್ರದವರ ಅಡ್ಡ ಹೆಸರುಗಳು ಮನೆತನದ ಹಾಗೂ ಅವರ ಕುಲದೇವತೆಗಳು ಬೇರೆ ಬೇರೆಯಾಗಿವೆ ಎಂದು ಹೇಳಲಾಗಿದೆ. ಉದಾಹರಣೆಗೆ ಪಿಂಪಳಾಜ ಎಂಬುವರು ಎಲ್ಲರಿಗಿಂತ ಸರ್ವಶ್ರೇಷ್ಠ ಎಂದು ಭಾವಿಸಲಾಗಿದ್ದು, ಇವರ ಮನೆದೇವರು ಪಿಂಪಳಾಜದೇವಿ ಆಗಿದೆ. ಇವರ ಮನೆತನದ ಹೆಸರು ಕಾಳೆ ಎಂದಿದೆ.

ಸಾವಂಡಿಯಾ ಎಂಬುವರು ಎರಡನೆಯ ಸ್ಥಾನವನ್ನು ಪಡೆದಿದ್ದು ಇವರು ಸರಕ್‌ಸವಾಂಡಿಯ ಎಂಬ ದೇವಿಯನ್ನು ಪೂಜಿಸುತ್ತಿದ್ದು ಇವರ ಮನೆತನದ ಹೆಸರು ಚೌಹ್ಹಾಣ ಎಂದಿರುತ್ತದೆ.

ಕೋರಬಿಯಾ ಮತ್ತು ಇಕೋತಿಯಾ ಪಂಗಡದವರು ಮೂರನೇ ಸ್ಥಾನದಲ್ಲಿ ಇದ್ದು ಇವರು ಕೋರಬಿಯಾ ಮತ್ತು ಇಕೋತಿಯಾ ದೇವಿಯನ್ನು ಪೂಜಿಸುವರಾಗಿದ್ದು ಇವರಿಬ್ಬರ ಮನೆತನದ ಹೆಸರು ಪವಾರ್ ಎಂದಿದೆ.

ಕೊನೆಯದಾಗಿ ಹರಕತಿಯಾ ಎಂಬ ಪಂಗಡದವರು ಕೊನೆಯ ಹಂತದಲ್ಲಿ ಬರುತ್ತಿದ್ದು. ಇವರು ಹರಕತಿಯಾ ಅಥವಾ ಬಾನು ದೇವಿಯನ್ನು ತಮ್ಮ ಮನೆದೇವರೆಂದು ಪೂಜಿಸುತ್ತಿದ್ದು ಇವರ ಮನೆತನದ ಹೆಸರು ಬಾನು ಅಥವಾ ಡೋಕರೆ ಬಾನು ಎಂದಿರುತ್ತದೆ.

ಕರ್ನಾಟಕದ ರಾಜ್ಯದಲ್ಲಿಯ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಕಡಿಮೆ ಮಾಮೂಲಿ ಹೆಸರಿನಂತಿದ್ದರೆ, ಮೈಸೂರು, ಬೆಂಗಳೂರು, ಶಿವಮೊಗ್ಗ ಈ ಕಡೆಯಲ್ಲಿಯ ಪಾರ್ಧಿಯರ ಹೆಸರುಗಳು ಬಹಳಷ್ಟು ವಿಚಿತ್ರವಾಗಿವೆ. ಈ ಭಾಗಗಳಲ್ಲಿ ವಾಸಿಸುತ್ತಿರುವ ಪಾರ್ಧಿಯರನ್ನು ಹಕ್ಕಿಪಿಕ್ಕಿಯರೆಂದು ಕರೆಯುತ್ತಿದ್ದು, ಈ ಹಕ್ಕಿಪಿಕ್ಕಿಯರಲ್ಲಿ ಒಂದು ಮಗು ಎಲ್ಲಿ ಹುಟ್ಟುತ್ತದೆಯೋ ಅಲ್ಲಿಯ ಪ್ರದೇಶದ, ಆ ಊರಿನ ಇಲ್ಲವೆ ಆ ಸಂದರ್ಭಗಳ ಬಗ್ಗೆಯೇ ಹೆಸರಿಟ್ಟಿರುವುದು ಕಂಡು ಬಂತು. ಈ ಭಾಗದಲ್ಲಿ ವಾಸಿಸುತ್ತಿರುವ ಒಬ್ಬೊಬ್ಬ ಪಾರ್ಧಿಯನ ಹೆಸರಿನ ಹಿಂದೆಯೂ ಒಂದೊಂದು ಕತೆಯು ಇರುವುದನ್ನು ಗಮನಿಸಬೇಕಾಗಿದೆ.

ಇನ್ನೂ ಒಂದು ವಿಶೇಷವಾದ ಅಂಶವೆಂದರೆ, ಪಾರ್ಧಿಯರಲ್ಲಿ ಒಬ್ಬ ಸತ್ತರೆ ಆ ಕುಟುಂಬದ ಹಿರಿಯ ಅವನ ಹೆಸರನ್ನು ಬದುಕಿರುವ ವ್ಯಕ್ತಿಗೆ ಇಡುತ್ತಾರೆ. ಹೀಗೆ ಸತ್ತ ವ್ಯಕ್ತಿ ದೆವ್ವವಾಗಿ ಬಂದು ಇದ್ದವರನ್ನು ಕಾಡಿಸದಿರಲೆಂದು. ಒಂದು ಮಗುವಿಗೆ ಹೆಸರು ಇಡುವ ರೀತಿ ಸಹ ತುಂಬಾ ಸರಳವಾಗಿದೆ ಎನ್ನಬಹುದಾಗಿದೆ. ಮಗು ಜನಿಸಿದಾಗ ಗಂಡ ಹೆಂಡತಿ ಇಬ್ಬರೂ ಸೇರಿ ಆ ಮಗುವಿಗೆ ಏನೆಂದು ಹೆಸರು ಇಡಬೇಕೆಂದು ನಿರ್ಧರಿಸುತ್ತಾರೆ. ಅವರಿಬ್ಬರೂ ಸೇರಿ ನಿರ್ಧರಿಸಿದ ಹೆಸರೇ ಅಂತಿಮವಾದದು. ಈ ನಾಮಕರಣ ಕಾರ್ಯಕ್ಕಾಗಿ ಯಾವುದೇ ದೊಡ್ಡ ಸಮಾರಂಭ ಇಡದೆ ಸರಳವಾಗಿ ತಮ್ಮ ಮನೆಯಲ್ಲಿಯೇ ಮಾಡಿಕೊಳ್ಳುತ್ತಾರೆ.

ಪಾರ್ಧಿ(ಹಕ್ಕಿಪಿಕ್ಕಿ)ಯರ ವಿಚಿತ್ರವಾದ ಹೆಸರುಗಳ ಕೆಲವು ಉದಾಹರಣೆಗಳು

೧. ಆಯಿಮರಿ ಈ ಬಾಲಕ ಹುಟ್ಟಿದಾಗ ಬಾಲಕನ ತಂದೆ ಒಂದು ಜಿಂಕೆಮರಿ ಬೇಟೆಮಾಡಿಕೊಂಡು ಬಂದಿದ್ದನಂತೆ. ಈ ಬಾಲಕ ಬೆಂಗಳೂರು ಬಳಿಯ ಗೊರೂರು ಬಳಿ ಹುಟ್ಟಿದ್ದು ಆ ಸಮಯದಲ್ಲಿ ಜಿಂಕೆ ಮರಿಯೊಂದಿಗೆ ಬಂದ ಅವನಪ್ಪ, ಹೇಮರಿ. ಹೇಮರಿ ಎಂದು ಮಗುವನ್ನು ನೋಡಿ ಆಡಿಸಿದನಂತೆ ಮುಂದೆ ಅದೇ 'ಹೇಮರಿ', 'ಆಯಿಮರಿ' ಎಂದಾಯಿತಂತೆ.

೨. **ತಿಗಳುಬ್ಬಿ :** ಈಕೆ ಆಯಿಮರಿ ಎಂಬ ವ್ಯಕ್ತಿಯ ಹೆಂಡತಿ. ಈಕೆ ಹಿರೇಸಾವೆಯಲ್ಲಿ ಹುಟ್ಟಿದ್ದು, ಈಕೆ ಹುಟ್ಟಿದಾಗ ತೀರಾ ಬರಗಾಲವಿದ್ದು ಜನರೆಲ್ಲಾ ಬರೆ ಲಂಗೋಟಿ ಕಟ್ಟಿಕೊಂಡೇ ಅಡ್ಡಾಡುತ್ತಿದ್ದರಂತೆ. ಅಂಥಹ ಕಾಲದಲ್ಲಿ ಇವಳು ಹುಟ್ಟಿದ ಕಾರಣ ಇವಳಿಗೆ ತಿಗಳುಬ್ಬಿ ಎಂದು ಹೆಸರಿಟ್ಟರಂತೆ. ಇವರ ಭಾಷೆಯಲ್ಲಿ ತಿಗಳು ಎಂದರೆ ತುಂಡುಬಟ್ಟೆಯಂತೆ. ತಿಗಳುರ್‌ಬಿ ಎಂದರೆ ಬಟ್ಟೆ ಇಲ್ಲದ ಸಮಯದಲ್ಲಿ ಹುಟ್ಟಿದವಳು ಎಂದರ್ಥ.

೩. **ಗಣಪತ್ :** ಆಯಿಮರಿ ಮತ್ತು ತಿಗಳುಬ್ಬಿಯರ ಮಗನೆ ಈ ಗಣಪತ್. ಈ ಗಣಪತ್ ಗೌರಿಹಬ್ಬದಲ್ಲಿ ಹುಟ್ಟಿದವ ಆದ್ದರಿಂದ ಇವನಿಗೆ ಈ ಹೆಸರು ಬಂದಿದೆ.

೪. **ಚೆಲುವಿ :** ಕನ್ನಡದ ಮಯೂರ ಚಿತ್ರದಲ್ಲಿ ಡಾ. ರಾಜಕುಮಾರ್ ಅಲ್ಲಿಯ ಹಿರೋಯಿನಿಗೆ ಚೆಲುವಿ ಎಂದು ಕರೆದಂಥಹ ಸಂದರ್ಭದಲ್ಲಿ ಇವಳು ಹುಟ್ಟಿದವಳಂತೆ ಹೀಗಾಗಿ ಇವಳ ಹೆಸರು ಚೆಲುವಿ ಎಂದೇ ಖಾಯಂ ಆಯಿತು.

೫. **ಜಂಪರ್‌ಬಾಯಿ :** ಈ ಅಜ್ಜಿಗೆ ಜಂಪರ್ ಅಜ್ಜಿ ಎಂತಲೂ ಕರೆಯುತ್ತಾರೆ. ಈ ಅಜ್ಜಿಗೆ ಈ ಹೆಸರು ಬರಲು ಕಾರಣವೇನೆಂದರೆ, ಈ ಮುದುಕಿಗೆ ಈಗ ಸುಮಾರು ೧೦೦ ವರ್ಷ ವಯಸ್ಸಾಗಿದ್ದು ಇವಳು ಹುಟ್ಟಿದಂತಹ ಸಂದರ್ಭದಲ್ಲಿ ಪುರುಷರು ಮತ್ತು ಸ್ತ್ರೀಯರು ಅಂಗಿಯ ಒಳಗೆ ಬನಿಯನ್ ಹಾಕುತ್ತಿದ್ದರಂತೆ ಆ ಬನಿಯನ್‌ಗಳು ಒಳ್ಳೆ ಜಂಪರನಂತೆ ದೊಡ್ಡವಾಗಿರುತ್ತಿದ್ದವಂತೆ.

೬. **ಒಬ್ಬ ಎಮ್.ಜಿ.ಆರ್. :** ಈ ಎಮ್.ಜಿ.ಆರ್. ಎಂಬ ವ್ಯಕ್ತಿಯು ತಮಿಳುನಾಡಿನ ಮುಖ್ಯ ಮಂತ್ರಿಯಾಗಿದ್ದ ದಿವಂಗತ ಎಮ್.ಜಿ.ರಾಮಚಂದ್ರ ಅವರು ತೊಡುತ್ತಿದ್ದಂಥಹ ಟೊಪ್ಪಿಗೆಯನ್ನು ಒಂದು ಸಲ ತೊಟ್ಟಿದ್ದನಂತೆ. ಅದನ್ನು ನೋಡಿ ಎಲ್ಲರೂ ಏ ನೀನು ಎಮ್.ಜಿ.ಆರ್. ತರಹ ಕಾಣುತ್ತಿ ಎನ್ನುವುದರಿಂದ ಅವನ ಹೆಸರು ಶಾಶ್ವತವಾಗಿ ಎಮ್.ಜಿ.ಆರ್. ಎಂದೇ ಆಯಿತು.

೭. **ಇನ್ನೊಬ್ಬ ಸರ್ಕಲ್ :** 'ಸರ್ಕಲ್' (Circle) ಎನ್ನುವ ಈ ವ್ಯಕ್ತಿ ತಮ್ಮ ಊರಿನ ಸರ್ಕಲ್(ವೃತ್ತ)ದ ಬಳಿ ಹುಟ್ಟಿದ್ದನಂತೆ ಅವನ ಜನನಕ್ಕೆ ಕಾರಣವಾದ ಆ ಸರ್ಕಲ್‌ನ್ನೇ ಇವನ ಹೆಸರಾಗಿ ಮಾರ್ಪಟ್ಟಿತ್ತು.

೮. **ಲಾಯರ್ :** ಈ ವ್ಯಕ್ತಿಗೆ ಈ ಹೆಸರು ಬರಲು ಕಾರಣವೇನೆಂದರೆ ಇವನು ಹುಟ್ಟಿದ ಸಮಯದಲ್ಲಿ ಇವರ ಹಟ್ಟಿಯ ಕಡೆಯಿಂದ ಒಬ್ಬ ಲಾಯರ್ ನಡೆದು ಹೋದನಂತೆ ನಡೆದು ಹೋದ ಆ ಲಾಯರ್‌ನನ್ನೇ ನೋಡಿ ತನ್ನ ಮಗನಿಗೆ ಲಾಯರ್ (Lawyer) ಎಂದೇ ಹೆಸರಿಟ್ಟಳಂತೆ ಆ ಮಹಾತಾಯಿ.

೯. **ಡಿವಿಜನ್** (Division) : ಎಂಬ ಹೆಸರಿನ ವ್ಯಕ್ತಿಯು ಬೆಂಗಳೂರಿನ ಬನ್ನೇರುಘಟ್ಟದ ಬಳಿಯ ಭೂತಾನ್ ಹಳ್ಳಿ ಎಂಬ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ವಾಸಿಸುತ್ತಿದ್ದು ಈ ವೃದ್ಧ ವ್ಯಕ್ತಿಯು ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿ ಅಡಿಗೆಯವನಾಗಿದ್ದು ನಿವೃತ್ತನಾಗಿರುತ್ತಾನೆ. ಈ ವ್ಯಕ್ತಿಯು ಹುಟ್ಟಿದ ಸಂದರ್ಭದಲ್ಲಿ ಒಬ್ಬ 'ಡಿವಿಜನಲ್ ಕಮೀಷನರ್' (Division Commissioner) ಇವರ ಪ್ರದೇಶಕ್ಕೆ ಬಂದಿದ್ದನಂತೆ ಆ ಡಿ.ಸಿ.ಯ ದರ್ಪಗಿರ್ಪ ನೋಡಿ ಆ ಮಹಾತಾಯಿ ತನ್ನ ಮಗನಿಗೆ 'ಡಿವಿಜನ್' ಎಂದೇ ನಾಮಕರಣ ಮಾಡಿದಳಂತೆ.

೧೦. ಎಕ್ಸ್‌ಪ್ರೆಸ್ (Express) : ಎಂಬ ವ್ಯಕ್ತಿಯ ತಾಯಿಯು ಕೆ.ಕೆ. ಎಕ್ಸ್‌ಪ್ರೆಸ್ ಟ್ರೈನ್(Karnataka Express Train)ನಲ್ಲಿ ಪ್ರಯಾಣ ಮಾಡುತ್ತಿರುವಾಗಲೇ ಈ ಮಹಾನುಭಾವ ಜನಿಸಿದನಂತೆ. ಆ ಕಾರಣಕ್ಕಾಗಿ ಈ ಮಹಾನುಭಾವನ ಹೆಸರು 'ಎಕ್ಸ್‌ಪ್ರೆಸ್' ಎಂತಲೆ ಬಿತ್ತಂತೆ.

ಈ ರೀತಿಯಾದಂತಹ ವಿಚಿತ್ರ ಹೆಸರುಗಳನ್ನಿಟ್ಟು ಕೊಳ್ಳುವದರ ಜೊತೆಗೆ ಇನ್ನು ಎಷ್ಟೊ ಜನರು ಸಿನಿಮಾ ನಟ, ನಟಿಯರ ಹೆಸರುಗಳನ್ನಿಟ್ಟುಕೊಂಡಿರುವುದೂ ಕಂಡುಬಂತು. ಹೀಗೆ ಬಗೆಬಗೆಯ ಹೆಸರುಗಳನ್ನು ಇಟ್ಟುಕೊಂಡಿರುವ ಈ ಜನ ಎಷ್ಟೊಂದು ಸೂಕ್ಷ್ಮಮತಿಗಳು ಮತ್ತು ಆಧುನಿಕರಣಕ್ಕೆ ಒಳಗಾಗಿದ್ದಾರೆಂಬುದು ಅವರ ಹೆಸರುಗಳಿಂದಲೇ ಸ್ಪಷ್ಟವಾಗಿರುತ್ತದೆ. ಈ ಬುಡಕಟ್ಟು ಹೆಸರುಗಳೇ ಒಂದು ಭಾಷಾಶಾಸ್ತ್ರೀಯ ಅಥವಾ ಸಾಂಸ್ಕೃತಿಕ ಅಧ್ಯಯನದ ವಸ್ತುವಾಗುವಷ್ಟು ವೈಶಿಷ್ಟ್ಯಪೂರ್ಣವಾಗಿದೆ ಎಂದರೆ ತಪ್ಪಾಗಲಾರದು.

೭. ಪಾರ್ಧಿ ಬುಡಕಟ್ಟಿನವರ ಕುಲ ಕಸುಬುಗಳು

ಈ ಸಮುದಾಯದವರು ತಮ್ಮ ಹೊಟ್ಟೆಪಾಡಿಗಾಗಿ ಕೇವಲ ಯಾವುದೋ ಒಂದು ಕಸಬನ್ನು ಮಾಡಿಕೊಂಡಿರದೆ ನಾನಾ ಕಸುಬುಗಳನ್ನು ಮಾಡುವವರಾಗಿದ್ದಾರೆ ಅವರು ಯಾವ ಸಂದರ್ಭ ಮತ್ತು ಯಾವ ಪ್ರದೇಶಗಳಲ್ಲಿದ್ದಾರೆಂಬುದು ಅವರ ಮುಖ್ಯವಾದ ಕಸುಬು ಯಾವುದು ಅವರ ಉಪಕಸುಬು ಯಾವುದೆಂದು ಹೇಳಲು ಸಾಧ್ಯವಾಗುವುದಿಲ್ಲ. ಕೇವಲ ಕರ್ನಾಟಕದಂತಹ ಒಂದು ಚಿಕ್ಕ ರಾಜ್ಯದಲ್ಲಿಯೇ ಇರುವ ೨೭ ಜಿಲ್ಲೆಗಳಲ್ಲಿ ೨೭ ತರಹದ ಕಸುಬುಗಳನ್ನು ಮಾಡುತ್ತಾರೆ.

ಜೀವನ ಸಾಗಿಸಲು ಉಳ್ಳದವರು ಉಳ್ಳವರ ಬಳಿ ದಿನವೊಂದಕ್ಕೆ ನಿಗದಿ ಪಡಿಸಿದ ಸಂಭಾವನೆಗಾಗಿ ಕೆಲಸಮಾಡುವುದೇ ಕೂಲಿ. ನಿರಂತರವಾಗಿ ಅಲೆಮಾರಿ ಜೀವನ ನಡಿಸುತ್ತಿದ್ದ ಪಾರ್ಧಿ ಸಮುದಾಯವು ಇತ್ತೀಚಿನ ದಿನಗಳಲ್ಲಿ ಹಲವಾರು ಗ್ರಾಮಗಳಲ್ಲಿ ನೆಲೆಸಿದ್ದಾರೆ. ತಾವು ನೆಲೆಸಿರುವ ಗ್ರಾಮಗಳಲ್ಲಿ ಬಹುತೇಕ ಸಂಖ್ಯೆಯಲ್ಲಿ ಕೃಷಿ ಕೂಲಿಗಳಾಗಿ ಉಳ್ಳವರ ಹೊಲ, ಗದ್ದೆಗಳಲ್ಲಿ ಕೃಷಿಕೂಲಿಗಳಾಗಿ ದುಡಿದು ತಮ್ಮ ಉದರವನ್ನು ತುಂಬಿ ಕೊಳ್ಳುವುದರೊಂದಿಗೆ ಕೂಲಿ ಜೀವನ ನಡೆಸುತ್ತಿರುವುದು ಸಂಶೋಧನಾ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಹಾಗೆಯೇ ಉಪಕಸುಬುಗಳಾಗಿ ಗೌಂಡಿಕೆಲಸ, ಕುರಿಕಾಯುವುದು, ಕುದುರೆಗಾಡಿ ನಡೆಸುವುದು, ಚಾಕುಚೂರಿಗಳನ್ನು ಸಾಣೆ ಹಿಡಿಯುವುದು, ಭೀಕ್ಷೆಬೇಡುವುದು ಹೀಗೆಯೇ ಹತ್ತು ಹಲವಾರು ಕಸುಬಗಳಿಂದ ಕೂಡಿದಾಗಿ ಇವರ ದಿನ ನಿತ್ಯದ ಜೀವನ ಸಾಗುವಂತಾದ್ದಾಗಿದೆ. ಮುಂದಿನ ಅಂಕಿ ಅಂಶಗಳ ಕೋಷ್ಟಕವನ್ನು ನೋಡಿದಾಗ ಉತ್ತರ ಕರ್ನಾಟಕ ಜಿಲ್ಲೆವಾರು ಹಾಗೂ ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆವಾರು ಕ್ಷೇತ್ರಕಾರ್ಯದ ವಿವರಣೆ ನೀಡಿದೆ.

ಪಾರ್ಧಿ ಬುಡಕಟ್ಟಿನ ರಾಜ್ಯವಾರು ಕುಲಕಸುಬುಗಳ ಕ್ಷೇತ್ರಕಾರ್ಯದಿಂದ ಶೇ. ೫೯ರಷ್ಟು ಬಹುತೇಕ ಕೃಷಿಕೂಲಿಗಳಾಗಿಯೂ ಮತ್ತು ಶೇ. ೧೭ರಷ್ಟು ಇತರೆ ಕಸುಬುಗಳಾದ (ಗೌಂಡಿಕೆಲಸ, ಕುರಿಕಾಯುವುದು, ಕುದುರೆಗಾಡಿ ನಡೆಸುವುದು, ಚಾಕುಚೂರಿಗಳನ್ನು ಸಾಣೆ ಹಿಡಿಯುವುದು, ಭೀಕ್ಷೆಬೇಡುವುದು) ಮಾಡುವವರಾಗಿದ್ದು, ಉಳಿದಂತೆ ಸಣ್ಣ ವ್ಯಾಪಾರಸ್ಥರಾಗಿ ಶೇ. ೭ರಷ್ಟು ಹಾಗೂ ಶೇ. ೪ರಷ್ಟು, ಗೊಂಬೆ, ಗುಡಿಕೈಗಾರಿಕೆ ವಸ್ತುಗಳನ್ನು ಮಾರಾಟ ಮಾಡುವವರಾಗಿದ್ದು, ಶೇ. ೨ರಂತೆ ಸರ್ಕಾರಿ ಸೇವೆಯಲ್ಲಿಯೂ, ಮೀನುಗಾರಿಕೆಯಲ್ಲಿ ತೊಡಗಿಕೊಂಡಿರುವವರಾಗಿದ್ದಾರೆ. (ಕೋಷ್ಟಕ-೧. ನೋಡಿ)

ಕೋಷ್ಟಕ ೧. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಕಸುಬುಗಳ ಅಂಕಿ ಅಂಶಗಳ ಪಟ್ಟಿ

		ಕೃಷಿಕರು			ಕೃಷಿಕೂಲಿಗಳು			ಮೀನುಗಾರರು			ಗೊಂಬೆ ಮಾರಾಟಗಾರರು			ಸರಕಾರಿ ನೌಕರಸ್ಥರು			ಇತರ ಕಸುಬುಗಳು			ಸಣ್ಣ ವ್ಯಾಪಾರಸ್ಥರು		
ಜಿಲ್ಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಾಗಲಕೋಟೆ	೩೬೨	೮೬	೩೧	೧೧೬	೨೯೨	೧೭೨	೪೬೪	೧೯	೪	೨೩	೧		೧	೧೪	೪	೧೮	೭೦	೪೧	೧೧೧	೩೫	೫	೪೦
ಬಳ್ಳಾರಿ	೨೦೨	೨	೨	೪	೨೦೨	೨೦೮	೪೧೦										೧೨	೫	೧೭	೧		೧
ಬೀದರ್	೬೮				೪೪	೨೫	೬೯	೧೪	೧೦	೨೪				೩		೩	೧೨	೩	೧೫	೬	೩	೯
ಬಿಜಾಪುರ	೨೧೦	೬೧	೩೦	೯೧	೭೫	೩೭	೧೧೨	೧೨	೪	೧೬				೯	೨	೧೧	೯೨	೧೯	೧೧೧	೩೮	೧೩	೫೧
ಧಾರವಾಡ	೩೭೪	೨೧	೬	೨೭	೩೦೭	೨೭೦	೫೭೭	೫	೧	೬				೨೯	೧	೩೦	೧೬೩	೪೩	೨೦೬	೫೦	೧೫	೬೫
ಗದಗ	೧೪೦	೧೭	೮	೨೫	೧೩೮	೧೨೬	೨೬೪							೧		೧		೧	೧	೩೭	೧೯	೫೬
ಗುಲ್ಬರ್ಗಾ	೧೨೫	೮	೩	೧೧	೭೪	೬೨	೧೩೬				೬೭	೬೩	೧೩೦	೨೨		೨೨	೧೮	೫	೨೩	೨೨	೩	೨೫
ಕೊಪ್ಪಳ	೨೫				೨೫	೩೩	೫೮	೬		೬							೨		೨	೧		೧
ಮೈಸೂರು	೮೫	೨೧	೮	೨೯	೨		೨				೫	೩	೮	೧		೧	೭೮	೩೯	೧೧೭	೧		೧
ಒಟ್ಟು	೧೫೯೧	೨೧೬	೮೮	೩೦೩	೧೧೫೯	೯೩೩	೨೦೯೨	೫೬	೧೯	೭೫	೭೩	೬೬	೧೩೯	೭೯	೭	೮೬	೪೪೭	೧೫೬	೬೦೩	೧೯೧	೫೮	೨೪೯

ಬೀದರ್ ಜಿಲ್ಲೆಯಲ್ಲಿಯ ಬಸವಕಲ್ಯಾಣದ ೨೪ ಕುಟುಂಬದ ಪಾರ್ಧಿಯರು ಮೀನುಗಾರಿಕೆಯನ್ನು ಮಾಡುವದರ ಜೊತೆಗೆ ೨೦ ಕುಟುಂಬದವರು ಹೈದ್ರಾಬಾದಿಗೆ ಹೋಗಿ ಹಣ್ಣುಗಳ ವ್ಯಾಪಾರವನ್ನು ಮಾಡುತ್ತಿದ್ದಾರೆ.

ಬೀದರ್ ಜಿಲ್ಲೆ ಮತ್ತು ಬೀದರ್ ತಾಲೂಕಿನ ಚಿಟ್ಟಾ ಗ್ರಾಮದ ಪಾರ್ಧಿ ಜನರು ಸಣ್ಣ ಪುಟ್ಟ ವ್ಯಾಪಾರ ಮತ್ತು ಒಬ್ಬ ಮೋಟರ್ ಸೈಕಲ್‌ಗಳ ರಿಪೇರಿಯ ಗ್ಯಾರೇಜನ್ನು ಇಟ್ಟು ಕೊಂಡಿದ್ದಾನೆ. ಅದೇ ಪಕ್ಕದ ಜಿಲ್ಲೆಯಾದ ಗುಲ್ಬರ್ಗಾದಲ್ಲಿ ೧೩೦ ಜನ ಪಾರ್ಧಿಯರು ಮಕ್ಕಳ ಆಟಿಕೆ ಸಾಮಾನುಗಳ ಜೊತೆಗೆ ಹೇರ್‌ಪಿನ್, ಸೂಜಿ, ದಬ್ಬಣ, ಕರಿಮಣಿ ಹಾಗೂ ಇನ್ನು ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಮಾರಾಟ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಅದೇ ಜಿಲ್ಲೆಯ ಅಳಂದ ತಾಲೂಕಿನ ಶಾಕಾಪೂರ್ ಮತ್ತು ದರ್ಗಾಶಿರೂರು ಗ್ರಾಮಗಳಲ್ಲಿ ಭಟ್ಟಿ ಸಾರಾಯಿ ತಯಾರು ಮಾಡಿ ಮಾರಾಟ ಮಾಡುತ್ತಿರುವುದೂ ಕಂಡುಬಂತು. ಹಾಗೆಯೇ ಮುಂದೆ ಬಳ್ಳಾರಿ ಜಿಲ್ಲೆಗೆ ಬಂದರೆ, ಬಳ್ಳಾರಿ ನಗರದಲ್ಲಿಯ ಹರಿಶ್ಚಂದ್ರ ಕಾಲೋನಿಯಲ್ಲಿಯ ಪಾರ್ಧಿ(ಹಕ್ಕಿಪಿಕ್ಕಿ)ಯರು ಇರುವ ೨೫ ಮನೆಗಳಲ್ಲಿ ೧೦-೧೫ ಜನರು, ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ C ಮತ್ತು D ದರ್ಜೆಯ ನೌಕರರಾಗಿ ಸೇವೆ ಸಲ್ಲಿಸುತ್ತಿರುವುದು ಕಂಡುಬಂತು. ರಾಜ್ಯದ ಇತರೇ ಭಾಗದ ಪಾರ್ಧಿಯನ್ನು ಹೋಲಿಸಿ ನೋಡಿದರೆ, ಇಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸರ್ಕಾರಿ ನೌಕರರಿರುವುದು ಹೆಮ್ಮೆಯ ವಿಷಯವೇ ಸರಿ.

ಇದೇ ಜಿಲ್ಲೆಯ (ಬಳ್ಳಾರಿ) ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದಲ್ಲಿ ಕೆಲವರು ಭಟ್ಟಿ ಸಾರಾಯಿ ಮಾಡುವ ಕೆಲಸದಲ್ಲಿ ನಿರತರಾದರೆ, ಇನ್ನು ಕೆಲವರು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ.

ಮೈಸೂರು ಜಿಲ್ಲೆಯಲ್ಲಿ ಈ ಸಮುದಾಯದವರು ಕೇವಲ ಎರಡು ತಾಲೂಕಿನಲ್ಲಿ ಮಾತ್ರ ಕಂಡು ಬರುತ್ತಿದ್ದು ಹುಣಸೂರು ತಾಲೂಕಿನ ಪಕ್ಷಿರಾಜಪುರ ಕಾಲೋನಿ ಒಂದು ಮತ್ತು ಪಕ್ಷಿರಾಜಪುರ ಕಾಲೋನಿ ೨ರಲ್ಲಿ ಮಾತ್ರ ಇದ್ದು, ಅದೇ ಪಕ್ಕದ ಹೆಗ್ಗಡ (H.D.Kote) ದೇವನ ಕೋಟೆ ತಾಲೂಕಿನ ಟೈಗರ್ ಬ್ಲಾಕ್ ಎಂಬಲ್ಲಿ ಇವರು ಇದ್ದು ಈ ಎರಡೂ ಊರುಗಳಲ್ಲಿಯ ಪಾರ್ಧಿ(ಹಕ್ಕಿಪಿಕ್ಕಿ)ಯರು ಪ್ಲಾಸ್ಟಿಕ್ ಹೂವಿನ ಸರಗಳನ್ನು ಹಾಗೂ ಮಾಲೆಗಳನ್ನು ತಯಾರು ಮಾಡುವುದರ ಜೊತೆಗೆ ಅನೇಕ ಪ್ರಾಣಿ ಪಕ್ಷಿಗಳ ಚರ್ಮದಿಂದ ಸುಂದರವಾದ ಕೃತಕ ಆಕರ್ಷಕ ಪ್ರಾಣಿ ಸಾಮಾನುಗಳನ್ನು ತಯಾರಿಸುತ್ತಾರೆ. ಇವುಗಳಿಗೆ ಅವರು Artificial Handicraft ಎಂದು ಕರೆಯುತ್ತಾರೆ. ಈ ರೀತಿಯಾಗಿ ತಯಾರಿಸಿದ ಹ್ಯಾಂಡಿಕ್ರಾಪ್ಟ್ ವಸ್ತುಗಳನ್ನು ಅವರು ಕರ್ನಾಟಕದಲ್ಲಿ ಮಾರಾಟ ಮಾಡದೇ ಬೇರೆ ಬೇರೆ ರಾಜ್ಯ ಹಾಗೂ ಬೇರೆ ಬೇರೆ ದೇಶಗಳಲ್ಲಿಯೇ ಹೆಚ್ಚಾಗಿ ಮಾರಾಟ ಮಾಡುತ್ತಾರೆ. ಕರ್ನಾಟಕಕ್ಕಿಂತ ಬೇರೆ ರಾಜ್ಯ ಮತ್ತು ಬೇರೆ ದೇಶಗಳಲ್ಲಿ ಏಕೆ ಹೆಚ್ಚು ಮಾರಾಟ ಮಾಡುತ್ತಾರೆಂದರೆ, ಈ ಹ್ಯಾಂಡಿಕ್ರಾಪ್ಟ್ ವಸ್ತುಗಳು ಅಸಲಿಯಾಗಿರದೇ ನಕಲಿಯಾಗಿರುತ್ತವೆ. ಈ ಹ್ಯಾಂಡಿಕ್ರಾಪ್ಟ್ ಕೆಲಸದಲ್ಲಿ ಅವರುಗಳು ಎಮ್ಮೆ, ಕುರಿ ಹಾಗೂ ಇತರೆ ಪ್ರಾಣಿಗಳ ಚರ್ಮಕ್ಕೆ ಬಣ್ಣ ಹಾಕಿ ಆ ಚರ್ಮವನ್ನು ಹುಲಿ, ಸಿಂಹದ ಚರ್ಮದಂತೆಯೇ ಮಾಡುತ್ತಾರೆ. ಹಾಗೆಯೇ ಎಮ್ಮೆಯ ಅಥವಾ ಇತರೆ ಊರು ಪ್ರಾಣಿಗಳ ಕಾಲಿನ ಗೊರಸನ್ನು ಕೆರೆದು, ಅದರಿಂದ ಹುಲಿಯ ಕೈ ಕಾಲು ಉಗುರಿನಂತೆಯೇ ಅಥವಾ ಸಿಂಹದ ಕಾಲಿನ ಉಗುರಿನಂತೆಯೇ ತಯಾರಿಸಿ, ಇವುಗಳನ್ನೆಲ್ಲಾ ದೂರದ ಸಿಂಗಾಪೂರ್, ಹಾಂಗ್‌ಕಾಂಗ್, ಥೈಲ್ಯಾಂಡಂಗಳಂಥಹ ದೊಡ್ಡ ದೊಡ್ಡ ರಾಷ್ಟ್ರಗಳಲ್ಲಿ ಸಾಕಷ್ಟು ಲಾಭಕ್ಕಾಗಿ ಮಾರಿಕೊಂಡು ಜೀವನ ನಡೆಸುತ್ತಿದ್ದಾರೆ. ತಮ್ಮ ವ್ಯಾಪಾರಕ್ಕೆ ಬೇಕಾಗುವಷ್ಟು

ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಕಲಿತು ತಮ್ಮ ಗಿರಾಕಿಗಳಿಗೆ ಚೆನ್ನಾಗಿ ಟೋಪಿ ಹಾಕಿ, ಮರಳಿ ಗೂಡಿಗೆ ಸೇರಿಕೊಳ್ಳುತ್ತಾರೆ. ಜೊತೆಗೆ ದಿ|| ದೇವರಾಜ್ ಅರಸರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅವರಿಂದ ಒಳ್ಳೆಯ ಮನೆಗಳನ್ನು ಹೊಲ ಗದ್ದೆಗಳನ್ನು ಹಾಗೂ ಇನ್ನಿತರ ಸರ್ಕಾರಿ ಸೌಲಭ್ಯಗಳನ್ನು ಚೆನ್ನಾಗಿ ಪಡೆದುಕೊಂಡು ಮೈಸೂರು ಜಿಲ್ಲೆಯಲ್ಲಿಯ ಪಾರ್ಧಿಯರು ಜೀವಿಸುತ್ತಿರುವುದು ಕಂಡುಬಂತು.

ಬೀದರ್ ಜಿಲ್ಲೆಯ ಬೀದರ್ ನಗರದ ಮಂಗಲಪೇಟೆ ಎಂಬಲ್ಲಿಯ ಪ್ರೇಮ್‌ಸಿಂಗ್ ಎಂಬುವರು ಭಾರತೀಯ ಸೇನೆಯಲ್ಲಿ ಚಾರ್ಜ್‌ಮನ್ ಆಗಿ ಸೇವೆಸಲ್ಲಿಸಿ ನಿವೃತ್ತರಾಗಿರುವುದು ಹಾಗೂ ಇದೇ ಮಂಗಲ ಪೇಟೆಯಲ್ಲಿಯ ಕುಮಾರಿ ಯಶೋಧಬಾಯಿ ಎನ್ನುವರು ಮಹಿಳಾ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (W.P.S.I) ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವುದು. ಹಾಗೂ ಇವರ ಅಕ್ಕನ ಮಗಳೇ ಆದ ಶ್ರೀಮತಿ ಕೆ.ಪಿ. ರೇಖಾ ಎನ್ನುವಳು ಬಿ.ಎಸ್‌ಸಿ., ಎಂ.ಬಿ.ಬಿ.ಎಸ್. ಪದವಿಗಳನ್ನು ಪಡೆದುಕೊಂಡು ಪ್ರಸ್ತುತ ಗುಲ್ಬರ್ಗ ಜಿಲ್ಲೆಯಲ್ಲಿ ಮಹಿಳಾ ವೈಧ್ಯಾಧಿಕಾರಿಯಾಗ ಸೇವೆ ಸಲ್ಲಿಸುತ್ತಿರುವುದು, ಹಾಗೂ ಶ್ರೀ ಈಶ್ವರ್‌ಲಾಲ್ ಕಾಲಿಕಾರ್ ಎಂಬುವರು ಬೆಂಗಳೂರಿನಲ್ಲಿಯ ಐ.ಟಿ.ಐ.ದಲ್ಲಿ ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಟಿವ್ ಆಗಿ ಕೆಲಸ ಸಲ್ಲಿಸುತ್ತಿರುವುದೆಲ್ಲಾ ಹೆಮ್ಮೆಯ ವಿಷಯವೇ ಸರಿ.

ಈಗಾಗಲೇ ಹೇಳಿರುವಂತೆ ಪಾರ್ಧಿಯರು ಬಹು ಉದ್ಯೋಗಿಗಳಾಗಿದ್ದಾರೆ ಎಂಬುದಕ್ಕೆ ಮತ್ತಷ್ಟು ಉದಾಹರಣೆಗಳೆಂದರೆ, ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಅಸ್ತಾಪನಹಳ್ಳಿ ಹಾಗೂ ಗೋಪನಾಳ್ ಎಂಬಲ್ಲಿಯ ಪಾರ್ಧಿಯರು (ಹಕ್ಕಿಪಿಕ್ಕಿಯರು), ಹಾಸನ ಜಿಲ್ಲೆಯ ಬೇಲೂರು ತಾಲೂಕಿನ (ಅಂಗಡಿ ಹಳ್ಳಿ) ಗ್ರಾಮದಲ್ಲಿಯ ಹಕ್ಕಿಪಿಕ್ಕಿಯರು (ಪಾರ್ಧಿಯರು) ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಶಿಕಾರಿಪುರ ಗ್ರಾಮದಲ್ಲಿಯ ಅನೇಕ ಪಾರ್ಧಿಯರು(ಹಕ್ಕಿಪಿಕ್ಕಿ) ಗಿಡಮೂಲಿಕೆ ಔಷಧಿಗಳನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಿರುವುದು ಕಂಡು ಬಂತು. ಅಷ್ಟೇ ಏಕೆ ಹುಬ್ಬಳಿಯಲ್ಲಿ ನೆಲೆಸಿರುವ ಶಂಕರ್ ಪ್ರತಾಪನ್ ಕಾಳೇ ಎಂಬುವರು ಪೋಲಿಸ್ ಇಲಾಖೆಯಲ್ಲಿ DY.S.P. ಆಗಿರುವ, ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಸುಶಿಲಪ್ಪ (ಅಸ್ತಾಪ್ಪನ ಹಳ್ಳಿಯ) ಇವರ ಶ್ರೀಮತಿ. ಕುಮುದಾ ಎಂಬುವರು ಇಂಜನಿಯರಿಂಗ್ ಪದವಿಯನ್ನು ಪಡೆದುಕೊಂಡಿರುವುದು ಇವರಲ್ಲಿಯೂ ಅತಿರಥ ಮಹಾರಥರಿದ್ದಾರೆ ಎಂಬುದಕ್ಕೆ ನಿದರ್ಶನಗಳಾಗಿವೆ.ಇವೆಲ್ಲವುಗಳ ಜೊತೆಗೆ ಈ ಸಮುದಾಯದವರು ಈಗಲೂ ಅಲೆಮಾರಿ ಹಾಗೂ ಅರೆ ಅಲೆಮಾರಿಗಳಾಗಿರುವುದರಿಂದ ಇವರ ಕುಲ ಕಸಬುಗಳಲ್ಲಿ ಅನೇಕ ಬಗೆಯ ವ್ಯತ್ಯಾಸಗಳನ್ನು ಕಂಡುಬರುತ್ತವೆ. ಇವರು ಅಲೆಮಾರಿಗಳಾಗಿದ್ದಾಗ ವ್ಯಾಪಾರ ಮುಖ್ಯವಾಗಿ ಬೇಟೆ ಮತ್ತು ಇತರೆ ಗುಡಿ ಕೈಗಾರಿಕೆಗಳನ್ನು ತಮ್ಮ ಉಪಕಸುಬುಗಳನ್ನಾಗಿಸಿಕೊಂಡಿದ್ದರು. ಇಲ್ಲವೇ ಬರೀ ಬೇಟೆಯೇ ಇವರ ಉದ್ಯೋಗವಾಗಿರುತ್ತಿತ್ತು.

ಇತ್ತೀಚೆಗೆ ಸರ್ಕಾರದ ಪುನರ್‌ವಸತಿ ಯೋಜನೆಯಡಿಯಲ್ಲಿ ಖಾಯಂ ಆಗಿ ವಾಸಿಸುವ ಕಡೆ ಕೆಲವು ಕುಟುಂಬಗಳನ್ನು ಹೊರತುಪಡಿಸಿ ಸಂಶೋಧಕನ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ [illegible] ಜನ ಪುರುಷರು ಹಾಗೂ [illegible] ಜನ ಮಹಿಳೆಯರು ಒಟ್ಟು [illegible] ಜನರು ಮಾತ್ರ ಸರ್ಕಾರದಿಂದ ತಮಗೆ ಸಿಕ್ಕ ಹೊಲಗಳನ್ನು ಉಳುಮೆ ಮಾಡಿಕೊಂಡು ಜೀವಿಸುತ್ತಿದ್ದಾರೆ. ಅದನ್ನು ಬಿಟ್ಟರೆ, ರಾಜ್ಯದಲ್ಲಿ [illegible] ಪುರುಷರು ಹಾಗೂ [illegible]

ಮಹಿಳೆಯರು ಒಟ್ಟು ೨೦೯೨ ಜನರು ಬೇರೆಯವರ ಹೊಲಗಳಲ್ಲಿ ಕೃಷಿ ಕೂಲಿಕಾರರಾಗಿ ಕೆಲಸಮಾಡುತ್ತಿದ್ದಾರೆ. ಈ ಕೆಳಗಿನ ಕೋಷ್ಟಕ-೨ ರಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಭೂರಹಿತ ಕುಟುಂಬಗಳು ಕಂಡುಬರುತ್ತವೆ. ಮತ್ತು ಹೆಚ್ಚಿನ ಒಣಭೂಮಿಗಳನ್ನು ಹೊಂದಿರುವ ಕುಟುಂಬಗಳು ನಮ್ಮ ಕ್ಷೇತ್ರಕಾರ್ಯದ ಪಟ್ಟಿಯಿಂದ ಕಂಡುಬರುವಂಥದ್ದಾಗಿದೆ.

ಕೋಷ್ಟಕ ೨. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಭೂಹಿಡುವಳಿ ಅಂಕಿ ಅಂಶಗಳ ಪಟ್ಟಿ

		ಭೂಮಿ (ಎಕರೆಗಳಲ್ಲಿ)			ಭೂ ಶ್ರೇಣಿಗಳು					
ಜಿಲ್ಲೆಗಳು	ಕುಟುಂಬ	ಒಣಭೂಮಿ	ನೀರಾವರಿ	ಒಟ್ಟು	*ಎ	*ಬಿ	*ಸಿ	*ಡಿ	*ಇ	*ಒ
ಬಾಗಲಕೋಟೆ	೩೬೨	571.5	81	652.5	1	6	17	33	31	274
ಬಳ್ಳಾರಿ	೨೦೨	0		0						202
ಬೀದರ್	೬೮	7		7					1	67
ಬಿಜಾಪುರ	೨೧೦	277.5	38.5	316	2	6	1	13	21	166
ಧಾರವಾಡ	೩೭೪	185.5	45	230.5	5		11	13	14	331
ಗದಗ	೧೪೦	12.5	10	22.5					9	131
ಗುಲ್ಬರ್ಗಾ	೧೨೫	51.5		51.5			1	6	14	98
ಕೊಪ್ಪಳ	೨೫									25
ಮೈಸೂರು	೮೫	92		92			1	9	26	49
	೧೫೯೧	**1197.5**	**174.5**	**1372**	**8**	**12**	**32**	**74**	**115**	**1343**

ವಿವರಣೆ

*ಎ = ದೊಡ್ಡ ಭೂ ಹಿಡುವಳಿದಾರರು ೨೫.೧ ಎಕರೆಯಿಂದ ಮೇಲ್ಪಟ್ಟ ಕುಟುಂಬಗಳು

*ಬಿ = ಮಾಧ್ಯಮ ಭೂ ಹಿಡುವಳಿದಾರರು ೧೦.೦೧ ಎಕರೆಯಿಂದ ೨೫ ಎಕರೆಯ ಭೂ ಹಿಡುವಳಿಯ ಕುಟುಂಬಗಳು

*ಸಿ = ಅರೆ ಮಾಧ್ಯಮ ಭೂ ಹಿಡುವಳಿದಾರರು ೫.೦೧ ಎಕರೆಯಿಂದ ೧೦ ಎಕರೆಯ ಭೂ ಹಿಡುವಳಿಯ ಕುಟುಂಬಗಳು

*ಡಿ = ಸಣ್ಣ ಭೂ ಹಿಡುವಳಿದಾರರು ೨.೫೧ ಎಕರೆಯಿಂದ ೫ ಎಕರೆಯ ಭೂ ಹಿಡುವಳಿಯ ಕುಟುಂಬಗಳು

*ಇ = ಅತಿ ಸಣ್ಣ ಭೂ ಹಿಡುವಳಿದಾರರು ೨.೫೦ ಎಕರೆವರೆಗಿನ ಭೂ ಹಿಡುವಳಿಯ ಕುಟುಂಬಗಳು

* ಒ = ಭೂ ರಹಿತ ಕುಟುಂಬಗಳು

ಈ ಅಂಕಿಅಂಶಗಳು ಏನು ಹೇಳುತ್ತವೆ ಎಂದರೆ ಪಾರ್ಧಿ ಬುಡಕಟ್ಟಿನಲ್ಲಿ ಕೃಷಿ ಭೂಮಿಯನ್ನು ಹೊಂದಿದವರಿಗಿಂತ ಭೂರಹಿತ ಕೃಷಿ ಕಾರ್ಮಿಕರೇ ಹೆಚ್ಚು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಉಳಿದವರು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಆದರೆ ಹೆಚ್ಚಿನ ಪಾರ್ಧಿಯರು ತಮ್ಮ ಭೂಮಿಯನ್ನು ತಾವು ಉಳಿಮೆ ಮಾಡುವುದನ್ನು ಬಿಟ್ಟು, ಬೇರೆಯವರಿಗೆ ಉಳುಮೆಗೆ ಕೊಟ್ಟಿರುವ ನಿದರ್ಶನಗಳೇ ಬಹಳಷ್ಟಿವೆ.

ಆದರೆ ಕೆಲವು ಸ್ಥಳಗಳಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿಯ ಎಲ್ಲಮ್ಮನ ದೇವಸ್ಥಾನದ ಎದುರುಗೆ ಹಾಗೂ ಇನ್ನೂ ಕೆಲವು ಕಡೆ ಕೆಲವು ಪಾರ್ಧಿ ಮಹಿಳೆಯರು ಹಾಗೂ ಕೆಲವು ಚಿಕ್ಕ ಚಿಕ್ಕ ಮಕ್ಕಳು ಭಿಕ್ಷೆಯನ್ನು ಬೇಡುತ್ತಿರುವುದು ಕಂಡುಬಂದಿತು.

ಕಾನೂನು ಬಾಹಿರ ಸಾರಾಯಿ ಭಟ್ಟಿ ಇಳಿಸುವಿಕೆ ಮತ್ತು ಮಾರಾಟ

[illegible] ದಂತಕಥೆಗಳಲ್ಲಿ ಹಾಗೂ ಸಮಕಾಲೀನ ಧಾರ್ಮಿಕ ವಿಧಿ ಆಚರಣೆಗಳಲ್ಲಿ ಹಾಗೂ ಸಮಾರಂಭಗಳಲ್ಲಿ ಸಾರಾಯಿ ಅಥವಾ ಮದ್ಯ ಮಹತ್ವದ ಸ್ಥಾನವನ್ನು ಪಡೆದಿದೆ. ಈ ಸಮುದಾಯದಲ್ಲಿ ಸ್ತ್ರೀ ಪುರುಷರಿಬ್ಬರೂ

(ಕೇವಲ ಕೆಲವು ಮಹಿಳೆಯ) ಸೇರಿಯೇ ಮದ್ಯಪಾನ ಮಾಡುತ್ತಾರೆ. ಇವರ ಅಲೆಮಾರಿ ಜೀವನದಲ್ಲಿ ಸಾರಾಯಿಯನ್ನು ಭಟ್ಟಿ ಇಳಿಸುತಿದ್ದರೆಂದು ಕಂಡುಬರುತ್ತದೆ. ಒಂದೆಡೆ ನೆಲೆನಿಂತು ಸ್ಥಿರ ಜೀವನಕ್ಕೆ ಹೊಂದಿಕೊಂಡಾಗ ಸಾರಾಯಿ ಭಟ್ಟಿಇಳಿಸುವಿಕೆ ಹಾಗೂ ತೆಂಗಿನ ಮರದಿಂದ ರಸ(ನೀರಾ)ವನ್ನು ತೆಗೆಯುವುದನ್ನು ನಿಷೇಧಿಸಿದ್ದರಿಂದ ಅವರು ಹೆಂಡ ಮತ್ತು ಮಧ್ಯವನ್ನು ಸರ್ಕಾರದ ಪರವಾನಿಗೆ ಪಡೆದ ಅಂಗಡಿಗಳಿಂದ ಕೊಂಡುಕೊಳ್ಳಬೇಕಾಗುತ್ತಿತ್ತು. ಭಾರತದ ಸ್ವಾತಂತ್ರ ನಂತರದಲ್ಲಿ ಸರ್ಕಾರವು ಸಾರಾಯಿ ಉತ್ಪಾದನೆ, ನಶೆಬರಿಸುವ ಪಾನೀಯ ಹಾಗೂ ಸಾರಾಯಿ ಮಾರಾಟ ಮತ್ತು ಸೇವನೆಯನ್ನು ಸಾರ್ವಜನಿಕವಾಗಿ ನಿಷೇಧಿಸಲಾಗಿತ್ತು. ಮುಂಬೈ ಸರ್ಕಾರ ಹಾಗೂ ಅಂದಿನ ನಿಜಾಮರ ಸರ್ಕಾರ ೧೯೪೮ರ ಸುಮಾರಿಗೆ ಸಂಪೂರ್ಣ ಪಾನ ನಿಷೇಧವನ್ನು ಜಾರಿಗೊಳಿಸಿದ್ದವು. ಆ ನಂತರದಲ್ಲಿ ಸಂಪೂರ್ಣ ಪಾನ ನಿಷೇಧವನ್ನು ಜಾರಿಗೊಳಿಸಿದ್ದವು. ಆ ನಂತರದಲ್ಲಿ ಕಾನೂನುಬಾಹಿರವಾಗಿ ಮದ್ಯ ತಯಾರಿಸುವ ಹಾಗೂ ಅದರ ಮಾರಾಟದ ಚಟುವಟಿಕೆಗಳು ವ್ಯವಸ್ಥಿತವಾಗಿಯೇ ನಡೆಯತೊಡಗಿದವು.

ಮದ್ಯದ ಉತ್ಪಾದನೆ ಮತ್ತು ಮದ್ಯದ ಮಾರಾಟವು ಅಪವಿತ್ರ ಉದ್ಯೋಗ ಎಂದು ಭಾವಿಸಿರುವುದರಿಂದ ಉತ್ತಮ ಜಾತಿಗಳ (ಮೇಲ್ಜಾತಿ) ಜನರು ಈ ವೃತ್ತಿಯಲ್ಲಿ ಸಾಮಾನ್ಯವಾಗಿ ಅಂದಿನ ದಿನಗಳಲ್ಲಿ ತೊಡಗಲಿಲ್ಲ. ಆದರೆ ಇಂದು ಮಹಾನಗರಗಳಲ್ಲಿ ಲಿಂಗಾಯತರು, ಬ್ರಾಹ್ಮಣರು ಸಹ ದೊಡ್ಡ ದೊಡ್ಡ ಡಿಸ್ಟಿಲರಿಗಳು ನಡೆಸುತ್ತಿರುವುದು ಬೇರೆ ಮಾತು.

ಪಾರ್ಧಿಯರು ಕೆಳಸ್ತರದ ಸಾಮಾಜಿಕ ಸ್ಥಾನವನ್ನು ಹೊಂದಿದ್ದರಿಂದ, ಈ ವೃತ್ತಿ ಕ್ಷೇತ್ರದಲ್ಲಿ ಪ್ರವೇಶಿಸಿದಾಗ ಅವರು ತಮ್ಮ ಸಾಮಾಜಿಕ ಅಂತಸ್ಥನ್ನು ಕಳೆದುಕೊಳ್ಳಲಿಲ್ಲ. ಈ ವೃತ್ತಿಯನ್ನು ಆಶ್ರಯಿಸುವ ಮೂಲಭೂತ ಅಗತ್ಯವು ಆರ್ಥಿಕ ಪರಿಗಣನೆಯಾಗಿತ್ತು. ಹಣವನ್ನು ಸಂಪಾದಿಸುವ ಹೆಚ್ಚುವರಿ ಆದಾಯದ ಮೂಲವು ಈ ಭಟ್ಟಿಸಾರಾಯಿ ಆಗಿತ್ತು. ಪೋಲೀಸರನ್ನು ವಿಶ್ವಾಸದಲ್ಲಿ ತೆಗೆದುಕೊಂಡೇ ಈ ವೃತ್ತಿಯನ್ನು ಅನುಸರಿಸಬೇಕಾಗಿತ್ತಾದ್ದರಿಂದ ಅವರಿಗೆ ನಿಯಮಿತವಾಗಿ ಹಣವನ್ನು (ಲಂಚದಬಾಬತ್ತು) ಸಲ್ಲಿಸಬೇಕಾಗುತ್ತಿತ್ತು. ೧೯೫೦ ಹಾಗೂ ೬೦ರ ದಶಕಗಳಲ್ಲಿ ಪೋಲಿಸರ ದೌರ್ಜನ್ಯ ಇವರ ಮೇಲೆ ಎಷ್ಟೊಂದು ತೀವ್ರತರವಾಗಿತ್ತು ಎಂದರೆ ಎಷ್ಟೋ ಹಳ್ಳಿಗಳಲ್ಲಿ ಪಾರ್ಧಿಯರು ಸ್ವಯಂ ಪ್ರೇರಣೆಯಿಂದಲೇ ಈ ವೃತ್ತಿಯನ್ನು ತ್ಯಜಿಸಿದ್ದರು. ಪ್ರತಿಬಂಧವನ್ನು ಧಿಕ್ಕರಿಸುವವರನ್ನು ಪಂಚಾಯಿತಿಯು ದಂಡ ವಿಧಿಸುವ ಮೂಲಕ ಶಿಕ್ಷೆಗೆ ಗುರಿ ಮಾಡುತ್ತಿದ್ದವು. ಹೀಗಾಗಿ ಏನಾದರೂ ಖರೀದಿಗೆಂದು ಪಟ್ಟಣಕ್ಕೆ ಹೋದಾಗಲೇ ಮದ್ಯವನ್ನು ಕುಡಿದುಕೊಂಡು ಬರುತ್ತಿದ್ದರು. ಹೀಗಾಗಿ ೬೦ ವರ್ಷಗಳ ಕಾಲ ಭಟ್ಟಿಸಾರಾಯಿ ಮಾಡುವ ದಂಧೆಗೆ ಕಲ್ಲು ಬಿದ್ದಂತಾಯಿತು. ಇದೇ ರೀತಿ ಸ್ವಯಂ ಪ್ರೇರಿತ ನಿಷೇಧವನ್ನು ಕಲ್ಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಶಾಖಾಪೂರದಲ್ಲಿಯು ಅನುಸರಿಸಲಾಗಿತ್ತು ಎಂದು ತಿಳಿದುಬರುತ್ತದೆ. ಬಹುತೇಕ ಕಡೆ ಸರ್ಕಾರದ ಹಾಗೂ ಹೆಂಡದ ದೊರೆಗಳ ಒತ್ತಡದಿಂದ ೧೯೯೬ರ ವರೆಗೆ ಸಾರಾಯಿ ತಯಾರಿಕೆಗೆ ಸ್ವಯಂ ಪ್ರೇರಿತ ನಿಷೇಧವು ಆರಂಭಗೊಂಡಿತ್ತು. ಪಾರ್ಧಿಯರ ಜೊತೆಗೆ ಲಂಬಾಣಿಗರು ಬಹುತೇಕ ಕಡೆ ರಹಸ್ಯವಾಗಿ ಕಳ್ಳ ಭಟ್ಟಿಯನ್ನು ಮಾರಲು ಆರಂಭಿಸಿದರು. ಈ ಅವಧಿಯಲ್ಲಿ ಪಂಚಾಯ್ತಿಯ ಸದಸ್ಯರು ತಮ್ಮ ಮೊದಲಿನ ಕಟ್ಟುನಿಟ್ಟಿನ ಕಾರ್ಯಾಚರಣೆಗಳನ್ನು ತಟಸ್ಥಗೊಳಿಸಿದ್ದರು. ಹೀಗಾಗಿ ವಾಗ್ರಿ ತಾಂಡಗಳಲ್ಲಿ ಸಾರಾಯಿ ಕುಡಿಯುವ ದುರಭ್ಯಾಸಕ್ಕೆ ಮತ್ತೆ ಪ್ರೋತ್ಸಾಹ ಸಿಕ್ಕಂತಾಯಿತು. ೧೯೬೬ರಲ್ಲಿ ಮೈಸೂರು ಸರ್ಕಾರವು ಪಾನಪ್ರತಿಬಂಧ ನೀತಿಯನ್ನು ಕಿತ್ತುಹಾಕಿ ಅಧಿಕೃತ ಮದ್ಯ ಉತ್ಪಾದಕರಿಂದ ಮದ್ಯವನ್ನು ಖರೀದಿಸಿ ಮಾರಾಟಮಾಡುವ ಗುತ್ತಿಗೆದಾರರಿಗೆ ಕಾನೂನುಬದ್ಧ ಪರವಾನಗಿ ನೀಡಲಾರಂಭಿಸಿತು. ಮದ್ಯಪಾನದ ಮೇಲಿನ

ಪ್ರತಿಬಂಧ ಕಿತ್ತುಹಾಕಿದ ನಂತರ ಅನುಮತಿ ಪಡೆದ ಹೆಂಡದಂಗಡಿಗಳಲ್ಲಿ ಮದ್ಯ ಸಿಕ್ಕುವುದರಿಂದ ಕಾನೂನು ಬಾಹಿರ ಭಟ್ಟಿ ಇಳಿಸುವಿಕೆ ತಾನಾಗಿಯೇ ಕೊನೆಗಳ್ಳಬಹುದೆಂದು ಸರ್ಕಾರಭಾವಿಸಿತ್ತು. ಆದರೆ ಈ ನಿರೀಕ್ಷೆಗೆ ವಿರುದ್ಧವಾಗಿ ಕಾನೂನು ಬಾಹಿರ ಭಟ್ಟಿಸಾರಾಯಿ ತಯಾರಿಕೆ ನಿಲ್ಲದಂತೆ ನಡೆಯಿತು. ತೀರ ಅಗ್ಗದ ದರದ ಸೇಂದಿ ಮತ್ತು ಸಾರಾಯಿಗೆ ಗಿರಾಕಿಗಳಿದ್ದುದ್ದರಿಂದ ಈ ವೃತ್ತಿಯು ಬಹುತೇಕ ವಾಗ್ರಿತಾಂಡಗಳಲ್ಲಿ ಲಾಭದಾಯಕವಾಗಿಯೇ ನಡೆಯುತ್ತಿವೆ.

೮. ಪಾರ್ಧಿಯರ ವ್ಯಾಪಾರದ ರೀತಿ

ಪಾರ್ಧಿ ಮಹಿಳೆಯರಲ್ಲಿ ಕೆಲವರು ಭಿಕ್ಷೆಯನ್ನು ಬೇಡುವ ಕಾಲದಲ್ಲೇ ಹಲವಾರು ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ. ಸಮೀಕ್ಷೆಯಿಂದ ತಿಳಿದು ಬರುವ ಅಂಕಿ ಅಂಶಗಳೆನೆಂದರೆ, ೭೩ ಪುರುಷರು ಮತ್ತು ೧೯ ಮಹಿಳೆಯರು ಒಟ್ಟು ೧೩೯ ಜನರು ಮಾರಾಟ ಮಾಡುವ ಸಾಮಗ್ರಿಗಳೆಂದರೆ, ಸೂಜಿ, ದಬ್ಬಣ, ಹೇರ್‌ಪಿನ್ನು, ಕಸ್ತೂರಿ, ಗೋರಂಜನ, ಕರಿಮಣಿ, ಹಾಲಮಣಿ, ನವಿಲಿನ ತುಪ್ಪ, ಉಡದ ತುಪ್ಪ, ರುದ್ರಾಕ್ಷಿ, ಸಣ್ಣ ರುದ್ರಾಕ್ಷಿ, ಹಾಗೂ ಅನೇಕ ರೀತಿಯ ಆಟಿಕೆ ಸಾಮಾನುಗಳನ್ನು ಇವರು ಮಾರಾಟ ಮಾಡುತ್ತಾರೆ. ಕಸ್ತೂರಿ ಎನ್ನುವ ವಸ್ತುವನ್ನು ಪಾರ್ಧಿ ಗಂಡಸರು ಕಸ್ತೂರಿ ಮೃಗವನ್ನು ಬೇಟೆ ಮಾಡಿ ಅದರಿಂದ ತರುತ್ತಾರೆ. ಇದು ಹೆಚ್ಚಾಗಿ ನೇಪಾಳ ಕಡೆಗೆ ಸಿಗುತ್ತದೆ. ಜೇನುತುಪ್ಪ, ಹುಲಿ ಉಗುರು, ಹದ್ದಿನ ಉಗುರು, ಹುಲಿ ಹಲ್ಲು, ಐದು ಮುಖಗಳುಳ್ಳ ಪಂಚಮುಖಿ ರುದ್ರಾಕ್ಷಿ, ಏಕಮುಖಿ ರುದ್ರಾಕ್ಷಿ, ಮತ್ತು ಇತ್ಯಾದಿ ಉಗುರು ಏಕಮುಖ ರುದ್ರಾಕ್ಷಿ ಮತ್ತು ಇವುಗಳು ಸಹ ನೇಪಾಳದ ಕಡೆಗೆ ಸಿಗುವ ಒಂದು ಬಗೆಯ ತೆಂಗಿನ ಕಾಯಿಯಲ್ಲಿ ಸಿಗುತ್ತವೆ. ಕಸ್ತೂರಿ ಎಂಬುವುದನ್ನು ನೀರಿಗೆ ಹಾಕಿದರೆ ಅದು ದಾರದಂತೆ ಬಿಟ್ಟುಕೊಳ್ಳುತ್ತದೆ. ಜೊತೆಗೆ ಇದು ತುಂಬಾ ಸುಹಾಸನೆಯನ್ನು ಉಳ್ಳದಾಗಿರುತ್ತದೆ. ಹುಲಿಯ ಮೀಸೆ, ಹುಲಿಯ ಉಗುರು, ಹುಲಿಯ ಚರ್ಮ, ಹೆಂಗಸರು ಊದುವ ಪೀಪಿ, ಪಿನ್ನು, ಹೇರ್‌ಪಿನ್ನು ಇನ್ನೂ ಮುಂತಾದವುಗಳನ್ನು ಕೊಂಡು ತಂದು ಸ್ವಲ್ಪ ಲಾಭಕ್ಕೆ ಮಾರಾಟ ಮಾಡುತ್ತಾರೆ.

ಪಾರ್ಧಿಯರು ಅಲೆಮಾರಿಗಳಾಗಿದ್ದಾಗ ಮುಖ್ಯವಾಗಿ ಬೇಟೆ ಮತ್ತು ಇತರ ಗುಡಿ ಕೈಗಾರಿಕೆಗಳು ಇವರ ಉಪಕಸುಬುಗಳಾಗಿರುತ್ತವೆ. ಇಲ್ಲವೆ ಬರೀ ಬೇಟೆಯೆ ಇವರ ಉದ್ಯೋಗವಾಗಿರುತ್ತದೆ. ಇವರು ಚೌಲಿಗಳನ್ನು ಡಜನ್‌ಗಟ್ಟಲೆ ಪಟ್ಟಣದ ಅಂಗಡಿಗಳಿಗೂ ಮಾರಾಟ ಮಾಡುತ್ತಾರೆ. ಇವುಗಳ ಧರ ಒಂದಕ್ಕೆ ೪ ರೂಪಾಯಿಗಳಿಂದ ೮ ರೂಪಾಯಿಗಳ ವರೆಗೆ ಇರುತ್ತದೆ. ಪಾರ್ಧಿಯರು ರುದ್ರಾಕ್ಷಿಗಳನ್ನು ಒಂದು ಮುಖದಿಂದ ಇಪ್ಪತ್ತೊಂದು ಮುಖಗಳವರೆಗೆ ತಯಾರಿಸುತ್ತಾರೆ. 'ತ್ರಿಮೂರ್ತಿ' ಎಂಬ ಮೂರು ಮುಖದ್ದು ಮತ್ತು ಗೌರಿ ಶಂಕರ ಎರಡು ಮುಖದ್ದಾಗಿವೆ. ಇವುಗಳಿಗೆ ಬಹಳ ಬೇಡಿಕೆ ಇದೆಯೆಂದು ಹೇಳುತ್ತಾರೆ. ರುದ್ರಾಕ್ಷಿಗಳನ್ನು ದೂರದ ಮಥುರಾದಿಂದಲೂ, ಸಾಲಿ ಗ್ರಾಮಗಳನ್ನು ಹರಿದ್ವಾರದಿಂದಲೂ ಮತ್ತು ಬಲ್‌ಮುರಿ ಶಂಖಗಳನ್ನು ಸಮುದ್ರದ ತೀರಗಳಿಂದಲೂ ಸಂಗ್ರಹಿಸುತ್ತಾರೆ.

ಪಾರ್ಧಿಯರು ತಾವು ಕಡಿಮೆ ಬೆಲೆಯನ್ನು ಕೊಟ್ಟು ಸಾಮಗ್ರಿಗಳನ್ನು ಕೊಂಡು ಅವುಗಳನ್ನು ಹೊತ್ತು ಕೊಂಡು ಅಡ್ಡಾಡುತ್ತಾ, ಅಧಿಕ ಬೆಲೆಗೆ ಮಾರಾಟ ಮಾಡಿ ಲಾಭವನ್ನು ಗಳಿಸುತ್ತಾರೆ.

ಇವರು ಮಾರಾಟ ಮಾಡುವ ಕೆಲವು ವಸ್ತುಗಳ ಹಾಗೂ ಅವುಗಳ ಧರ ಪಟ್ಟಿಯನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

ಸಾಮಗ್ರಿಗಳು	ಕೊಳ್ಳುವ ಬೆಲೆ	ಮಾರಾಟದ ಬೆಲೆ	
೧) ನರಿಕೊಂಬು	೧೦-೦೦ ರೂ	೧೫-೦೦ ರೂ	
೨) ತ್ರಿಮೂರ್ತಿ	೨೫-೦೦ ”	೬೫-೦೦ ”	
೩) ಏಕಮುಖಿ	೫೦-೦೦ ”	೧೫೦-೦೦ ”	
೪) ಸಣ್ಣ ಏಕಮುಖಿ	೨೦-೦೦ ”	೫೫-೦೦ ”	
೫) ಕಸ್ತೂರಿ	೩೦-೦೦ ”	೧೨೫-೦೦ ”	
೬) ಲಿಂಗು	೦೬-೦೦ ”	೧೦-೦೦ ”	
೭) ೧೦೮ ರುದ್ರಾಕ್ಷಿ ಸರ	೩೦-೦೦ ”	೭೦-೦೦ ”	
೮) ಸಾಲಿಗ್ರಾಮ	೫೫-೦೦ ”	೧೨೫-೦೦ ”	ಇತ್ಯಾದಿ

ಪಾರ್ಧಿಯರು ಮಾರಾಟ ಮಾಡುವ ಮುಖ್ಯ ವಸ್ತುಗಳು

೧. ರುದ್ರಾಕ್ಷಿ ತಯಾರಿಕೆ

ನೇಪಾಳದ ಕಡೆಯ ತೆಂಗಿನಕಾಯಿ ಹಾಗೂ ಗಜರ್‌ಪಟ್ಟು ಕಾಯಿಯಿಂದ ರುದ್ರಾಕ್ಷಿಗಳನ್ನು ಪಾರ್ಧಿಯರೇ ತಯಾರಿಸುತ್ತಾರೆ. ಈ ಕಾಯಿಗಳ ಮೇಲೆ ಓಂ ಎನ್ನುವ ಅಕ್ಷರವನ್ನು, ಲಿಂಗದ ತಲೆಯನ್ನು ತ್ರಿಶೂಲ ಮತ್ತು ಅದಕ್ಕೆ ನಾಗರ ಹಾವು ಸುತ್ತಿಕೊಂಡಿರುವ ಚಿತ್ರಗಳನ್ನು ಚಿಕ್ಕ ಉಳಿಯನ್ನು ಬಳಸಿ ಕೈಯಿಂದಲೇ ಕೊರೆದು ತಯಾರಿಸುತ್ತಾರೆ. ಈ ಕಾಯಿಯು ದುಂಡು ಅಡಿಕೆಯ ರೀತಿ ಇರುತ್ತದೆ. ಇದು ಒಣ ಕೊಬ್ಬರಿಗಿಂತ ಸ್ವಲ್ಪ ಗಟ್ಟಿಯಾಗಿರುತ್ತದೆ. ಕಾಯಿಯು ಹಸಿಯಿದ್ದಾಗಲೆ ಇಂಥಹ ಚಿತ್ರಗಳನ್ನು ಬಿಡಿಸುತ್ತಾರೆ. ಇದು ಒಣಗಿದ ಮೇಲೆ ಅಡಿಕೆಯಷ್ಟು ಗಟ್ಟಿಯಾಗಿರುತ್ತದೆ. ಇದು ಶಿವಭಕ್ತರಿಗೆ ಅತ್ಯಂತ ಪ್ರಿಯವಾದ ರುದ್ರಾಕ್ಷಿಯಾಗಿದೆ. ಇದು ನೂರಾರು ರೂಪಾಯಿಗಳಿಗೆ ಮಾರಾಟವಾಗುತ್ತದೆ. ಇದಲ್ಲದೆ ಇತರೇ ಅನೇಕ ರುದ್ರಾಕ್ಷಿಗಳು ಸಹ ಪಾರ್ಧಿ (ಹಕ್ಕಿಪಿಕ್ಕಿ)ಯರಿಗೆ ಒಳ್ಳೆಯ ಆದಾಯವನ್ನು ತರುವ ಸಾಮಗ್ರಿಗಳಾಗಿವೆ.

೨. ಕಾಡು ಕೋಳಿ ಜುಟ್ಟು ಅಥವಾ ಕಲರ್ ಜುಟ್ಟು

ಪಾರ್ಧಿಯರು ಬೇಟೆಯಾಡುವ ಹಲವು ಪಕ್ಷಿಗಳಲ್ಲಿ ಕಾಡುಕೋಳಿಯೂ ಒಂದು ಇದು ಸಾಮಾನ್ಯವಾಗಿ ಓಡಿ ಹೋಗುವ ಒಂದು ಪಕ್ಷಿ. ಇದರ ಕುತ್ತಿಗೆಯ ಮೇಲೆ ಪುಕ್ಕಗಳ ಒಂದು ಗುಚ್ಛವಿರುತ್ತದೆ. ಇದು ಸಹಜವಾಗಿಯೇ ಹೊಳಪಾಗಿರುವುದರಿಂದ ನೋಡಲು ಚಿಟ್ಟಿಗೆ ಮತ್ತು ಸುಂದರವಾಗಿ ಕಾಣುತ್ತದೆ. ಇವಕ್ಕೆ ಮುಂಬೈಯಲ್ಲಿ ರೂ ೧೫೦ ರಿಂದ ೨೦೦ ರೂಪಾಯಿಯಷ್ಟು ಹಣಕ್ಕೆ ದೊರೆಯುತ್ತದೆಯಂತೆ. ಈ ವಸ್ತುವನ್ನು ಪ್ರಮುಖವಾಗಿ ಮಿಲಿಟರಿಗಳಲ್ಲಿ ಬಳಸುತ್ತಾರೆ. ಇದನ್ನು ಗಂಡಸರು ಎದೆಗೂ ಮತ್ತು ಹೆಣ್ಣು ಮಕ್ಕಳು ಜಡೆಗೂ ಧರಿಸುತ್ತಾರೆ. ಈ ಕಲರ್ ಜುಟ್ಟಿನ ಇನ್ನೊಂದು ವಿಶೇಷತೆ ಎಂದರೆ ಇದರಲ್ಲಿರುವ ರೇಡಿಯಂ ಗುಣದಿಂದಾಗಿ ನೀರಿನೊಳಗೆ ವಿಶೇಷ ಬೆಳಕನ್ನು ಬೀರುತ್ತಾ, ಹುಳುಗಳಿರುವ ಮೀನುಗಳನ್ನು ಆಕರ್ಷಿಸುತ್ತದೆ. ಇಂಥಹ ಮೀನುಗಳಿಂದ ಹತ್ತಾರು ಸಾವಿರ ರೂಪಾಯಿಗಳ ಆದಾಯವಿರುವುದರಿಂದ ಕಲರ್ ಜುಟ್ಟಿಗೆ ಇಷ್ಟೊಂದು ಬೆಲೆ ಎನ್ನುತ್ತಾರೆ ಪಾರ್ಧಿಯರು.

ಹೀಗೆ ಬಗೆಬಗೆಯ ಸಾಮಗ್ರಿಗಳನ್ನು ಹೆಗಲಿಗೆ ಚೀಲವೊಂದನ್ನು ಹಿಡಿದು ಸುತ್ತುವ ಪಾರ್ಧಿಯರ ವ್ಯಾಪಾರಿಗಳು ಮಣಿ, ಸರ, ಹಾಗೂ ಇನ್ನೂ ಮುಂತಾದ ಸಾಮಗ್ರಿಗಳನ್ನು ದಿಲ್ಲಿ ಮಥುರಾಗಳಿಂದ ಸಗಟಾಗಿಕೊಂಡು ತಂದು ಹಾರಗಳನ್ನು ತಯಾರಿಸಿ ಧರ್ಮಸ್ಥಳ, ಕೊಲ್ಲೂರು, ಗೋಕರ್ಣ, ತಿರುಪತಿ, ತಿರುಮಲೈ, ಮಂತ್ರಾಲಯ ಇನ್ನೂ ಮುಂತಾದ ಧಾರ್ಮಿಕ ಸ್ಥಳಗಳಲ್ಲಿ ರುದ್ರಾಕ್ಷಿ, ಹವಳದ ಸರ, ತುಳಸೀ ಸರ, ಮೋಹಿಂದ್ ರುದ್ರಾಕ್ಷಿ, ಶಂಖ, ಬಜರ್ ಬೊಟ್, ಉಂಗುರಕ್ಕೆ ಬೇಕಾದ ಬಗೆಬಗೆಯ ಕಲ್ಲುಗಳು, ಮಾಣಿಕ್ಯ, ಮೋತಿಗಳನ್ನು ರಾಜಾಸ್ತಾನದ ಕಲ್ಲುಗಳನ್ನು ಮಾರಾಟ ಮಾಡುತ್ತಾರೆ. ಇಲ್ಲವೇ ಇದನ್ನು ಬೇಕಾದವರು ಇವರನ್ನೇ ಹುಡುಕಿಕೊಂಡು ಬರುತ್ತಾರೆ. ಪುಷ್ಪರಾಜ್, ಪನ್ನ, ವಜ್ರ, ನೀಲಂ, ಇನ್ನೂ ಮುಂತಾದ ವಸ್ತುಗಳು ಮುಸ್ಲಿಂ ಜನರಿಂದ ಹೆಚ್ಚು ಮಾರಾಟವಾಗುತ್ತವೆ. ಕೊಳ್ಳಲ್ಪಡುತ್ತವೆ.

ಆಯುರ್ವೇದದ ರಕ್ಷಕರು ಈ ಪಾರ್ಧಿಯರು

ಅನೇಕ ಶತಮಾನಗಳು ಕಳೆದರೂ ಪಾರ್ಧಿಯರು ಸರ್ಕಾರಗಳಿಂದ ತಮಗೆ ನ್ಯಾಯಬದ್ಧವಾಗಿ ಸಿಗಬೇಕಾದ ಅನೇಕ ಸೌಲಭ್ಯಗಳಿಂದ ವಂಚಿತರಾದ ಅಮಾಯಕ ಬುಡಕಟ್ಟು ಇದಾಗಿದೆ. ಈ ಬುಡಕಟ್ಟು ಕೇವಲ ಬೇಟೆಯನ್ನಾಡದೇ, ಚಿಕ್ಕಪುಟ್ಟ ವ್ಯಾಪಾರಗಳನ್ನು ಮಾಡಿಕೊಳ್ಳುವುದರ ಜೊತೆಗೆ ಕೆಲವರು ಭಟ್ಟಿ ಸಾರಾಯಿ ಯನ್ನು ಇಳಿಸಿ ತಾವು ಕುಡಿಯುವುದರ ಜೊತೆಗೆ ಕುಡಿಯುವವರಿಗೂ ಅದನ್ನು ಮಾರಾಟ ಮಾಡಿ ಜೀವಿಸುತ್ತಿದ್ದಾರೆ.

ಇಂದು ನಮ್ಮ ದೇಶದಲ್ಲಿ ಅಲೋಪತಿ, ಹೋಮಿಯೋಪತಿ, ಎಲೆಕ್ಟ್ರೋಪತಿಗಳಂಥಹ ಅನೇಕ ಔಷಧಿಗಳು ಬಳಕೆಯಾಗುತ್ತಿದ್ದರೂ ಆಯುರ್ವೇದದ ಔಷಧಿಯು ಅತ್ಯಂತ ಪ್ರಾಚೀನ ಔಷಧಿಯಾಗಿದ್ದು, ಯಾವುದೇ ತರಹದ ಅಡ್ಡ ಪರಿಣಾಮ (Side Effects) ಗಳು ಬೀರದಂತಹ ಔಷಧಿಯಾಗಿದೆ. ಆದರೆ ದುರ್ದೈವದ ಸಂಗತಿಯೆಂದರೆ, ಇದರ ಪ್ರಾಮುಖ್ಯತೆಯನ್ನು ಅರಿಯದ ಅನೇಕರು ಯಾವುದೋ ಔಷಧಿಗಳಿಗೆ ಮೊರೆ ಹೋಗಿ ಅನೇಕ ರೀತಿಯ ತೊಂದರೆಗಳಿಗೆ ಇಡಾಗುತ್ತಿದ್ದಾರೆ. ಆದರೆ ಸುದೈವದ ವಿಷಯವೆಂದರೆ, ಈ ಆಯುರ್ವೇದ (ಗಿಡಮೂಲಿಕೆ) ಔಷಧಿಯ ಮಹತ್ವವನ್ನು ಅರಿತ ಅನೇಕ ಅಲೋಪತಿ ಹಾಗೂ ಹೋಮಿಯೋಪತಿ ವೈದ್ಯರು ಗುಟ್ಟಾಗಿ (ಕದ್ದುಮುಚ್ಚಿ) ಈ ಆಯುರ್ವೇದದ ಔಷಧಿಗಳನ್ನು ಸೇವಿಸುತ್ತಿದ್ದಾರೆ.

ಇಂಥಹ ಒಂದು ತ್ರಿಕಾಲ ಶಾಶ್ವತ ಪರಿಹಾರವನ್ನು ನೀಡುವ ಈ ಔಷಧಿಗಳ ರಕ್ಷಕರೇ ಈ ಪಾರ್ಧಿ ಸಮಾಜ ಎಂದರೆ ತಪ್ಪಾಗಲಾರದು. ಮಾನವ ಭೂಮಿಯ ಮೇಲೆ ಹುಟ್ಟಿನಿಂದಲೇ ಪಾರ್ಧಿ ಸಮಾಜವು ಇದೆ. ಪಾರ್ಧಿ ಸಮಾಜವು ಹುಟ್ಟಿನಿಂದಲೇ ಈ ಗಿಡಮೂಲಿಕೆ ಔಷಧಿಗಳು ಬಳಕೆಯಲ್ಲಿವೆ. ಪಾರ್ಧಿ ಜನರು ಮೂಲತಃ ಅಡವಿ ವಾಸಿಗಳಾಗಿರುವುದರಿಂದ ಅಡವಿಯಲ್ಲಿರುವ ಎಲ್ಲಾ ತಪ್ಪಲು ಕಾಯಿಗಳಲ್ಲಿರುವ ಔಷಧಿಯ ಗುಣಗಳನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಹೀಗಾಗಿ ಇಂದಿಗೂ ಎಷ್ಟೋ ಜನ ಪಾರ್ಧಿಯರು ತಮಗೆ ಬಂದ ಕಾಯಿಲೆಗೆ ತಮ್ಮ ಮನೆಯ ಹತ್ತಲಿನಲ್ಲಿರುವ ಗಿಡಮೂಲಿಕೆ(ಔಷಧಿ)ಗಳಿಂದ ತಮ್ಮ ನೋವುಗಳನ್ನು ನಿವಾರಿಸಿಕೊಳ್ಳುತ್ತಿದ್ದಾರೆ. ಅಷ್ಟಕ್ಕೂ ಇವರಿಗೆ ಯಾವುದೇ ತರಹದ ಕಾಯಿಲೆಗಳಿಗೆ ಬಲಿಯಾಗದಂತಹ ಗಟ್ಟಿ ಜನರು ಈ ಪಾರ್ಧಿಯರು.

ಇವರು, ಮನುಷ್ಯರಿಗೆ ಬರುವ ಚಿಕ್ಕ ಜ್ವರದಿಂದ ಹಿಡಿದು ಏಡ್ಸ್ ಮತ್ತು ಕ್ಯಾನ್ಸರ್‌ಗಳಂತಹ ಭೀಕರ ರೋಗಗಳಿಗೂ ಔಷಧಿಯನ್ನು ಕೊಡುವಂತಹ ನುರಿತ ವೈದ್ಯರಾಗಿದ್ದಾರೆ. ಈ ಪಾರ್ಧಿ ಸಮುದಾಯದವರು

ಕೊಡುವ ಔಷಧಿಗಳ ಬಗ್ಗೆ ಬಳ್ಳಾರಿ ನಗರದಲ್ಲಿಯ ಸರ್ಕಾರಿ ತಾರಾನಾಥ ಆಯುರ್ವೇದದ ಔಷಧ ಮಹಾ ವಿದ್ಯಾಲಯದಲ್ಲಿ (T.G.A.M.C) ಒಂದು ವಿಶೇಷ ಉಪನ್ಯಾಸದಲ್ಲಿ ನಾನು ಇವರು ಕೊಡುವ ಔಷಧಿಗಳ ಬಗ್ಗೆ ವಿವರಗಳನ್ನು ನೀಡಿದಾಗ, ಅಲ್ಲಿಯ ಅನೇಕ ಪ್ರಾಧ್ಯಾಪಕರೂ ಹಾಗೂ ವಿದ್ಯಾರ್ಥಿಗಳು ಚಕಿತರಾದರು. ಯಾಕೆಂದರೆ, ಇಷ್ಟೆಲ್ಲಾ ಹಣವನ್ನು ಖರ್ಚುಮಾಡಿ ನಾವು ಮಹಾವಿದ್ಯಾಲಯದಲ್ಲಿ ಕಲಿಯುತ್ತಿರುವ ವಿಷಯಗಳನ್ನು, (ವಿಚಾರಗಳನ್ನು) ಅಕ್ಷರದ ಗಂಧ ಗಾಳಿಯೇ ಗೊತ್ತಿರದ ಈ ಜನರು (ಪಾರ್ಧಿ) ಎಷ್ಟೊಂದು ವ್ಯವಸ್ಥಿತವಾದ ರೀತಿಯಲ್ಲಿ ಯಾವುದೇ ರೀತಿಯ ಖರ್ಚು ಅಥವಾ ಪ್ರಚಾರವಿಲ್ಲದೆ ಇವರು ತಮ್ಮ ವೈದ್ಯ ಸೇವೆ ಮಾಡುತ್ತಿದ್ದಾರಲ್ಲ ಎಂದು ಇವರು (ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು) ಆಶ್ಚರ್ಯ ವ್ಯಕ್ತಪಡಿಸಿದರು.

ಪಾರ್ಧಿಯರು ಮಾಡುವ ಔಷದೋಪಚಾರಗಳು

೧) ತಲೆನೋವು : ಯಾರಿಗಾದರೂ ತಲೆನೋವು ಬಂದರೆ, ಅವರ ಎರಡೂ ರಟ್ಟೆಗಳನ್ನು ಕಟ್ಟಿ, ಬೆಳ್ಳಗಿನ ಈರುಳ್ಳಿಯನ್ನು ಕತ್ತರಿಸಿ ಅಡ್ಡಲಾಗಿ ಮೂಗಿಗೆ ಒಂದೈದು ನಿಮಿಷ ಅದರ ವಾಸನೆಯನ್ನು ಏರಿಸುವುದು ಆಗ ಅವರ ತಲೆನೋವು ಮಾಯವಾಗುತ್ತದೆ. ಇದರ ಜೊತೆಗೆ ಲವಂಗದ ಎಣ್ಣೆ ಮತ್ತು ಕಾಡು ಬೆಳ್ಳುಳ್ಳಿಗಳಿಂದ ಭಟ್ಟಿ ಇಳಿಸಿದ ಎಣ್ಣೆಯನ್ನು ಸಹ ಹಚ್ಚಿ ತಲೆನೋವನ್ನು ಕಡಿಮೆ ಮಾಡುತ್ತಾರೆ.

೨) ಗಂಡಸ್ತನ ಹೆಚ್ಚಿಸುವ ಔಷಧಿ : ಈ ಔಷಧಿಯು ಸಾಂಡ್ರ ಎಂಬ ಸರಿಸೃಪದ ಚರ್ಬಿಯಿಂದ ತಯಾರಿಸಿದ ಎಣ್ಣೆ ಆಗಿದೆ. ಈ ಎಣ್ಣೆಗೆ ಕಲ್ಲಿನ ಬೆವರನ್ನು ಸೇರಿಸುತ್ತಾರೆ. ಈ ಕಲ್ಲಿನ ಬೆವರನ್ನು ಕಲ್ಲಮ್ಮ ಎಂದು ಕರೆಯುತ್ತಿದ್ದು, ಈ ಸಾಂಡ್ರ ಮತ್ತು ಕಲ್ಲಮ್ಮ ಎರಡೂ ನೇಪಾಳದ ಕಡೆಯಿಂದ ಸಂಗ್ರಹಿಸಿ ತರುತ್ತಾರೆ. ಜೊತೆಗೆ ಈ ಸಾಂಡ್ರವನ್ನು ಅನೇಕ ಪಾರ್ಧಿಯರು ಮನೆಗಳಲ್ಲಿ ಸಾಕುತ್ತಾರೆ. ಈ ಪ್ರಾಣಿಯನ್ನು ಅವರು 'ಗಾಳಿಉಡ' ವೆಂತಲೂ ಕರೆಯುತ್ತಾರೆ. ಈ ಗಾಳಿಉಡವು ಕೇವಲ ಗಾಳಿಯನ್ನೇ ಕುಡಿದು ಬದುಕುತ್ತದೆ. ಇದು ನೋಡಲು ಓತಿಕ್ಯಾತನ ತರಹ ಇದ್ದು ಇದರ ಬಾಲ ಮೊಸಳೆ ತರಹ ಇರುತ್ತದೆ. ಇದರ ಬೆರಳು ಕಪ್ಪೆಯ ರೀತಿ, ಮುಂಗಾಲು ಮನುಷ್ಯನ ರೀತಿ, ಹೊಟ್ಟೆ ಉಡದ ರೀತಿ ಹಾಗೂ ಇದರ ನಾಲಿಗೆ ಸೀಳಾಗಿರದೆ ಮನುಷ್ಯನ ನಾಲಿಗೆಯ ತರಹವೇ ಇರುತ್ತದೆ. ಈ ಉಡದ ಚರ್ಬಿಯನ್ನು ಸಾಸಿವೆ ಎಣ್ಣೆಯ ಜೊತೆಯಲ್ಲಿ ಕುದಿಸುತ್ತಾರೆ. ಇದರಿಂದ ಬಂದ ಎಣ್ಣೆಯನ್ನು ಇಂಜಕ್ಷನ್‌ನ ಬಾಟಲಿಯಲ್ಲಿ ತುಂಬಿಡುತ್ತಾರೆ. ಗಂಡಸರ ಶಕ್ತಿ ಇಲ್ಲದಿದ್ದಾಗ ಆ ಸಾಮಾನಿಗೆ ಇದನ್ನು ಸವರಿದರೆ ಶಕ್ತಿ ಬರುತ್ತದೆಯಂತೆ. ಮತ್ತು ವೇಸ್ಟ್ ಆಗಿ ಹೋಗುತ್ತಿರುವ ಧಾತು ನಿಲ್ಲುತ್ತದೆಯಂತೆ ಈ ಔಷಧಿಯು ವಾಯಿಗೆ ರಂಡಿಜಮಾರ್(ಸೂಳೆ ರೋಗ AIDS)ಗೂ ಉಪಯುಕ್ತವಾಗಿರುವುದಲ್ಲದೇ ಇದು ಎಲ್ಲಾ ತರಹದ ಕಾಯಿಲೆಗಳಿಗೂ ಸಹ ಸಹಾಯಕಾರಿಯಾಗುತ್ತದೆಂದು ಇವರು ಹೇಳುತ್ತಾರೆ.

೩) ಪುನುಗಿನ ಚಟ್ಟು : ನಾವು ತೊಡುವ ಬಟ್ಟೆಗಳಿಗೆ ಯಾವುದೇ ತರಹದ ನುಸಿಯಾಗಲಿ ಅಥವಾ ಇನ್ನ್ಯಾವುದೇ ಹುಳುಗಳು ತಗುಲಬಾರದು (ತಿನ್ನಬಾರದೆಂದು) ಪುನುಗಿನ ಬೆಕ್ಕಿನ ಚರ್ಬಿಯು ಒಣಗಿದ ಭಾಗವನ್ನು ಔಷಧಿಯ ರೂಪದಲ್ಲಿ ಮಾರುತ್ತಾರೆ.

೪) ಮುದಸ ಮಸ್ತು : ಮುದಸ್ ಮಸ್ಕ್ ಎನ್ನುವ ವಸ್ತು ಮೀನುಗಳ ಬೆನ್ನಿನ ಮೇಲೆ ಇರುತ್ತದೆಯಂತೆ ಇದನ್ನು ಮೀನಿಗೆ [illegible] ತೆಗೆಯುತ್ತಾರೆ. ಆಗ ಮೀನಿನ ಬೆನ್ನಿನ ಮೇಲಿನ ಜಿಡ್ಡೆಲ್ಲ [illegible]

ಪಿಟ್ಟಿಗೆ ಅಂಟಿಕೊಳ್ಳುತ್ತದೆ. ಇದನ್ನೇ ಇವರು ಮದನ್‌ಮಸ್ತ್ ಎಂದು ಕರೆದು ಇದನ್ನು ಗುಳಿಗೆಯ ರೀತಿ ಮಾಡುತ್ತಾರೆ. ಇದು ಹೆಚ್ಚಾದ ಉಷ್ಣಕ್ಕೆ ಮತ್ತು ಪುರುಷರ ಕಮಜೋರಿಗೆ ಅವರ (ಜನನನೇಂದ್ರಿಯವನ್ನು ಸ್ಟ್ರಾಂಗ್) ಮಾಡಲು ಉಪಯೋಗಿಸುತ್ತಾರೆ. ಈ ಗುಳಿಗೆಗಳನ್ನು ತಣ್ಣಗಿರುವ ಹಾಲಿನಲ್ಲಿ ಹಾಕಿ, ಅದನ್ನು ನಂತರ ಕರಗಿಸಿ ಕುಡಿಯಬೇಕು. ಇದನ್ನು ಸರಿಯಾಗಿ ತಪ್ಪದೆ ಏಳು ದಿನಗಳ ಕಾಲ ಸೇವಿಸಿದರೆ ಎಂಥಹ ಷಂಡನು ಸಹ ಗಟ್ಟಿಗನಾಗುತ್ತಾನೆಂದು ಇವರು ಹೇಳುತ್ತಾರೆ.

೫) **ಚಂದ್ರಪ್ರಭ ಗುಳಿಗೆಗಳು :** ಸೈಯಿಂದುವಾ, ದಣಾ, ಸೋರಣ, ದೇವದಾಸ್, ಖಜೂರ, ಅತೀಷ ಎಂಬ ಒಟ್ಟು ೨೧ ಬಗೆಯ ಗಿಡ ಮೂಲಿಕೆ ಸಾಮಗ್ರಿಗಳನ್ನು ಸೇರಿಸಿ ಚಂದ್ರಪ್ರಭ ಎಂಬ ಗುಳಿಗೆಗಳನ್ನು ತಯಾರು ಮಾಡುತ್ತಾರೆ. ಈ ಗುಳಿಗೆ ತಯಾರಿಸಲು ಬೇಕಾದ ಪುಡಿಗಳನ್ನು ಬೊಂಬಾಯಿಯ ಅಮರ್‌ಸಿಂಗ್ ಎಂಬುವರ ಅಂಗಡಿಯಲ್ಲಿ ಸಿಗುತ್ತವೆ. ಈ ಗುಳಿಗೆಯು ಉಷ್ಣಕ್ಕೆ ಒಳ್ಳೆಯ ಔಷಧಿ. ಹಾಗೆಯೆ ಬಿಳಿಯ ಹಾಗೂ ಕೆಂಪು ಮುಟ್ಟು ಹೋಗುತ್ತಿರುವ ಸ್ತ್ರೀಯರಿಗೂ ಇದು ಒಂದು ಉಪಯುಕ್ತ ಔಷಧಿಯಾಗಿದೆ. ಹಾಗೆಯೇ ನಾಮರ್ಧರಿಗೆ ಒಳ್ಳೆ ಮರ್ಧನ ಶಕ್ತಿಯನ್ನು ತಂದುಕೊಡುತ್ತದೆ.

೬) **ಗರ್ಭಪಾತ :** ಇದಕ್ಕೆ ಹಸಿರು ಔಷಧಿಯನ್ನು ಮಾಡುತ್ತಾರೆ. ಬಿದಿರಿನ ಸೊಪ್ಪನ್ನು ಅರೆದು ಬೇಯಿಸಿ, ಹಾಲು, ಇಂಗು, ತಟ್ಟೆಬೆಲ್ಲ, ಸೊಂಟಿ, ಎಳ್ಳು, ಇವುಗಳನ್ನೆಲ್ಲಾ ಮಿಶ್ರಮಾಡಿ ಒರಳು ಕಲ್ಲಿನಲ್ಲಿ ಹಾಕಿ ಅರೆಯಬೇಕು. ನಂತರ ಒಂದು ಪಾತ್ರೆಯಲ್ಲಿ ಕುಟ್ಟಿದ್ದನ್ನೆಲ್ಲ ಹಾಕಿ ಇವೆಲ್ಲವನ್ನು ಪಾಯಸದ ರೀತಿ ಬೇಯಿಸಿ ಮೂರು ದಿವಸ ಕುಡಿಯಬೇಕು. ಆಗ ಗರ್ಭಧರಿಸಿದ ಆ ಸ್ತ್ರೀಗೆ ೨-೩ ತಿಂಗಳಾಗಿದ್ದರೂ ಅದೆಲ್ಲಾ ಮುಟ್ಟಾಗಿ ಹೋಗಿ ಬಿಡುತ್ತದೆ.

೭) **ರತನ ಪುರುಷ :** ಈ ಔಷಧಿಯು ರತನ್‌ಪುರುಷ್ ಎಂಬ ಗಿಡದ ಸೊಪ್ಪಾಗಿದ್ದು, ಇದನ್ನು ಒಣಗಿಸಿ ಪುಡಿ ಮಾಡಿರುತ್ತಾರೆ. ನಂತರ ಇದನ್ನು ನೀರಿಗೆ ಹಾಕಿದರೆ ಬೆಂಡೆಕಾಯಿಯ ಲೋಳೆಯ ರೀತಿ ಬರುತ್ತದೆ. ಪುರುಷರ ವೀರ್ಯ ನೀರಿನ ಹಾಗೆ ಹೋಗುತ್ತಿದ್ದರೆ ಅದನ್ನು ತಡೆದು ಗಟ್ಟಿಯಾಗುವಂತೆ ಮಾಡುತ್ತದೆ.

೮) **ಹೆಂಗಸರ ಬಂಜೆತನಕ್ಕೆ :** ಹೆಣ್ಣು ಮಕ್ಕಳಿಗೆ ಮದುವೆಯ ನಂತರ ಮಕ್ಕಳಾಗದೆ ಗೊಡ್ಡುಬಿದ್ದರೆ, ಅದಕ್ಕೆ ಒಂದು ಹಸಿರು ಔಷಧಿಯನ್ನು ಬಳಸಲಾಗುತ್ತದೆ. 'ಪಚೇಲಿ' ಎಂಬ ಸೊಪ್ಪು ತಂದು ಅರೆದು ಗುಳಿಗೆ ಮಾಡಿ ನುಂಗಿಸಿ ಗೊಡ್ಡು ಕಾಫಿ, ಅಂದರೆ ಹಾಲು ಹಾಕದೇ ಮಾಡಿದ ಕರಿ ಕಾಫೀ ಯನ್ನು ಕುಡಿಸಬೇಕು. ಹೀಗೆ ಮಾಡುವುದರಿಂದ ಮಕ್ಕಳ ಫಲ ನಿಲ್ಲುತ್ತದೆ. ಅಲ್ಲದೆ ತಿಂಗಳು ತಿಂಗಳು ಮುಟ್ಟು ಆಗುತ್ತಿರುತ್ತದೆ.

ಮಕ್ಕಳ ಫಲ ಆಗದಿದ್ದವರಿಗೆ ಪಾರ್ಧಿಯರು ಮಹಾದೇವ್‌ಪಿಂಡಕಾಯಿ ಯನ್ನು ತಿನ್ನಲು ಕೊಡುತ್ತಾರೆ. ಈ ಕಾಯಿಗಳನ್ನು ಎಷ್ಟು ತಿನ್ನುತ್ತಾರೋ ಅಷ್ಟೊಂದು ಮಕ್ಕಳಾಗುತ್ತವೆಂದು ಹೇಳುತ್ತಾರೆ. ಈ ಮಹಾದೇವ್ ಪಿಂಡಕಾಯಿಗಳಲ್ಲಿ ಶಂಭು ಮತ್ತು ಗೌರಪರ್ವತ ಎಂಬ ಗಂಡು ಮತ್ತು ಹೆಣ್ಣು ಬೀಜಗಳಿರುತ್ತವೆಯಂತೆ. ಮುಟ್ಟಾದ ಮೂರು ದಿವಸಕ್ಕೆ ಸ್ನಾನ ಮಾಡಿ ಮಹಾದೇವ್ ಸ್ವಾಮಿಯ ಹೆಸರು ಹೇಳಿ ಬಾಳೆಹಣ್ಣಿನ ಜೊತೆ ಈ ಬೀಜವನ್ನು ನುಂಗಿದರೆ, ಅದೇ ಮುಟ್ಟಿಗೆ ಫಲನಿಲ್ಲುತ್ತದೆ.

ಈ ತಪ್ಪು ಔಷಧಿಗಳನ್ನು ಸಾಬೀತು ಪಡಿಸಲು ಇವರು ಒಂದು ಪೌರಾಣಿಕ ಕಥೆಯನ್ನೇ ಹೇಳುತ್ತಾರೆ. ಆ

ಕಥೆ ಏನೆಂದರೆ, ಹಿಂದೆ ರಾಮಾಯಣದ ಸೀತೆ ತನಗೆ ಮಕ್ಕಳಾಗದಕ್ಕೆ ಕಾಡಿನಲ್ಲಿ ಅಳುತ್ತಾ ಕುಳಿತಿದ್ದಳಂತೆ. ಆಗ ಶ್ರೀರಾಮಚಂದ್ರನು ಮಹಾದೇವಿ ಕಾಯಿಯನ್ನು ಕಿತ್ತು ತಂದು ಕೊಟ್ಟನಂತೆ ಅದರಲ್ಲಿರುವ ಎರಡು ಶಂಭು ಎನ್ನುವ ಬೀಜಗಳನ್ನು ನುಂಗಿದ್ದರಿಂದಲೇ ಅವಳಿಗೆ ಲವಕುಶ ಎಂಬ ಇಬ್ಬರು ಅವಳಿ ಜವಳಿ ಮಕ್ಕಳು ಹುಟ್ಟಿದರಂತೆ

೯ ರಕ್ತದ ಒತ್ತಡಕ್ಕೆ : ರುದ್ರಾಕ್ಷಿಯನ್ನು ಪುಡಿಮಾಡಿ ನೀರಿನ ಜೊತೆ ಸೇರಿಸಿ ಕುಡಿಯುವುದರಿಂದ ವ್ಯಕ್ತಿಯ ಎದೆಯ ದುಗುಡು ಕಡಿಮೆಯಾಗುವುದರ ಜೊತೆಗೆ ಅವರ ರಕ್ತದ ಒತ್ತಡವು ಒಂದೇ ರೀತಿಯಾಗುತ್ತದೆ.

೧೦ ಮೊಡವೆಗಳ ನಿವಾರಣೆಗೆ : ವಯಸ್ಸಿಗೆ ಬಂದ ಯುವಕ ಯುವತಿಯರಿಗೆ ಮೊಡವೆಗಳಾದರೆ, ಪುನುಗಿನ ಬೆಕ್ಕಿನ ಗುಡ್ಡೆ ಅಥವಾ ಅದರ ಎಣ್ಣೆಯನ್ನು ಕೊಬ್ಬರಿಯ ಎಣ್ಣೆಯ ಜೊತೆಗೆ ಸೇರಿಸಿ ಹಚ್ಚಿದರೆ ಆ ಕೂಡಲೇ ಮೊಡವೆಗಳು ಕಡಿಮೆಯಾಗುತ್ತವೆ.

೧೧ ಕೆಮ್ಮು ಮತ್ತು ದಮ್ಮು : ಹುಲಿಯ ಮಾಂಸವಾಗಲಿ ಅಥವಾ ಶಂಕುವಿನಲ್ಲಿರುವ ಮಾಂಸವನ್ನು ತಿಂದರೆ ದಮ್ಮುಕೆಮ್ಮು ಎಲ್ಲಾ ಹೋಗುತ್ತವೆಯಂತೆ ದೊಡ್ಡವರಿಗಾದ ದಮ್ಮಿಗೆ ಜಾಡಪಾಮೊ ಎಂಬ ಗಿಡಮೂಲಿಕೆಯನ್ನು ಕೊಡುತ್ತಾರೆ.

೧೨ ಇಸುಬು, ತದ್ದು ಅಥವಾ ಕಜಕರ್ಣವಾದರೆ : ಅದಕ್ಕೆ ಗೇರು ಬೀಜವನ್ನು ಹಚ್ಚಿ ವಾಸಿಮಾಡುತ್ತಾರೆ.

೧೩ ಹೊಟ್ಟೆ ನೋವಿಗೆ : ನೇಪಾಳಿ ಬೀಜವನ್ನು ಕುಟ್ಟಿ ನೀರು ಅಥವಾ ಕಾಫಿಯಲ್ಲಿ ಸೇರಿಸಿ ಕುಡಿದರೆ ಹೊಟ್ಟೆ ನೋವು ವಾಸಿಯಾಗುತ್ತದೆ.

೧೪ ಮೂರ್ಚೆರೋಗ : ಬಂದರೆ ಕೈಯಿಂದ ತೆಗೆದ ಬೇವಿನ ಎಣ್ಣೆ ಹಾಗೂ ಗೋರಂಜವನ್ನು ಮಿಶ್ರಮಾಡಿ, ೨೧ ದಿವಸ ಎರಡು ಹೊತ್ತು ಕೊಟ್ಟರೆ ಜನ್ಮಾಂತರ ಈ ರೋಗ ಬರುವುದಿಲ್ಲವಂತೆ. ಈ ಅವಧಿಯಲ್ಲಿ ವರ್ಷಗಟ್ಟಲೆ ಹಸಿಕೊಬ್ಬರಿ, ಎಣ್ಣೆ ಬದನೆಕಾಯಿ ಹಾಗೂ ಮುಂತಾದ ಶಲದಿ ಪದಾರ್ಥಗಳನ್ನು ತಿನ್ನಲು ಕೊಡಬಾರದು. ಅಂದಾಗ ಮಾತ್ರ ಈ ಮೂರ್ಚೆರೋಗ ಮತ್ತೆಂದು ಕಾಣಿಸುವುದಿಲ್ಲ.

೧೫. ಮೂಲವ್ಯಾಧಿ : ಈ ಮೂಲವ್ಯಾಧಿಯಲ್ಲಿ ಒಟ್ಟು ೩ ರೀತಿಯಲ್ಲಿವೆ.

೧. ಕಡಿತದ ಮೂಲವ್ಯಾಧಿ.

೨. ಮೊಳಕೆ ಮೂಲವ್ಯಾಧಿ.

೩. ರಕ್ತ ಮೂಲವ್ಯಾಧಿ.

ಈ ಮೂರು ತರಹದ ಮೂಲವ್ಯಾಧಿಗಳಿಗೆ ಕಾಡು ಚಿಪ್ಪಂದಿಯ ಚಿಪ್ಪನ್ನು ಸುಟ್ಟು ಅದನ್ನು ಪುಡಿಮಾಡಿ ಹಚ್ಚಬೇಕು. ಹಾಗೆಯೇ ಅದನ್ನು ನೀರಲ್ಲಿ ಹಾಕಿಯು ಕುಡಿಯಲಿಕ್ಕೆ ಕೊಡಬಹುದು. ಇದರ ಇನ್ನೊಂದು ವಿಧಾನವೆಂದರೆ, ಮಣ್ಣಿನ ಚಿಲುಮೆಯ ಮುಂಭಾಗವನ್ನು ಹೆಂಚಿನ ಘರಣೆಯಲ್ಲಿ ಕೆಂಪಗೆ ಕಾಯಿಸಿ ಹೊಕ್ಕಳದ ಮೇಲೆ ಅದೇ ನೀರಕ್ಕೆ ಬೆನ್ನಿನ ಮೂಲೆಗೆ ಎರಡು ಅಥವಾ ಮೂರು ಬಾರಿ ಬಸರ ಬರೆಯನ್ನು ಶೀಲು ಹಾಕಿದ ಹಾಗೆ ಹಾಕಿಬಿಡುತ್ತಾರೆ. ಆಗ ಆ ರೋಗಿಯು ಉಸಿರು ಎಳೆದುಕೊಳ್ಳುವಾಗ ಅವನ ಗೂದ ಕೂಡಾ ಒಳಗೆ ಹೋಗುತ್ತದೆ. ಇದರಿಂದ ಜೀವನ ಪೂರ್ತಿ ಮತ್ತೆ ಅವನಿಗೆ ಮೂಲವ್ಯಾಧಿಯೇ ಬರುವುದಿಲ್ಲ.

೧೬ ಕಿವಿಸೋರುವಿಕೆ : ಯಾರಿಗಾದರೂ ಕಿವಿ ಸೋರುತ್ತಿದ್ದರೆ ಅಂಥಹವರ ಕಿವಿಯಲ್ಲಿ ಇಂಕ್ರ ಉಪ್ಪಿನ ಹರಳನ್ನು ಎದೆ ಹಾಲಿನೊಂದಿಗೆ ಸೇರಿಸಿ ಕಿವಿಯಲ್ಲಿ ಬಿಟ್ಟರೆ ಕಿವಿ ಸೋರುವುದು ನಿಲ್ಲುತ್ತದೆ.

೧೭ ಪಾರ್ಶ್ವ ರೋಗಕ್ಕೆ : ಪಾರ್ಶ್ವರೋಗಕ್ಕೆ ಇವರು ಲಕ್ವಾ ಎಂದು ಕರೆಯುತ್ತಿದ್ದು ಈ ರೋಗಕ್ಕೆ ಇವರು ಪಾರಿವಾಳ ಅಥವಾ ಕೆಂಬೂತದ ರಕ್ತವನ್ನು ತೆಗೆದು ಲಕ್ವಾ ಹೊಡೆದ ಜಾಗಕ್ಕೆ ಹಚ್ಚುತ್ತಾರೆ. ಅದರ ಜೊತೆಗೆ ಈ ಪ್ರಾಣಿಗಳ ಮಾಂಸವನ್ನು ವಾಸನೆ ಹೋಗದಂತೆ ಮಾಡಿ ಬೇಯಿಸಿ ತಿನ್ನಬೇಕು. ಅಂದಾಗ ಪಾರ್ಶ್ವವಾಯು ರೋಗವು ಮಾಯವಾಗುತ್ತದೆ.

೧೮ ವಾಯು ರೋಗಕ್ಕೆ : ನವಿಲಿನ ಎಣ್ಣೆ, ಉಡದ ಎಣ್ಣೆ ಹಾಗೂ ಮೊಸಳೆ ಎಣ್ಣೆ ಈ ಮೂರನ್ನು ನಿಂಬೆ ಹುಳಿ ಜೊತೆ ಹಚ್ಚಿದರೆ, ವಾಯುರೋಗ ವಾಸಿಯಾಗುತ್ತದೆ.

೧೯ ತಲೆ ಕೂದಲು ಉದುರವಿಕೆಗೆ : ಪಚ್ಚೆ ಮುಂಡೆ ಕಾಯಿಯನ್ನು ಕೊಬ್ಬರಿ ಎಣ್ಣೆಯಲ್ಲಿ ನೆನೆಹಾಕಿ ಒಂದುವಾರ ಕಾಲ ಹಚ್ಚಿದರೆ, ಬೊಕ್ಕ ತಲೆಯಲ್ಲೂ ಪುನಃ ಕೂದಲು ಹುಟ್ಟುತ್ತವೆ. ಕೂದಲು ಬೆಳೆಯಲು ಸಹಕರಿಸುವ ಎಣ್ಣೆಯನ್ನು ಇವರು ಖಾಟೀಚಾಣ್ ಎಂದು ಕರೆಯುತ್ತಾರೆ. ಈ ಖಾಚೀಚಾಣ್ ನಲ್ಲಿ ಕರಡಿಯ ಚರ್ಬಿಯನ್ನು ಹಾಕಿ ಮಾಡಿರುತ್ತಾರೆ.

೨೦ ಹೆರಿಗೆ ಬೇನೆಗೆ (ನೋವಿಗೆ) : ಪ್ರಸವ ವೇದನೆ ಅನುಭವಿಸುವ ಮಹಿಳೆಗೆ ಕೋತಂಬರಿ ಜೀರಿಗೆ ಹುರಿದು ಪುಡಿಮಾಡಿ ಅದರ ಕಸಾಯವನ್ನು ಕುಡಿಸುತ್ತಾರೆ. ಹಾಲು ಹಾಕದ ಕಾಫಿಯನ್ನು ೩-೪ ಬಾರಿ ಕೊಟ್ಟರೆ ಹೆರಿಗೆ ಬೇಗವಾಗಿ ಬಿಡುತ್ತದೆ.

೨೧ ಬಿಳಿ ಮುಟ್ಟಿಗೆ : ಬಿಳಿ ದಾಸವಾಳದ ಕುಡಿ ಅಥವಾ ಹೂ, ಕುಡಿಮಾಕಾಯಿ, ಚಕ್ಕೆ, ಗಸಗಸೆ, ಕೆಂಪು ಸಕ್ಕರೆ, ಕಸ್ತೂರಿ, ಬಾದಾಮಿಕಾಯಿ, ಜೀರಿಗೆ, ಇವಿಷ್ಟನ್ನು ಕೂಡಿಸಿ ಚೆನ್ನಾಗಿ ಪುಡಿಮಾಡಿ, ಎಳೆ ನೀರಿನಲ್ಲಿ ರಾತ್ರಿಯಿಡೀ ನೆನೆ ಇಟ್ಟು ಬಿಳಿಮುಟ್ಟು ಹೋಗುತ್ತಿರುವ ಮಹಿಳೆಗೆ ಬೆಳಿಗ್ಗೆ ಹಾಳು ಹೊಟ್ಟೆಗೆ ಕೊಡಬೇಕು. ಇದರಿಂದ ಅವಳ ಶರೀರ ತಂಪಾಗುವುದರ ಜೊತೆಗೆ ಕೀಲು ನೋವು, ಮಬ್ಬು ಬರುವಿಕೆ, ಪಿತ್ತ, ಸಂದಿವಾತ ಹಾಗೂ ಇನ್ನೂ ಅನೇಕ ಕಾಯಿಲೆಗಳು ನಿವಾರಣೆಯಾಗುತ್ತವೆ.

೨೨ ಹಲ್ಲುನೋವಿಗೆ : ಎರಡು ಮೂರು ಲವಂಗಗಳನ್ನು ತೆಗೆದುಕೊಂಡು ಅದನ್ನು ಚೆನ್ನಾಗಿ ಕುಟ್ಟಿ, ಪುಡಿಮಾಡಿ, ನೋವಿರುವ ಹಲ್ಲಿಗೆ ಇಟ್ಟು ಅರ್ಧ ಗಂಟೆಕಾಲ ನೀರು ಉಗಿಯದೆ ಇರಬೇಕು. ಅಥವಾ ಪಪ್ಪಾಯಿ ಕಾಯಿಯ ಹಾಲನ್ನು ನೋವಿರುವ ಕಡೆಗೆ ಇಡಬೇಕು. ಆಗ ಹಲ್ಲು ನೋವು ತನ್ನಿಂದ ತಾನೇ ಹೊರಟು ಹೋಗುತ್ತದೆ.

೨೩. ಭೇದಿಗೆ : ಎಳೆಯ ತೆಂಗಿನ ಗುಳ್ಳನ್ನು ತಂದು ಜಜ್ಜಿ ಆಕಳು ಇಲ್ಲವೆ ಕುರಿಯ ಹಾಲನ್ನು ಹಾಕಿ ಅದರ ರಸವನ್ನು ಹಾಕಿ ಅದರ ರಸವನ್ನು ಕುಡಿಯಬೇಕು. ಆಗ ಅತಿಯಾಗಿ ಆಗುತ್ತಿರುವ ಭೇದಿ ತನ್ನಷ್ಟಕ್ಕೆ ತಾನೇ ನಿಂತು ಹೋಗುತ್ತದೆ.

೨೪ ಮುಳ್ಳುಚುಚ್ಚಿದರೆ : ಕಾಲಿಗೆ ಅಥವಾ ಕೈಗೆ ಮುಳ್ಳು ಚುಚ್ಚಿದರೆ, ಆ ಸ್ಥಳಕ್ಕೆ ಗೇರು ಮರದ

ಎಣ್ಣೆಯನ್ನು ಹಚ್ಚುತ್ತಾರೆ. ಇದರಿಂದ ಆ ಮುಳ್ಳು ಚುಚ್ಚಿದ್ದು ಹೊರಗೆ ಬರುವದಲ್ಲದೇ ನೋವು ಕಡಿಮೆಯಾಗುವುದು.

೨೫ ದೃಷ್ಟಿಯಾದರೆ : ಗಟ್ಟಿಯಾದ ಎಲೆಕಳ್ಳಿ ತುಂಡುಗಳನ್ನು ದಾರದಲ್ಲಿ ಪೋಣಿಸಿ ಅದನ್ನು ದೃಷ್ಟಿಯಾದ ವ್ಯಕ್ತಿಗೆ ಕಟ್ಟುವುದಲ್ಲದೆ. ಅವನ ಎರಡೂ ಪಕ್ಕಗಳಿಗೆ ಅದರ ಹಾಲನ್ನು ಹಚ್ಚುತ್ತಾರೆ.

೨೬ ಹೊಟ್ಟೆನೋವು : ದೊಡ್ಡವರಿಗೇನಾದರೂ ಹೊಟ್ಟೆ ನೋವು ಆದರೆ ಅವರ ಕೈರಟ್ಟೆ ಮತ್ತು ತೊಡೆಗಳನ್ನು ಬಿಗಿಯಾಗಿ ಕಟ್ಟಿ ಅವರ ಮುಖ ಅಡಿ ಹಾಕಿ ತಲೆದಿಂಬು ಅಥವಾ ಸಿಂಬಿ ಹಾಕಿ ಮಲಗಿಸಿದರೆ, ಎಲ್ಲಾ ಸರಿಹೋಗುತ್ತದೆ.

೨೭ ನಾಯಿ ಕಚ್ಚಿದರೆ : ಯಾರ ಮನೆಯ ನಾಯಿಕಚ್ಚಿರುತ್ತದೆಯೋ ಅವರ ಮನೆಯಿಂದಲೇ ನಾಯಿಕಚ್ಚಿಸಿಕೊಂಡ ವ್ಯಕ್ತಿಯು (ನಾಯಿಯ ಮಾಲಿಕನ ಮನೆಯಿಂದಲೇ) ನೀರನ್ನು ಕುಡಿಯಬೇಕು. ಮತ್ತು ನಾಯಿ ಕಚ್ಚಿದ ಗಾಯಕ್ಕೆ ಸುಣ್ಣ ಹಚ್ಚಬೇಕು. ಅದರಿಂದ ನಾಯಿ ಕಚ್ಚಿದ ನೋವು ಮತ್ತು ಗಾಯ ಕಡಿಮೆಯಾಗುವುದು.

೨೮ ಶೀತ ನೆಗಡಿ : ಶೀತವಾದರೆ ಬೆಳ್ಳುಳ್ಳಿಯನ್ನು ಕೊರಳಿಗೆ ಆಗುವಷ್ಟನ್ನು ದಾರಕ್ಕೆ ಪೋಣಿಸಿ ಕಟ್ಟುತ್ತಾರೆ. ಆ ರೀತಿಯಲ್ಲಿ ಕಟ್ಟಿದ ಬೆಳ್ಳುಳ್ಳಿ ಒಣಗಿ ಹೋಗುವ ಹೊತ್ತಿಗೆ ಶೀತವೆಲ್ಲಾ ಸರಿಹೋಗುತ್ತದೆ.

೨೯ ತಲೆನೋವನ್ನು ಹೋಗಲಾಡಿಸುವುದು : ಕೆರೆಯಲ್ಲಿಯ ಕೆಂಪು ಸೀಗಡಿಗಳನ್ನು ತಂದು ಅದರಿಂದ ರಸ ತೆಗೆದು ಕುಡಿಸಿ ನಿಂಬೆ ಹಣ್ಣನ್ನು ನೆತ್ತಿಗೆ ಹಾಕಿ ಉಜ್ಜಿ, ಅದನ್ನು ಕುಡಿಸಿ ನಂತರ ಮಜ್ಜಿಗೆಯನ್ನು ಕುಡಿಸಬೇಕು. ಏಳು ಮಡಿಕೆಗಳಿಂದ ನೀರನ್ನು ತಣ್ಣೀರು ತಲೆಯ ಮೇಲೆ ತಲೆ ನೋವು ಹುಷಾರು ಆಗುತ್ತದೆ ಎನ್ನುತ್ತಾರೆ.

೩೦ ಬಾಣಂತಿ ರೋಗಕ್ಕೆ : ಈ ರೋಗಕ್ಕೆ ಪಾರ್ಧಿಯರು ಅಲೋಸನ್ನಿ ಮುಕಸನ್ನಿ ಎಂದೂ ಕರೆಯುತ್ತಾರೆ. ತಲೆಗೆ ಸಗಣಿಯಿಂದ ಇಲ್ಲವೆ ಅರಶಿಣದಿಂದ ತಲೆಯ ಮೇಲೆ ಗುಂಡಿಯನ್ನು ಮಾಡಿ ಹಿಂದಿನಿಂದ ಚೆನ್ನಾಗಿ ಕಾಯಿಸಿದ ಹಂದಿ ತುಪ್ಪವನ್ನು ಸುರಿಯುತ್ತಾರೆ. ಆಗ ಆ ಹೆಣ್ಣು ಮಗಳು 'ಅಪ್ಪಸತ್ತೆ' ಎಂದು ಚೀರಿಕೊಳ್ಳುತ್ತಾಳೇ. ಹಾಗೆ ಚೀರಿಕೊಂಡರೆ ಆ ನೋವು ಹೋಯಿತು ಎಂಬ ನಂಬಿಕೆಯಿದೆ. ತಲೆಯೆಲ್ಲಾ ತುಪ್ಪದ ಬಿಸಿಗೆ ಗಾಯವಾಗಿ ಮುಂದೆ ಅದು ತನ್ನಷ್ಟಕ್ಕೆ ತಾನೇ ವಾಸಿಯಾಗುತ್ತದೆ. ಈ ರೀತಿಯಾಗಿ ಈ ರೋಗವು ವಾಸಿಯಾಗುವುದೆಂದು ನಂಬಿಕೆ.

ಪಾರ್ಧಿಯರು ತಾವು ಮಾಡುವ ವೈದ್ಯಕ್ಕೆ ವ್ಯಾಪಾರದ ಸಂಬಂಧ ಅನಿವಾರ್ಯವಾಗಿದೆ. ಈ ಕಾರ್ಯವು ಅವರ ಆರ್ಥಿಕತೆಯನ್ನು ಅವಲಂಬಿಸಿರುತ್ತದೆಯಲ್ಲದೆ, ತಮ್ಮ ಸಮುದಾಯದವರೆಗೂ ಇದು ಪುಕ್ಕಟೆಯಾಗಿ ಸಿಗುತ್ತದೆ. ಅವರ ವ್ಯಾಪಾರ ಜೀವನದ ಮುಖ್ಯವಾದ ಅಂಗವನ್ನು ವೈದ್ಯ ಪದ್ಧತಿ ಎಂದರೆ ತಪ್ಪಾಗಲಾರದು.

ನಮ್ಮ ಸಮಾಜದಲ್ಲಿ ನೆಲೆಸಿಂತ ಜನರಿಗೆ ಅರಿವಿಲ್ಲದೆ ಎಷ್ಟೋ ಔಷಧಿಗಳನ್ನು ಇವರು ಮಾರುತ್ತಾರೆ (ಕೊಡುತ್ತಾರೆ). ಮನುಷ್ಯ ಶರೀರದ ಪ್ರತಿಯೊಂದು ಅಂಗಕ್ಕೂ ಬರುವ ಕಾಯಿಲೆಗೆ ಇವರು ಔಷಧಿಯನ್ನು ಮಾಡುತ್ತಾರೆ. ಈ ಔಷಧಿಯು ಬಹುತೇಕ ಅವರ ಬುಡಕಟ್ಟಿಗೆ ಅಲ್ಲದೆ ಬೇರೆ ಬೇರೆ ಬುಡಕಟ್ಟಿನವರಿಗೂ ಹಾಗೂ ಜಾತಿಯವರಿಗೂ ಬಳಕೆಯಾಗುತ್ತದೆ. ಮತ್ತು ಇದು ಇವರ ವ್ಯಾಪಾರದ ಪ್ರಮುಖ ಸಾಧನವೂ ಆಗಿದೆ.

ಈ ರೀತಿಯಾಗಿ ಈ ಪಾರ್ಧಿಯರು ಮುಂತಾದ ವೈದ್ಯಕೀಯ ಸಾಮಗ್ರಿಗಳನ್ನು ತಯಾರು ಮಾಡುವುದು ಮತ್ತು ಅದರ ಮಾರಾಟ ಮಾಡುವುದು ಪಾರ್ಧಿಯರ ಪ್ರಮುಖ ಕೈಗಾರಿಕೆ ಮತ್ತು ವ್ಯಾಪಾರಿ ಸಾಮಗ್ರಿಗಳಾಗಿವೆ. ಇವರು ಬಹುತೇಕ ಆದಾಯವನ್ನು ಈ ರೀತಿಯಿಂದಲೂ ಸಂಪಾದಿಸುತ್ತಾರೆ. ಹೆಚ್ಚು ಕಡಿಮೆ ಬಹುತೇಕ ಪಾರ್ಧಿಯರು ತಮ್ಮ ಮಾರಾಟದ ಸಾಮಗ್ರಿಗಳ ಜೊತೆಯಲ್ಲಿ ಈ ರೀತಿಯ ವೈದ್ಯಕೀಯ ವಸ್ತುಗಳನ್ನು ಕಡ್ಡಾಯವಾಗಿ ಇಟ್ಟುಕೊಂಡಿರುತ್ತಾರೆ. ಹೆಚ್ಚಿನ ಗಿರಾಕಿಗಳು ಈ ಪಾರ್ಧಿಯರನ್ನು ಆಕರ್ಷಿಸುವುದು ಈ ವೈದ್ಯಕೀಯ ಸಾಮಗ್ರಿಗಳ ಮೂಲಕವೆ. ನಂತರ ಇವುಗಳಲ್ಲಿ ನಂಬಿಕೆ ಬಂದ ಮೇಲೆ ಅಥವಾ ಬಾರದಿದ್ದರೂ ಇವೆಲ್ಲವುಗಳ ನಂತರ ಗಿರಾಕಿಗಳಿಗೆ ಲಿಂಗ, ಸಾಲಿಗ್ರಾಮ, ಬಗೆಬಗೆಯ ಹರಳುಗಳು, ಹುಲಿಯ ಉಗುರು. ಮುಂತಾದ ಬೆಲೆ ಬಾಳುವ ವಸ್ತುಗಳನ್ನು ತೋರಿಸುತ್ತಾರೆ. ಒಬ್ಬ ಗಿರಾಕಿ ಕಡೇ ಪಕ್ಷ ಒಂದಾದರೂ ಸಾಮಗ್ರಿಗಳನ್ನು ಕೊಳ್ಳುವಂತೆ ಮಾಡುವುದು ಪಾರ್ಧಿಯರು ಹೊಂದಿರುವ ಬಗೆಬಗೆಯ ಸಾಮಗ್ರಿಗಳೇ ಕಾರಣ.

ಸಾಮಗ್ರಿಗಳ ವಿವಿಧತೆ ಮತ್ತು ಅಪರೂಪದ ಸ್ಥಿತಿ ಗಿರಾಕಿಗೆ ಸಾಮಗ್ರಿಗಳ್ನು ಕೊಳ್ಳುವಂತೆ ಮಾಡುತ್ತದೆಯಲ್ಲದೇ ಇದಕ್ಕಾಗಿ ಪಾರ್ಧಿಯರು ಬಳಸುವ ಭಾಷೆ, ಆತ ಮಾಡುವ ವಸ್ತು ವಿಶ್ಲೇಷಣೆ ಒಂದು ಬಗೆಯಲ್ಲಿ ಮೋಹಕ ವಾಗಿಯೇ ಇರುತ್ತದೆ.

ಆಧಾರಗಳು

ಪ್ರಹ್ಲಾದ ಬೇಟಗೇರಿ., ೧೯೯೩, 'ಅಡವಿಚೆಂಚರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ರಾಜಪ್ಪ ದಳವಾಯಿ., ೧೯೯೩, 'ಹಕ್ಕಿಪಿಕ್ಕಿಯರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಕ್ತೃಗಳು

ಹೆಸರು	ವಯಸ್ಸು	ಬೆಡಗು	ಸ್ಥಳ
ಪೂಜಾರಿ ಝುಲ್ಲು	೮೦	ಕೊರಾಬಿಯ	ಕಂಪ್ಲಿ
ಮೇಲಕೇರಿ ಎಸ್.ಪಿ.	೪೨	ಚೆಲುವಾದಿ	ಗುಲ್ಬರ್ಗಾ
ರವೀಂದ್ರಕುಮಾರ್	೩೦	ಗುಜರಾತ್ಯೊ	ಪಕ್ಷಿರಾಜಪುರ
ಸಂತರಾಜು	೩೦	ಗುಜರಾತ್ಯೊ	ಟೈಗರಬ್ಲಾಕ್
ವೆಂಕಟೇಶ	೩೫	ಸಾವಂಡಿಯಾ	ಭೂತಾನಹಳ್ಳಿ
ರೇಣುಕ ತಂದೆ ಪರಶುರಾಮ	೩೦	ಪಿಂಪಳಾಜ	ಹುಬ್ಬಳ್ಳಿ

ಅಧ್ಯಾಯ - ೬

ಪಾರ್ಧಿಯರ ಶಿಕ್ಷಣ, ಉದ್ಯೋಗ ಮತ್ತು ಕ್ರೀಡೆಗಳು

ಅ. ಶಿಕ್ಷಣ

೧. ಸರ್ಕಾರದ ಶಿಕ್ಷಣದ ಯೋಜನೆಗಳು

ಆ. ಕ್ರೀಡೆಗಳು

೧. ಹುಂದ್ರಾ ಹುಂದಿ ಆಟ

೨. ಮೀಠ್‌ಪಾಡಿ ಆಟ

೩. ಮಶಿನ್ ಆಟ

೪. ಕಾಕಡೀನು ಖೇಲ್

೬ ಪಾರ್ಧಿಯರ ಶಿಕ್ಷಣ, ಉದ್ಯೋಗ ಮತ್ತು ಕ್ರೀಡೆಗಳು

ಶಿಕ್ಷಣವನ್ನು ಯಾರು ಯಾವತ್ತಿಗೂ ಕದಿಯದಂತಹ ಅತ್ಯಮೂಲ್ಯವಾದ ಆಸ್ತಿ. ಶಿಕ್ಷಣವು ಅನಾಗರಿಕತೆಯಿಂದ ಮಾನವನನ್ನು ನಾಗರಿಕತೆಯತ್ತ ಸಾಗಲು ಮತ್ತು ಮುಖ್ಯವಾಹಿನಿಗೆ ತರಲು ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಪ್ರತಿಯೊಬ್ಬ ನಾಗರಿಕನಿಗೆ ಅಕ್ಷರ ಜ್ಞಾನ ಮೂಡಿಸುವ ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಂಡು ಮಾನವನ ಶಿಕ್ಷಣಕ್ಕೆ ಕಂಕಣಬದ್ಧವಾಗಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ

ಅ. ಶಿಕ್ಷಣ

೧. ಸರ್ಕಾರದ ಶಿಕ್ಷಣ ಯೋಜನೆಗಳು

'ಕಲಿತ ಹೆಣ್ಣು ಸಂಸಾರದ ಕಣ್ಣು', 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ', 'ಕಲಿ-ನಲಿ', 'ಮರಳಿ ಬಾ ಶಾಲೆಗೆ', 'ಚಿಕ್ಕ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮ', 'ಸಮುದಾಯದತ್ತ ಶಾಲೆ', 'ಕೂಲಿಯಿಂದ ಶಾಲೆಗೆ', 'ಸರ್ವ ಶಿಕ್ಷಣ ಅಭಿಯಾನ', 'ಚಿಣ್ಣರ ಅಂಗಳ', ಇವೆಲ್ಲವುಗಳು ಕರ್ನಾಟಕ ರಾಜ್ಯ ಸರ್ಕಾರವು ತನ್ನ ರಾಜ್ಯದ ಜನತೆಯು ಸಂಪೂರ್ಣ ಸಾಕ್ಷರರಾಗಲು ಹಾಗೂ ಸುಶಿಕ್ಷಿತರಾಗಲೂ ಜಾರಿಗೆ ತಂದಿರುವ ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳು. ಈ ಎಲ್ಲಾ ಯೋಜನೆಗಳಿಂದ ಸ್ವಲ್ಪದರೂ ಕರ್ನಾಟಕದ ಜನತೆಗೆ ಸಹಾಯವಾಗಿದೆ ಎಂತಲೂ, ಹಾಗೂ ಇದರ ಲಾಭದಲ್ಲಿ ಅನೇಕರು ಶಿಕ್ಷಿತರಾಗಿದ್ದಾರೆಂತಲೂ ಹೇಳಬಹುದಾಗಿದೆ. ಪಾರ್ಧಿಯರ ಶಿಕ್ಷಣದ ಬಗ್ಗೆ ಅಧ್ಯಯನ ಮಾಡುವಾಗ ಮನಸ್ಸಿಗೆ ಖೇಧ ಎನಿಸಿತ್ತು. ಸರ್ಕಾರವು ಹಮ್ಮಿಕೊಂಡ ಶಿಕ್ಷಣ ಸೌಲಭ್ಯಗಳು ಇವರಿಗೆ ತಲುಪದೇ ಇರುವುದು ವಿಪರ್ಯಸವೆನಿಸಿದೆ. ಇದಕ್ಕೆ ಸರ್ಕಾರ ನಿರ್ಲಕ್ಷ್ಯವೋ ಅಥವಾ ಅಧೀಕಾರಿ ವರ್ಗಗಳ ಸ್ವಾರ್ಥವೋ ಅಥವಾ ಸಮುದಾಯದ ಮೌಢ್ಯತೆಯೇ, ಶಿಕ್ಷಣಕ್ಷೇತ್ರವೆನ್ನುವುದು ಅವರಿಗೆ ಮರೀಚಿಕೆಯಾಗಿದೆ. ಆದರೆ ದುಃಖದ ಹಾಗೂ ಖೇಧದ ವಿಷಯವೆಂದರೆ, ಈ ಯಾವೊಂದು ಅಂಶಗಳ ಗಂಧ ಗಾಳಿಯೂ ಈ ಪಾರ್ಧಿ ಬುಡಕಟ್ಟಿಗೆ ತಲುಪಿಲ್ಲವೆಂದರೆ ತಪ್ಪಾಗದು. ಈ ಯೋಜನೆಗಳು ಈ ಪಾರ್ಧಿ ಬುಡಕಟ್ಟಿಗೆ ತಲುಪಿಸುವಲ್ಲಿ ಆ ಸರ್ಕಾರಗಳು ವಿಫಲವಾಗಿ ಅಥವಾ ಈ ಯೋಜನೆಗಳ ಬಗ್ಗೆ ಈ ಬುಡಕಟ್ಟು ತಲೆಕೆಡಿಸಿಕೊಂಡಿಲ್ಲವೋ ಆ ಭಗವಂತನೇ ಬಲ್ಲ.

ಇವರ ಶಿಕ್ಷಣವು ಪ್ರಗತಿಯಾಗದಿದ್ದಕ್ಕೆ ಇವರದೇ ಆದ ಕೆಲವು ಕಾರಣಗಳಾಗಿವೆ. ಊರಿಂದ ಊರಿಗೆ ತಮ್ಮ ಹೊಟ್ಟೆ ಪಾಡಿಗಾಗಿ ಅಲೆಯುತ್ತಿದ್ದುದರಿಂದ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಗಲಿಲ್ಲ [illegible] ಒಪ್ಪುವಂತಹ ಮಾತೇ ಸರಿ. ಆದರೆ [illegible] ದಿನಗಳಲ್ಲಿ ಇವರ ಅಲೆಮಾರಿತನ ಹಾಗೂ [illegible] ಜೀವನ

ಹಿಂದಿಗಿಂತ ಇಂದು ಸ್ವಲ್ಪ ಕಡಿಮೆಯಾಗಿದೆ ಯಾಕೆಂದರೆ ಇಂದು ಊರಿಂದ ಊರಿಗೆ ಅಲೆಯುವ ಪಾರ್ಧಿಯರಿಗಿಂತ ಒಂದೇ ಕಡೆ ನೆಲೆನಿಂತ ಪಾರ್ಧಿಯರ ಸಂಖ್ಯೆಯೇ ಹೆಚ್ಚಾಗುತ್ತಿದೆ. ಒಂದು ಸಂತೋಷದ ವಿಷಯವೆಂದರೆ, ಶಿಕ್ಷಣದಲ್ಲಿ ಇಷ್ಟೊಂದು ಹಿಂದುಳಿದಿದ್ದರೂ ಈ ಬುಡಕಟ್ಟು ಸಾಮಾನ್ಯ ಜ್ಞಾನದಲ್ಲಿ ಇನ್ನುಳಿದ ಪಂಗಡದವರಿಗಿಂತ ಮುಂದೆಯೇ ಇದ್ದಾರೆ. ಊರಿಂದ ಊರಿಗೆ ತಿರುಗುವುದರಿಂದ ವಿವಿಧ ರೀತಿಯ ಜನರನ್ನು ಭೇಟಿಯಾಗುವುದರಿಂದಲೇ ಅವರ ಸಾಮಾನ್ಯ ಜ್ಞಾನ ಹೆಚ್ಚಾಗಲು ಸಾಧ್ಯವಾಯಿತು ಎಂದರೆ ಅದೇನು ಅತಿಶಯೋಕ್ತಿಯಾಗಲಾರದು.

ಆದರೆ ಇವರು ತಮ್ಮ ಬೇಟೆ ಮತ್ತು ವ್ಯಾಪಾರದಿಂದ ಆರ್ಥಿಕ ಚಟುವಟಿಕೆಯಲ್ಲಿ ಚತುರರೇ ಸರಿ.

ಮೈಸೂರು ಜಿಲ್ಲೆಯಲ್ಲಿಯ ಹುಣಸೂರು ತಾಲೂಕಿನಲ್ಲಿಯ ಪಕ್ಷಿರಾಜಪುರ ಕಾಲೋನಿಯವರು ಹಾಗೂ ಅದೇ ಜಿಲ್ಲೆಯ ಹೆಚ್. ಡಿ. ಕೋಟೆ (ಹೆಗ್ಗಡ ದೇವನ ಕೋಟೆ) ತಾಲೂಕಿನ ಟೈಗರ್ ಬ್ಲಾಕ್‌ನಲ್ಲಿಯ ಬಹುತೇಕ ಹಕ್ಕಿಪಿಕ್ಕಿಯರು (ಪಾರ್ಧಿಯರು) ಭಾರತದ ಅನೇಕ ಭಾಗಗಳಿಗೆ ಭೇಟಿಕೊಡುವುದರ ಜೊತೆಗೆ ಸಿಂಗಾಪೂರ್, ಹಾಂಗ್‌ಕಾಂಗ್, ಮಲೇಷಿಯಾ, ದುಬೈ, ಸೌದಿಗಳಿಗೆ ಅನೇಕರು ಭೇಟಿ ಕೊಡುವವರಾಗಿದ್ದು, ಈ ಭೇಟಿಕೊಡುವವರಲ್ಲಿ ಒಂದಿಬ್ಬರನ್ನು ಬಿಟ್ಟರೆ ಯಾರೂ ಪದವಿಧರರಿಲ್ಲ. ಆದರೂ ಅಂದಾಜಿನ ಮೇಲೆಯೇ ಇವರು ಇಷ್ಟೊಂದು ದೇಶಗಳಲ್ಲಿ ವ್ಯವಹರಿಸುತ್ತಿರುವುದು ಇವರ ಸಾಮಾನ್ಯ ಜ್ಞಾನದಿಂದಲೇ ಎಂಬುದು ಹೆಮ್ಮೆಯ ವಿಷಯವೇ ಸರಿ.

೧೯೭೧ರ ಜನಸಂಖ್ಯೆಯ ದಾಖಲೆಯ ಪ್ರಕಾರ ಇವರಲ್ಲಿ ಕೇವಲ ೧೨ ಪ್ರತಿಶತ ಜನರು ಮಾತ್ರ ಶಿಕ್ಷಿತರಿದ್ದರು. ೧೯೭೧ರಲ್ಲಿ ನಡೆದ ಜನಗಣತಿಯ ದಾಖಲೆಯು ಈ ಕೆಳಗಿನ ಅಂಕಿ ಅಂಶಗಳನ್ನು ಹೊರಹಾಕುತ್ತದೆ.

ನಗರ ಪ್ರದೇಶಗಳಲ್ಲಿಯ ಹಕ್ಕಿಪಿಕ್ಕಿ ಪುರುಷರ ಸಂಖ್ಯೆ	೧೭೨
ಸ್ತ್ರೀಯರ ಸಂಖ್ಯೆ	೧೫೭
ಹಳ್ಳಿಗಾಡು ಪ್ರದೇಶಗಳಲ್ಲಿಯ ಹಕ್ಕಿಪಿಕ್ಕಿ ಪುರುಷರ ಸಂಖ್ಯೆ	೧೧೪೦
ಸ್ತ್ರೀಯರ ಸಂಖ್ಯೆ	೧೦೯೨
ಶಿಕ್ಷಿತ ಹಕ್ಕಿಪಿಕ್ಕಿ ಪುರುಷರ ಜನಸಂಖ್ಯೆ	೨೧೦
ಸ್ತ್ರೀಯರ ಸಂಖ್ಯೆ	೮೮
ಅಶಿಕ್ಷಿತ ಹಕ್ಕಿಪಿಕ್ಕಿ ಪುರುಷರ ಜನಸಂಖ್ಯೆ	೧೧೦೨
ಸ್ತ್ರೀಯರ ಜನಸಂಖ್ಯೆ	೧೧೬೧
ಇವರೆಲ್ಲರುಗಳ ಒಟ್ಟು ಮೊತ್ತ	೫೧೨೨

ಪಾರ್ಧಿಯರ ಶಿಕ್ಷಣ ಮಟ್ಟವನ್ನು ಕುರಿತಂತೆ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಅನೇಕ ವಿಚಾರಗಳು, ಫಲಿತಾಂಶಗಳು ಇವರ ಶಿಕ್ಷಣಮಟ್ಟ, ಮತ್ತು ಸಮಾಜದಲ್ಲಿ ಅವರ ಉದ್ಯೋಗ, ಸ್ಥಾನಮಾನಗಳನ್ನು ಕುರಿತಂತೆ ಹೊರಬಂದವು. ಈ ಬುಡಕಟ್ಟು ಎಲ್ಲೆಲ್ಲಿ ವಾಸವಾಗಿದೆಯೋ ಅಲ್ಲೆಲ್ಲಾ ಜಿಲ್ಲಾವಾರು ಕ್ಷೇತ್ರಕಾರ್ಯವನ್ನು ಕೈಗೊಂಡಾಗಿನ ಸಂದರ್ಭದಲ್ಲಿ ಈ ವಿಚಾರವನ್ನು ಕುರಿತಂತೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಯಿತು.

ಅದೆಂದರೆ ಸಹಜವಾಗಿಯೇ ಅಲೆಮಾರಿಯಾಗಿರುವ ಈ ಬುಡಕಟ್ಟಿನವರು ಒಂದು ಪ್ರಾದೇಶಿಕ ನೆಲೆಯಲ್ಲಿ ಇತ್ತೀಚೆಗೆ ವಾಸಿಸಲು ಪ್ರಾರಂಭಿಸಿದರೂ ಅವರ ಶೈಕ್ಷಣಿಕ ಮಟ್ಟ ಹಾಗೂ ಉದ್ಯೋಗದ ಸ್ಥಾನಮಾನ ಮುಂತಾದ ವಿಚಾರಗಳಲ್ಲಿ ಅಂತಹ ಹೇಳಿಕೊಳ್ಳುವಂತಹ ಗಮನಾರ್ಹ ಪ್ರಗತಿಯೇನೂ ಸಾಧ್ಯವಾಗಿಲ್ಲ. ಕೆಳಗಿನ ಕೋಷ್ಟಕ-೩ರಲ್ಲಿ ಉತ್ತರ ಕರ್ನಾಟಕದ ಒಂಬತ್ತು ಜಿಲ್ಲೆಗಳ ಪಾರ್ಧಿ ಬುಡಕಟ್ಟಿನ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣದ ಸಂಪೂರ್ಣ ವಿವರಣೆಯನ್ನು ನೀಡುತ್ತದೆ.

ಕೋಷ್ಟಕ ೩. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಶೈಕ್ಷಣಿಕ ಸ್ಥಾನಮಾನ

		ಜನಸಂಖ್ಯೆ			ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ ಶಿಕ್ಷಣ			ಪ್ರೌಢಶಿಕ್ಷಣ		
ಜಿಲ್ಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಾಗಲಕೋಟೆ	೩೬೨	೧೦೩೬	೯೯೦	೨೦೨೬	೧೩೧	೯೦	೨೨೧	೭೦	೩೪	೧೦೪	೬೦	೧೨	೭೨
ಬಳ್ಳಾರಿ	೨೦೨	೩೪೮	೩೬೭	೭೧೫	೨೪	೧೬	೪೦	೪೫	೩	೪೮	೨೧	೧	೨೨
ಬೀದರ್	೬೮	೧೯೫	೨೦೨	೩೯೭	೧೦	೫	೧೫	೧೭	೬	೨೩	೧೪	೧	೧೫
ಬಿಜಾಪುರ	೨೧೦	೬೧೭	೬೬೧	೧೨೭೮	೧೧೦	೭೮	೧೮೮	೪೩	೨೭	೭೦	೩೫	೧೨	೪೭
ಧಾರವಾಡ	೩೭೪	೧೦೮೯	೯೯೯	೨೦೮೮	೧೪೮	೧೦೬	೨೫೪	೧೦೬	೪೩	೧೪೯	೫೦	೯	೫೯
ಗದಗ	೧೪೦	೩೭೬	೩೭೪	೭೫೦	೪೧	೩೫	೭೬	೯	೧	೧೦	೧೧	೩	೧೪
ಗುಲ್ಬರ್ಗಾ	೧೨೫	೩೭೫	೩೪೧	೭೧೬	೨೧	೩	೨೪	೯	೧	೧೦	೪		೪
ಕೊಪ್ಪಳ	೨೫	೪೪	೪೩	೮೭	೭	೨	೯						
ಮೈಸೂರು	೮೫	೨೮೨	೨೫೯	೫೪೧	೫೯	೩೭	೯೬	೧೩	೧೩	೨೬	೨೯	೧೦	೩೯
ಒಟ್ಟು	೧೫೯೧	೪೩೬೨	೪೨೩೬	೮೫೯೮	೫೫೧	೩೭೨	೯೨೩	೩೧೨	೧೨೮	೪೪೦	೨೨೪	೪೮	೨೭೨

ಈ ಮೇಲಿನ ಕೋಷ್ಟಕದ ಪ್ರಕಾರ ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳು ಮತ್ತು ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆ ಸೇರಿದಂತೆ ಪಾರ್ಧಿ ಬುಡಕಟ್ಟಿನ ಜಿಲ್ಲಾವರು ಶೈಕ್ಷಣಿಕ ಮಟ್ಟವನ್ನು ಅವಲೋಕಿಸಿದಾಗ ಒಟ್ಟು ಶೇ. ೫೨ರಷ್ಟು ಪ್ರಾಥಮಿಕ ಶಿಕ್ಷಣ ಕಂಡು ಬಂತು. ಇದರಲ್ಲಿ ಶೇ. ೨೮ರಷ್ಟು ಧಾರವಾಡ ಜಿಲ್ಲೆಯು ಪ್ರಾಥಮಿಕ ಶಿಕ್ಷಣಹೊಂದಿದ್ದು ಇದು ರಾಜ್ಯದಲ್ಲಿಯೇ ಪಾರ್ಧಿ ಪ್ರಾಥಮಿಕ ಶಿಕ್ಷಣದಲ್ಲಿ ಮುಂದಿರುತ್ತದೆ. ಹಾಗೆಯೆ ಶೇ. ೨೪ರಷ್ಟು ಪ್ರಾಥಮಿಕ ಶಿಕ್ಷಣವು ಬಾಗಲಕೋಟ ಜಿಲ್ಲೆಯು ಹೊಂದಿದ್ದಾರೆ. ಹಾಗೆಯೇ ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯು ಶೇ. ೧೦ ಪ್ರತಿಶತ ಪ್ರಾಥಮಿಕ ಶಿಕ್ಷಣವು ಹೊಂದಿದೆ. ಇನ್ನೂಳಿದಂತೆ ಉಳಿದ ಜಿಲ್ಲೆಗಳು ಕಡಿಮೆ ಪ್ರಮಾಣದ ಪ್ರಾಥಮಿಕ ಶಿಕ್ಷಣ ಹೊಂದಿದೆ. ಹೀಗೆಯೆ ಮಾಧ್ಯಮಿಕ ಶಿಕ್ಷಣವು ರಾಜ್ಯದ ಪಾರ್ಧಿಯರಲ್ಲಿ ಶೇ. ೨೪ರಷ್ಟಿದೆ. ಇಲ್ಲಿಯೂ ಸಹ ಶೇ. ೩೪ರಷ್ಟು ಶಿಕ್ಷಣಹೊಂದುವ ಮೂಲಕ ಧಾರವಾಡ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದಾರೆ. ಶೇ. ೨೪ರಷ್ಟು ಬಾಗಲಕೋಟ ದ್ವಿತೀಯ ಸ್ಥಾನದಲ್ಲಿದ್ದು, ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯು ಶೇ. ೬ರಷ್ಟು, ಮಾಧ್ಯಮಿಕ ಶಿಕ್ಷಣವನ್ನು ಹೊಂದಿದೆ. ಇನ್ನೂಳಿದ ಇತರೆ ಜಿಲ್ಲೆಗಳು ಕನಿಷ್ಠ ಮಾಧ್ಯಮಿಕ ಶಿಕ್ಷಣವನ್ನು ಹೊಂದಿರುತ್ತವೆ. ಕೊನೆಯದಾಗಿ ಪ್ರೌಢಶಿಕ್ಷಣವನ್ನು ಅವಲೋಕಿಸಿದಾಗ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಮೈಸೂರು ಜಿಲ್ಲೆಯು ಸೇರಿದಂತೆ ಒಟ್ಟು ರಾಜ್ಯದ ಪ್ರೌಢ ಶೈಕ್ಷಣಿಕ ಮಟ್ಟವು ಶೇ. [illegible]ರಷ್ಟು ಇದೆ. ಇದರಲ್ಲಿ ಶೇ. ೨೬ರಷ್ಟು ಬಾಗಲಕೋಟೆ ಹಾಗೂ ಶೇ. ೨೨ರಷ್ಟು ಧಾರವಾಡ

ಜಿಲ್ಲೆಯು ಶೇ. ೧೪ರಷ್ಟು ಮೈಸೂರು ಜಿಲ್ಲೆಯು ಪ್ರೌಢಶಿಕ್ಷಣವನ್ನು ಹೊಂದಿರುತ್ತವೆ. ಇನ್ನೂಳಿದ ಜಿಲ್ಲೆಗಳ ಶಿಕ್ಷಣ ಮಟ್ಟವು ಕನಿಷ್ಟವಾಗಿದ್ದು ಅದನ್ನು ಕೋಷ್ಟಕ-೪ರಲ್ಲಿ ನೀಡಲಾಗಿದೆ. ಹಾಗೇಯೇ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣದ ಮುಂದುವರಿಕೆಯಾಗಿ ಪದವಿಪೂರ್ವ, ಡಿಪ್ಲೊಮಾ, ಪದವಿಧರ, ಸ್ನಾತಕೋತ್ತರ ಹಾಗೂ ಇತರೆ ಶೈಕ್ಷಣಿಕ ಮಟ್ಟವನ್ನು ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳು ಮತ್ತು ದಕ್ಷಿಣ ಕರ್ನಾಟಕ ಮೈಸೂರು ಜಿಲ್ಲೆ ಸೇರಿದಂತೆ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೪. ಜಿಲ್ಲಾವಾರು ಪಾರ್ಧಿ ಬುಡಕಟ್ಟಿನ ಶೈಕ್ಷಣಿಕ ಸ್ಥಾನಮಾನಗಳು

		ಪದವಿ ಪೂರ್ವ ಶಿಕ್ಷಣ			ಡಿಪ್ಲೊಮಾ			ಪದವಿ ಶಿಕ್ಷಣ			ಸ್ನಾತಕೋತ್ತರ		ಇತರೆ		
ಜಿಲ್ಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಾಗಲಕೋಟೆ	೩೬೨	೨೫	೯	೩೪	೬	೧	೭	೧೭		೧೭	೪		೧೬	೩	೧೯
ಬಳ್ಳಾರಿ	೨೦೨	೧		೧				೨		೨					
ಬೀದರ್	೬೮	೪	೪	೮		೧	೧	೧		೧					
ಬಿಜಾಪುರ	೨೧೦	೧೧	೩	೧೪				೧೦	೧	೧೧			೨	೨	೪
ಧಾರವಾಡ	೩೭೪	೧೦	೩	೧೩	೨		೨	೪	೨	೬	೧		೩		೩
ಗದಗ	೧೪೦	೧		೧									೨	೨	೪
ಗುಲ್ಬರ್ಗಾ	೧೨೫														
ಕೊಪ್ಪಳ	೨೫														
ಮೈಸೂರು	೮೫	೮		೮				೨		೨	೧		೧		೧
	೧೫೯೧	೬೦	೧೯	೭೯	೮	೨	೧೦	೩೬	೩	೩೯	೬		೨೪	೭	೩೧

ಪಾರ್ಧಿ ಬುಡಕಟ್ಟಿನ ಪದವಿಪೂರ್ವ ಶಿಕ್ಷಣವು ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯನ್ನು ಅವಲೋಕಿಸಿದಾಗ ಕೇವಲ ಶೇ. ೪ ರಷ್ಟಾಗಿದ್ದು, ಬಾಗಲಕೋಟೆ ಜಿಲ್ಲೆಯು ಶೇ. ೪೪ರಷ್ಟು ಹೊಂದಿದೆ. ಬಿಜಾಪುರ ಜಿಲ್ಲೆಯು ಶೇ. ೧೮ರಷ್ಟು ಮತ್ತು ಮೈಸೂರು ಜಿಲ್ಲೆಯು ಶೇ. ೧೦ರಷ್ಟು ಇದ್ದು, ಉಳಿದ ಜಿಲ್ಲೆಗಳಲ್ಲಿ ಕನಿಷ್ಠವಾಗಿರುತ್ತದೆ.

ಪದವಿ ಶಿಕ್ಷಣವನ್ನು ಅವಲೋಕಿಸಲಾಗಿ ರಾಜ್ಯದಲ್ಲಿ ಕೇವಲ ೨ ಪ್ರತಿಶತ ಮಾತ್ರ ಪದವಿಯ ಶಿಕ್ಷಣ ಪಡೆದವರಾಗಿದ್ದು. ಅದರಲ್ಲಿ ಬಾಗಲಕೋಟೆ ಜಿಲ್ಲೆಯು ಶೇ. ೪೪ರಷ್ಟು, ಬಿಜಾಪುರ ಜಿಲ್ಲೆಯು ಶೇ. ೨೮ರಷ್ಟು ಹಾಗೂ ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯು ಶೇ. ೫ರಷ್ಟು ಪದವಿಯನ್ನು ಹೊಂದಿದು ಉಳಿದ ಜಿಲ್ಲೆಗಳು ಪದವಿ ಶಿಕ್ಷಣವು ಕನಿಷ್ಠ ಪ್ರತಿಶತವಾಗಿ ಕಂಡುಬರುತ್ತದೆ. ಹಾಗೆಯೇ ಸ್ನಾತಕೋತ್ತರ ಶಿಕ್ಷಣದ ಮಟ್ಟವು ರಾಜ್ಯದಲ್ಲಿ ಕೇವಲ ೧ ಪ್ರತಿಶತವಾಗಿ ಕಂಡುಬಂದಿದೆ. ಅದೇ ರೀತಿಯಾಗಿ ವೃತ್ತಿಪರ ಶಿಕ್ಷಣಗಳಾದ ಡಿಪ್ಲೊಮಾ. ಐಟಿಐ, ಜೆ.ಓ.ಸಿ., ಟಿ.ಸಿ.ಎಚ್. ಇತರೆಯಾಗಿ ಶೇ. ೩ರಷ್ಟು ಶಿಕ್ಷಣ ಪಡೆದವರಾಗಿರುತ್ತಾರೆ.

ಉದಾಹರಣೆ ಕೇವಲ ಇಬ್ಬರು ಯುವಕರು ಮಾತ್ರ ಪದವಿಯನ್ನು ಪಡೆದಿದ್ದಾರೆ ಇವನ್ನು ಹೊರತುಪಡಿಸಿದರೆ ಇಪ್ಪತ್ತೈದು ಯುವಕರು ಎಸ್.ಎಸ್.ಎಲ್.ಸಿ ಹಾಗೂ ಒಬ್ಬಳೇ ಒಬ್ಬಳು ಯುವತಿ ಮಾತ್ರ ಎಸ್.ಎಸ್.ಎಲ್.ಸಿ. ಪಾಸು ಮಾಡಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿತು. ಇದು ಕೇವಲ ಬಳ್ಳಾರಿ ಜಿಲ್ಲೆಯಿಂದಲ

ವಿಷಯವಲ್ಲ ಈ ಬುಡಕಟ್ಟಿನವರು ಮುಖ್ಯವಾಗಿ ವಾಸಿಸುವ ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಗದಗ, ಧಾರವಾಡ, ಹುಬ್ಬಳ್ಳಿ ಮುಂತಾದ ಜಿಲ್ಲೆಗಳಲ್ಲೂ ಇದೇ ರೀತಿಯ ಅಥವಾ ಇದಕ್ಕಿಂತ ಕಡಿಮೆ ಫಲಿತಾಂಶಗಳನ್ನು ಇವರ ಶಿಕ್ಷಣ ಮತ್ತು ಉದ್ಯೋಗದ ವಿಷಯದಲ್ಲಿ ಕಾಣಬಹುದಾಗಿದೆ.

ಶಿಕ್ಷಣ ಕುರಿತು ಮುಂದೆ ಧಾರವಾಡ ಜಿಲ್ಲೆಗೆ ಬಂದರೆ, ಧಾರವಾಡ ಜಿಲ್ಲೆಯನ್ನು ಸರಸ್ವತಿ ನಗರ ಅಥವಾ ವಿಶ್ವವಿದ್ಯಾಲಯಗಳ ನಗರವೆಂತಲೂ ಕರೆಯುತ್ತಾರೆ. ಇಂತಹ ಜಿಲ್ಲೆಯಲ್ಲಿ ಹುಬ್ಬಳ್ಳಿ ನಗರದಲ್ಲಿ ಒಂದು ಹಾಗೂ ಧಾರವಾಡ ತಾಲೂಕಿನ ಆಳ್ನಾವರ್ ಬಳಿಯ ಕಂಬಾರಗಣಿ(ಜೈಭಾರತ ಕಾಲೋನಿ)ಯಲ್ಲಿ ಈ ಬುಡಕಟ್ಟಿನವರ ಬೃಹತ್ ನೆಲೆಯಾಗಿ ನಿಂತಿರುವ ಒಟ್ಟು ಕುಟುಂಬಗಳ ಸಂಖ್ಯೆ ೩೭೪ ಆಗಿದ್ದು, ಜಿಲ್ಲೆಯಲ್ಲಿ ಕೇವಲ ಒಬ್ಬ ಯುವಕ ಸ್ನಾತಕೋತ್ತರ ಪದವಿಯನ್ನು, ನಾಲ್ಕು ಜನ ಯುವಕರು ಪದವಿಯನ್ನು ಹಾಗೂ ಇಬ್ಬರು ಯುವತಿಯರು ಪದವಿಯನ್ನು ಹಾಗೂ ಮೂರು ಯುವಕರು ಬೇರೆ ತಾಂತ್ರಿಕ ಕೋರ್ಸ್‌ಗಳನ್ನು ಮಾಡಿಕೊಂಡು, ಹತ್ತು ಯುವಕರು ಹಾಗೂ ಮೂರು ಬಾಲಕಿಯರು ಪದವಿಪೂರ್ವ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಇದನ್ನು ಬಿಟ್ಟರೆ ಇನ್ನುಳಿದವರೆಲ್ಲಾ ತಮ್ಮ ಶಿಕ್ಷಣವನ್ನು ಪ್ರೌಢಶಾಲೆಗೆ ಸೀಮಿತಗೊಳಿಸಿಕೊಂಡಿದ್ದಾರೆ. ಧಾರವಾಡ ಪಕ್ಕದ ಜಿಲ್ಲೆಯಾದ ಗದಗ ನಗರದಲ್ಲಿಯೂ ಪಾರ್ಧಿಯರ ಬೃಹತ್ ನೆಲೆಯಾಗಿದ್ದು, ಜಿಲ್ಲೆಯಲ್ಲಿ ಕೇವಲ ಇಬ್ಬರು ಯುವಕ ಹಾಗೂ ಇಬ್ಬರು ಯುವತಿಯರು ವೃತ್ತಿಪರ ತರಬೇತಿ(ಜೆಓಸಿ)ಗಳನ್ನು ಮತ್ತು ಕೇವಲ ಒಂದು ಪಿಯುಸಿ ಓದಿಕೊಂಡ ಲಕ್ಷ್ಮಣ ಚೌಹ್ವಾಣ ಹಾಗೂ ವಸಂತ ಚೌಹ್ವಾಣ ಎನ್ನುವರಿಬ್ಬರೂ ಮೂಲತಃ ಬಾಗಲಕೋಟೆ ಜಿಲ್ಲೆಯವರಾಗಿದ್ದು ಈ ಜಿಲ್ಲೆಯಲ್ಲಿ ಸರ್ಕಾರಿ ನೌಕರಿಯಲ್ಲಿ ತೊಡಗಿಕೊಂಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಪಾರ್ಧಿಯರ ಶಿಕ್ಷಣದ ಮಟ್ಟ ಬಹಳಷ್ಟು ಗಂಭೀರವಾಗಿದ್ದು, ಕೇವಲ ನಾಲ್ಕು ಜನ ಯುವಕರು ಮಾತ್ರ ಪ್ರೌಢಶಿಕ್ಷಣವನ್ನು ಪಡೆದುಕೊಂಡರೆ, ಇನ್ನೂಳಿದವರೆಲ್ಲಾ ಮಾಧ್ಯಮಿಕ ಶಿಕ್ಷಣದಲ್ಲಿಯೇ ಇದ್ದಾರೆ. ಕೊಪ್ಪಳ ಜಿಲ್ಲೆಯ ಶೈಕ್ಷಣಿಕ ವಿಚಾರ ಗಂಭೀರವಾಗಿದ್ದು ಜಿಲ್ಲೆಯಲ್ಲಿ ಕೇವಲ ಸಜ್ಜಿಓಣಿಯಲ್ಲಿ ಇವರ ೨೫ ಮನೆಗಳಿದ್ದು, ಅವರಲ್ಲಿ ಏಳು ಜನ ಯುವಕರು ಹಾಗೂ ಇಬ್ಬರು ಬಾಲಕಿಯರು ತಮ್ಮ ಮಾಧ್ಯಮಿಕ ಶಿಕ್ಷಣ ಮಾಡಿದ್ದು ಬಿಟ್ಟರೆ ಬೇರೆ ಯಾರೂ ಏನೂ ಓದಿಕೊಂಡಿಲ್ಲ. ಆದರೆ ಮೈಸೂರು ಜಿಲ್ಲೆಯಲ್ಲಿ ಒಬ್ಬ ಮಾತ್ರ ಸ್ನಾತಕೋತ್ತರ ಪದವಿ ಇಬ್ಬರು ಯುವಕರು ಪದವಿ ಶಿಕ್ಷಣವನ್ನು ಹಾಗೂ ಎಂಟು ಜನ ಯುವಕರು ಪಿಯುಸಿಯನ್ನು ಪಡೆದದ್ದನ್ನು ಬಿಟ್ಟರೆ ಇನ್ನುಳಿದವರೆಲ್ಲಾ ಅಷ್ಟಕಷ್ಟೇ ಎಂಬಂತೆ ಪ್ರಾಥಮಿಕ ಶಿಕ್ಷಣದಲ್ಲಿ ಇವರ ಶಿಕ್ಷಣ ಕೊನೆಗಾಣುತ್ತದೆ. ಇನ್ನಿತರ ಉಳಿದ ಶಿಕ್ಷಣ ಮಟ್ಟವನ್ನು ಜಿಲ್ಲೆಗಳವಾರು ಕೋಷ್ಟಕದಲ್ಲಿ ಕ್ಷೇತ್ರಕಾರ್ಯ ವಿವರ ನೀಡಲಾಗಿದೆ.

ಸಂಶೋಧನೆಯ ಕ್ಷೇತ್ರಕಾರ್ಯದ ಸಮಯದಲ್ಲಿ ಈ ಬುಡಕಟ್ಟಿನಲ್ಲಿ ಪದವಿಧರರಾಗಲಿ ಅಥವಾ ಸರ್ಕಾರಿ ನೌಕರರಾಗಲಿ ಕಂಡುಬಂದದ್ದು ತುಂಬಾ ಅಪರೂಪ. ಯಾಕೆಂದರೆ, ಇವರಲ್ಲಿ ತಮ್ಮ ಬುಡಕಟ್ಟಿನ ಏಳಿಗೆಗಾಗಿ ಓದಬೇಕೆಂಬ ಪ್ರಜ್ಞೆಯೇ ಇಲ್ಲವೆಂದ ಮೇಲೆ ಇವರಿಗೆ ಶಿಕ್ಷಣ ಒಲಿಯುವುದಾದರೂ ಹೇಗೆ? ಶಿಕ್ಷಣವೇ ಇಲ್ಲವೆಂದ ಮೇಲೆ ಇವರಿಗೆ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಮೂಡುವುದಾದರೂ ಹೇಗೆ? ಸರ್ಕಾರದ ಯೋಜನೆಗಳ ಬಗ್ಗೆ ಅರಿವೇ ಇಲ್ಲವೆಂದ ಮೇಲೆ ಅವರ ಉದ್ಧಾರವಾದರೂ ಹೇಗೆ ಸಾಧ್ಯ?

ವಸ್ತುಸ್ಥಿತಿ ಇಷ್ಟೊಂದು ಗಂಭೀರವಾಗಿದ್ದಾಗ್ಯೂ ಈ ಸಮುದಾಯದಲ್ಲಿಯೂ ಅಲ್ಲೊಬ್ಬ ಇಲ್ಲೊಬ್ಬ ಎನ್ನುವಂತೆ ಬೆರಳೆಣಿಕೆಯ ಧೃವತಾರೆಗಳು ಕೂಡಾ ಕಂಡುಬರುತ್ತಾರೆ. ಕೆಲವೇ ಕೆಲವು ನಕ್ಷತ್ರಗಳಲ್ಲಿ ಮೊಟ್ಟ ಮೊದಲ 'ಸ್ತ್ರೀ ನಕ್ಷತ್ರ' ವೆಂದರೆ ಡಾ. ಕೆ.ಪಿ. ರೇಖಾ ಇವಳು ಮೂಲತಃ ಬೀದರ್ ನಗರದವಳಾಗಿದ್ದು ತನ್ನ ಚಿಕ್ಕಮ್ಮಳಾದ ಯಶೋಧಬಾಯಿ ಎನ್ನುವ ಒಬ್ಬ ನಿವೃತ್ತ ಮಹಿಳಾ ಪೋಲಿಸ್ ಇನ್ಸ್‌ಪೆಕ್ಟರ್ ಆರ್ಥಿಕ ನೆರವಿನಿಂದ ಇವಳು ಬಿ.ಎಸ್‌ಸಿ. ಪದವಿ ಮುಗಿಸಿಕೊಂಡು ಮುಂದೆ ಎಂ.ಬಿ.ಬಿ.ಎಸ್. ಶಿಕ್ಷಣವನ್ನು ಮುಗಿಸಿಕೊಂಡು, ಇಂದು ಗುಲ್ಬರ್ಗ ಜಿಲ್ಲೆಯಲ್ಲಿಯ ಕಮಲಾಪೂರ್ ಊರಿನಲ್ಲಿ ಸರ್ಕಾರಿ ಮಹಿಳಾ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ.

ಶಂಕರ್ ಪ್ರತಾಪನ್ ಕಾಳೇ ಎಂಬುವರು ಮೂಲತಃ ಬಾಗಲಕೋಟೆ ಜಿಲ್ಲೆಯ Station ಕಡ್ಲಿ ಮಟ್ಟಿಯವರಾಗಿದ್ದು ಇವರು ಇಂದು ಪೋಲೀಸ್ ಇಲಾಖೆಯಲ್ಲಿ ಡಿವೈ.ಎಸ್.ಪಿ.ಯಾಗಿ ಬೆಳಗಾವಿಯ ಖಾನಾಪೂರ್‌ದಲ್ಲಿ ಸೇವೆಸಲ್ಲಿಸುತ್ತಿದ್ದು, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಾ ಮಠದ ಎದುರಿಗೆ ಭವ್ಯ ಬಂಗಲೆಯನ್ನು ಕಟ್ಟಿಸಿಕೊಂಡಿದ್ದಾರೆ.

ಬೀದರ್ ನಗರದ ಮಂಗಲಪೇಟೆಯ ನಿವಾಸಿ ಕುಮಾರಿ ಯಶೋಧ ಬಾಯಿಯು ಸಹ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಆಗಿ (W.P.S.I) ನಿವೃತ್ತಿಯನ್ನು ಹೊಂದಿದವರಾಗಿದ್ದಾರೆ.

ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನ ಟೈಗರ್ ಬ್ಲಾಕ್‌ನ ಮೀನ್‌ರಾಜು ಎಂಬುವರು ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದ ಡೆವಿಡ್ ಸಿಮಿಯೋನ್‌ರ ಆಪ್ತ ಸಹಾಯಕನಾಗಿ ಸೇವೆಸಲ್ಲಿಸಿದ್ದಾರೆ.

ಬೀದರ್‌ನವರೆ ಆಗಿರುವ ಈಶ್ವರ್‌ಲಾಲ್ ಕಾಲಿಕಾರ್ ಎಂಬುವರು ಸರ್ಕಾರಿ I.T.I ನಲ್ಲಿ ಅಡ್ಮಿನಿಸ್ಟ್ರೇಟಿವ್ ಅಸಿಸ್ಟಂಟ್ ಆಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಮೂವರು ಮಕ್ಕಳು ಸಹ ಚೆನ್ನಾಗಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

ಬಳ್ಳಾರಿ ನಗರದ ಹರಿಶ್ಚಂದ್ರ ಕಾಲೋನಿಯಲ್ಲಿಯ ಹಕ್ಕಿಪಿಕ್ಕಿ (ಪಾರ್ಧಿ)ಯರ ಒಟ್ಟು ೨೫ ಮನೆಗಳಲ್ಲಿ ಸುಮಾರು ೧೦ ಜನರು ಸರ್ಕಾರಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ರಾಮು ತಂದೆ ಗನ್ನು ಎಂಬುವರು ಬಳ್ಳಾರಿ ಜಿಲ್ಲಾ ನ್ಯಾಯಾಲಯದಲ್ಲಿ 'ಬಿಲಿಫ್' ಆಗಿಯು ಇವರ ಮಗ ಗನ್ನು ಎನ್ನುವವರು ಕೂಡ ಹೊಸಪೇಟೆಯ ತಾಲೂಕು ನ್ಯಾಯಾಲಯದಲ್ಲಿ 'ಪ್ರೊಸಸ್ ಸರ್ವರ್' ಆಗಿಯೂ ಸೇವೆ ಸಲ್ಲಿಸುತ್ತಿದ್ದು, ಮೋಹನ್ ಎಂಬುವರು ಕೆನರಾ ಬ್ಯಾಂಕ್‌ನಲ್ಲಿ 'ಜವಾನ್' ನಾಗಿರುವುದು, ಪದ್ಮ ಎಂಬುವರು ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜವಾನ್ ಆಗಿರುವುದು. ಹಿರೂ ಎನ್ನುವರು ಹೋಮ್‌ಗಾರ್ಡ್ ಆಗಿರುವುದು, ಶಿವಪ್ಪ ಎಂಬುವರು ಸರ್ಕಾರಿ ವಸತಿ ನಿಲಯದಲ್ಲಿ ಅಡಿಗೆಯವರಾಗಿರುವುದು ಜೀವನ್ ಎಂಬುವರು ಹೊಸಪೇಟೆಯ M.M.T.Cಯಲ್ಲಿ ನೌಕರಿ ಮಾಡುತ್ತಿರುವ ಸಂಗತಿಗಳೆಲ್ಲಾ ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿರುವಂತ ಪ್ರಸಂಗಗಳಾಗಿವೆ.

ಹಾಸನ ಜಿಲ್ಲೆಯ ಅಂಗಡಿಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು ೧೦೦೦ದಷ್ಟು ಪಾರ್ಧಿಯರು ವಾಸಿಸುತ್ತಿದ್ದು, ಅವರಲ್ಲಿ ಸುಮಾರು ೬೦೦ರಷ್ಟು ಜನ ಪ್ರೌಢಾವಸ್ಥೆಯವರಾಗಿದ್ದಾರೆ. ಇಲ್ಲಿ ವಯಸ್ಕರ ಶಿಕ್ಷಣ ಶಾಲೆಯೊಂದನ್ನು ತೆರೆಯಲಾಗಿದ್ದು, ಈ ಶಾಲೆಗೆ ೨೦-೨೫ ಜನ ಪ್ರೌಢರು ಈ ಶಾಲೆಗೆ ಹಾಜರಾಗುತ್ತಿದ್ದಾರೆ. ಆದರೆ ಇವರಲ್ಲಿ ಕಲಿಯಬೇಕೆಂಬಂತಹ ಯಾವುದೇ ರೀತಿಯ ಉತ್ಸಾಹ ಕಂಡುಬರುತ್ತಿದ್ದಿಲ್ಲ. ಆದರೆ ಇವರುಗಳು ತಮ್ಮ ತಮ್ಮ ಹೆಸರುಗಳನ್ನು ಬರೆಯುವುದನ್ನು ಮಾತ್ರ ಕಲಿತಿದ್ದಾರೆ. ಇಲ್ಲಿ ಕಲಿಸುವ ಶಿಕ್ಷಕನಿಗೆ ತಿಂಗಳಿಗೆ ಕೇವಲ ೧೦೦ರೂ ಮಾತ್ರ ಸಂಬಳವಾಗಿ ಕೊಡುತ್ತಿದ್ದರಿಂದ ಅವರು ಕಲಿಸುವುದರಲ್ಲಿ ಅಷ್ಟೊಂದು ಅಭಿರುಚಿಯನ್ನು ತೋರಿಸುತ್ತಿದ್ದಿಲ್ಲ.

ಪಾರ್ಧಿ ಬುಡಕಟ್ಟಿನ ಇನ್ನೊಂದು 'ಸ್ತ್ರೀ ನಕ್ಷತ್ರ' ವೆಂದರೆ, ಶ್ರೀಮತಿ ಕುಮುದಾ ಸುಶಿಲಪ್ಪ ಎಂಬುವರು. ಇವರು ಮೂಲತಃ ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಅಸ್ತಾಪನಹಳ್ಳಿ ಹಕ್ಕಿಪಿಕ್ಕಿ ಕಾಲೋನಿಯವರು. (ನೆಲ್ಲೂರು ಪೋಸ್ಟ್) ಇವರು ಇಂಜಿನಿಯರಿಂಗ್ ಪದವಿಯನ್ನು ಪಡೆದುಕೊಂಡು, ಸ್ವಲ್ಪ ದಿನಗಳ ಕಾಲ ಶಿವಮೊಗ್ಗದಲ್ಲಿ ಅಭಿಯಂತರು (ಇಂಜಿನಿಯರ್) ಆಗಿಯೂ ಸಹ ಕೆಲಸ ನಿರ್ವಹಿಸಿದ್ದು ನಿಜಕ್ಕೂ ಹೆಮ್ಮೆಯೇ ಸರಿ.

ಸಂಶೋಧನೆಗಾಗಿ ಪಾರ್ಧಿಯರನ್ನು ಹುಡುಕಿಕೊಂಡು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಪಕ್ಷಿರಾಜಪುರ ಕಾಲೋನಿಗೆ ಹೋದಾಗ ನನಗೆ ತುಂಬಾ ಸಂತೋಷವಾಯಿತು. ಏಕೆಂದರೆ, ಇಲ್ಲಿಯ ಪಾರ್ಧಿಯರು ದಿ ದೇವರಾಜ್ ಅರಸ್ ಅವರು ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದಂತಹ ಸಮಯದಲ್ಲಿ ಅವರಿಂದ ತಮ್ಮ ಕಾಲೋನಿಗೆ ಎಲ್ಲಾ ರೀತಿಯಲ್ಲಿ ಸಹಾಯ ಸೌಲಭ್ಯಗಳನ್ನು ಪಡೆದುಕೊಂಡು ಪ್ರತಿಯೊಂದು ಮನೆಯವರು ಚೆನ್ನಾಗಿ ಮುಂದೆ ಬಂದಿದ್ದಾರೆ. ಇಲ್ಲಿಯ ಪ್ರತಿಯೊಬ್ಬರ ಮನೆಯು ಮಂಗಳೂರು ಹಂಚುಗಳಿಂದ ಆವೃತ್ತವಾಗಿದ್ದು, ಪ್ರತಿಯೊಬ್ಬರ ಮನೆಯ ಮುಂದುಗಡೆ ಹಾಗೂ ಹಿಂದೆ ಮತ್ತು ಅಕ್ಕಪಕ್ಕ ೨-೨ ತೆಂಗಿನ ಗಿಡ, ೨-೨ ಮಾವಿನ ಗಿಡ, ಹಾಗೂ ೨-೨ ಬಾಳೆಯ ಗಿಡಗಳನ್ನು ಬೆಳೆಸಿರುವುದು ಕಂಡುಬಂತು. ಇಲ್ಲಿಯ ಬಹುತೇಕ ಪಾರ್ಧಿಯರು ಕರಕುಶಲ ಕಾರ್ಯದಲ್ಲಿ ತೊಡಗಿದ್ದು, ಅವುಗಳನ್ನು ಮಾರಾಟ ಮಾಡಲು ಪ್ರತಿಯೊಂದು ಮನೆಯವರು ವಿದೇಶಗಳಿಗೆ ಹೋಗುವ ನಿದರ್ಶನಗಳೇ ಹೆಚ್ಚಿವೆ.

ಇಲ್ಲಿಯ ಹಕ್ಕಿಪಿಕ್ಕಿಯರು ಬಹುದೂರದ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಮೇಹಕೆರಾ ಗ್ರಾಮದ ವಿಜಯಂತಿ ಎಂಬುವಳನ್ನು ಬಸವಕಲ್ಯಾಣದ ದುರ್‌ಪತ್ ಎಂಬುವಳನ್ನು ಹಾಗೂ ನೀಲಂ ಎಂಬ ಚಿಟ್ಟಾ ಗ್ರಾಮದ ಪಾರ್ಧಿ ಹುಡುಗಿಯರನ್ನು ಮೈಸೂರಿನ ಹಕ್ಕಿಪಿಕ್ಕಿ ಯುವಕರು ಮದುವೆ ಮಾಡಿಕೊಂಡಿರುವುದು ಇವರ ಶಿಕ್ಷಣದ ಮೂಲವೆ ಕಾರಣವೆಂದು ಹೇಳಬಹುದು.

ಇದೇ ಮೈಸೂರಿನ ಶ್ರೀಮತಿ ಮಾಲಾಸಿಂಗ್ ಎಂಬುವಳು ಇಂಜಿನಿಯರ್‌ರೊಬ್ಬರ ಪತ್ನಿ ಆಗಿದ್ದು, ಇವಳು ಹೇಳುವ ಪ್ರಕಾರ, ಇಲ್ಲಿಯ ಹಿರಿಯರಿಗೆ ಶಿಕ್ಷಣದ ಮಹತ್ವ ಗೊತ್ತಿಲ್ಲ. ಅದಕ್ಕೆಂತಲೇ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವಲ್ಲಿ ವಿಫಲರಾಗಿದ್ದಾರೆ. ಆದಾಗ್ಯೂ ರವೀಂದ್ರ ಎಂಬ ಯುವಕ ಬಿ.ಎ. ಪದವಿಯನ್ನು ಪಡೆದಿರುವುದು. ಹಾಗೂ ಇತ್ತೀಚೆಗೆ ಇನ್ನೂ ಕೆಲವರು ಓದಿನ ಕಡೆಗೆ ಲಕ್ಷ್ಯ ವಹಿಸುತ್ತಿರುವುದು ಸಂತೋಷದ ವಿಷಯವೇ ಸರಿ.

೧೯೯೩ರಲ್ಲಿ ಸರ್ಕಾರದವರು ಈ ಗ್ರಾಮದ ಗ್ರಾಮಸ್ಥರ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಿದ್ದರು. ಆದರೆ ಈ ಪಠ್ಯ ಪುಸ್ತಕಗಳಲ್ಲಿ ಏನಿದೆ ಎಂದು ತಿಳಿಸಲು ಅಲ್ಲಿ ಶಿಕ್ಷಕರನ್ನೇ ನೇಮಿಸಿದ್ದಿಲ್ಲ. ಒಂದು ವೇಳೆ ಶಿಕ್ಷಕರನ್ನೇನಾದರು ನೇಮಿಸಿದ್ದರೆ ಬಹುತೇಕ ಹಿರಿಯರು ಶಿಕ್ಷಿತರಾಗುತ್ತಿದ್ದರು ಎಂಬುದು ಇವರ ಅನಿಸಿಕೆ.

ಶ್ರೀಮತಿ ಮಾಲಾಸಿಂಗ್ ಎಂಬುವರು ಸಹ ಇದೇ ಕಾಲೋನಿಯವರಾಗಿದ್ದು ಇವರೊಬ್ಬ ಪದವಿಧರರೇ. ಇವಳ ಗಂಡ ಒಬ್ಬ ಇಂಜಿನಿಯರ್ ಆಗಿದ್ದು ಈತನು ನೈರೋಬಿಯಾದಲ್ಲಿದ್ದಾನೆ. ಹೀಗಾಗಿ ಈ ಮಾಲಾಸಿಂಗ್‌ರ ಮಕ್ಕಳು ಚೆನ್ನಾಗಿ ಓದುತ್ತಿದ್ದಾರೆ.

ಬೆಂಗಳೂರು ನಗರದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಬಳಿಯಲ್ಲಿಯ ಭೂತಾನ್‌ಹಳ್ಳಿ ಎಂಬ ಹಕ್ಕಿಪಿಕ್ಕಿ (ಪಾರ್ಧಿ) ಯರ ಕಾಲೋನಿಯಲ್ಲಿ ಶೇ ೯೫ಕ್ಕೂ ಹೆಚ್ಚಿನ ಪುರುಷರು ಅಶಿಕ್ಷಿತರಾಗಿದ್ದಾರೆ. ರಾಜ್ಯದ ರಾಜಧಾನಿಯಾದ ಬೆಂಗಳೂರಿನ ಬಳಿಯಲ್ಲಿರುವ ಪಾರ್ಧಿಯರ ಕಥೆಯೇ ಇಷ್ಟೊಂದು ಘೋರವಾಗಿರುವಾಗ ಇನ್ನೂ ರಾಜ್ಯದ ರಾಜಧಾನಿಯಿಂದ ಅತಿ ದೂರವೇ ಇರುವ ಬೀದರ್, ಗುಲ್ಬರ್ಗ, ಜಿಲ್ಲೆಗಳ ಪಾರ್ಧಿಯರ ಶಿಕ್ಷಣದ ಮಟ್ಟ ಇನ್ನೆಷ್ಟು ಗಂಭೀರವಾಗಿರಬೇಕು. ಭೂತಾನ್ ಹಳ್ಳಿಯ ಕಾಲೋನಿಯು ಕೆಲವೇ ಕೆಲವು ಯುವಕರು ತಮ್ಮ ಪ್ರೌಢ ಶಾಲೆಯ ಶಿಕ್ಷಣವನ್ನು ಮುಂದುವರಿಸಿದ್ದಾರೆ. ಈ ಗ್ರಾಮದ ಮುಖ್ಯ ಮಾಹಿತಿದಾರ(ವಕ್ತೃ)ನಾದ ವೆಂಕಟೇಶ್ ದೊರೆ ಎಂಬ ಯುವಕನು ಅಲ್ಲಿಯ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದು, ತಮ್ಮ ಬುಡಕಟ್ಟಿವರ ಶಿಕ್ಷಣಕ್ಕಾಗಿ ಪಂಚಾಯ್ತಿ ಸಭೆಗಳಲ್ಲಿ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಮುಂದೆ ವಿಷಯ ಪ್ರಸ್ತಾಪಿಸಿದರೂ ಏನೂ ಲಾಭವಾಗಿಲ್ಲವೆಂದು ಹೇಳುತ್ತಾರೆ. ಅಷ್ಟೇ ಏಕೆ ಬುಡಕಟ್ಟು ಅಭಿವೃದ್ಧಿ ನಿಗಮದ ಹಿರಿಯ ಅಧಿಕಾರಿಗಳೊಂದಿಗೂ ತಾನು ಚರ್ಚಿಸಿರುವುದಾಗಿ ತಿಳಿಸುತ್ತಾರೆ.

ಈ ಭೂತಾನ್ ಹಳ್ಳಿಯಲ್ಲೊಂದು ಆಶ್ರಮ ಶಾಲೆಯನ್ನು ಆರಂಭಿಸಲಾಗಿದ್ದು, ಈ ಶಾಲೆಯಲ್ಲಿ ಸುಮಾರು ೧೫೦ ಮಕ್ಕಳಿದ್ದು ಅವರಲ್ಲಿ ಕೇವಲ ೫೦ ಪ್ರತಿಶತ ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದಾರೆಂದು ಈ ವೆಂಕಟೇಶ್ ದೊರೆ ಹೇಳುತ್ತಾರೆ. ಈ ಶಾಲೆಯಲ್ಲಿ ದಿನದಲ್ಲಿ ಎರಡು ಸಲ ಮಕ್ಕಳಿಗೆ ರಾಗಿ ಮುದ್ದೆ ತಿನ್ನಲು ಸಿಗುತ್ತಿದ್ದರೂ ಅಕ್ಷರ ಕಲಿಸುವ ಶಿಕ್ಷಕರೇ ಇಲ್ಲಿಲ್ಲ ಎಂದು ದೂರುತ್ತಾರೆ.

ವೆಂಕಟೇಶ್ ದೊರೆ ಎಂಬ ಗ್ರಾಮದ ಯುವ ಮುಖಂಡ ಶಾಲೆಗೆ ಹೋಗದಿದ್ದರೂ ತನ್ನ ಸ್ವಂತ ಪರಿಶ್ರಮದಿಂದ ಅಕ್ಷರಗಳನ್ನು ಕಲಿತು ತನ್ನ ಹೆಸರನ್ನು ಬರೆಯುವುದರ ಜೊತೆಗೆ ಭಿತ್ತಿ ಪತ್ರಗಳ ತಲೆಬರಹ ಹಾಗೂ ಪತ್ರಿಕೆಗಳ ತಲೆ ಬರಹಗಳನ್ನು ಓದಬಲ್ಲವರಾಗಿದ್ದಾರೆ.

ಇವರ ಅಲೆಮಾರಿ ಜೀವನ, ಬೇಟೆ ಹಾಗೂ ಮಾರಾಟದ ಜೀವನದ ಜಂಜಾಟದಲ್ಲಿ ಇವರಿಗೆ ಓದಲು ಆಗುತ್ತಿಲ್ಲವೆಂಬ ಒಂದು ಅಂಶ ಕಂಡು ಬಂದರೆ ಕೆಲವೇ ಕೆಲವರು ೭ನೇ ತರಗತಿಯನ್ನೋ, ಪಿ.ಯು.ಸಿ. ಯವರೆಗೋ ಓದಿಕೊಂಡಿದ್ದಾರೆ. ೭ನೇ ತರಗತಿ ಹಾಗೂ ಪಿ.ಯು.ಸಿ.ಯವರೆಗೆ ಓದಿದವರಿಗೇ ನೌಕರಿ ಸಿಕ್ಕಿಲ್ಲವೆಂಬ ಕೊರಗಿನಿಂದ ಇನ್ನುಳಿದ ಯುವಕರೂ ಶಾಲೆಗೆ ಹೋಗುತ್ತಿಲ್ಲ. ಇವರ ಈ ಮಾತಿಗೆ ಪ್ರತಿಕ್ರಿಯೆಯಾಗಿ, ಇವರ ಕುರಿತ ಸಂಶೋಧಕ ಹಾಗೂ ಚಿಂತಕನಾದ ನಾನು, "ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ

[illegible]

ಸಿಗಲಾರದ ಸಂದರ್ಭದಲ್ಲಿ, ಕೇವಲ ಐನೇ ತರಗತಿಯೋ ಅಥವಾ ಪಿ.ಯು.ಸಿ.ಯೋ ಓದಿದವರಿಗೆ ಯಾರು ಕೆಲಸ ಕೊಡುತ್ತಾರೆ ಎಂಬ ಅಂಶವನ್ನು ಮನವರಿಕೆ ಮಾಡಿಕೊಡುವುದರ ಜೊತೆಗೆ ಶಿಕ್ಷಣ ಪಡೆಯುವುದು ಕೇವಲ ಸರ್ಕಾರಿ ನೌಕರಿಗಾಗಿ ಅಲ್ಲ. ಬದಲಿಗೆ ಶಿಕ್ಷಣದಿಂದ ಬದುಕಿಗೆ ಪೂರಕವಾಗುವ ಲಾಭಗಳಿವೆ ಹಾಗೂ ಶಿಕ್ಷಣ ಕಲಿತವರಿಗೆ ಈ ಸಮಾಜದಲ್ಲಿ ಕೊಡುವ ಬೆಲೆಯೇ ಬೇರೆ ಎಂಬ ಅಂಶಗಳನ್ನು ಮನವರಿಕೆ ಮಾಡಿಕೊಟ್ಟಿದ್ದೇನೆ".

ಬಾಗಲಕೋಟೆಯ ಗಾಂಧಿ ಸೆಟ್ಲಮೆಂಟ್ ಕಾಲೋನಿಯ ಪಾರ್ಧಿಯರಲ್ಲಿ (ಅಡವಿ ಚೆಂಚರು, ಹರಣ್ ಶಿಕಾರಿ) ಕುಮಾರ್ ಎಂಬುವರು ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ ಪದವಿಯನ್ನು ಓದಿ ಈಗ ಒಂದು ಹೋಟೆಲನ್ನು ತೆರೆದು ವ್ಯಾಪಾರ ಮಾಡಿದ್ದಾರೆ. ಅದೇ ರೀತಿ ಶಂಕರ್ ಎನ್ನುವವರು ಸಹ ಡಿ.ಸಿ.ಇ. ಪದವಿ ಪಡೆದುಕೊಂಡು ಈಗ ಚಲನ ಚಿತ್ರಮಂದಿರದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗೇಯೇ ಕುಮಾರ್ ಅವರ ಕಿರಿಯ ಸಹೋದರನಾದ ಪಾಂಡು ಎಂಬುವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ B.PEd ಶಿಕ್ಷಣವನ್ನು ಮುಗಿಸಿಕೊಂಡು ಉದ್ಯೋಗದ ಬೇಟೆಯಲ್ಲಿದ್ದಾರೆ.

ಈ ರೀತಿಯಾಗಿ ನೋಡಲಾಗಿ ೧೯೭೧ರಲ್ಲಿ ಶೇ ೧೨ ರಷ್ಟಿದ್ದ ಶಿಕ್ಷಿತರ ಈ ಬುಡಕಟ್ಟು ಈಗ ೨೦೦೧ರ ಪ್ರಕಾರ ಹೊತ್ತಿಗೆ) ಶೇಕಡಾ ೨೧ರಷ್ಟು ಆಗಿರುವುದು ಸ್ವಲ್ಪ ಸಮಧಾನವೆನಿಸಿದರೂ ಇವರು ಸಾಗಬೇಕಾದ ದಾರಿ ಹಾಗೂ ಸಾಧಿಸಬೇಕಾದದ್ದು (ಶಿಕ್ಷಣ) ಬಹಳಷ್ಟಿದೆ ಹಾಗೂ ಅಷ್ಟೇ ವಾಸ್ತವವಾಗಿದೆ.

೧೯೮೧ರ ಜನಗಣತಿಯ ಪ್ರಕಾರ ಇವರಲ್ಲಿ ಕೇವಲ ೨೦.೫೦ರಷ್ಟು ಜನ ಸಾಕ್ಷರರಿರುವುದು ದಾಖಲಾಗಿದೆ.

ಹಾಗೆಯೇ ೧೯೮೧ರ ಜನಗಣತಿಯ ಪ್ರಕಾರ ಇವರಲ್ಲಿ (ಹಕ್ಕಿಪಿಕ್ಕಿ) ಶೇ. ೬೪ ದುಡಿಮೆಗಾರರಿದ್ದು ಅದರಲ್ಲಿ ಶೇ. ೪೫ ರಷ್ಟು ಕೃಷಿಕರು, ಶೇ. ೨೫ ರಷ್ಟು ಕೃಷಿ ಕೂಲಿಗಳಾಗಿ, ಶೇ. ೭ರಷ್ಟು ಮಾತ್ರ ಪಾರಂಪರಿಕ ಬೇಟೆಗಾರರಾಗಿ ಮತ್ತು ಆಹಾರ ಸಂಗ್ರಹಕಾರರಾಗಿ ಶೇ. ೧೧ರಷ್ಟು ಜನ ವ್ಯಾಪಾರಸ್ಥರಾಗಿ ಇನ್ನುಳಿದ ಶೇ. ೧೪ರಷ್ಟು ಜನರು ಇತರೆ ಕೆಲಸಗಾರರಾಗಿದ್ದಾರೆ. ಪಾರ್ಧಿಯರು ಔಪಚಾರಿಕ ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲವೆಂದೇ ಹೇಳಬಹುದು. ಹೀಗಾಗಿ ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ ಸರ್ಕಾರದ ಸಣ್ಣ ಪುಟ್ಟ ಹುದ್ದೆಗಳಲ್ಲಿರುವುದು ಕಂಡುಬರುತ್ತದೆ.

ಎಸ್. ಮೋತಿ ತಂದೆ ರಾಮಣ್ಣ ಕಮನೂರು ಇವರು ಕಂಪ್ಲಿ ಪಟ್ಟಣದಲ್ಲಿ ಬಿ.ಎ. ಪದವಿಯನ್ನು ಪಡೆದುಕೊಂಡು ಸಮಾಜ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ಒಂದು ವರ್ಷದ ಅವಧಿಗೆ ಉಚಿತ ಕಂಪ್ಯೂಟರ್ ತರಬೇತಿಯನ್ನು ಸಹ ಪಡೆದಿರುತ್ತಾರೆ. ಹಾಗೆಯೇ ಎಚ್.ಪಿ.ಶಿಕಾರಿ ರಾಮು ತಂದೆ ಕಂಸಪ್ಪ ಸಾವಂಡಿಯಾ ಇವರು ಸಹ ಪಿ.ಯು.ಸಿ.ವರೆಗೆ ಓದಿಕೊಂಡು, ಬಳ್ಳಾರಿ ಜಿಲ್ಲೆಯ ಹಕ್ಕಿಪಿಕ್ಕಿ ಸಂಘಕ್ಕೆ ಅಧ್ಯಕ್ಷರಾಗಿ ಅತ್ಯಂತ ಚುರುಕಿನಿಂದ ಸರ್ಕಾರದಿಂದ ದೊರೆಯಬೇಕಾದ ಎಲ್ಲಾ ಸವಲತ್ತುಗಳ ಸಲುವಾಗಿ ಹಗಲು ರಾತ್ರಿ ದುಡಿಯುತ್ತಿದ್ದಾರೆ.

ಬಳ್ಳಾರಿಯ ಹರಿಶ್ಚಂದ್ರ ಹಕ್ಕಿಪಿಕ್ಕಿ ಕಾಲೋನಿಯ ಪದ್ಮನಾಭಂ ಎನ್ನುವ ಯುವಕ ಕೇವಲ ಎಸ್.ಎಸ್.ಎಲ್.ಸಿ. ವರೆಗೆ ಓದಿಕೊಂಡು ಚಿತ್ರಕಲೆಯಲ್ಲಿ ಇಂದು ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಇವರ ಕಲೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತ ವಾಗಿರದೇ, ಪಕ್ಕದ ಆಂಧ್ರ ಪ್ರದೇಶ, ಮಹಾರಾಷ್ಟ್ರಗಳ ರಾಜ್ಯಗಳಲ್ಲಿಯೂ ಇವರ ಕಲೆಯು ಕಂಪು ಹರಡಿದೆ.

ಆ. ಕ್ರೀಡೆಗಳು

ಪಾರ್ಧಿಯರ ಕ್ರೀಡೆಗಳು ಬಹುವಾಗಿ ಬೇಟೆಗೆ ಸಂಬಂಧಿಸಿರುವುದರ ಜೊತೆಗೆ ವ್ಯಾಪಾರಕ್ಕೂ ಸಂಬಂಧಿಸಿರುವುದೇ ಆಗಿದೆ. ಕ್ರೀಡೆ ಎಂಬುದು ಪ್ರತಿಯೊಬ್ಬ ವ್ಯಕ್ತಿಗೂ ಎಷ್ಟು ಅವಶ್ಯಕವೆಂದರೆ ಕ್ರೀಡೆ ಎಂಬುದು ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಬೇರೆ ಸಮುದಾಯಗಳಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಾಗೂ ಮಾಡಿದ ಊಟ ಕರಗಿಸಿಕೊಳ್ಳಲು ಕ್ರೀಡೆಗಳು ಅವಶ್ಯಕವಾದರೆ, ಈ ಪಾರ್ಧಿ ಬುಡಕಟ್ಟಿಗೆ ಖಾಲಿ ಇದ್ದ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಕ್ರೀಡೆಗಳು ಅತ್ಯವಶ್ಯಕವಾಗಿವೆ.

ಪಾರ್ಧಿಯರು ಆಡುವ ಕ್ರೀಡೆಗಳು ಒಂದಿಲ್ಲೊಂದು ಕಾರಣಕ್ಕಾಗಿ ಚಿಕ್ಕಮಕ್ಕಳು ಸಹ ಬೇಟೆಗಾಗಿ ಸಿದ್ಧವಾಗುವ ತರಬೇತಿಗಳ ರೀತಿಯಲ್ಲಿಯೇ ಇರುತ್ತವೆ. ಇವರ ಹೆಚ್ಚಿನ ಕ್ರೀಡೆಗಳು ಪ್ರಾಣಿಗಳ ಬೇಟೆಗೆ ಸಂಬಂಧಿಸಿದವುಗಳೇ ಆಗಿವೆ. ಬೇಟೆ ಮತ್ತು ವ್ಯಾಪಾರ ಜೀವನವನ್ನು ಹೊರತುಪಡಿಸಿದರೆ, ಪಾರ್ಧಿಯರು ತಮ್ಮ ಬದುಕಿನ ಬಹುಭಾಗವನ್ನು ಇಂಥ ಕ್ರೀಡೆಗಳಲ್ಲಿಯೇ ಕಳೆಯುತ್ತಾರೆ. ಈ ಕ್ರೀಡೆಗಳಲ್ಲಿ ಕೇವಲ ಪುರುಷರಷ್ಟೇ ಪಾಲ್ಗೊಳ್ಳುತ್ತಾರೆ. ಆಗಾಗ್ಗೆ ಕೆಲವು ವಯಸ್ಸಾದ ಮುದುಕರೂ ಈ ಕ್ರೀಡೆಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ. ಹೀಗಾಗಿ ಇವರಾಡುವ ಕ್ರೀಡೆಗಳಲ್ಲಿ ವಯಸ್ಸಿಗಾಗಲಿ ಅಥವಾ ಲಿಂಗಕ್ಕಾಗಲಿ ಯಾವುದೇ ರೀತಿಯ ತಾರತಮ್ಯಗಳಿಲ್ಲ. ಇವರಾಡುವ ಕೆಲವು ಕ್ರೀಡೆಗಳು ತಾವು ಬದುಕುತ್ತಿರುವ ಪ್ರಾದೇಶಿಕ ವೈಶಿಷ್ಟ್ಯವನ್ನು ಪಡೆದಿರುತ್ತವೆ. ಇನ್ನೂ ಕೆಲವು ಕ್ರೀಡೆಗಳು ಕೇವಲ ಪಾರ್ಧಿ ಬುಡಕಟ್ಟಿನವರಿಗಷ್ಟೇ ಸೀಮಿತವಾಗಿದ್ದು, ಅವು ಬೇರೆ ಸಮುದಾಯಗಳಲ್ಲಿ ಕಂಡು ಬರುವುದಿಲ್ಲ. ಇವರಾಡುವ ಅನೇಕ ಕ್ರೀಡೆಗಳಲ್ಲಿ ಕೆಲವೇ ಕೆಲವನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ಹುಂದ್ರಾ ಹುಂದಿ ಆಟ

ಪಾರ್ಧಿಯರ ಭಾಷೆಯಲ್ಲಿ ಹುಂದ್ರಾ ಹುಂದಿ ಆಟವೆಂದರೆ, ಇಲಿ ಮತ್ತು ಬೆಕ್ಕಿನ ಆಟ ಎಂದರ್ಥ. ಈ ಆಟಕ್ಕೆ ಆಟಗಾರರ ಮಿತಿಯಿಲ್ಲ. ಎಷ್ಟು ಜನಬೇಕಾದರೂ ಈ ಆಟದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬಹುದಾಗಿದೆ. ಈ ಆಟವು ಮೊದಲಿಗೆ ಕೇವಲ ಮೂವರಿಂದ ಆರಂಭವಾಗುತ್ತದೆ. ಆ ಮೂರು ಜನ ಒಬ್ಬರಿಗೊಬ್ಬರು ಕೈಮುಚ್ಚಿ ತಮ್ಮ ತಮ್ಮ ಹಸ್ತಗಳನ್ನು ಉಲ್ಟಾಪಲ್ಟ ಹಾಕಬೇಕಾಗುತ್ತದೆ. ಉಳಿದವರೆಲ್ಲಾ ಹುಂದ್ರಾ (ಇಲಿ) ಆಗಿರುತ್ತಾರೆ. ಈ ಆಟದಲ್ಲಿಯ ಬೆಕ್ಕು ಇಲಿಯಾಗಿ ಪರಿವರ್ತನೆ ಹೊಂದಬೇಕಾದರೆ ಆ ಬೆಕ್ಕು ಒಂದು ಇಲಿಯನ್ನು ಮುಟ್ಟಲೇಬೇಕಾಗುತ್ತದೆ.

ಸುಮಾರು ಮೂರು ಅಂಗುಲದ ಸರ್ಕಲ್‌ನ್ನು ಕೋಲಿನಿಂದ ಹಾಕಿ, ಆ ವೃತ್ತದಲ್ಲಿಯೇ ಆ ಕೋಲನ್ನು ಹಾಕುತ್ತಾರೆ. ಆ ಕೋಲು ಅರ್ಧಭಾಗ ವೃತ್ತದ ಒಳಗೂ ಇನ್ನರ್ಧಭಾಗ ವೃತ್ತದ ಹೊರಗು ಇರುತ್ತದೆ. ಇಲಿಗಳು ವೃತ್ತದ ಆಚೆ ಈಚೆ ಇರುವ ಮರಗಳ ಮೇಲೆ ಕುಳಿತಿರುತ್ತವೆ. ಆಗ ವೃತ್ತದ ಒಳನಿಂತ ಇಲಿಯು ಈ ಕೆಳಗಿನಂತೆ ಹೇಳುತ್ತದೆ.

ಆಪ್‌ತೊ ಆವತೊ ದಿಸ್

ಜಾತಿ ಜಾತಿ ರೇಸ್

ಚೆನ್ನಗಿರಿಸಾ ಪಾರ್ ಎನ್ನುತ್ತದೆ.

ಹೀಗೆಂದರೆ,

ಬರ್‍ತಾ ಬರ್‍ತಾ ದಿವಸ

ಹೋಗ್ತಾ ಹೋಗ್ತಾ ರಾತ್ರಿ

ಚೆನ್ನಾಗಿರಿ ಆಚೆಗೆ ಎಂದರ್ಥ.

ಎಂದು ಒದರುತ್ತ ತನ್ನ ಎಡಗಾಲನ್ನು ಎತ್ತಿ ಅದರ ಅಡಿಯಿಂದ ಆ ಕೋಲನ್ನು ಬೀಸಿ ಎಸೆಯುತ್ತದೆ. ಎಸೆದ ಆ ಕೋಲನ್ನು ಬೆಕ್ಕು ಕಾಯುವುದಲ್ಲದೆ ಆ ಕೋಲನ್ನು ಬೇರೆ ಇಲಿಗಳು ಮುಟ್ಟದಂತೆಯೂ ಕಾಯಬೇಕು. ಆ ಕೋಲನ್ನು ಎಸೆದ ಇಲಿಯೂ ದೂರ ಹೋಗಿರುತ್ತದೆ. ಆ ಕಾರಣಕ್ಕಾಗಿ ಬೆಕ್ಕು ಕೋಲನ್ನು ಬಹಳಷ್ಟು ಎಚ್ಚರದಿಂದ ಕಾಯಬೇಕಾಗುತ್ತದೆ. ಈ ರೀತಿಯಾಗಿ ಕಾಯುವಾಗ ಬೆಕ್ಕು ಮೂರು ಸಾರಿ ಸೋತರೆ ಇಲಿಗಳು ಬೆಕ್ಕನ್ನು ಕುರಿತು 'ಆನ್ ಖಾಸ್‌ಕೀಗೂ ಖಾಸ್' ಎಂದು ಅವಹೇಳನ ಮಾಡುತ್ತವೆ. ಅಂದರೆ ನೀನು ಅನ್ನ ತಿನ್ನುತ್ತೀಯೋ? ಅಥವಾ ಹೆಂಡಿ ತಿನ್ನುತ್ತಿಯೋ? ಎಂದರ್ಥ. ಆಗ ಅನ್ನ ತಿನ್ನುವ ಕೈಯನ್ನು ಬಲಗಾಲಿಗೆ ಗಟ್ಟಿಯಾಗಿ ಕಟ್ಟುತ್ತಾರೆ. ಒಂದು ವೇಳೆ ಅದು 'ಗೂಖಾಸ್' ಎಂದರೆ, ಎಡಗೈಯನ್ನು ಎಡಗಾಲಿಗೆ ಕಟ್ಟುತ್ತಾರೆ. ಆಗ ಒಂದು ಇಲಿ ಕೋಲನ್ನು ಎಸೆಯುತ್ತದೆ. ಬೆಕ್ಕು ಕುಂಟುತ್ತಾ ಹೋಗಿ ಕೋಲನ್ನು ತರಬೇಕಾಗುತ್ತದೆ. ಇಂತಹ ಸಮಯದಲ್ಲಿ ಇಲಿಯೇನಾದರೂ ಬೆಕ್ಕಾದರೆ ಅದೂ ಕೂಡಾ ಮೂರು ಸಾರಿ ಓಡಿ ಸೋತನಂತರ ಕಾಲು ಕಟ್ಟಿಸಿಕೊಳ್ಳುವ ಸ್ಥಿತಿಗೆ ಬರುತ್ತದೆ.

ಈ ಹುಂದ್ರಾ ಹುಂದಿ ಆಟವು ಕೇವಲ ಮನೋರಂಜನೆಗೆ ಮಾತ್ರವಾಗದೆ ಆಟದಿಂದ ತಮ್ಮ ಬೇಟೆಯ ಗುರಿಯನ್ನು ಸಾಧಿಸಿಕೊಳ್ಳಲು ಅನುಕೂಲವಾಗುತ್ತದೆ.

೨. ಮೀಠ್ ಪಾಡಿ

ಈ ಆಟಕ್ಕೆ ಪಾರ್ಧಿಯರು 'ಬಿಳೀ' ಆಟವೆಂತಲೂ ಕರೆಯುತ್ತಾರೆ. ಬಹುತೇಕ ಹಳ್ಳಿಗಳಲ್ಲಿ ಆಡುವ ನೀಳಂಪಟ್ಟೆಯ ಆಟದ ರೀತಿಯಲ್ಲೇ ಈ ಮೀಠ್‌ಪಾಡಿ ಆಟವಿರುತ್ತದೆ. ಪಾರ್ಧಿಯರ ಭಾಷೆಯಲ್ಲಿ ಮೀಟ್ ಎಂದರೆ 'ಉಪ್ಪು' ಎಂದರ್ಥ. ಮೊದಲನೆಯವನಿಂದ ಆರಂಭಗೊಂಡು ಹತ್ತುಜನರಿಂದ ಮುಟ್ಟಿಸಿಕೊಳ್ಳದಂತೆ ತಪ್ಪಿಸಿಕೊಂಡು ಆಚೆ ಹೋಗಿ (ಉಪ್ಪು) ಮಣ್ಣನ್ನು (ಮೀಠ್) ಕೈಯಲ್ಲಿ ಹಿಡಿದು ಪುನಃ ಹೊರಗೆ ಒಬ್ಬ ಬಂದರೆ ಅಲ್ಲಿಗೆ ಒಂದು ಆಟ ಮುಗಿದಂತೆ. ಹತ್ತು ಜನ ಕಾವಲುಗಾರರಾಗಿ ಇನ್ನೊಂದು ಹತ್ತು ಜನ ಎದುರಾಗಿ ಆಡುವ ಈ ಆಟ ಹೆಚ್ಚು ಜನರನ್ನು ಒಳಗೊಳ್ಳುವದಷ್ಟೇ ಅಲ್ಲದೆ ಬಹಳಷ್ಟು ಜನರನ್ನು ಆಕರ್ಷಿಸುತ್ತದೆ. ಹತ್ತು ಜನರ ಪರವಾಗಿ ಒಬ್ಬ ಉಪ್ಪು ತೆಗೆದುಕೊಂಡು ಹೊರಗೆ ಬಂದರೂ ಅಲ್ಲಿಗೆ ಒಂದು ಆಟ ಮುಗಿದಂತೆ.

ಈ ಆಟದಲ್ಲಿ ಹೊರಭಾಗದ ಪಟ್ಟಿಗಳನ್ನು ಹೊರತುಪಡಿಸಿ ಕಾವಲುಗಾರರು ಅಡ್ಡ ಮತ್ತು ನಡುಪಟ್ಟಿಗಳಲ್ಲಿ ಅಡ್ಡಾಡಬಹುದು. ಅವರು ಕೊರೆದ ಪಟ್ಟಿಗಳ ಮೇಲೆಯೇ ಅಡ್ಡಾಡಬೇಕೇ ಹೊರತು ಮನೆಯ ಒಳಗೆ ನುಗ್ಗುವಂತಿಲ್ಲ. ಉಪ್ಪು ತರುವವನು ಹೊರ ಪಟ್ಟಿಯನ್ನು ತುಳಿಯುವಂತಿಲ್ಲ. ಹಾಗೇನಾದರೂ ಅವನು ಹೊರ ಪಟ್ಟಿಯನ್ನು ತುಳಿದರೆ ಅವನು ಸೋತಂತೆಯೇ ಸರಿ. ಅಡ್ಡ ಮತ್ತು ನಡ ಪಟ್ಟಿಗಳ ಮೇಲೆ ಮತ್ತು ಎಡಬಲದ [illegible] ಭಾಗದಿಂದ ಒಬ್ಬೊಬ್ಬರನ್ನು ದಾಟುತ್ತಾ ಸಾಗಬೇಕಾಗುತ್ತದೆ. ಕಾವಲುಗಾರರು ಯಾವಾದರೂ ಪಟ್ಟಿಯ

ಮೇಲಿದ್ದೇ ಮುಟ್ಟಿದರೆಂದರೆ, ಉಪ್ಪಿನ ಮನುಷ್ಯ ಸೋಲುತ್ತಾನೆ. ಉಪ್ಪು ತರುವವನು ಸುಮ್ಮನೆ ನಿಲ್ಲದೆ ಮುನ್ನುಗ್ಗುತ್ತಲೇ ಇರಬೇಕು. ಒಬ್ಬ ಸೋತರೆ ಆಗ ಮತ್ತೊಬ್ಬನ ಸರದಿ ಬರುತ್ತದೆ. ಇದು ಎದುರಾಳಿಗಳು ಹತ್ತು ಜನ ಮುಗಿಯುವರೆಗೂ ಈ ಆಟ ಹಾಗೆಯೇ ಮುಂದುವರೆಯುತ್ತದೆ.

೩. ಮಶಿನ್ ಆಟ (ಯಂತ್ರದ ಆಟ)

ಈ ಆಟವನ್ನು ಕೇವಲ ಯುವಕರು ಮಾತ್ರ ಆಡುತ್ತಾರೆ. ಈ ಆಟಕ್ಕೆ ಏಳರಿಂದ ಎಂಟು ಜನರ ಒಂದು ತಂಡ ಬೇಕಾಗಿದ್ದು ಇವರೆಲ್ಲಾ ಸೇರಿಕೊಂಡು ಗಡಿಯಾರದಂತೆ (Clock Wise Direction) ನಲ್ಲಿ ಕಲ್ಲನ್ನು ಅರೆಯುವದಾಗಿದೆ. ಕರಡಿಯಂತೆ ಓಡಾಡುವುದು, ಶೇಕ್ ಆಗುವುದು, ನಿಂತಲ್ಲೇ ಯಂತ್ರದಂತೆ ಅತ್ತಿತ್ತ ಸುತ್ತುವಂತೆ ಅಭಿನಯಿಸುತ್ತಾರೆ. ಕೊನೆಗೆ ಸುತ್ತುವ ವ್ಯಕ್ತಿಯು ಒಮ್ಮೆ ಬಾಯನ್ನು ಮುಚ್ಚಿದರೆ ಮತ್ತೊಮ್ಮೆ ತನ್ನ ಅಂಡುಗಳ ಮೇಲೆ ಕೈಯಿಟ್ಟು ಒಂದು ರೀತಿಯ ಮನೋರಂಜನೆಯನ್ನು ನೀಡುತ್ತಿರುತ್ತಾನೆ. ಅಷ್ಟೇ ಅಲ್ಲದೇ ತನ್ನ ಜೊತೆ ಇನ್ನುಳಿದ ೭-೮ ಜನರು ಯಂತ್ರದಂತೆಯೇ ತಿರುಗುತ್ತಾರೆ. ಆಗ ಅವರಿಗೂ ಮನರಂಜನೆ ಸಿಗುತ್ತದೆ.

ಮುಚ್ಚೊ ಆಟ : ಈ ಆಟದಲ್ಲಿ ಒಟ್ಟು ಎರಡು ಗುಂಪುಗಳಿದ್ದು ಒಂದು ಗುಂಪು ಒಬ್ಬನನ್ನು ಬಟ್ಟೆಯಿಂದ ಮುಚ್ಚಿರುತ್ತಾರೆ. ಇನ್ನೊಂದು ಗುಂಪು ಕಳ್ಳರಾಗಿರುವವರ ಗುಂಪು ಆಗಿರುತ್ತದೆ. ಕಳ್ಳರಾಗಿರುವ ಈ ಗುಂಪಿನವರು ಬಟ್ಟೆಯಲ್ಲಿ ಮುಚ್ಚಿರುವ ವ್ಯಕ್ತಿಯನ್ನು ಗುರ್ತಿಸಬೇಕಾಗುತ್ತದೆ. ಹಾಗೆ ಬಂದ ಕಳ್ಳರ ಗುಂಪಿನವರಿಗೆ ಕಣ್ಣು ಕಟ್ಟಿ ಕಳಿಸುತ್ತಾರೆ. ಸರಿಯಾದ ಗುರುತು ಹಿಡಿದು 'ಇಂಥವರನ್ನೇ ಮುಚ್ಚಿದ್ದೀರಿ' ಎಂದು ಹೇಳಿದರೆ ಆ ವ್ಯಕ್ತಿಯನ್ನು ಅವನು ಬಂದಿದ್ದ ಆಚೆಗಿನ ಗೆರೆಯವರೆಗೆ ಮುಚ್ಚಿಸಿಕೊಂಡಿದ್ದ ವ್ಯಕ್ತಿ ಕೂಸು ಮಾಡಿ ಹೊತ್ತುಕೊಂಡು ಹೋಗಬೇಕಾಗುತ್ತದೆ. ಬದಲಿಗೆ ಬೇರೆಯವರ ಹೆಸರನ್ನು ಹೇಳಿಬಿಟ್ಟರೆ, ಹುಡುಕಲು ಬಂದಿದ್ದ ವ್ಯಕ್ತಿಯ ಈ ಗುಂಪಿನವರಲ್ಲೊಬ್ಬರನ್ನು ಗೆರೆಯವರೆಗೆ ಹೊತ್ತುಕೊಂಡು ಹೋಗಬೇಕಾಗುತ್ತದೆ. ಈ ಆಟದಲ್ಲಿ ಒಬ್ಬ ಬಟ್ಟೆಯಿಂದ ಮುಚ್ಚಲ್ಪಟ್ಟರೆ ಉಳಿದವರೆಲ್ಲಾ ಒಟ್ಟಿಗೆ ಒಬ್ಬರಿಗೊಬ್ಬರು ತಬ್ಬಿಕೊಂಡಿರುವುದರಿಂದ ಯಾರನ್ನು ಮುಚ್ಚಿದ್ದಾರೆಂಬುದನ್ನು ಗುರ್ತಿಸುವುದು ಸ್ವಲ್ಪ ಕಷ್ಟದ ವಿಚಾರವೇ ಆಗಿರುತ್ತದೆ. ಈ ತರಹದ ಕಷ್ಟವನ್ನು ಬಗೆಹರಿಸುವುದೇ ಈ ಮುಚ್ಚೋ ಆಟದ ಮುಖ್ಯ ಉದ್ದೇಶವಾಗಿದೆ.

ಕುಂಟ ಬಿಲ್ಲೆ ಆಟ : ಈ ಕುಂಟಬಿಲ್ಲೆ ಆಟವನ್ನು ಬಹುತೇಕ ಕಡೆ ಹೆಣ್ಣು ಮಕ್ಕಳು ಮಾತ್ರ ಆಡೋದನ್ನೇ ನೋಡುತ್ತೇವೆ. ಆದರೆ ಪಾರ್ಸಿ ಬುಡಕಟ್ಟುಗಳಲ್ಲಿ ಹೆಣ್ಣು ಮತ್ತು ಗಂಡುಗಳಿಬ್ಬರೂ ಸಮ ಭಾಗಿಯಾಗಿ ಆಡುವುದೇ ಈ ಆಟದ ವೈಶಿಷ್ಟ್ಯವಾಗಿದೆ. ಬಿಲ್ಲೆಯೊಂದನ್ನು ತಾವು ಕೊರೆದುಕೊಂಡಿರುವ ಚೌಕಾಕಾರದ ಮನೆಯೊಳಗೆ ಹಾಕಿ ಒಂಟಿ ಕಾಲಿನಲ್ಲಿ ದೂಡುತ್ತಾ ಕುಂಟುತ್ತಾ ಒಂದೊಂದೆ ಮನೆಗೆ ಎಸೆದು ಅದನ್ನು ಕಾಲಿನಿಂದ ತಳ್ಳುತ್ತಾರೆ. ಎಡಗೈಲಿ ಬಿಲ್ಲೆ ಹಿಡಿದು ಕುಂಟುತ್ತಾ ದಾಟುತ್ತಾರೆ. ತಲೆಯ ಮೇಲೆ ಬಿಲ್ಲೆಯನ್ನಿಟ್ಟುಕೊಂಡು ಕುಂಟುತ್ತಾರೆ. ಅಲ್ಲದೇ ಒಂದೇ ಕಾಲನ್ನು ನೆಲದಿಂದ ಸ್ವಲ್ಪ ಮೇಲೆತ್ತಿ ಅದರ ಮೇಲೆ ಬಿಲ್ಲೆಯನ್ನಿಟ್ಟು ಇನ್ನೊಂದು ಕಾಲಿನಿಂದ ಕುಂಟುತ್ತಾ ಆಟವಾಡುತ್ತಾರೆ. ಮಡಿಕೆ ತಳದ ಚೂರು ಇಲ್ಲವೇ ಮಗ್ಗಿನ ಹೆಂಚಿನ ಚೂರಿನಿಂದ ಬಿಲ್ಲೆಯನ್ನು ದುಂಡಗೆ ಇಲ್ಲವೇ ಚೌಕಾಕಾರವಾಗಿ ಕಲ್ಲಿಗೆ ಉಜ್ಜಿ ತಯಾರು ಮಾಡಿಕೊಂಡಿರುತ್ತಾರೆ. ಕೆಲವು ಸಾರಿ ತೆಂಗಿನ ಚಿಪ್ಪಿನ ತುಂಡುಗಳನ್ನು ಬಳಸುತ್ತಾರೆ. ಈ ಆಟವನ್ನು ಆಡುವಾಗ

ಸೀಬೆ ಹಕ್ಕಿ ಸಾಲೂರ

ಗೋದಿ ರೊಟ್ಟಿ ಬಾಲೂರ

ಎಂಬ ಹಾಡನ್ನು ಹೇಳುತ್ತಾರೆ.

ಕಪ್ಪೆ ಆಟ : ಈ ಆಟದಲ್ಲಿ ವೃತ್ತಕ್ಕೆ ಬಹಳಷ್ಟು ಮಹತ್ವ ಇದ್ದು, ಈ ಆಟದ ಆಟಗಾರರೆಲ್ಲಾ ವೃತ್ತಾಕಾರದಲ್ಲಿ ಕುಳಿತಿರುತ್ತಾರೆ. ಈ ವೃತ್ತದೊಳಗೆ ಒಬ್ಬ ಕುಳಿತುಕೊಳ್ಳುವಷ್ಟು ಮಾತ್ರ ಪುನಃ ಒಂದು ಚಿಕ್ಕ ವೃತ್ತವನ್ನು ಕೊರೆದುಕೊಳ್ಳಬೇಕು. ಈಗ ಒಬ್ಬರ ವೃತ್ತದಿಂದ ಮತ್ತೊಬ್ಬರ ವೃತ್ತಕ್ಕೆ ಒಮ್ಮೆಗೆ ಕಪ್ಪೆಯ ರೀತಿಯಲ್ಲಿ ಕುಪ್ಪಳಿಸುವಷ್ಟು ಅಂತರವಿರಬೇಕು. ಆ ವೃತ್ತಗಳ ಒಳಗೆ ಒಬ್ಬ ಕಳ್ಳ ಮತ್ತು ಒಬ್ಬ ನಿರ್ದೇಶಕ (ಪೋಲೀಸ) ಇರುತ್ತಾರೆ. ವೃತ್ತದಲ್ಲಿ ಕುಳಿತು ಇವರು ಯಾರೂ ಸುಮ್ಮನೆ ಕುಳಿತಿರುವುದಿಲ್ಲ. ಇವರು ಆಟ ಮುಗಿಯುವರೆಗೆ ಕುಪ್ಪಳಿಸುತ್ತಲೇ ಇರಬೇಕಾಗುತ್ತದೆ. ಆಗ ಕಳ್ಳನಾದವನು ಯಾರ ವೃತ್ತ ಖಾಲಿ ಇರುತ್ತದೆಯೋ ಆ ವೃತ್ತದೊಳಗೆ ಕುಳಿತುಕೊಳ್ಳುತ್ತಾನೆ. ಹಾಗೆ ಕುಪ್ಪಳಿಸುವಾಗ ಯಾರು ಸೋಲುತ್ತಾರೋ ಅವನೇ ಕೆಳಗಾಗುತ್ತಾನೆ. ಈ ಕಪ್ಪೆ ಆಟದಲ್ಲಿ ಜಗಳವೇನಾದರೂ ಆದರೆ ಅದನ್ನು ತೀರ್ಮಾನಿಸಲು ನಿರ್ದೇಶಕನೊಬ್ಬ ಇರುತ್ತಾನೆ. ಈ ನಿರ್ದೇಶಕನೇ ಈ ಆಟದ 'ರೆಫ಼ಿ' ಆಗಿರುತ್ತಾನೆ.

'ಎಷ್ಟಪ್ಪ ಎಷ್ಟು' : ಎಂಬ ಆಟ ಈ ಆಟಕ್ಕೆ ದುಂಡಾಗಿ ತಿರುಗುವ ಆಟವೆಂತಲೂ ಹೇಳಬಹುದಾಗಿದೆ. ಈ ಆಟದಲ್ಲಿ ಒಬ್ಬನನ್ನು ಕಳ್ಳನನ್ನಾಗಿ ಮಾಡಿಕೊಂಡು ದುಂಡಾಗಿ ಕೈ ಕೈ ಹಿಡಿದು ಸುತ್ತುತ್ತಿರುತ್ತಾರೆ. ಮಧ್ಯದಲ್ಲಿರುವ ಕಳ್ಳ ಎಷ್ಟು ಬೇಕು? ಎಷ್ಟು ಅಥವಾ ಎಷ್ಟಪ್ಪ ಎಷ್ಟು ಎಂದು ಕೇಳುತ್ತಾನೆ. ಆಗ ಸುತ್ತುತ್ತಿರುವವರು 'ನಿಮಗೆಷ್ಟು ಬೇಕು' ಅಥವಾ 'ನೀವಂದಷ್ಟು' ಎಂದು ಹೇಳಿ ತಿರುಗುತ್ತಿರುತ್ತಾರೆ. ಆಗ ಕಳ್ಳನಾದವನು 'ಮೂರು' ಎಂದ ಕೂಡಲೇ ಸುತ್ತುತ್ತಿರುವವರೆಲ್ಲಾ ಮೂರು ಮೂರು ಜನರ ಗುಂಪಾಗಿ ನಿಂತುಬಿಡುತ್ತಾರೆ. ಹಾಗೆಯೇ ಮತ್ತೆ ಸುತ್ತುತ್ತಾ ಸುತ್ತುತ್ತಾ ಎಷ್ಟಪ್ಪ ಎಷ್ಟು ಎಂದು ಕೇಳಲಾಗಿ ಆಗ ಅವನು ನಾಲ್ಕು ಎನ್ನುತ್ತಾರೆ. ಆಗ ಸುತ್ತುತ್ತಿರುವವರೆಲ್ಲಾ ನಾಲ್ಕು ನಾಲ್ಕು ಜನರ ಗುಂಪಾಗಿ ನಿಂತುಬಿಡುತ್ತಾರೆ. ಹೀಗೆ ಸುತ್ತುವಾಗ ಒಳಗಿರುವ ಕಳ್ಳ ಹೇಳಿದ ಸಂಖ್ಯೆಯಂತೆ ಗುಂಪುಗಳಾಗಿ, ಆ ಗುಂಪಿಗೆ ಸೇರದೆ ಯಾರು ಉಳಿದು ಬಿಡುತ್ತಾರೋ ಅವರೇ ಸೋತಂತೆ.

ಓಯೋ ಓಯೋ ಆಟ : ಈ ಆಟದಲ್ಲಿ ಒಂದಿಷ್ಟು ಜನ ಕೈ ಕೈ ಹಿಡಿದು ಬುಗುಬುಗು ಎಂದು ಸುತ್ತುತ್ತಿರುತ್ತಾರೆ. ಆ ವೃತ್ತದ ಒಳಗೆ ಒಬ್ಬ ಕಳ್ಳನಿದ್ದು, ಅವನ ಕಣ್ಣಿಗೆ ಬಟ್ಟೆ ಕಟ್ಟಿರುತ್ತಾರೆ. ಇಲ್ಲಿ ಒಬ್ಬ ಆಟದ ನಿರ್ದೇಶಕನಿರುತ್ತಾನೆ. ಒಬ್ಬನನ್ನು ಹಿಡಿದುಕೊಂಡ ಕಳ್ಳನಿಗೆ ನಿರ್ದೇಶಕ ಕೇಳುತ್ತಾನೆ. ಇವನ ಹೆಸರೇನು? ಎಂದು ತಪ್ಪು ಹೇಳಿದರೆ ಆಗ ಇವನು 'ಅಲ್ಲ' ಎನ್ನುತ್ತಾನೆ ನಿರ್ದೇಶಕ. ಆಗ ಪುನಃ ಮೊದಲಿನಂತೆ ಒಟ್ಟಾಗಿ ಕೂಡಿಕೊಂಡು ಓಯೋ ಓಯೋ ಎನ್ನುತ್ತಾ ಸುತ್ತುತ್ತಿರುತ್ತಾರೆ. ಕಳ್ಳನಾದವನು ತಾನು ಹಿಡಿದುಕೊಂಡ ವ್ಯಕ್ತಿಯ ಹೆಸರು ಹೇಳಲು ತಲೆಯಿಂದ ಕಾಲವರೆಗೆ ತನ್ನ ಕೈಯಿಂದ ಹೆಸರು ಹೇಳಲು ತಲೆಯಿಂದ ಕಾಲಿನವರೆಗೆ ತನ್ನ ಕೈಯಿಂದ ತಡವರಿಸಬಹುದು. ಹೆಸರು ಹೇಳಿಸಿಕೊಂಡ ವ್ಯಕ್ತಿ ಪುನಃ ಕಳ್ಳನಾಗಿ ಬೇರೆಯವರು ಹಿಡಿದುಕೊಂಡು ಹೆಸರು ಹೇಳಬೇಕಾಗುತ್ತದೆ. ಹೀಗೆ ಈ ಆಟದ ಮನೋರಂಜನೆಯು ಮುಂದುವರೆಯುತ್ತದೆ.

ಸುರ್ ಸುರ್ ಬತ್ತಿ ಆಟ : ಈ ಆಟದಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಮಕ್ಕಳು [illegible] [illegible] ತಮ್ಮ

ಕೈಗಳನ್ನು ಹಿಂದಕ್ಕೆ ಇಟ್ಟುಕೊಂಡು ಕುಳಿತುಕೊಂಡಿರುತ್ತಾರೆ. ಇದರಲ್ಲಿ ಕೈಮುಟ್ಟಿ ಉಲ್ಟಾ, ಪಲ್ಟಾ ಹಾಕುವ ಮೂಲಕ ಒಬ್ಬನನ್ನು ಕಳ್ಳನನ್ನಾಗಿ ಮಾಡಿರುತ್ತಾರೆ. ಇನ್ನೊಬ್ಬ ಒಂದು ಕಲ್ಲನ್ನು ಹಿಡಿದು ಹಿಂದಕ್ಕೆ ಕೈಯಿಟ್ಟುಕೊಂಡಿರುವ ಯಾರ ಕೈಗಾದರೂ ಹಾಕಬಹುದು. ಎಲ್ಲರೂ ಕೈಗಳನ್ನು ಮುಚ್ಚಿಕೊಂಡಿರುತ್ತಾರೆ. ಯಾರ ಕೈಲಿ ಕಲ್ಲಿದೆಯೆಂಬುದನ್ನು ಗುರ್ತಿಸುವವರೆಗೂ ಕಳ್ಳನನ್ನು ಹುಡುಕುತ್ತಲೇ ಇರಬೇಕಾಗುತ್ತದೆ. ಕಲ್ಲು ಕೈಯಲ್ಲಿರುವವರನ್ನು ಗುರ್ತಿಸಿದರೆ ಆ ಜಾಗಕ್ಕೆ ಕಳ್ಳ ಕುಳಿತು, ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡಿದ್ದವನು ಕಳ್ಳನಾಗಿ ಆಟ ಮುಂದುವರಿಯುತ್ತದೆ. ಕಳ್ಳನಾದವನು ಕಲ್ಲನ್ನು ಕುಳಿತವರ ಕೈಗೆ ಹಾಕುವಾಗ ಮರೆಯಾಗುವಂತೆ ತಿರುಗಿ ನಿಂತಿರುತ್ತಾನೆ. ಕಲ್ಲು ಹಾಕಿದವನು

ಸುರ್ ಸುರ್ ಬತ್ತಿ
ಸುರಾಲ್ ಕೊಟ್ಟೆ
ಬಿಗಾಲ ಭದ್ರಂ, ಬಿಗಾಲ ಭದ್ರಂ
ಚಿನ್ನ ಚಿನ್ನ ಮಂಗಣಿ
ಚಿರಾಳ ಕೊಟ್ಟೆ
ರಾಳ ಕೊಟ್ಟೆ
ಬಿಗಾಲ ಭದ್ರಂ ಬಿಗಾಲ ಭದ್ರಂ

ಎಂದು ಹಾಡಿದ ಮೇಲೆ ತಿರುಗಿ ಕಲ್ಲು ಯಾರಲ್ಲಿರಬಹುದೆಂದು ಯೋಚಿಸುತ್ತಾ ಕಲ್ಲಿರುವವನ್ನು ಹುಡಕಬೇಕಾಗುತ್ತದೆ. ಈ ಮೇಲೆ ಹೇಳಿದ ಹಾಡನ್ನು ಆಟ ಆಡಿಸುವ ನೇತೃತ್ವವನ್ನು ವಹಿಸಿದ ಹಿರಿಯರು ಹೇಳುತ್ತಾರೆ.

ಹಾಖ್‌ಣಸೂ ಖೇಲ್ : ಈ ಆಟದಲ್ಲಿ ಒಬ್ಬ ಮಾರಮ್ಮನ ಪಾತ್ರವನ್ನು ವಹಿಸಿ ಒಂದು ಕಡೆ ಕಣ್ಣು ಮುಚ್ಚಿ ಸುಮ್ಮನೆ ದೇವರ ರೀತಿಯಲ್ಲಿ ಕುಳಿತಿರುತ್ತಾನೆ. ಅದರ ಎದುರಿಗೆ ಏಳೆಂಟು ಜನರು ಸಾಲಾಗಿ ನಿಂತಿರುತ್ತಾರೆ. ಇವ್ವಿಬ್ಬರಲ್ಲಿ ಒಬ್ಬ 'ನಗಿಸುತ್ತಾನೆ'. ಎಂಬುವವನು ಇನ್ನೊಬ್ಬ 'ನಗಿಸಲು ಸಾಧ್ಯವಿಲ್ಲ' ಎಂಬುವವನು. ಸಾಲಾಗಿ ನಿಂತವರ ಬಳಿ ನಗಿಸುತ್ತೇನೆ ಎಂಬುವವನು ಗಂಟಲಿಗೆ ಕೈಯಿಂದ ಹೊಡೆದು ಕೊಳ್ಳುತ್ತಾ 'ವಾಯ್ ವಾಯ್' ಎಂದು ಸದ್ದು ಮಾಡುತ್ತಿರುತ್ತಾನೆ. ಅಲ್ಲದೆ ನಗುವಂತೆ ಅವನು ಬೇರೆ ಏನಾದರೂ ಅಂಗಚೇಷ್ಟೆಯನ್ನು ಮಾಡಬಹುದು. ಸಾಲಾಗಿ ನಿಂತವರಲ್ಲಿ ಯಾರು ನಗುತ್ತಾರೋ ಅವರನ್ನು ಹಿಡಿದುಕೊಂಡು ಹೋಗಿ ಮಂಡಿ ಊರಿ ತಲೆ ಬಗ್ಗಿಸಿದಾಗ ನಿಂತಿದ್ದ ಇನ್ನೊಬ್ಬ ವ್ಯಕ್ತಿ ಕೊಡಲಿಯಿಂದ ಕಡಿದಂತೆ ಅಭಿನಯಿಸುತ್ತಾನೆ. ಅಲ್ಲೇ ಕುಳಿತಿದ್ದ ಮಾರೆಮ್ಮ (ದೇವಿ) ಆಗ ತಿನ್ನುವ ರೀತಿಯಲ್ಲಿ ಅಭಿನಯಿಸುತ್ತಾಳೆ.

ವಾಗನ್ ಖೇಲಿಯೋ : ಇದು ಮರದ ಸುತ್ತ ಆಡುವ ಆಟವಾಗಿದೆ. ಮರದ ಸುತ್ತ ಮಕ್ಕಳು ಕುರಿಗಳಾಗಿ ಕುಳಿತಿರುತ್ತಾರೆ. ಕುರಿ ಕಾಯುವವನೊಬ್ಬ ಈ ಆಟದಲ್ಲಿರುತ್ತಾನೆ. ಇವನಿಗೆ 'ಪಾಳವಾಳೋ' ಎಂದು ಕರೆಯುತ್ತಾರೆ. ಮತ್ತೊಬ್ಬ ಸೊಟೊ (ಕಳ್ಳ) ಕುರುಬ ತನ್ನ ಕುರಿಗಳನ್ನು ಮೇಯಿಸಿ ಮರದ ಕೆಳಗೆ ಬಿಟ್ಟು ಮರಕ್ಕೆ ತನ್ನ ಕುರಿಗಳನ್ನು ನೋಡಿಕೊಳ್ಳಲು ಹೇಳಿ ಊಟಕ್ಕೆ ಮನೆಗೆ ಹೋಗುತ್ತಾನೆ.

ಆಗ ಕಳ್ಳನಾಗಿರುವವನು ಕುರಿಗಳ ಬಳಿಗೆ ಬಂದು ಹುಲಿ ನಿನ್ನನ್ನು ತಿನ್ನಲು ಬಂದಿದೆ. ಬಾ ಹುಲಿ ಹೆಜ್ಜೆ ತೋರಿಸುತ್ತೇನೆ ಎಂದು ಕರೆದುಕೊಂಡು ಹೋಗತೊಡಗಿದಾಗ, ಅಲ್ಲಿರುವ ಮರ, ಹೋಗಬೇಡ ಅವನು ಮೋಸಗಾರ ನಿನ್ನ ತಿನ್ನೋಕ್ ಪ್ಲಾನ್ ಮಾಡ್ತಾನೆ ಅನ್ನುತ್ತೆ. ಹಂಗೆ ಹೇಳಿ ಕುರಿಗಳನ್ನೆಲ್ಲಾ ಖಾಲಿ ಮಾಡಿ ಬಿಡ್ತಾನೆ ಕಳ್ಳ ಆಮೇಲೆ ಕಳ್ಳ ಬಂದು ಮರಕ್ಕೆ ಕೇಳುತ್ತಾನೆ. ನನ್ನ ಕುರಿ ಎಲ್ಲಿ ಅಂತ? ಆಗ ಅಲ್ಲಿದ್ದ ಮರ ಅಗೋ ಅಲ್ಲಿದೆ ನಿನ್ನ ಕುರಿ ಎಂದು ತೋರಿಸಲು ಅಲ್ಲಿಗೆ ಬಂದ ಕುರುಬ ನನ್ನ ಕುರಿಗಳನ್ನು ನೀನು ಹೆಂಗೆ ವೈದೊ ಎಂದು ಪ್ರಶ್ನಿಸುತ್ತದೆ. ಆಗ ಕಳ್ಳ ನಿನಗೆ ಯಾರು ಚಾಡಿ ಹೇಳಿದರು. ಎಂದು ಕೇಳಿದಾಗ ಕುರುಬ ನನಗೆ ಮರ ಹೇಳ್ತಾ ಇದೆ ಎಂದು ಹೇಳುತ್ತಾನೆ. ಆಗ ಕಳ್ಳ ಹೋಗಿ ಆ ಮರವನ್ನು ಸಿಟ್ಟಿನಿಂದ ಕಡಿದು ಹಾಕಿ ಬಿಡುತ್ತಾನೆ. ಆಗ ಕುರುಬ ಅಳುತ್ತಾ ಮನೆಗೆ ಹೋಗುತ್ತಾನೆ.

೪. ಕಾಕಡೀನು ಖೇಲ್

ಪಾರ್ಧಿಯರ ಭಾಷೆಯಲ್ಲಿ ಕಾಕಡೀನು ಖೇಲ್ ಎಂದರೆ ಸೌತೆಕಾಯಿ ಆಟ ಎಂದರ್ಥ. ಸಾಮಾನ್ಯವಾಗಿ ಈ ಆಟವನ್ನು ಮಕ್ಕಳು ಮಾತ್ರ ಆಡುತ್ತಾರೆ. ಆದರೆ ಆಗಾಗ ದೊಡ್ಡವರು ಸಹ ಇವರ ಜೊತೆಗೆ ಭಾಗಿಯಾಗಿರುತ್ತಾರೆ. ಈ ಆಟವು ಮುಖ್ಯವಾಗಿ ಬೆಳೆಗೆ (ವ್ಯವಸಾಯಕ್ಕೆ) ಸಂಬಂಧಿಸಿದ್ದಾಗಿದೆ. ಈ ಆಟದಲ್ಲಿ ಮಕ್ಕಳು ಸೌತೆಕಾಯಿಗಳಾಗಿ ಕುಳಿತಿರುತ್ತವೆ. ಹೀಗೆ ಕುಳಿತ ಮಕ್ಕಳ ಸಂಖ್ಯೆ ಎಷ್ಟಾದರೂ ಆಗಬಹುದು. ಈ ಸೌತೆಕಾಯಿಗಳ (ಮಕ್ಕಳ) ಹಿಂದೆ ಅದನ್ನು ಸಾಕಿದವನೊಬ್ಬ, ಅವುಗಳನ್ನು ಕಿತ್ತುಕೊಳ್ಳುವವನೊಬ್ಬ ಹಾಗೂ ಒಬ್ಬ ರಾಜನಿರುತ್ತಾನೆ. ಈ ಮೂವರ ಸಂಭಾಷಣೆಯ ಮೂಲಕವೇ ಈ ಆಟವು ಮುಂದುವರೆಯುತ್ತದೆ. ಆ ಮೂವರು ಮಾತುವ ಸಂಭಾಷಣೆಯನ್ನು ಈ ಕೆಳಗಿನಂತೆ ನಿರೂಪಿಸಬಹುದು.

ಸವತೆಕಾಯಿ ಬೆಳೆಸಿದವನು : ನಿಮ್ಮ ರಾಜ ಏನು ಹೇಳಿದ?

ಕೀಳುವವನು : ಸೌತೆಕಾಯಿ ಕೇಳಿಕೊಂಡು ಎತ್ತಿದ್ದ

ಬೆಳೆಸಿದವನು : ಸೌತೆಕಾಯಿಗಳು ಇನ್ನೂ ಎಂದೇಳಿ ರಾಜನ ಮುಂದೋಗಿ ಹೇಳುತ್ತಾನೆ.

ರಾಜ : ಇಲ್ಲ ನನಗೆ ಕಿತ್ತು ಕೊಡಲೇಬೇಕು.

ಕೀಳುವವನು : ಸೌತೆಕಾಯಿಯನ್ನು ಕಿತ್ತುಕೊಡು

ಬೆಳೆದವನು : ನೀನೇ ಕಿತ್ತುಕೋ ಹೋಗು

ಕೀಳುವವನು : ಕರಡೀ ಕಾಟುಸ್ಸರೀ ಹೊಳ್ಳಾಹೋ ಎಂದು ಹೇಳುತ್ತಾ ಒಂದೊಂದನ್ನೇ ಕಿತ್ತು ಹಾಕುತ್ತಾನೆ.

ಈ ರೀತಿಯಾಗಿ ಈ ಆಟದಲ್ಲಿ ಸಾಮಾನ್ಯ ಜನರ ಮೇಲೆ ರಾಜನ ಪ್ರಭುತ್ವ ಮತ್ತು ದೌರ್ಜನ್ಯಗಳು ಹೇಗೆ ಇರುತ್ತವೆ ಎಂಬುದನ್ನು ನಿರೂಪಿಸಿ ತೋರಿಸುತ್ತಾರೆ.

ಗೋಲಿ ಆಟ : ಈ ಆಟಕ್ಕೆ ಒಂದು ಪನ್ನವನ್ನು ತೋಡಿರುತ್ತಾರೆ. (ಪನ್ನ ಎಂದರೆ ಗೋಲಿ ಆಟದ ಸಲುವಾಗಿ ಮಾಡಿದ ಒಂದು ಚಿಕ್ಕ ಗುಂಡಿ) ಈ ಆಟದಲ್ಲಿ ಗುಂಡಿಯ ಬಳಿಯಿಂದ ಕೊಂಚದೂರದ ಒಂದು ಗೆರೆ

ಕಡೆ ಎಲ್ಲರೂ ಗೋಲಿಯನ್ನು ಹೊಡೆಯುತ್ತಾರೆ. ಗೆರೆಗಿಂತ ಈಚೆಗೆ ಇರುವವರು ಆ ಕಡೆಯಿಂದ ಮೊದಲು ಆಡುವ ಅರ್ಹತೆಯನ್ನು ಹೊಂದಿರುತ್ತಾರೆ. ಗೆರೆಯಿಂದ ದಾಟಿ ಮುಂದೆ ಹೋಗಿರುವ ಗೋಲಿಗಳ ಆಟಗಾರರು ನಂತರ ಆಡಬೇಕಾಗುತ್ತದೆ. ನಂತರ ಎಲ್ಲರೂ ಗೆರೆಯ ಮೇಲೆ ಬೆರಳಿಟ್ಟು ಆಟ ಆಡಬೇಕಾಗುತ್ತದೆ. ಒಂದನೆಯ ನಂಬರಿನ ಗೋಲಿ ಸೀದಾ ಖಾಡ್ (ಗುಂಡಿ) ಗೆ ತುಂಬಿದರೆ ಅಥವಾ ಹಾಕಿದರೆ ಅದಕ್ಕೆ 'ಮಕ್ಕವಲ್ಲಿ' ಎಂದು ಕರೆಯುತ್ತಾರೆ. ಒಬ್ಬ ಬೇರೆ ಕೋಲಿಗೆ ಹೊಡೆದರೆ ಅವನಿಗೆ ಐದು ರುಂಡ (ನಂಬರ್) ಸಿಕ್ಕವು ಎಂದರ್ಥ. ಬೇರೆಯವರಿಗೆ ಹೊಡೆದ ಮೇಲೆ ಗುಂಡಿಗೆ ಬಂದು ಮುಳುಗಬೇಕು. ಮತ್ತೆ ಹತ್ತಿರ ಇದ್ದವರ ಗೋಲಿಗೆ ಮತ್ತೆ ಹೊಡೆಯಬೇಕು. ಮೊದಲನೆಯವರು ಹೊಡೆಯದೆ ಇದ್ದರೆ ಎರಡನೆಯವರು ಹೊಡೆಯಬೇಕು. ಗೋಲಿಗಳನ್ನು ಹೊಡೆಯುವ ಒಂದೊಂದು ಹೊಡೆತಕ್ಕೂ ಒಂದೊಂದು ನುಡಿಗಟ್ಟುಗಳು ಬಳಕೆ ಮಾಡುತ್ತಾರೆ.

ಪಾರ್ಧಿಯರು ಗೋಲಿಯಾಟವನ್ನು ಆಡುವಾಗ ಬಳಸುವ ನುಡಿಗಟ್ಟುಗಳನ್ನು ಈ ಕೆಳಗಿನಂತಿವೆ.

ಮಕ್ಕವಲ್ಲಿ

ನಕ್ಕ ನರಿ

ಐದು ರುಂಡ

ಆರ ಪತಿಗಾರ

ಏಳಂ ಬೇಳೆ

ಎಂಟು ಮೂರು ಸುಂಟಿ

ತಿಮ್ಮನ್ ತೇಲಿ

ಹಿಡಕೋ ನನ್ನ ಪೇಲಿ

ದರ್ಲ್ ಮಾರೋ ಆಂಡ್

'ತಿಮ್ಮನ ತೆಲಿ ಹಿಡಕೋ ನನ್ನಪೇಲಿ' ಎನ್ನುತ್ತಿದ್ದಂತೆಯೇ ಅಲ್ಲಿದ್ದವರೆಲ್ಲಾ ಗೊಳ್ಳೆಂದು ನಗುತ್ತಾರೆ. ಯಾಕೆಂದರೆ ಹಿಡಕೋ ನನ್ನ ಪೇಲಿ ಎಂದರೆ ನನ್ನ ತೊರಡು ಹಿಡಕೋ ಎಂದರ್ಥ.

ಇಂತಹ ಏಳು ಗೇಮುಗಳನ್ನು ಹೊತ್ತು ಸೋತವನಿಗೆ 'ಹರಿಗೋ' ಎನ್ನುತ್ತಾರೆ. ಹಾಗೆಂದರೆ, ಆಟದಲ್ಲಿ ಸೋತವನು ಎಂದರ್ಥ. ಈ ಹರಿಗೋನನ್ನು ಕುಕ್ಕರ್‌ಗಾಲಿನಲ್ಲಿ ಕೂರಿಸಿ ಪನ್ನದಿಂದ ದೂರ ಇರುವ ಗೆರೆಯಿಂದ ಗೋಲಿಯನ್ನು 'ಹಾತಿಸಿಡುಬಿಣೆ' (ಮೊಣಕೈ) ಯಿಂದ ಗೋಲಿಯನ್ನು ತಳ್ಳಿಸುತ್ತಾರೆ. ಆಗ ಅವನು ಕತ್ತರಿಯಾಕಾರದ ತನ್ನೆರೆಡು ಕಿವಿಗಳನ್ನು ಹಿಡಿದುಕೊಂಡು ಅಪರಾಧಿಯಾಗಿರುತ್ತಾನೆ.

ಪಾರ್ಧಿಯರ ಕ್ರೀಡೆಗಳ ಸಾಮಾಜಿಕ ನೆಲೆಗಳು

ಪಾರ್ಧಿಯರ ಈ ಎಲ್ಲಾ ಕ್ರೀಡೆಗಳು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರದೆ, ಇನ್ನೂ ಅನೇಕ ಕಾರಣಗಳು ಈ ಕ್ರೀಡೆಗಳಲ್ಲಿ ಒಳಗೊಂಡಿದೆ. ಮೇಲ್ನೋಟಕ್ಕೆ ಈ ಕ್ರೀಡೆಗಳು ಮನರಂಜನೆಯಂತೆ ಕಂಡರೂ ಅವು

ಮುಖ್ಯವಾಗಿ, ಒಂದು ಬುಡಕಟ್ಟಿನ, ಸಾಂಸ್ಕೃತಿಕ ಪ್ರತಿನಿಧಿಯಾಗಿ ಪ್ರತಿಬಿಂಬಿಸುತ್ತವೆ. ಈ ಮೂಲಕ ಈ ಬುಡಕಟ್ಟಿನೊಳಗಣ ರಾಜಕೀಯ, ಆರ್ಥಿಕ ಏಳು ಬೀಳಿನ ಮುಖ್ಯ ವಿಮರ್ಶನ ಧಾರೆಗಳಾಗಿರುವುದನ್ನು ಗುರುತಿಸಬಹುದು. ಪಾರ್ಧಿಯರಂತಹ ಬುಡಕಟ್ಟುಗಳ ಕ್ರೀಡೆಗಳು ಹೀಗೆ ಒಂದು ವ್ಯವಸ್ಥೆಯನ್ನು ಅಣಕವಾಡುವ ನೆಲೆಯೇ ಕೆಳವರ್ಗದ ಹಿತಾಸಕ್ತಿಗಳಾಗಿ, ಅವೇ ಮುಂದೆ ಹೋರಾಟಗಳಾಗಿ ಪ್ರತಿಬಿಂಬಿತವಾಗುತ್ತವೆ ಎಂಬುದನ್ನು ಈ ಕ್ರೀಡೆಗಳಿಂದ ಗುರುತಿಸಬಹುದಾಗಿದೆ.

ಕ್ರೀಡೆಗಳು ಮತ್ತು ಪಾರ್ಧಿಯರ ಕಲಾವಂತಿಕೆ

ನಿರಂತರವಾಗಿರುವ ಪಾರ್ಧಿಯರ ಕ್ರೀಡೆಗಳು ಕರ್ನಾಟಕದ ಜನ ಜೀವನದಲ್ಲಿ ಇರುವ ಕ್ರೀಡೆಗಳನ್ನು ಒಳಗೊಂಡಿದೆ. ಹಾಗೆಯೇ ತಮ್ಮ ಕ್ರೀಡೆಗಳನ್ನು ಉಳಿಸಿಕೊಂಡಿವೆ. ಇವುಗಳಲ್ಲಿ ಆಧುನಿಕ ಕ್ರೀಡೆಯಾದ ಮೆಶಿನ್ ಆಟದಂತಹದ್ದನ್ನು ಗಮನಿಸಿದರೆ, ಕೈಗಾರಿಕೆಗಳ ಅವರ ಮೇಲೆ ಬೀರಿರುವ ಪ್ರಭಾವ ಎಷ್ಟರ ಮಟ್ಟಿನದೆಂಬುದು ತಿಳಿಯುತ್ತದೆ. ಅಲ್ಲದೇ ಕಾಕಡೀನುಖೇಲ್‌ನಂತಹ ಆಟದಲ್ಲಿ ರಾಜತ್ವದ ಬಗ್ಗೆ ಪ್ರತಿರೋಧವಿರುವ ಅಂಶಗಳು ಕಂಡುಬರುತ್ತವೆ. ಅಂದರೆ ಇವರ ಬೇಟೆಗೆ ಸಂಬಂಧಿಸಿದ ಇಲ್ಲವೇ ಅವರದೇ ಆದ ಮೂಲ ಆಟಗಳಲ್ಲಿ ಒಂದು ಸಮುದಾಯದ (ಬುಡಕಟ್ಟಿನ) ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ.

ಆಧಾರಗಳು

ಪ್ರಹ್ಲಾದ ಬೇಟಗೇರಿ., ೧೯೯೩, 'ಅಡವಿಚೆಂಚರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಜಪ್ಪ ದಳವಾಯಿ., ೧೯೯೩, 'ಹಕ್ಕಿಪಿಕ್ಕಿಯರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಕ್ತೃಗಳು

ಹೆಸರು	ವಯಸ್ಸು	ಬೆಡಗು	ಸ್ಥಳ
ಈಶ್ವರಲಾಲ್ ಕಾಲಿಕರ್	೫೦	ಕಾಳೇ	ಕೆ.ಜಿ.ಎಫ್
ಕುಮಾರ ತಂದೆ ಕೃಷ್ಣಾಜಿ	४೦	ಸಾವಂಡಿಯಾ	ಬಾಗಲಕೋಟೆ
ಡಾ. ರೇಖಾ ಕೆ.ಪಿ.	೩೪	ಕಾಳೇ	ಕಮಲಾಪುರ
ಶಂಕರ ಪ್ರತಾಪ್ ಕಾಳೇ	४೮	ಪಿಂಪಳಾಜ	ಹುಬ್ಬಳ್ಳಿ
ವಸಂತ ಚೌಹ್ವಾಣ	४೫	ಸಾವಂಡಿಯಾ	ಗದಗ

ಅಧ್ಯಾಯ - ೭

ಇಂದಿನ ದಿನಗಳಲ್ಲಿ ಪಾರ್ಧಿಯರು

೧. ಬೇಟೆಗಾರಿಕೆಯ ಕಾನೂನು ಹಾಗೂ ಅದರ ಅಭಿವೃದ್ಧಿ

೨. ಪಾರ್ಧಿ ಬುಡಕಟ್ಟಿನ ಉನ್ನತಿಗಾಗಿ ಪರಿಹಾರೋಪಾಯಗಳು

೩. ಪಾರ್ಧಿ, ಹಕ್ಕಿಪಿಕ್ಕಿ, ಹರಣ್‌ಶಿಕಾರಿ ಒಂದೇ ಬುಡಕಟ್ಟುಗಳು

೭. ಇಂದಿನ ದಿನಗಳಲ್ಲಿ ಪಾರ್ಧಿಯರು

ತೀವ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಅಂದರೆ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಹಾಗೂ ಕಂಪ್ಯೂಟರೀಕರಣಗಳಲ್ಲಿ ಪಾರ್ಧಿಯರು ಅಲ್ಪ ಸ್ವಲ್ಪ ಕಾಲದ ತೀವ್ರ ಚಲನೆಯೊಂದಿಗೆ ಹೆಜ್ಜೆ ಹಾಕುತ್ತಿದ್ದಾರೆ. ಇವರಷ್ಟು ನಿರಂತರವಾದ ಬದಲಾವಣೆಗೆ ಒಳಗಾಗಿರುವ ಬುಡಕಟ್ಟು ಬೇರೆ ಯಾವುದು ಇಲ್ಲ ಎಂದರೆ ತಪ್ಪಾಗದು. ಈ ಬದಲಾವಣೆಗೆ ಮುಖ್ಯ ಕಾರಣ ಅವರ ನಿರಂತರ ಚಲನೆ ಅಥವಾ ದೇಶ ಸಂಚಾರ. ದೇಶ ತಿರುಗಿ ನೋಡು, ಕೋಶ ಓದಿ ನೋಡು ಎಂಬ ಹಿರಿಯರ ನಾಣ್ಣುಡಿಯಂತೆ ಇವರು ಯಾವತ್ತು ಕೋಶ ಓದದಿದ್ದರೂ ನಿರಂತರವಾಗಿ ದೇಶ ಸುತ್ತುವರಾಗಿದ್ದಾರೆ. ಈ ರೀತಿಯಾಗಿ ನಿರಂತರವಾಗಿ ದೇಶವನ್ನು ಸುತ್ತುವುದೇ ಇವರಿಗೆ ವಿವಿಧ ಭಾಷೆ ಮತ್ತು ಸಂಸ್ಕೃತಿಯನ್ನು ಕಲಿಯಲು ಸಹಾಯಕವಾಗಿದೆ. ಇವರುಗಳು ಹಿಂದಿನಂತೆ ಇಂದು ಸುಲಭವಾಗಿ ತಿರುಗಿ ತಿಂದು ಬದುಕುವ ಹಾಗಿಲ್ಲ. ಇಂದು ಯಾರಾದರೂ ಬಿಕ್ಷೆ ಬೇಡಲು ಹೋದರೆ, ನಿನಗೇನು ದಾಡಿಯಾಗೈತಿ ದುಡಿಯಲಿಕ್ಕೆ ಆಗಲ್ವೆ ನಮ್ಮ ಹೊಲಕ್ಕೆ ಕೆಲಸಕ್ಕೆ ಬಾ ಊಟಕ್ಕೆ ಹಾಕ್ತೀವಿ. ಪಾತ್ರೆ ಪಡಗಾ ತೊಳಿ ಕೂಲಿ ಕೊಡ್ತೀವಿ ಎಂದು ಹೇಳುತ್ತಾರೆ.

ಇಂದಿನ ಈ ಸಂಕೀರ್ಣ ಜಗತ್ತಿನಲ್ಲಿ ಅಕ್ಷರಜ್ಞಾನ ಇರದ ಈ ಸಮುದಾಯ ಮಾಡಲು ಬೇರೆ ಕೆಲಸವಿಲ್ಲದೆ, ಯಾವುದೇ ರೀತಿಯಲ್ಲಿ ಸರ್ಕಾರದ ಸವಲತ್ತುಗಳೂ ಇಲ್ಲದೆ ಬದುಕುತ್ತಿರುವ ಈ ಜಾತಿಯ ಜನ ಇಂದು ಚಿಕ್ಕ ಪುಟ್ಟ ವ್ಯಾಪಾರವೇ ತಮ್ಮ ಪ್ರಮುಖ ಕಸುಬನ್ನಾಗಿ ಮಾಡಿಕೊಂಡಿದೆ.

ಸಮಾಜ ಕಲ್ಯಾಣ ಇಲಾಖೆಯ ಗಿರಿಜನ ಉಪಯೋಜನೆ (ಟಿ.ಎಸ್.ಪಿ.) ಅಡಿಯಲ್ಲಿ ಬರುವ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳೂ ಇವರಿಗೆ ತಿಳಿಸುವುದಿಲ್ಲ. ಇವರೂ ಸಹ (ಪಾರ್ಧಿಯರು) ಅಲ್ಲಿಗೆ (ಕಛೇರಿಗೆ) ಹೋಗಿ ಯೋಜನೆಯ ಲಾಭ ಪಡೆಯುವಷ್ಟು ಬುದ್ಧಿವಂತರೂ ಅಲ್ಲ. ಹೀಗಿರುವಾಗ ಇವರ ಉದ್ಧಾರಕ್ಕೆಂದು ಬರುವ ಯೋಜನೆಗಳು ಇವರಿಗೆ ತಲುಪದೇ ವ್ಯರ್ಥವಾಗುತ್ತಿರುವುದು ಕಟು ಸತ್ಯ.

ಅಷ್ಟೇ ಅಲ್ಲದೆ ಬದಲಾದ ಅರಣ್ಯ ನೀತಿಯಿಂದಲೂ ಇವರಾಡುವ ಬೇಟೆಗೆ ಮತ್ತು ಅದರ ಆದಾಯಕ್ಕೆ ಅರಣ್ಯ ಇಲಾಖೆಯ ನೌಕರರಿಂದ ಮತ್ತು ರಕ್ಷಣಾ ಇಲಾಖೆಯವರಿಂದ ಪಾರ್ಧಿಯರು ಇಂದು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ತಾವು ಹಣಕೊಟ್ಟು ತಂದ ವಸ್ತುಗಳಿಗೆ ಇವರಲ್ಲಿ ಯಾವುದೇ ರೀತಿಯಲ್ಲಿ ಸಾಕ್ಷ್ಯಾಧಾರ ಬಿಲ್ಲು ರಸೀದಿ ಗಳಿಲ್ಲದ ಕಾರಣ ಅನ್ಯಾಯವಾಗಿ 'ಕಳ್ಳ' ಎನ್ನುವ ಹಣೆ ಪಟ್ಟಿಯನ್ನು ಹೊತ್ತು ಕೊಳ್ಳಬೇಕಾಗಿದೆ.

ಇಂದಿಗೂ ಸಹ ಎಲ್ಲಿಯೇ ಕಳ್ಳತನವಾಗಲಿ, ದರೋಡೆಯಾಗಲಿ, ಅಥವಾ ಇನ್ನಾವುದೇ ಅನಾಹುತಗಳಾದರೂ ಪೊಲೀಸರು ಮೊದಲು ಹಿಡಿದು ದಂಡಿಸುವುದು ಇವರನ್ನೇ ಹೀಗಾಗಿ ಪೊಲೀಸರ ಹಾಗೂ ಸುಶಿಕ್ಷಿತ ಸಮಾಜದಿಂದ ರೋಸಿಕೊಂಡ ಬುಡಕಟ್ಟು ಯಾವ ತಪ್ಪು ಮಾಡದಿದಾಗ್ಯೂ ಶಿಕ್ಷೆ ಅನುಭವಿಸುವುದರಿಂದ ಇವರ ದೌರ್ಜನ್ಯ ಹೀಗೆಯೇ ಮುಂದುವರೆದರೆ, ಮತ್ತೆ ನಾವು ನಮ್ಮ ಹಳೆಯ ವೃತ್ತಿ (ಅಪರಾಧಿ ಚಟುವಟಿಕೆಗಳು) ಯನ್ನೇ ಕೈಗೆತ್ತಿಕೊಳ್ಳಬೇಕಾಗುತ್ತದೆ ಎಂಬ ಎಚ್ಚರಿಕೆಯ ಮಾತನ್ನು ಇವರು ಹೇಳುತ್ತಾರೆ.

ಇಂಥಹ ಹಲವು ತೊಂದರೆಗಳ ಮಧ್ಯೆಯು ಈ ಬುಡಕಟ್ಟು ಜನರ ಬದುಕಿನ ಉತ್ಸಾಹ ಹಾಗೂ ಆತ್ಮ ವಿಶ್ವಾಸಗಳು ಯಾವುದೇ ಪ್ರತಿಷ್ಟಿತ ಜಾತಿಯ ಜನರು ಕಲಿಯಬೇಕಾದ ಪಾಠ ಬಹಳಷ್ಟಿದೆ.

ಅಲ್ಲಲ್ಲಿ ಪ್ರಜ್ಞಾವಂತ ಪಾರ್ಧಿಯರು ಸರ್ಕಾರದ ವಿವಿಧ ಯೋಜನೆಯ ಸವಲತ್ತುಗಳ ಸಹಾಯದಿಂದ ಮನೆ, ಹಂಚು, ವಿದ್ಯುತ್, ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವ ಈ ಜನ ಆಧುನಿಕ ವಸ್ತುಗಳನ್ನು ತಮ್ಮಲಿಟ್ಟುಕೊಂಡಿರುವುದು ಸಹ ಹಲವು .ತೊಂದರೆಗಳಿಗೆ ಕಾರಣವಾಗಿವೆ ತಾವು ವ್ಯಾಪಾರಕ್ಕೆಂದು ಡೆಲ್ಲಿ, ಕಲ್ಕತ್ತಾ, ಬಾಂಬೆ, ಬೆಂಗಳೂರು ಮುಂತಾದ ಕಡೆ ಕೊಂಡ ಟೇಪ್‌ರಿಕಾರ್ಡರ್‌ಗಳು, ಸೂಟಕೇಸ್‌ಗಳು, ಆಧುನಿಕ ಉಡುಪುಗಳು, ಶೂ, ಚಪ್ಪಲಿಗಳು ಇವೆಲ್ಲಾ ಗ್ರಾಮೀಣ ಪ್ರದೇಶದ ಯಾವುದೇ ಜನ ಬಳಸದಷ್ಟು ಇವರು ಮುಂದುವರಿದ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ.

ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಬಹಳಷ್ಟು ಜನ ತಮ್ಮ ಮಕ್ಕಳನ್ನು ತಮ್ಮೊಂದಿಗೆ ವ್ಯಾಪಾರಕ್ಕೊ ಅಥವಾ ಬೇಟೆಗೆ ಕರೆದೊಯ್ಯುವ ಬದಲು ಶಾಲೆಗೆ ಕಳಿಸುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆಯೇ ಆಗಿದೆ.

ಬದಲಾದ ಈ ಶೈಕ್ಷಣಿಕ ಬೆಳವಣಿಗೆಯು ಅದರ ಜೀವನದ ಒಂದು ಮಹತ್ವದ ಬೆಳವಣಿಗೆ ಎನ್ನಲಡ್ಡಿಯಿಲ್ಲ. ಈಗಾಗಲೇ ಕೆಲವರು ಶಾಲೆಗಳಲ್ಲಿ ಅಕ್ಷರ ಕಲಿಯಲು ಆರಂಭಿಸಿದ್ದಾರೆ. ಇವರ ಶಿಕ್ಷಣದ ಜೊತೆಗೆ ತಮ್ಮ ತಮ್ಮ ವಿದ್ಯೆಗೆ ತಕ್ಕಂತೆ ಹುದ್ದೆಯನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಒಂದೊಂದು ಊರಿನಲ್ಲಿ ಒಂದೊಂದು ತಿಂಗಳು ತಂಗುವ ಪಾರ್ಧಿಯರು ತಮ್ಮ ಈ ಅತಂತ್ರ ಸ್ಥಿತಿಯಲ್ಲಿಯು ವಿದ್ಯಾಭ್ಯಾಸದ ಕಡೆ ವಹಿಸಿರುವ ಲಕ್ಷ ಆಸಕ್ತಿ ನಿಜವಾಗಿಯೂ ಒಂದು ಕ್ರಾಂತಿಯಂತೆಯೇ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಹಲವು ಆಶ್ರಮ ಶಾಲೆಗಳು ಹಾಗೂ ಅಲ್ಲಿಯ ಶಿಕ್ಷಕರು ಮಾಡುತ್ತಿರುವ ಶ್ರಮ ಅಪಾರವಾಗಿದೆ. ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ತಾಲೂಕಿನಲ್ಲಿಯ ಚಿಕ್ಕಮಟ್ಟಿ, ಗೌತಂನಗರ್ ಹಕ್ಕಿಪಿಕ್ಕಿ ಕಾಲೋನಿಯ ಡಾ ಅಂಬೇಡ್ಕರ್ ಶಾಲೆಯ ಪ್ರಯತ್ನವನ್ನು ನೆನೆಯುವಂತಹದ್ದು.

ಬಲಿಷ್ಟ, ಕೆಲವು ಜಾತಿಗಳ ಹಾಗೂ ಸರ್ಕಾರದ ಕೆಲವು ಬದಲಾವಣೆಗಳಿಂದ ತಮ್ಮ ವೃತ್ತಿಯನ್ನು ಪರಿವರ್ತನೆ ಮಾಡಿಕೊಳ್ಳುತ್ತಿರುವ ಪಾರ್ಧಿಯರು ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವ, ಅವರನ್ನು ಪ್ರೀತಿಸುವ ಹಾಗೂ ಗೌರವಿಸುವ ಜನರಾಗಿದ್ದಾರೆ.

ಮುಂದುವರೆದ ಜಾತಿಗಳಲ್ಲಿ ಕಂಡುಬರುವ ಅಪ್ರಾಮಾಣಿಕತೆ ಹಾಗೂ ಕ್ರೌರತನ ಹಿಂದುಳಿದ ಸಮಾಜ ಎನಿಸಿದ ಈ ಬುಡಕಟ್ಟಿನಲ್ಲಿ ಕಂಡುಬರುವುದಿಲ್ಲವೆಂಬುದು ಒಂದು ಸಂತೋಷ ಹಾಗೂ ಹೆಮ್ಮೆಯ ವಿಚಾರವಲ್ಲವೇ?

೧೯೫೮ ರಿಂದಲೂ ಸರ್ಕಾರದ ಅನೇಕ ಕಲ್ಯಾಣ ಯೋಜನೆಗಳ ಅಡಿಯಲ್ಲಿ ಇವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲು ಪ್ರಯತ್ನಿಸಿದರೂ ಇವರ ಅಲೆಮಾರಿತನ ಬದುಕಿನಿಂದ ಆ ನಿವೇಶನಗಳು ಹಾಗೆಯೇ ಖಾಲಿಯೇ ಬಿದ್ದು ಹಾಳಾಗಿರುವದನ್ನು ಮಲ್ಲೇನ ಹಳ್ಳಿ ಗ್ರಾಮದಲ್ಲಿ ಕಂಡುಬಂದಿತು. ಆದರೆ ದುರದೃಷ್ಟವಶಾತ್ ಒಂದೇ ಕಡೆ ನೆಲೆನಿಂತ ಕೆಲವು ಪಾರ್ಧಿಯರಿಗೆ ನಿವೇಶನಗಳೇ ಇಲ್ಲದಿರುವುದು ವಿಪರ್ಯಾಸವೇ ಸರಿ.

ಸರ್ಕಾರವು ಕೆಲವು ಕಡೆ ಇವರಿಗೆ ಭೂಮಿಯನ್ನು ಕೊಡಮಾಡಿದ್ದು ಆ ಭೂಮಿಗಳು ಅಷ್ಟೊಂದು ಫಲವತ್ತಾಗಿರದೇ, ಬಂಜರು ಭೂಮಿಯಾಗಿರುವುದು ಅದನ್ನು ಇವರು ಕೃಷಿಮಾಡದೆ ಬೇರೆಯವರಿಗೆ ವಹಿಸಿ ಕೊಟ್ಟಿರುವುದು ಬಹಳ ಕಡೆ ನನ್ನ ಗಮನಕ್ಕೆ ಬಂತು.ಹಾಗೆಯೇ ಅಂತಹ ಭೂಮಿಗೆ ಸರಿಯಾದ ರೀತಿಯಲ್ಲಿ ನೀರಿನ ಸೌಲಭ್ಯವಿರದೆ ಇರುವುದು ಇವರು ಕೃಷಿ ಮಾಡದೇ ಇರುವುದಕ್ಕೆ ಕಾರಣವಾಗಿದೆ. ಆದರೆ ಬೆಂಗಳೂರು ಬಳಿಯಲ್ಲಿಯ ಭೂತಾನ್ ಹಳ್ಳಿಯ ಹಕ್ಕಿಪಿಕ್ಕಿಯರಿಗೆ ಕಾಡು ಪ್ರಾಣಿಗಳ ಅದರಲ್ಲೂ ಆನೆಗಳ ಹಾವಳಿ ತುಂಬಾ ಇರುವುದರಿಂದ ಇಲ್ಲಿ ಕೃಷಿ ಮಾಡಲು ಸಾಧ್ಯವೇ ಇಲ್ಲ ಎನ್ನುವಂತಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಯಾಗಬೇಕೆಂದರೆ, ಇವರ ಬುಡಕಟ್ಟಿನಲ್ಲಿ ಯಾರೊಬ್ಬರೂ ಒಳ್ಳೆಯ ನಾಯಕರಿಲ್ಲದ್ದಂತಹ ಅಲ್ಲೊಬ್ಬ ಇಲ್ಲೊಬ್ಬ ಮರಿನಾಯಕರು ಪಟ್ಟಣ ಪಂಚಾಯ್ತಿ ಸದಸ್ಯರೋ ಗ್ರಾಮ ಪಂಚಾಯ್ತಿ ಸದಸ್ಯರು ಹಾಗೂ ಇನ್ನಿತರ, ತಮ್ಮ ಸ್ವಾರ್ಥದ ಹಿತ ಚಿಂತನೆಯಲ್ಲಿಯೇ ಹೆಚ್ಚು ಮಗ್ನರಾಗಿರುವುದರಿಂದ ಹಾಗೂ ಈ ಸ್ವಾರ್ಥ ತಮ್ಮ ಜಾತಿಯ ನಾಯಕರಿಂದಲೇ ಇವರ ಶೋಷಣೆ ಆಗುತ್ತಿರುವುದರಿಂದ ಕೆಲವು ಕಡೆ ಗಮನಕ್ಕೆ ಬಂತು.

ಈ ಬುಡಕಟ್ಟು ಅಭಿವೃದ್ಧಿಯಾಗಬೇಕೆಂದರೆ, ಮೊದಲಿಗೆ ಇವರಿಗೆಲ್ಲಾ ಪರಿಶಿಷ್ಟ ಪಂಗಡ 'ಪಾರ್ಧಿ' ಎಂದು ಜಾತಿ ಪ್ರಮಾಣ ಪತ್ರ ಕೊಡುವುದು (ಕೊಡಿಸುವುದು) ಅತ್ಯವಶ್ಯಕ ಇದೆ. ಆದರೆ ಇವರನ್ನು ಬಹು ಹೆಸರುಗಳಿಂದ ಕರೆಯುವುದರಿಂದ ಅನೇಕ ಅಧಿಕಾರಿಗಳಿಗೆ ಇವರು ಮೂಲತಃ ಯಾವ ಪಂಗಡದವರು ಎಂಬುದೇ ಒಂದು ಗೊಂದಲಮಯವಾಗಿ ಇವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಜಾತಿ ಪ್ರಮಾಣ ಪತ್ರದಿಂದ ವಂಚಿತರಾಗಿ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳಿಂದ ಇವರು ವಂಚಿತರಾಗಿದ್ದಾರೆಂದೇ ಹೇಳಬೇಕಾಗಿದೆ.

ಬಾಗಲಕೋಟೆ, ಬಿಜಾಪೂರ್, ಹಾಗೂ ಇನ್ನು ಕೆಲವು ಜಿಲ್ಲೆಗಳಲ್ಲಿ ಪಾರ್ಧಿಯರನ್ನು ಹರಣ್ ಶಿಕಾರಿ ಜನರೆಂದು ಕರೆಯುತ್ತಿದ್ದಾರೆ. ಈ ಹರಣ್ ಶಿಕಾರಿ ಎಂಬುದು ಗೆಜೆಟಿನ್ O.B.C. (ಇನ್ನಿತರ ಹಿಂದುಳಿದ ಜಾತಿಯ) ಪಟ್ಟಿಯಲ್ಲಿರುವುದು ತಿಳಿದು ಬಂತು.

ದಕ್ಷಿಣ ಕನ್ನಡ (ಮಂಗಳೂರು), ಉಡುಪಿ ಹಾಗೂ ಕೇರಳದ ಕಾಸರಗೋಡಿನಲ್ಲಿಯೂ ಪಾರ್ಧಿ (ಹಕ್ಕಿಪಿಕ್ಕಿ) ಯರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಿಲ್ಲ. ಹೀಗಾಗಿ ಇವರಿಗೂ ಕೂಡಾ ಸರಕಾರದಿಂದ ಯಾವ ಸವಲತ್ತುಗಳು ಸಿಕ್ಕಿಲ್ಲ.

ತೀವ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ದಿನಗಳಲ್ಲಿಯೂ ಬಹುತೇಕ ಪಾರ್ಧಿಯರು ಬಹುತೇಕ ಭಾಗಗಳಲ್ಲಿ ಸರ್ಕಾರಿ ಅಧಿಕಾರಿಗಳ ಬಗೆಗಾಗಲಿ ಅಥವಾ ರಾಜಕಾರಣಿಗಳ ಬಗ್ಗೆಗಾಗಲಿ ಸುಳಿವಾ ತಿಳಿದಿರುವುದಿಲ್ಲ.

ಹೊಂದಿ, ಅವರೆಲ್ಲಾ ಕಳ್ಳರು ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಹಾಗೂ ಅನೇಕ ಜನ ಸಂಶೋಧಕರು ಹಾಗೂ ಸರ್ಕಾರರೇತರ ಸಂಸ್ಥೆಗಳೂ ಇವರ ಬಗ್ಗೆ ಎಲ್ಲಾ ರೀತಿಯ ಮಾಹಿತಿಗಳನ್ನು ತೆಗೆದುಕೊಂಡು ಹೋಗುತ್ತಿವೆಯೇ ಹೊರತು, ಯಾವೊಂದು ಉಪಕಾರದ ಕೆಲಸ ಮಾಡುತ್ತಿಲ್ಲವೆಂದು ಅವರುಗಳ ಬಗ್ಗೆಯು ಸಹ ಈ ಪಾರ್ಧಿಯರು ತುಂಬಾ ಭ್ರಮನಿರಸರಾಗಿದ್ದಾರೆ.

ಸಾಮಾನ್ಯ ಲಕ್ಷಣಗಳು, ಸ್ವಭಾವ ಮತ್ತು ವರ್ತನೆಗಳು

ಪಿ.ಹೆಚ್.ಡಿ. ಸಂಶೋಧನೆಗೆ ಮಾಡಿದ ಸಮೀಕ್ಷೆಯ ಪ್ರಕಾರ, ಇಂದಿಗೂ ಕೆಲವು ಕಡೆ ಮದುವೆಯಾದ ಗಂಡಸರು ಜಡೆಯನ್ನು ಬಿಟ್ಟಿರುವುದು, ಕಂಡುಬಂತು. ಈ ಜಡೆಗಳಿಂದ ಅವರು ಬೇರೆ ಜನರಿಗೆ ಹಾಗೂ ಚಿಕ್ಕ ಮಕ್ಕಳಿಗೆ ಒಂದು ಬಗೆಯ ಹೆದರಿಕೆ ತರುವಂತೆಯು ಕಂಡು ಬಂದರು. ಬಹುತೇಕ ಪಾರ್ಧಿ ಗಂಡಸರು ಮತ್ತು ಸ್ತ್ರೀಯರು ತಮ್ಮ ಬೇಟೆ ಹಾಗೂ ವಿವಿಧ ಗಿಡಮೂಲಿಕೆಗಳ ಊಟದಿಂದ ಒಳ್ಳೇ ಕಟ್ಟುಮಸ್ತಾದ ಶಾರೀರಿಕ ಲಕ್ಷಣಗಳನ್ನು ಹೊಂದಿರುವುದು ಕಂಡು ಬಂತು. ಆದರೆ ಕೆಲವು ಕಡುಬಡವರು ಹಾಗೂ ವಯಸ್ಸಾದ ವೃದ್ಧರು ನರಪೇತಲ ತರಹವು ಕಂಡುಬಂದರು. ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಇವರು ಬಡವರಂತೆ ಕಂಡುಬಂದರೂ ಆರೋಗ್ಯದ ದೃಷ್ಟಿಯಿಂದ ಇವರು ಭಾಗ್ಯವಂತರೇ ಸರಿ. ಹೀಗಾಗಿ ಇವರಲ್ಲಿ ಕಾಯಿಲೆಯಿಂದ ನರಳುವವರು ತುಂಬಾ ಕಡಿಮೆಯೇ ಸರಿ.

ಪಾರ್ಧಿ ಸ್ತ್ರೀಯರು ತಮ್ಮ ಗಂಡ ಬೇರೆ ಹೆಣ್ಣುಗಳನ್ನು ನೋಡುವುದಾಗಲಿ ಅಥವಾ ಮಾತನಾಡಿಸುವುದಾಗಲಿ ಸಹಿಸರು. ಅಂತಹ ಸಂದರ್ಭವೇನಾದರೂ ಬಂದರೆ ಗಂಡನಿಗೆ ಮತ್ತು ಆತನಿಂದ ನೋಡಿಸಿಕೊಂಡ ಹೆಣ್ಣುಗಳಿಗೆ ನೇರವಾಗಿ ಬೈದು ತನ್ನ ಹಕ್ಕನ್ನು (ಗಂಡನ ಮೇಲೆ) ಸಾಧಿಸುವ ಲಕ್ಷಣಗಳು ಕಂಡುಬಂದವು.

ಬಹಳಷ್ಟು ಕಡೆಯ ಪಾರ್ಧಿಯರು ಅಪರಿಚಿತರೂ ಪೊಲೀಸಿನವರಿಗೂ ಹಾಗೂ ಅಬಕಾರಿ ಇಲಾಖೆಯವರಿಗೂ ತುಂಬಾ ಹೆದರುವುದು ಕಂಡುಬಂತು. ಈ ಹೆದರುವಿಕೆಗೆ ಅವರಲ್ಲಿಯ ಅನಕ್ಷರತೆ ಹಾಗೂ ಅವರ ಮುಗ್ಧತೆಯೇ ಕಾರಣವೆಂದರೂ ತಪ್ಪಾಗಲಾರದು. ಅದು ಬಿಟ್ಟರೆ ಅವರು ಯಾವುದೇ ವಿಚಾರಕ್ಕೂ ಯಾರಿಗೂ ಹೆದರುವುದಿಲ್ಲ. ಅಲ್ಲದೇ ತಮ್ಮ ನಾಗರಿಕ ಪೂರೈಕೆಯ ಸವಲತ್ತುಗಳ ಕಾರಣಗಳಿಂದಾಗಿ ಬೇರೆಯವರನ್ನು ಬಲು ಸುಲಭವಾಗಿ ನಂಬುತ್ತಾರೆ. ಹಾಗೂ ಹಲವು ಬಾರಿ ಅಷ್ಟೇ ಸುಲಭವಾಗಿ ಮೋಸ ಹೋಗುತ್ತಾರೆ. ಇವರಿಗೆ ಬಹುತೇಕ ಬಾರಿ ಅಧಿಕಾರಿಗಳೊಂದಿಗೆ ನೇರವಾಗಿ ವ್ಯವಹರಿಸಲು ಸಾಧ್ಯವಾಗದೆ ಹೋದುದರಿಂದ ಮಧ್ಯವರ್ತಿಗಳ ಸಹಾಯಕ್ಕೆ ಬಹಳ ಹಂಬಲಿಸುತ್ತಾರೆ.

ಇವರಲ್ಲಿ ಒಬ್ಬ ಇನ್ನೊಬ್ಬರ ಮೇಲೆ ಜಗಳ ಮಾಡಿದರೆ ಮತ್ತೆ ಸ್ವಲ್ಪ ಹೊತ್ತಿಗೆ ಸರಿಯಾಗುತ್ತಾರೆ. ಇವರ ಸಿಟ್ಟು ಕೇವಲ ತಾತ್ಕಾಲಿಕವೇ ಹೊರತು ದ್ವೇಷವಲ್ಲ. ಆದರೆ ಕೆಬರ್ ಪಕ್ಷಿಯನ್ನು ತಿನ್ನುವುದರಿಂದ ಯಾವಾಗಲೂ 'ಕವ್‌ಕವ್' ಎಂದು ಕಚ್ಚಾಡುವುದೇ ಹೆಚ್ಚು. ಎಂದು ಅವರು ನಂಬುತ್ತಾರೆ. ತೀರಾ ಸಣ್ಣ ಸಣ್ಣ ವಿಷಯಗಳಿಗೂ ವಿಪರೀತವಾಗಿ ಕಿತ್ತಾಡುತ್ತಾರೆ. ಕಾರಣ ದೈಹಿಕವಾಗಿ ಹಿಂಸೆಗಳಿಗೆ ಬಹುಬೇಗನೆ ಒಳಗಾಗುತ್ತಾರೆ. ಗಂಡಸರು ಸ್ವಲ್ಪ ಕಡಿಮೆ. [illegible] ಜಗಳ ಮಾಡಿದರೆ ಹೆಣ್ಣು ಮಕ್ಕಳ ಕಿತ್ತಾಟವೇ ಹೆಚ್ಚು. ಒಂದು ಹೆಣ್ಣು [illegible] ಬಂದರೆ ಯಾವುದೇ ಮುಲಾಜಿಲ್ಲದೇ ಗಂಡನ ಕೊರಳಪಟ್ಟಿಗೆ ಕೈಹಾಕುವಷ್ಟು ಧೈರ್ಯಶಾಲಿಗಳು.

ಸಾಮಾನ್ಯವಾಗಿ ಇವರು ಹೊರಗಿನವರನ್ನು ಬೇಗ ನಂಬುವದಿಲ್ಲ. ಆದರೆ ಒಂದು ಸಲ ನಂಬಿಕೆ ಬಂತೆಂದರೆ ಅವರಿಗೆ ಜೀವಕ್ಕೆ ಜೀವಕೊಡುವಷ್ಟು ಆತ್ಮೀಯರಾಗಿಬಿಡುತ್ತಾರೆ. ಬೇರೆಯವರೊಂದಿಗೆ ಇವರು ಜಗಳಗಳನ್ನು ಮಾಡುವುದಿಲ್ಲ. ಜತೆಗೆ ತಮ್ಮ ಗುಂಪಿನ ಯಾವುದೇ ಜಗಳಗಳಿಗೂ ಮುಖ್ಯ ಕಾರಣ ಅವರ ಕುಡಿತವೇ ಆಗಿದೆ. ಆದರೆ ಈ ರೀತಿಯಾಗಿ ಕುಡಿದು ಮಾಡಿದ ಜಗಳಗಳು ಮರುದಿನ ಬೆಳಗಾಗುವುದರಲ್ಲಿ ಸರಿಹೋಗಿರುತ್ತದೆ.

ಇವರು ಮಧ್ಯಾಹ್ನ ೩ ಗಂಟೆಯಿಂದಲೇ ಕುಡಿಯಲು ಶುರುಮಾಡಿದರೆ ರಾತ್ರಿ ಇಡೀ ಕುಡಿತ, ಬಡಿತ ಹಾಗೆಯೇ ಮುಂದುವರೆಯುತ್ತವೆ. ಆದರೆ ಇವರ ಎಲ್ಲಾ ವೈರತ್ವ ಮರು ದಿವಸ ಸರಿಯಾಗಿ ಬಿಟ್ಟಿರುತ್ತದೆ. ತಮ್ಮ ವ್ಯಾಪಾರದ ಕಾರಣಕ್ಕಾಗಿ ಒಂದು ವಸ್ತುವಿನ ವಿಶೇಷತೆಯ ಕುರಿತು ಹಲವು ಬಾರಿ ಸುಳ್ಳನ್ನು ಹೇಳುತ್ತಾರೆ. ಈ ಸಂಬಂಧ ಅವರು ಎಷ್ಟೋ ಬಾರಿ ಸುಳ್ಳನ್ನು ಹೇಳಿ ಜನರಿಂದ ಹೊಡೆಸಿಕೊಂಡಂಥ ಸಂದರ್ಭಗಳು ಅನೇಕ ಉಂಟು. ಉಳಿದಂತೆ ಅವರು ಯಾವುದೇ ವಿಚಾರಕ್ಕೂ ಸುಳ್ಳನ್ನು ಹೇಳುವುದಿಲ್ಲವೆನ್ನಬಹುದು.

ತಮ್ಮ ತಮ್ಮ ಊರುಗಳಲ್ಲಿ ಶತ್ರುವೇ ಆಗಿದ್ದರೂ, ವ್ಯಾಪಾರದ ಕಾರಣಕ್ಕೆ ಹೊರಗಡೆ ಹೋದಾಗ ಅವರು ತಮ್ಮ ಪರಸ್ಪರ ವೈರತ್ವವನ್ನು ಮರೆತು ಮಿತ್ರರಾಗಿರುತ್ತಾರೆ. ಮತ್ತು ಇವರ ಅಲೆಮಾರಿ ಬದುಕಿನಲ್ಲಿ ಜಗಳಗಳು ಕಡಿಮೆ ಹೀಗೆ ಅಲೆಮಾರಿಗಳಾಗಿದ್ದವರ ಬಳಿ ಊರಿಂದ ಯಾರಾದರೂ ಹೋದರೆ ಎಲ್ಲರ ಬಳಿಯೂ ಆತ ತಿಂದು ಕುಡಿದು ಉಣ್ಣಬೇಕು. ಮತ್ತು ಯಾರಾದರೂ ಹಣವನ್ನು ಕೊಟ್ಟರೆ ಪಡೆಯಬೇಕಾಗುತ್ತದೆ. ಒಂದು ವೇಳೆ ಆತ ತಿರಸ್ಕರಿಸಿದರೆ, ಅವನಿಗಿಂತ ನಾನು ಕೀಳಾದವನೇನು? ಎಂದು ತಿಳಿದು ಆ ವ್ಯಕ್ತಿಯ ಮೇಲೆ ಬೇಸರಪಟ್ಟುಕೊಳ್ಳುತ್ತಾರೆ.

ಸಮಾನತೆ ಎಂಬುದು ಪಾರ್ಧಿ ಸಮಾಜದ ಮುಖ್ಯ ಜೀವಾಳವಾಗಿದ್ದು, ಹೆಣ್ಣು ಗಂಡು ಎಂಬ ತಾರತಮ್ಯವಿಲ್ಲದೇ ನ್ಯಾಯ ಪಂಚಾಯ್ತಿಯ ಕೆಲ ವಿಚಾರಗಳಲ್ಲಿ ಇದ್ದರೂ, ಸಹಜ ಬದುಕಿನಲ್ಲಿ ಎಲ್ಲರೂ ಸಮನಾಗಿಯೇ ಬದುಕುತ್ತಿರುತ್ತಾರೆ.

ತಿನ್ನುಣ್ಣುವ ಸಂದರ್ಭಗಳಲ್ಲಿ ಸಮಾನ ಹಂಚಿಕೆ ಸಹಜವಾಗಿರುತ್ತದೆ. ಗಂಡ ಹೆಂಡಿರು ಎಷ್ಟು ತಿನ್ನುತ್ತಾರೆ. ಅಷ್ಟೇ ಪ್ರಮಾಣದಲ್ಲಿ ಮಕ್ಕಳಿಗೂ ಹಂಚಿಕೆಯಾಗುತ್ತದೆ. ಅಡಿಗೆ ಮಾಡಿದ ಹೆಂಡತಿಯೇ ಗಂಡನಿಗೆ ಊಟ ಬಡಿಸುವ ಜವಾಬ್ದಾರಿ ಹೊಂದಿರುತ್ತಾಳೆ. ಆತ ಏನಾದರೂ ಹೆಚ್ಚಿಗೆ ಹಾಕಿಕೊಂಡು ಆಕೆಗೇನಾದಾರೂ ಕಡಿಮೆ ಹಾಕಿದರೆ ತಕ್ಷಣವೇ ಕೊಳಪಟ್ಟಿ ಹಿಡಿದು ತನ್ನ ಪಾಲನ್ನು ಪಡೆಯುತ್ತಾಳೆ! ಇವರಲ್ಲಿ ಯಾರು ಎಷ್ಟೇ ಸಾಲ ಮಾಡಿದ್ದರೂ ಯಾವುದಕ್ಕೂ ಚಿಂತಿಸದೆ, ಎಲ್ಲರು ತಿಂದು ಕುಡಿದು, ಕುಣಿಯುತ್ತಾ ಆರಾಮಾಗಿ! ತಮ್ಮ ತಮ್ಮ ಊರುಗಳಲ್ಲಿರುತ್ತಾರೆ. ಈ ಮಜದಲ್ಲಿ ಗಂಡ ಹೆಂಡತಿ ಅಪ್ಪ ಅಮ್ಮ ಮಕ್ಕಳು ಎಂಬ ತಾರತಮ್ಯ ಇರುವುದಿಲ್ಲ. ಆದರೆ ಅಲೆಮಾರಿಗಳಾಗಿದ್ದಾಗ ಮಿತವ್ಯಯಿಗಳೂ ಮತ್ತು ಹಣ ಸಂಗ್ರಹಕಾರರೂ ಆಗಿರುತ್ತಾರೆ. ಸಾಮಾನ್ಯವಾಗಿ ಈ ಬುಡಕಟ್ಟಿನಲ್ಲಿ ಯಾರೂ ಸುಮ್ಮನೆ ಕೂರುವುದಿಲ್ಲ. ಏನಾದರೊಂದು ಕೆಲಸ ಮಾಡುತ್ತಲೇ ಇರುತ್ತಾರೆ. ಆದರೆ ಇತ್ತೀಚೆಗೆ ಬಹಳಷ್ಟು ಯುವಕರು ಹಾಗೂ ಹಿರಿಯರು ಸೋಮಾರಿಗಳಾಗಿದ್ದು ಏನೂ ಕೆಲಸಮಾಡದೆ ಜೂಜಾಟ ಆಡುವುದನ್ನು ಕೆಲವು ಊರುಗಳಲ್ಲಿ ಕಂಡುಬಂದಿತು. ಅಳಿಯನಾದವನು ಅತ್ತೆ ಮಾವಂದಿರಿಗೆ ಸರಿಯಾಗಿ ತಿನಿಸಿ ಕುಡಿಸದಿದ್ದರೆ, ಅವರು ತಮ್ಮ ಮಗಳನ್ನು ತಮ್ಮ ಮನೆಗೇ ಕರೆದುಕೊಂಡು ಹೋಗಿಬಿಡುತ್ತಾರೆ. ಅಳಿಯನಾದವನಿಗೆ ಮತ್ತೇ ಹೆಂಡತಿ ಬೇಕೆಂದರೆ, ಮತ್ತೆ ಅತ್ತೆ ಮಾವನವರಿಗೆ ಸರಿಯಾಗಿ ಕುಡಿಸಿ ತಿನ್ನಿಸಿದರೆ

ಮಾತ್ರ ಹೆಂಡತಿ ಸಿಗುತ್ತಾಳೆ. ಹೀಗಾಗಿಯೇ ಒಬ್ಬ ಗಂಡಸು ತನ್ನ ತಂದೆ ತಾಯಿಗಳಿಗಿಂತ ಅತ್ತೆ ಮಾವನವರಿಗೆ ಬಹಳ ಚೆನ್ನಾಗಿ ನೋಡಿಕೊಳ್ಳಬೇಕಾದ ಅನಿವಾರ್ಯ ಇದೆ.

ತಾವು ಕೊಳ್ಳುವ ವಸ್ತುಗಳಿಗೆ ತಮ್ಮ ಸಾಕು ಮಕ್ಕಳು ಹಾಗೂ ಅಳಿಯಂದಿರಿಂದ ಸಾಕಷ್ಟು ಸವಲತ್ತುಗಳನ್ನು ಪಡೆಯುತ್ತಾರೆ. ಹೀಗಾಗಿ ಹೆಂಗಸರದೆ ಹೆಚ್ಚು ಗಲಾಟೆ. ಗಂಡಸರು ಸ್ವಲ್ಪ ಸಾಧುವೇ ಸರಿ. ಹೆಂಗಸರಿಗಿಂತ ಗಂಡಸರು ಬೇಟೆಯವರೊಂದಿಗೆ ಹೆಚ್ಚು ಆತ್ಮೀಯವಾಗಿರುತ್ತಾರೆ. ಪಾರ್ಧಿ ಹೆಂಗಸರು ಇತರ ಜಾತಿಗಳ ಹೆಂಗಸರಂತೆ ನಾಚುವವರಲ್ಲ. ಇವರುಗಳು ಸ್ವಲ್ಪ ಹೆಚ್ಚಿನ ಧೈರ್ಯದವರೇ ಸರಿ. ಈ ಪಾರ್ಧಿ ಮಹಿಳೆಯರಿಗಿರುವ ಆರ್ಥಿಕ ಸೌಲಭ್ಯಗಳೂ ಕೂಡಾ ಇವರನ್ನು ಪ್ರಭಲವಾಗಿರುವಂತೆ ಮಾಡಲು ಸಹಕಾರಿಯಾಗಿದೆ. ಇವರಲ್ಲಿ ಅನೇಕ ಮಹಿಳೆಯರು ನಶ್ಯ ಹಾಕುವುದು ಕಂಡು ಬಂದಿತು.

ಈ ಬುಡಕಟ್ಟಿನವರು ಸ್ವಾಭಿಮಾನಿಗಳು. ತಮ್ಮ ಹೊಟ್ಟೆಯ ಪೋಷಣೆಗಾಗಿ ಕೆಲವು ಬಾರಿ ಬೇಡುವ ಸ್ಥಿತಿಗೆ ಬಂದಿರುತ್ತರಾದರೂ ಸ್ವಾವಲಂಬಿಗಳಾಗಿರುತ್ತಾರೆ. ಬದುಕಲು ಹೆಚ್ಚು ಇಷ್ಟ ಪಡುತ್ತಾರೆ. ಆದರೆ ಎಷ್ಟೋ ಕಡೆ ಹಬ್ಬ ಹರಿದಿನಗಳಂದು ಮಹಿಳೆಯರು ಮತ್ತು ಮಕ್ಕಳು ಬಿಕ್ಷೆ ಬೇಡುವುದೂ ಕೂಡಾ ಕಂಡು ಬಂದಿತು. ಪಾರ್ಧಿ ಪುರುಷರು ಹೆಂಡ, ಸಾರಾಯಿ ಕುಡಿಯುವುದು ಬೀಡಿ, ಸಿಗರೇಟು ಸೇದುವುದೆಲ್ಲಾ ಮಾಡುತ್ತಾರೆ. ಆದರೆ ದುರ್ದೈವಶಾತ್ ಹೆಚ್ಚು ಪಾಲು ಹೆಂಗಸರು ಹಾಗೂ ಚಿಕ್ಕ ಮಕ್ಕಳು ಬೀಡಿ ಸೇದುವುದು ಹಾಗೂ ಹೆಂಡ ಸಾರಾಯಿ ಕುಡಿಯುವುದೂ ಕಂಡುಬಂತು.

೧. ಬೇಟೆಗಾರಿಕೆಯ ಕಾನೂನು ಹಾಗೂ ಅದರ ಅಭಿವೃದ್ಧಿ

ಬೇಟೆಯ ಕಾನೂನುಗಳು ಪಾರ್ಧಿಯರ ಬದುಕಿಗೆ ತಿರುವು ನೀಡಿದೆ. ೧೯೫೯ರ ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, ೧೯೬೩ರ ಮತ್ತು ೧೯೭೮ರ ಕರ್ನಾಟಕ ಅರಣ್ಯ ತಿದ್ದುಪಡಿ ಅಧಿನಿಯಮ, ೧೯೭೨ರ ವನ್ಯಜೀವಿ ಸಂರಕ್ಷಣಾ ಅಧಿನಿಯಮ ೧೯೭೬, ಭಾರತ ಮೀನುಗಾರಿಕೆ ಅಧಿನಿಯಮ ೧೯೮೭ರ ಮೊದಲಾದ ಅಧಿನಿಯಮಗಳು ಬೇಟೆಯನ್ನು ತಡೆಗಟ್ಟಿ ಅರಣ್ಯ, ವನ್ಯಜೀವಿಗಳ ರಕ್ಷಣೆಗೆ ಉತ್ತಮ ವಾತಾವರಣ ಕಲ್ಪಿಸಿದೆ. ಆದರೆ ಬೇಟೆಯನ್ನೇ ನಂಬಿದ ಬುಡಕಟ್ಟುಗಳ ಬದುಕು ಅತಂತ್ರವಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಅಭಯಾರಣ್ಯಗಳ ರಕ್ಷಣೆ, ಉದ್ಯಾನವನ, ಧಾಮ, ಕೈಗಾರಿಕೆ, ನಗರಾಭಿವೃದ್ಧಿ, ಅಣೆಕಟ್ಟುಗಳ ನಿರ್ಮಾಣ ಕಾರ್ಯ ಮುಂದುವರಿಯುತ್ತಲೆ ಇವೆ. ಈ ತರಹದ ಯೋಜನೆಗಳೆಲ್ಲವೂ ಬುಡಕಟ್ಟುಗಳು ವಾಸಿಸುವ ಪ್ರದೇಶಗಳಲ್ಲೇ ರೂಪುಗೊಳ್ಳುತ್ತಿವೆ.

೨. ಪಾರ್ಧಿ ಬುಡಕಟ್ಟಿನವರ ಉನ್ನತಿಗಾಗಿರುವ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

೧) ಈ ಬುಡಕಟ್ಟಿನವರು ಇತ್ತೀಚೆಗೆ ಶಿಕ್ಷಣದ ಕಡೆಗೆ ಒಲವು ತೋರುತ್ತಿದ್ದರೂ ಇವರಿಗೆ ಭಾಷೆಯ ತೊಂದರೆಯಾಗುತ್ತಿದೆ. ಯಾಕೆಂದರೆ ಇವರು ತಮ್ಮ ತಮ್ಮ ಮನೆಗಳಲ್ಲಿ ತಮ್ಮದೇ ಭಾಷೆ (ವಾಘ್ರಿ) ಮಾತನಾಡುತ್ತಿದ್ದು, ಶಾಲೆಗಳಲ್ಲಿ ಕಲಿಸುವ ಭಾಷೆ ಬೇರೆಯಾಗಿದ್ದು, ಆ ಭಾಷೆ ಈ ಮಕ್ಕಳಿಗೆ ಅರ್ಥವಾಗುತ್ತಿಲ್ಲ. ಕಾರಣ ಸರ್ಕಾರ ಈ ಕೂಡಲೇ ಎಚ್ಚೆತ್ತುಕೊಂಡು ಹಕ್ಕಿಪಿಕ್ಕಿಯರಲ್ಲೇ ಕಲಿತ ಯುವಕರನ್ನು ಬಳಕೆ ಮಾಡಿಕೊಂಡು ಈ ಮಕ್ಕಳನ್ನು ಶಿಕ್ಷಣದೆಡೆಗೆ ಆಕರ್ಷಿಸಲು ಪ್ರಯತ್ನ ಮಾಡಬೇಕು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಎಚ್.ಪಿ. ರಾಮು ಎನ್ನುವರು ಕಂಪ್ಲಿಯ ಚಿಣ್ಣರ ಅಂಗಳ ಕಾರ್ಯಕ್ರಮದಲ್ಲಿ ೩ ತಿಂಗಳ ಕಾಲ ಸ್ವಯಂ

ಸೇವಕರಾಗಿ ಇಂದಿರಾನಗರದ ಶಾಲೆಯಲ್ಲಿ ಕೆಲಸ ಮಾಡಿದರು. ಈ ಅವಧಿಯಲ್ಲಿಯೇ ಅವರು ಹಕ್ಕಿಪಿಕ್ಕಿಯ ಸುಮಾರು ೨೫-೩೦ ವಿದ್ಯಾರ್ಥಿಗಳನ್ನು ಶಾಲೆಗೆ ಬರಲು ಪ್ರೇರೇಪಿಸಿ ಮಾದರಿಯಾಗಿದ್ದಾರೆ. ರಾಮು ಅವರ ಅವಧಿ ಮುಗಿದಿದ್ದರೂ ಆ ಮಕ್ಕಳು ಇಂದಿಗೂ ದಿನಾಲು ಶಾಲೆಗೆ ಹೋಗುತ್ತಿದ್ದಾರೆ.

೨) ಇಂದು ಪ.ಜಾ. ಮತ್ತು ಪ.ಪಂ.ಗಳಲ್ಲಿ ಸಾವಿರಾರು ಉಪಜಾತಿಗಳಿರುವುದು ಎಲ್ಲರಿಗೂ ತಿಳಿದ ವಿಷಯವೇ ಸರಿ. ಆದರೆ ಈ ಉಪಜಾತಿಗಳಲ್ಲಿ ಕೆಲವೇ ಕೆಲವು ಜಾತಿಯವರು ಮಾತ್ರ ಮೇಲೆ ಬಂದಿದ್ದಾರೆ. ಆದರೆ ಬಹುತೇಕ ಉಪಜಾತಿಗಳು ಇನ್ನೂ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ವಂಚಿತರಾದ ಈ ಜನರನ್ನು ಮೇಲೆ ಎತ್ತಬೇಕಾದರೆ ಇವರುಗಳಿಗಾಗಿಯೇ ಬುಡಕಟ್ಟುಗಳಿಂದ ಮೇಲೆ ಬರುವ ಅವಕಾಶ ಕೊಡಬೇಕಾಗಿದೆ. ಅಂದಾಗ ಮಾತ್ರ ಹಕ್ಕಿಪಿಕ್ಕಿಯಂತಹ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗುತ್ತದೆ.

೩) ಈ ಬುಡಕಟ್ಟಿನವರು ಆರ್ಥಿಕವಾಗಿ ಹಿಂದುಳಿದವರಾಗಿದ್ದು. ಹೀಗಾಗಿ ಈ ಬುಡಕಟ್ಟಿನವರ ಆರ್ಥಿಕ ಮಟ್ಟ ಹೆಚ್ಚಾಗಬೇಕಾದರೆ ಎಲ್ಲಾ ತರಹದ ಬ್ಯಾಂಕ್, ಕಾರ್ಪೋರೇಷನ್ ಹಾಗೂ ಸರ್ಕಾರದ ಇನ್ನಿತರ ವಲಯಗಳು ಇವರನ್ನು ನಂಬುತ್ತಿಲ್ಲ. ಕಾರಣ ಈ ಎಲ್ಲಾಸಂಸ್ಥೆಗಳು ಇವರ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಇವರಿಗೆ ಕಡಿಮೆ ಬಡ್ಡಿದರ ಹಾಗೂ ಹೆಚ್ಚಿನ ಸಬ್ಸಿಡಿ ಹೆಸರಲ್ಲಿ ಇವರಿಗೆ ಸಾಲ ಸೌಲಭ್ಯಗಳನ್ನು ನೀಡಬೇಕಾಗಿದೆ.

೪) ರಾಜಕೀಯ ಕ್ಷೇತ್ರದಲ್ಲಿ ಇವರ ಪಾಲ್ಗೊಳುವಿಕೆಯು ಬಹು ಹಿಂದುಳಿದವರಾಗಿದ್ದು. ಈ ಬುಡಕಟ್ಟಿನವರು ರಾಜಕೀಯ ರಂಗದಲ್ಲಿ ಮುಂದೆ ಬರಬೇಕಾದರೆ ಇವರ ಹೆಸರಿನ ಮೇಲೆ ಗ್ರಾಮ ಪಂಚಾಯ್ತಿಯಿಂದ ಲೋಕ ಸಭೆಯವರೆಗೆ ಸ್ಥಳಗಳು ಕಾಯ್ದಿರಿಸಬೇಕಾಗಿದೆ. ಜೊತೆಗೆ ಸರ್ಕಾರದ ಅನೇಕ ನಿಗಮ, ಮಂಡಳಿಗಳಿಗೆ ಇವರನ್ನು ಸದಸ್ಯರನ್ನಾಗಿಯೋ, ಅಧ್ಯಕ್ಷರನ್ನಾಗಿಯೋ ನೇಮಿಸಬೇಕು.

೫) ಬಿಗಿಯಾದ ಮತ್ತು ಬದಲಾದ ಇಂದಿನ ಅರಣ್ಯ ನೀತಿಯಿಂದ ಇವರ ಬೇಟೆಗಾರಿಕೆ ಇಂದು ತುಂಬಾ ಕಡಿಮೆಯಾಗಿದೆ. ಹೀಗಾಗಿ ಇವರು ಕೃಷಿ ಕ್ಷೇತ್ರವನ್ನು ಅವಲಂಭಿಸಬೇಕೆಂದರೆ ತುಂಡು ಭೂಮಿ ಇವರಲ್ಲಿಲ್ಲ. ಕಾರಣ ಸರ್ಕಾರ ಮುಂದೆ ಬಂದು ಪ್ರತಿ ಪಾರ್ಧಿ (ಹಕ್ಕಿಪಿಕ್ಕಿ) ಕುಟುಂಬಗಳಿಗೆ ಫಲವತ್ತಾದ ಭೂಮಿಯ ಪಟ್ಟವನ್ನು ಕೊಡಬೇಕಾಗಿದೆ.

೬) ಬ್ರಿಟಿಷರು ಹಚ್ಚಿದ ಕ್ರಿಮಿನಲ್ ಬುಡಕಟ್ಟು ಎಂಬ ಹಣೆ ಪಟ್ಟಿಯನ್ನು ಕಳಚಿ ಹಾಕಬೇಕಾಗಿದೆ. ಪ್ರತಿ ಅಮವಾಸ್ಯೆಯ ಹಿಂದಿನ ಎರಡು ಮತ್ತು ನಂತರದ ಎರಡು ದಿನಗಳು ಇವರು ಪೋಲೀಸ್ ಸ್ಟೇಷನ್‌ಗಳಲ್ಲಿ ಮಲಗಬೇಕಾಗಿದೆ. ಇಂಥಹ ಕಠಿಣ ಶಿಕ್ಷೆಗಳನ್ನು ಸರ್ಕಾರ ರದ್ದುಗೊಳಿಸಬೇಕಾಗಿದೆ.

ಪಾರ್ಧಿ ಬುಡಕಟ್ಟಿನ ಉನ್ನತಿಗಾಗಿ ಸಲಹೆಗಳು

೧) ಇವರು ಶಿಕ್ಷಣದ ಕಡೆ ಲಕ್ಷವಹಿಸಬೇಕು.
೨) ನಂತರ ಒಗ್ಗಟ್ಟಾಗಬೇಕಾಗಿದೆ.

ಶಿಕ್ಷಣ-ಸಂಘಟನೆ-ಹೋರಾಟ

೩) ಸಂಘಟನೆಯ ಮೂಲಕ ನ್ಯಾಯಬದ್ಧವಾಗಿ ತಮಗೆ ಸಿಗಬೇಕಾದ ಸವಲತ್ತುಗಳಿಗಾಗಿ (ಹಕ್ಕಿಗಾಗಿ) ಹೋರಾಡಬೇಕು.

೪) ಸಣ್ಣಪುಟ್ಟ ಕಳ್ಳತನದ ಕೆಲಸಗಳನ್ನು ಬಿಟ್ಟುಬಿಡಬೇಕು.

೫) ಸಾರಾಯಿಯನ್ನು ಭಟ್ಟಿ ಇಳಿಸುವುದು ಹಾಗೂ ಅದನ್ನು ಕುಡಿಯುವುದನ್ನು ಬಿಡಬೇಕು.

೬) ಮೈಗಳ್ಳತನವನ್ನು ಬಿಟ್ಟು ಕಷ್ಟ ಜೀವಿಗಳಾಗಿ ದುಡಿಯುವುದನ್ನು ರೂಢಿಸಿಕೊಳ್ಳಬೇಕು.

೭) ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಅರಿವು ಪಡೆದುಕೊಳ್ಳುವುದು.

೮) ತಮ್ಮಲ್ಲಿ ಮನೆ ಮಾಡಿರುವ ಕೀಳರಿಮೆಯನ್ನು ಬಿಟ್ಟುಬಿಡುವುದು

೯) ತಮ್ಮಲ್ಲಿ ಹೆಚ್ಚುತ್ತಿರುವ ಸಂತಾನೋತ್ಪತ್ತಿಯನ್ನು ಕಡಿಮೆ ಮಾಡಿಕೊಳ್ಳುವುದು.

೧೦) ಕರ್ತವ್ಯ ಮತ್ತು ಹಕ್ಕುಗಳನ್ನು ಚಲಾಯಿಸಲು ಪ್ರಯತ್ನಿಸುವುದು.

೩. ಪಾರ್ಧಿ, ಹಕ್ಕಿಪಿಕ್ಕಿ, ಹರಣ್‌ಶಿಕಾರಿ ಮೂರು ಒಂದೇ ಬುಡಕಟ್ಟುಗಳು

ಈಗಾಗಲೆ ಹಿಂದಿನ ಅಧ್ಯಯನಗಳಲ್ಲಿ ವಿವರಿಸಿರುವಂತೆ ಪಾರ್ಧಿ ಸಮುದಾಯವನ್ನು ಕರ್ನಾಟಕ ರಾಜ್ಯದಲ್ಲಿ ಐದಾರು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಎಂದು ತಿಳಿಸಲಾಗಿದೆ. ಈ ಹೇಳಿಕೆಗೆ ಸಾಕ್ಷಿ ಎಂಬಂತೆ ಅನೇಕ ನಿದರ್ಶನಗಳ ಮೂಲಕ ವಿವರಿಸಬಹುದಾಗಿದೆ. ಮುಖ್ಯವಾಗಿ ಈ ಹೇಳಿಕೆ ಸರಿಯಾಗಿದೆ ಎಂದು ತಿಳಿಸಲು ಬೀದರ್, ಬಾಗಲಕೋಟೆ, ಬಳ್ಳಾರಿ ಹಾಗೂ ಮೈಸೂರು ಜಿಲ್ಲೆಗಳಲ್ಲಿಯ ಸಾಕ್ಷಿಗಳೇ ಸಾಕು.

ಬೀದರ್ ಜಿಲ್ಲೆಯಲ್ಲಿ ಈ ಬುಡಕಟ್ಟಿನವರನ್ನು ಪಾರ್ಧಿ ಎಂದು ಕರೆದರೆ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇವರನ್ನು ಹಕ್ಕಿಪಿಕ್ಕಿ ಎಂದು ಕರೆಯುತ್ತಾರೆ. ಆದರೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಸೆಟ್ಲಮೆಂಟ್ ವಾಸಿಗಳು ಪಾರ್ಧಿಯರನ್ನು ಹರಣ್‌ಶಿಕಾರಿ ಎಂದು ಕರೆಯಲಾಗಿತ್ತು.

ಈ ನಾಲ್ಕು ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಪಾರ್ಧಿಯರ ಬೆಡಗುಗಳು ಹಾಗೂ ದೇವತೆಗಳು ಸ್ವಲ್ಪ ಬದಲಾವಣೆಯಿದ್ದರೂ ಸಂಪ್ರದಾಯ ಪ್ರಕಾರ ಇವರು ಮಾಡಿಕೊಂಡಿರುವ ವಿವಾಹಗಳನ್ನು ನೋಡಿದರೆ ಈ ೫ .೬ ಹೆಸರಿನ ಸಮುದಾಯಗಳೆಲ್ಲಾ ಒಂದೇ ಎಂದು ಬಲವಾಗಿ ಸಮರ್ಥಿಸಬಹುದಾಗಿದೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಮೇಹಕರ್ ಗ್ರಾಮದ ಕಾಳಿವಾಲೆ ಉಪ ಪಂಗಡಕ್ಕೆ ಸೇರಿದ ಕುಮಾರಿ ವಿಜಯಂತಿ ಎಂಬುವಳು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಪಕ್ಷಿರಾಜಪೂರ ಕಾಲೋನಿಯ ಹಕ್ಕಿಪಿಕ್ಕಿ ಸಮುದಾಯದ ರವೀಂದ್ರಕುಮಾರ್ ಎನ್ನುವ ಗುಜರಾತ್ಯೋ ಉಪಜಾತಿಯ ಯುವಕನನ್ನು ವಿವಾಹವಾಗಿದ್ದಾಳೆ. ಅದೇ ರೀತಿಯಲ್ಲಿ ಮೇಹಕೇರ್ ಗ್ರಾಮದ ಭಾರತಿ ಎಂಬ ಮತ್ತೊಬ್ಬ ಯುವತಿ ಪಕ್ಷಿರಾಜಪೂರ ಕಾಲೋನಿ ಗಮನಿಸಿದಾಗ ಸುಂದರ್ ಎಂಬ ಯುವಕನನ್ನು ವಿವಾಹವಾಗಿದ್ದಾಳೆ ಹಾಗೆಯೇ ಬೀದರ್ ಜಿಲ್ಲೆಯ ಬಸವಕಲ್ಯಾಣ ನಗರದ ಕುಮಾರಿ ದುರಪತ್ ಎಂಬುವಳು ದಿವಿಜನ್ ಎಂಬುವನನ್ನು ಹಾಗೂ ಬೀದರ್ ಜಿಲ್ಲೆ ಬೀದರ್ ತಾಲೂಕಿನ ಚಿಟ್ಟಾಗ್ರಾಮದ ನಿಲಂ ಎಂಬ ಮತ್ತೊಬ್ಬ ಯುವತಿ ಇದೆ ಪಕ್ಷಿರಾಜಪುರದ ಧರಂ ಎಂಬ ಯುವಕನನ್ನು ವಿವಾಹವಾಗಿದ್ದಾಳೆ.

ಅದೇ ರೀತಿಯಲ್ಲಿ ಬಳ್ಳಾರಿ ನಗರ ಹರಿಶ್ಚಂದ್ರ ಕಾಲೋನಿಯ ಹಕ್ಕಿಪಿಕ್ಕಿ ನಿವಾಸಿ ಮೋಹನ್ ಎನ್ನುವ ಕೆನರಾ ಬ್ಯಾಂಕಿನ ಉದ್ಯೋಗಿ [illegible] ಬಾಗಲಕೋಟೆ ನಗರದ ಗಾಂಧಿ ಸೆಟ್ಲಮೆಂಟ್‌ನ ಲತಾ ಎನ್ನುವ ಹರಣ್ ಶಿಕಾರಿ ಸಾವಂಡಿಯಾ ಬೆಡಗಿಯ ಜೊತೆಗೆ ಮದುವೆಯಾಗಿದ್ದಾರೆ. ಈ ರೀತಿಯಾಗಿ ವಿವಾಹವಾದವರ ಪಟ್ಟಿಯನ್ನು ಪರಿಶೀಲಿಸಿದಾಗ ಇವರೆಲ್ಲರು ಒಂದೇ ಬುಡಕಟ್ಟಿನವರಾಗಿ ಕಂಡು ಬರುತ್ತಾರೆ.

ಅಧ್ಯಾಯ - ೮

ಸಮಾರೋಪ

೮. ಸಮಾರೋಪ

ಭವ್ಯ ಭಾರತದ ಬಹುತ್ವದ ಅಂತಃಸತ್ವ ಜಗತ್ತು ವೈವಿಧ್ಯಮಯವಾದದ್ದು. ಇಲ್ಲಿಯ ಏಣಿ ಶ್ರೇಣಿಯ ವಿಷಮ ಸಮಾಜದಲ್ಲಿ ಅನೇಕ ರೀತಿಯ ಅಸಮಾನತೆಗಳಿದ್ದರೂ, ಅಪಾರ ತಿಳುವಳಿಕೆಯನ್ನು ಕಟ್ಟಿಕೊಂಡ ಸಮುದಾಯಗಳು ಇನ್ನೂ ತಮ್ಮ ಪಾರಂಪರಿಕ ಚಹರೆಗಳನ್ನು ಉಳಿಸಿಕೊಂಡು ಬರುತ್ತಿವೆ. ಆಧುನಿಕ ಜಗತ್ತಿನ ಲೌಕಿಕ ಸವಲತ್ತುಗಳಿಂದ ವಂಚಿಸಲ್ಪಟ್ಟಿದ್ದರೂ ಸಹ ಬಹಳಷ್ಟು ಕಾಳಜಿಯಿಂದ ತಮ್ಮ ಅನನ್ಯತೆಯನ್ನು ಕಾಯ್ದುಕೊಳ್ಳಲು ಅಸಹಾಯಕ ಸಮುದಾಯಗಳು ಪಾರ್ಧಿ ಅಲ್ಲದೇ ಇನ್ನೂ ಅನೇಕ ಬುಡಕಟ್ಟುಗಳು ಪ್ರಯತ್ನಿಸುತ್ತಲೆ ಇವೆ. ಲೌಕಿಕ ಅಧಿಕಾರಗಳಿಂದ ದೂರವಿರುವ ಪರಾಜಿತ ಸಮುದಾಯಗಳ ಅಂತಃಸ್ಥ ಲೋಕ ಅನೇಕ ಕೌಶಲ್ಯಗಳನ್ನು ಸಹಜವಾಗಿ ಹೊಂದಿದವುಗಳಾಗಿವೆ. ಬದಲಾಗುತ್ತಿರುವ ಕಾಲದ ಪರಿವೆಯಿಲ್ಲದೆ ದಬ್ಬಾಳಿಕೆಯನ್ನು ಅವುಡಗಚ್ಚಿ ಅನುಭವಿಸಿದ್ದುದರ ಫಲವೇ ಇರಬೇಕು. ಈ ಬುಡಕಟ್ಟುಗಳು ಅನೇಕ ಬೌದ್ಧಿಕ ಹಾಗೂ ದೈಹಿಕ ಚಮತ್ಕಾರಗಳನ್ನು ಕಟ್ಟಿಕೊಂಡಿವೆ. ಭೌತಿಕ ಜಗತ್ತನ್ನು ಇಷ್ಟೊಂದು ಸುಂದರವಾಗಿ ನಿರ್ಮಿಸಿದ್ದು ಅನೇಕ ಕೌಶಲ್ಯಗಳನ್ನು ರೂಪಿಸಿಕೊಂಡ ಈ ತರಹದ ಪಾರ್ಧಿ ಶ್ರಮಿಕ ಸಮುದಾಯಗಳೆ. ಈ ಶ್ರಮಿಕ ಸಮುದಾಯಗಳು, ಭಾರತವನ್ನು ಆಳಿದ ವಿವಿಧ ಪ್ರಭುತ್ವಗಳಿಂದ ಹೀನಾಯವಾಗಿ ನಡೆಸಿಕೊಂಡಿವೆ. ಇಡೀ ಜಗತ್ತು ಅಮಾಯಕ ಸ್ಥಿತಿಯಲ್ಲಿ ಚಲಿಸುತ್ತಿದ್ದಾಗ, ಭಾರತದ ಸಮಾಜವನ್ನು ನಿಯಂತ್ರಿಸಲು ಕಾನೂನುಗಳು ರಚಿಸಲ್ಪಟ್ಟಿದವು. ಆದರೆ ಈ ಕಾನೂನುಗಳನ್ನು ಯಾರು ಓದಬೇಕು? ಯಾರು ಹೋರಾಡಬೇಕು? ಯಾರು ವ್ಯವಹರಿಸಬೇಕು? ಯಾರು ಸೇವೆ ಮಾತ್ರ ಮಾಡಿಕೊಂಡಿರಬೇಕು? ಎಂಬ ಸಾಮಾಜಿಕ ನಿಯಮಗಳು ಧರ್ಮಶಾಸ್ತ್ರಗಳ ಪ್ರಕಾರವೇ ರೂಪುಗೊಂಡವು. ಕೆಲವೇ ಕೆಲವು ಸಮುದಾಯಗಳ ಹಿತಾಸಕ್ತಿಗೆ ಭಾರತೀಯ ಸಮಾಜದಲ್ಲಿ ಅನೇಕ ವಿಷಮ ಸ್ಥಿತಿಗಳು ರೂಪಗೊಂಡವು. ಸಾಮಾಜಿಕ ಸ್ಥಾನಮಾನಗಳಿಗೆ ಅನುಗುಣವಾಗಿ ಆರ್ಥಿಕ ಮತ್ತು ಶೈಕ್ಷಣಿಕ ಸವಲತ್ತುಗಳು ಲಭ್ಯವಾದವು. ಶ್ರೇಣಿಕರಣದ ವ್ಯವಸ್ಥೆಯಲ್ಲಿ ಈ ಸಮುದಾಯಗಳಿಗೆ ಎಲ್ಲ ಬಗೆಯ ಲೌಕಿಕ ಅನುಕೂಲತೆಗಳು ಕೈಗೆ ಎಟುಕದಾದವು. ಸಾಮಾಜಿಕ ಕಾನೂನುಗಳು ವಿಧಿಸಿದ ಅತ್ಯಂತ ಕಠಿಣ ಮತ್ತು ಹೇಯ ದುಡಿಮೆಗಳಲ್ಲಿ ಈ ಸಮುದಾಯಗಳು ಅನಿವಾರ್ಯವಾಗಿ ನಿರತವಾಗಲೇ ಬೇಕಾಯಿತು.

ಚರಿತ್ರೆಯ ಕಾಲಗತಿಯಲ್ಲಿ, ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾದ ಅನೇಕ ರೂಪಾಂತರಗಳು ಈ ಶ್ರಮಿಕ [illegible] ಪಾರಂಪರಿಕ ಅವಲಂಬನೆಯು ಮಧ್ಯಕಾಲೀನ ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ಈ ಸಮೂಹಗಳಿಗೆ [illegible]. ಭಾರತವನ್ನು ಅನೇಕ ಬೃಹತ್ ದಂಡಯಾತ್ರೆಗಳು, [illegible] ಆಕ್ರಮಿಸಿಕೊಂಡಾಗ, ಪ್ರಭುತ್ವಗಳು ರಾಜ್ಯಗಳ ಪ್ರಮುಖ ಆದಾಯಕ್ಕೆ ಭೂಮಿಯನ್ನೇ (ಕೃಷಿಯನ್ನು) ಅವಲಂಬಿಸಿದವು.

ಭೂಮಿಯ ಒಡೆತನ ಮತ್ತು ತೆರಿಗೆ ಪದ್ಧತಿಗಳು ಕಟ್ಟುನಿಟ್ಟಾಗಿ ರೂಪಗೊಂಡ ಮೇಲೆ ಭೂಮಿ ಪ್ರಬಲ ಕೋಮುಗಳ ವಶವಾಯಿತು. ರಾಜರಿಂದ ಕನಿಷ್ಟ ಪ್ರೋತ್ಸಾಹಗಳನ್ನು ನಿರೀಕ್ಷಿಸುತ್ತಲೇ ಇದ್ದ ಅನೇಕ ಕುಶಲಕರ್ಮಿಗಳು ಮನೋರಂಜಕ ಸಮುದಾಯಗಳು ಅಕ್ಷರಶಃ ಬದಲಾದ ಆರ್ಥಿಕ ವ್ಯವಸ್ಥೆಯಿಂದ ದಿಕ್ಕೆಟ್ಟು ಹೋದವು. ವಸಾಹತುಶಾಹಿ ಆಡಳಿತ ಮತ್ತು ಪಶ್ಚಿಮದ ಆಧುನಿಕತೆ ಭಾರತಕ್ಕೆ ಬಂದ ಮೇಲಂತೂ, ಇಲ್ಲಿನ ಗುಡಿಕೈಗಾರಿಕೆಗಳು, ಪಾರಂಪರಿಕ ಉತ್ಪಾದನಾ ವ್ಯವಸ್ಥೆ, ನಿಶ್ಚಿತ ಆರ್ಥಿಕ ಮೂಲಗಳಿಲ್ಲದ ಸಮುದಾಯಗಳು ದಿಕ್ಕೆಟ್ಟು ಹೋದವು. ಪಶ್ಚಿಮದ ಉಪಯೋಗವಾದಿ ದೃಷ್ಟಿಕೋನ ಹೃದಯವಿಲ್ಲದ ವಸಾಹತುಶಾಹಿ ಆಡಳಿತವನ್ನು ರೂಪಿಸಿತ್ತು. ಆಗ ಇಲ್ಲಿಯ ಶ್ರಮಿಕ ವರ್ಗಗಳು ಬುಡಕಟ್ಟುಗಳ ಈ ಆಡಳಿತಾವಧಿಯಲ್ಲಿ ಇನಿಲ್ಲದಂತೆ ನಲುಗಿಹೋದವು. ಕುಶಲಕಾರ್ಮಿಕ ವರ್ಗ, ಸಾಮಾಜಿಕ ಮನರಂಜಕರು, ಗುಡಿಕೈಗಾರಿಕೆಗಳಲ್ಲಿ ತೊಡಗಿಕೊಂಡಿದ್ದ ಸಮುದಾಯಗಳೆಲ್ಲಾ ಸ್ಪಷ್ಟವಾಗಿ ತಮ್ಮ ನೆಲೆಗಳನ್ನು ಕಳೆದುಕೊಂಡವು. ಯಂತ್ರಗಳು ಮತ್ತು ಪಶ್ಚಿಮದ ಆಶೆಬುರುಕ ಆಳ್ವಿಕೆಗಳೆರಡೂ ಮೇಲಿನ ಸಮುದಾಯಗಳನ್ನು ಒಕ್ಕಲೆಬ್ಬಿಸಿದವು. ವಸಾಹತುಶಾಹಿಗಳ ಹಾಗೂ ಸರ್ಕಾರದ ಅರಣ್ಯ ನೀತಿಯಂತೂ ಭಾರತದ ಒಟ್ಟು ನೈಸರ್ಗಿಕ ಸಂಪನ್ಮೂಲವನ್ನು ಪಶ್ಚಿಮದ ರಾಷ್ಟ್ರಗಳಿಗೆ ಹೊತ್ತೊಯ್ದು ಬಿಟ್ಟಿತು. ಆದಿವಾಸಿಗಳು ಕಾಡಿನಿಂದ ಹೊರಬಿದ್ದು ನೆಲೆ ಇಲ್ಲದೆ ಅಲೆಮಾರಿಗಳಾದರೂ, ಅವರ ಪಾರಂಪರಿಕ ಕೃಷಿಯನ್ನು ಶ್ರೀಮಂತರ ಎಸ್ಟೇಟುಗಳು ನುಂಗಿಹಾಕಿದವು. ವಸಾಹತು ಆಡಳಿತಕ್ಕೆ ತಿರುಗಿಬಿದ್ದ ಆದಿವಾಸಿಗಳನ್ನು ಸಿಕ್ಕ ಸಿಕ್ಕಲ್ಲಿ ಶ್ರೀಮಂತರ ಬಂದೂಕುಗಳು ಹತ್ತಿಕ್ಕಿಬಿಟ್ಟವು. ಜೊತೆಗೆ 'ಅಪರಾದಿ ಬುಡಕಟ್ಟು' ಎಂಬ ಹಣೆ ಪಟ್ಟಿಯನ್ನು ಕಟ್ಟಿಬಿಟ್ಟವು. ಭಾರತದ ಅರಾಜಕ ಸಮಾಜವನ್ನ ಬ್ರಿಟಿಷ್ ಸೈನ್ಯ ಆವರಿಸಿಕೊಂಡ ಮೇಲೆ, ದೇಶಿಯ ಭೂಮಾಲಿಕರು ಮತ್ತು ಬಂಡವಾಳ ಶಾಹಿಗಳ ಜೊತೆಗಿನ ವಸಾಹತು ಆಡಳಿತದ ಅಪವಿತ್ರ, ಮೈತ್ರಿ ರಾಕ್ಷಸೀ ಕಾನೂನುಗಳು ಅವರ ಆಡಳಿತವನ್ನು ನಿರಾತಂಕದಿಂದ ಮುನ್ನಡೆಸಿದವು. ಬ್ರಿಟಿಷರ ಆಧುನಿಕ ಶಾಸ್ತ್ರಗಳ ಮತ್ತು ದೇಶೀಯ ಭೂಮಾಲಿಕರ, ಬಂಡವಾಳಶಾಹಿಗಳ ಮತಿ ಮುರ್ಖತನಗಳು ಶ್ರಮಿಕ ವರ್ಗಗಳ ಪ್ರತಿಭಟನೆಗಳನ್ನು ಹೀನಾಯವಾಗಿ ಹತ್ತಿಕ್ಕಿದ್ದವು. ಅಲ್ಲದೆ ಇಂಥಹ ಪ್ರತಿಭಟನೆಗಳನ್ನು ದೇಶದ್ರೋಹಿ ದಂಗೆಗಳೆಂದು ಕರೆಯಲ್ಪಟ್ಟವು.

ಭಾರತದ ಈ ಗೋಜಲು ಆರ್ಥಿಕ ರೂಪಾಂತರಗಳು, ಶ್ರಮಿಕ ವರ್ಗದ, ಯಾವ ಘಟ್ಟದಲ್ಲಿ ಈ ಸಮುದಾಯಗಳು ತಮ್ಮ ನಿಶ್ಚಿತ ಆರ್ಥಿಕ ಸಂಪನ್ಮೂಲಗಳನ್ನು ಕಳೆದುಕೊಂಡವೋ, ಅಲ್ಲಿಂದ ಇಲ್ಲಿಯವರೆಗೂ ಅವು ತಮ್ಮ ವಿಷಮಸ್ಥಿತಿಗಳನ್ನು ಮೀರಲು ಪ್ರಯತ್ನಿಸುತ್ತಲೇ ಇವೆ. ಆಧುನಿಕ ನಗರಗಳ ಬದಿಯ ಕೊಳಚೆಗಳಲ್ಲಿದ್ದರೂ ಯಾವುದೇ ಪ್ರಬಲ ಬದಲಾವಣೆಗಳಿಗೆ ಬದಲಾಗದೆ, ತಮ್ಮ ತನವನ್ನು ಉಳಿಸಿಕೊಂಡು ಆಧುನಿಕ ಮೋಹಗಳನ್ನು ಈ ಸಮುದಾಯಗಳು ನಿರಂತರವಾಗಿ ಹೊಂದುತ್ತಲೇ ಇವೆ. ಆಧುನಿಕತೆ ಭಾರತದ ಪಾರಂಪರಿಕ ಸಮಾಜಗಳನ್ನು ರೂಪಾಂತರಿಸಿತು. ನಿಂತು ವಾದಿಸುವ ಚರ್ಚಾಪಟುಗಳಿಗೆ ಈ ಅಲೆಮಾರಿಗಳು ವ್ಯಂಗ್ಯ ಚಿತ್ರಗಳಂತೆ ಗೋಚರಿಸಿದರೆ ಏನೂ ಅಶ್ಚರ್ಯಪಡಬೇಕಿಲ್ಲ. ಇಂದಿನ ಆಧುನಿಕತೆ ಜಾಗತಿಕತೆ ಮತ್ತು ಉದಾರಿಕತೆಗಳು ಈ ಬಗೆಯ ಪಾರಿ ಬುಡಕಟ್ಟುಗಳ ಜೊತೆ ಹೇಗೆ ಅನುಸಂಧಾನ ಮಾಡುತ್ತವೆ ಎಂಬುದನ್ನು ವಿವರಿಸುವುದು ಕಷ್ಟ.

ಭಾರತದ ಪ್ರಭುತ್ವ ಮತ್ತು ಅಂತರಂಗದ ಜಗತ್ತು ಬೇಗ ತನ್ನನ್ನು ವಿವರಣೆಗಳಿಗೆ ಒಡ್ಡಿಕೊಳ್ಳುವುದಿಲ್ಲ. ಬುಡಕಟ್ಟುಗಳ ಮಾತ್ರಗಳಿನ ಸಮಾಜಗಳಲ್ಲಿ ಅಧಿಕಾರ ರಹಿತದ ಹೆಚ್ಚಿ ಗುರುತುಗಳು ಸಾಂಕೇತಿಕವಾಗಿ ಅಧ್ಯಯನಕಾರರಿಗೆ

ದಕ್ಕಲಾರವು. ಲೌಕಿಕ ಪರಮಾವಧಿಯ ಅಬ್ಬರದ ಅಲೆಗಳು ಈ ಸಮುದಾಯಗಳ ಚರಿತ್ರೆಯ ಗುರುತುಗಳನ್ನು ನುಂಗಿ ನೊಣೆದು ಹಾಕಿವೆ. ಹೀಗಾಗಿ ಈ ಸಮುದಾಯಗಳ ಕಳೆದುಹೋದ 'ನಿನ್ನೆ'ಗಳನ್ನು ಕಟ್ಟಿಕೊಡಲು ನಮಗೆ ಲಭ್ಯವಿರುವ ಆಕರಗಳೆಂದರೆ, ಅವುಗಳ ಕಟ್ಟಿಕೊಂಡಿರುವ ಅಪಾರ ಮೌಖಿಕ ಸಾಹಿತ್ಯ, ಚರಿತ್ರೆಯ ಯಾವುದೇ ಕಾಲಘಟ್ಟದಲ್ಲಿ ಮುಖ್ಯವಾಹಿನಿಗೆ ಪ್ರತಿಯಾಗಿ ರೂಪುಗೊಳ್ಳಲಾರಂಭಿಸಿದ ಈ ವಿಶಿಷ್ಟ ದರ್ಶನಗಳ ಮೂಲಕ ಪ್ರಸ್ತುತ ಸಮುದಾಯಗಳ (ಪಾರ್ಧಿ) ಚರಿತ್ರೆಯನ್ನು ಕಟ್ಟಿಕೊಡಲು ಯತ್ನಿಸಬಹುದು. ಶ್ರಮಜೀವಿಗಳ ಈ ದರ್ಶನಗಳು ಮುಖ್ಯವಾಹಿನಿಯ ಸತ್ಯಾಸತ್ಯತೆಗಳನ್ನು ಪ್ರಶ್ನಿಸುತ್ತವೆ. ಯಾವುದೇ ಹಿತಾಸಕ್ತಿಗಳನ್ನು ರಕ್ಷಿಸಲು ರೂಪುಗೊಂಡ ಜ್ಞಾನ ಶಿಸ್ತುಗಳನ್ನು ಮುಖಾಮುಖಿಮಾಡಿ ಗುದ್ದಾಡುತ್ತವೆ. ಕೆಳಜಾತಿಗಳ, ಆದಿವಾಸಿ ಸಮುದಾಯಗಳ, ಅಲೆಮಾರಿ ಬುಡಕಟ್ಟುಗಳ ಈ ವಿಶಿಷ್ಟ ಬೌದ್ಧಿಕ ಪ್ರಪಂಚದ ಒಳಗೆ ಈ ಬೆಗಯ ದಂಗೆಯ ಧ್ವನಿಗಳು ಸದಾ ಕೇಳುತ್ತಲೇ ಇರುತ್ತವೆ.

ಪ್ರಸ್ತುತ ಈ ಅಧ್ಯಯನದ ಉದ್ದಕ್ಕೂ ಪಾರ್ಧಿ ಬುಡಕಟ್ಟಿನ ಬದುಕಿನ ಅನೇಕ ವಿವರಗಳನ್ನು ಕೊಡಲು ಪ್ರಯತ್ನಿಸಿದ್ದೇನೆ. ಕೆಳಜಾತಿ, ಶ್ರಮಿಕ ವರ್ಗಗಳು ಸಹಜವಾಗಿ ಪಕ್ಕದ ನಾಥ ಪಂಥದ ಪ್ರಭಾವಗಳನ್ನು ಮೈಗೂಡಿಸಿಕೊಂಡಿರುತ್ತವೆ. ಮಹಾರಾಷ್ಟ್ರ ಗುಜರಾತ್ ದಕ್ಷಿಣದ ಅಂಚಿನಿಂದ ಕರ್ನಾಟಕದ ಕಡೆಗೆ ವಲಸೆಬಂದ ಅನೇಕ ಅಲೆಮಾರಿ ಸಮುದಾಯಗಳಲ್ಲಿ ಪಾರ್ಧಿ ಸಮುದಾಯವು ಒಂದು ಪ್ರಮುಖವಾಗಿದೆ. ಈ ರೀತಿಯಾಗಿ ವಲಸೆ ಬಂದ ಪಾರ್ಧಿ ಸಮುದಾಯವು ಅನೇಕ ಉಪಕಸುಬುಗಳನ್ನು ಅವಲಂಭಿಸಿ ಬದಕಲಾರಂಭಿಸಿದವು. ಆದರೆ ಯಾವತ್ತೋ, ಎಲ್ಲೋ ಕೈವಶವಾಗುವ ವ್ಯವಸ್ಥೆ ರೂಪುಗೊಳ್ಳಲೇ ಇಲ್ಲ. ಭಾರತಕ್ಕೆ ಸ್ವಾತಂತ್ರ್ಯಬಂದು ೬೦ ವರ್ಷಗಳ ಸಮೀಪಿಸುತ್ತಿದ್ದರೂ, ಭಾರತದ ರಾಜಕಾರಣವೂ ಈ ಬಗೆಯ ಸಮುದಾಯಗಳ ಕುರಿತು ಕಣ್ಣಿದ್ದು ಕುರುಡಾಗಿ, ಬಹಳ ಸಲ ಇವುಗಳ ಬಗ್ಗೆ ಅಮಾನವೀಯವಾಗಿಯೇ ವರ್ತಿಸಿವೆ ಎಂದರೆ ತಪ್ಪಾಗಲಾರದು. ಈಶಾನ್ಯ ಭಾರತದಲ್ಲಿ ಇನ್ನೂ ಆದಿವಾಸಿಗಳ ಸ್ವಾಯತ್ತ ಜೀವನದ ಕನಸುಗಳು ಸಾಕಾರಗೊಂಡಿಲ್ಲ. ಇನ್ನು ಅವರನ್ನು ಅಭಿವೃದ್ಧಿಪಡಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕೆಂದು ಹೇಳುವ ಘೋಷಣೆಗಳು ಬರೀ ಬುರುಡೆಗಳಾಗಿಯೇ ಉಳಿದಿವೆ. ಭಾರತ ದೇಶದ ಅಭಿವೃದ್ಧಿ ನೀತಿಯೇ ಮುಖ್ಯವಾಗಿ ವಸಾಹತು ಆಡಳಿತದ ಭಾಗವಾಗಿಯೇ ರೂಪುಗೊಂಡಿದ್ದು, ಈ ಕಾರಣಕ್ಕೆ ಈ ಅಭಿವೃದ್ಧಿ ಪರಿಕಲ್ಪನೆಗೆ ಅನೇಕ ಎಡರುತೊಡರುಗಳು ಮೈಗೂಡಿವೆ. ಹೀಗಾಗಿ ಇಲ್ಲಿಯ ರಾಜಕಾರಣಕ್ಕೆ ಈ ಸಮುದಾಯಗಳ ಅಂತರಂಗವೇ ಇನ್ನೂ ಅರ್ಥವಾಗಿಲ್ಲ.

ಅಲೆಮಾರಿಗಳ ಚಾರಿತ್ರಿಕ ಬೆಳವಣಿಗೆ ಎಷ್ಟು ಸಂಕೀರ್ಣವೋ, ಅವುಗಳ ಅಭಿವೃದ್ಧಿ ಸಾಧಿಸುವ ಮಾರ್ಗವೂ ಸಹ ಅಷ್ಟೇ ಸಂಕೀರ್ಣವಾಗಿದೆ. ಭಾರತದ ಸಮಾಜದ ಚಾರಿತ್ರಿಕ ವಿಕಾಸದ ಯಾವುದೇ ಹಂತದಲ್ಲಿ ನೆಲೆತಪ್ಪಿ ಹೋದ ಪಾರ್ಧಿಯರ ಸಂಕೀರ್ಣ ಬದುಕು ಅನೇಕ ಜಟಿಲ ಸಮಸ್ಯೆಗಳಿಗೆ ಕಾರಣವಾಗಿದೆ. ವರ್ತಮಾನದಲ್ಲಿ ಸರ್ಕಾರಗಳು ರೂಪಿಸುವ ಬಹುತೇಕ ಯೋಜನೆಗಳು ಸರಿಯಾದ ರೀತಿಯಲ್ಲಿ ಇಂತಹ ಸಮುದಾಯಗಳಿಗೆ ತಲುಪುತ್ತಿಲ್ಲ. ಸಿದ್ಧ ಮಾದರಿಯ ಯೋಜನೆಗಳು ಪ್ರತಿ ಹಂತದಲ್ಲೂ ರಾಜಕೀಯ ಮಧ್ಯಪ್ರವೇಶ ಇಲ್ಲವೆ ಅನುಷ್ಠಾನದಲ್ಲಿರುವ ಲೋಪಗಳಿಂದಾಗಿ ಈ ಬಗೆಯ ಸಮುದಾಯಗಳಲ್ಲಿ ಅವು ತಲುಪುತ್ತಿಲ್ಲ. ಆಧುನಿಕ ಅರಿವು ಮತ್ತು ವಿಕ್ಷಿಪ್ತ ಆತ್ಮ ಪ್ರತ್ಯಯಗಳ ಮೂಲಕ ಅನುಷ್ಠಾನಗೊಳ್ಳುವ ಯೋಜನೆಗಳಿಗೆ ಹೃದಯವೇ ಇಲ್ಲವೆಂದರೆ ತಪ್ಪಾಗಲಾರದು. ಇಂತಹ ಸಮುದಾಯಗಳನ್ನು ಉದ್ಧಾರ ಮಾಡಿಯೇ ಬಿಡುತ್ತವೆ ಎಂಬ ಘೋಷ

ಅಹಂಕಾರದ ಜೊತೆಗೆ ನಾವು (ಸಂಶೋಧಕರು) ಆದಿವಾಸಿ ಮತ್ತು ಅಲೆಮಾರಿಗಳನ್ನು ತಲುಪಲು ಯತ್ನಿಸುತ್ತೇವೆ. ಈ ಬಗೆಯ ಸಾಂಪ್ರದಾಯಿಕ ಸೊಕ್ಕನ್ನು ಪರಾಂಪರಾಗತವಾಗಿ ವಿರೋಧಿಸುತ್ತಲೆ ಬಂದ ಈ ಬುಡಕಟ್ಟುಗಳು ಎಂದೂ ಅಭಿವೃದ್ಧಿ ಯೋಜನೆಗಳಿಗೆ ಸ್ಪಂದಿಸಲಾರವು. ಉದಾಹರಣೆಗೆ ಹೇಳಬೇಕೆಂದರೆ ನರ್ಮದಾ ಕಣಿವೆಯಲ್ಲಿ ಕಟ್ಟಿದ ಸರ್ದಾರ್ ಸರೋವರ ಅಣೆಕಟ್ಟೆಗೆ ಇನ್ನೂ ಆದಿವಾಸಿಗಳ ಧಿಕ್ಕಾರದ ಧ್ವನಿಗಳು ಮೊಳಗುತ್ತಲೇ ಇವೆ.

ಈ ಸಂಶೋಧನೆ ಅಧ್ಯಯನವು, ಪಾರ್ಧಿ ಬುಡಕಟ್ಟು ಇತಿಹಾಸ ಹಾಗೂ ವರ್ತಮಾನ ಬದುಕಿನ ಜೊತೆಗೆ ಅವರ ಚಾರಿತ್ರಿಕ ಬೆಳವಣಿಗೆಗಳನ್ನು ಅನಾವರಣ ಮಾಡುವ ಒಂದು ಚಿಕ್ಕ ಪ್ರಯತ್ನವಾಗಿದೆಯಷ್ಟೇ ಈ ಬುಡಕಟ್ಟಿನ ಅಧ್ಯಯನವನ್ನು ನನ್ನಂಥಹ ಒಬ್ಬ ಬೇರೆ ಜಾತಿಯ ಯುವಕ ಮಾಡುವುದಕ್ಕಿಂತ, (ಪಾರ್ಧಿ) ಇದೇ ಬುಡಕಟ್ಟಿನ ಯುವಕನೆನಾದರೂ ಮಾಡಿದ್ದರೆ ಈ ಅಧ್ಯಯನ ಇನ್ನೂ ಹೆಚ್ಚು ಅರ್ಥವತ್ತಾಗಿರುತ್ತಿತ್ತೆನೊ ಹೀಗಾಗಿ ಈ ಅಧ್ಯಯನ ಕೇವಲ ಶೈಕ್ಷಣಿಕ ಕಾರಣಕ್ಕಾಗಿ ರೂಪುಗೊಂಡದ್ದಾಗಿದೆ.

ಪಾರ್ಧಿ ಬುಡಕಟ್ಟು ಒಂದು ಮಾನವಶಾಸ್ತ್ರೀಯ ಅಧ್ಯಯನ ಎಂಬ ತಲೆಬರಹವನ್ನು ಹೊಂದಿದ ಈ ಮಹಾಪ್ರಬಂಧವು ಒಟ್ಟು ೮ ಅಧ್ಯಾಯಗಳನ್ನು ಒಳಗೊಂಡಿದೆ.

ಈ ಅಧ್ಯಯನದ ಫಲಿತಾಂಶಗಳು

೧. ಕರ್ನಾಟಕ ರಾಜ್ಯಕ್ಕಿಂತಲೂ ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಆಂದ್ರಪ್ರದೇಶ ರಾಜ್ಯಗಳಲ್ಲಿ ಪಾರ್ಧಿಯರು ಹೆಚ್ಚಿನ ಸಂಖ್ಯೆಯಲ್ಲಿರುವುದು ತಿಳಿದು ಬಂತು. ಜೊತೆಗೆ ಈ ಮೇಲಿನ ನಾಲ್ಕು ರಾಜ್ಯಗಳಲ್ಲಿರುವ ಪಾರ್ಧಿಯರು ಕರ್ನಾಟಕದ ಪಾರ್ಧಿಯರಿಗಿಂತ ಆರ್ಥಿಕವಾಗಿ ಮುಂದುವರೆದವರು ಎಂಬ ಅಂಶವು ಸ್ಪಷ್ಟವಾಗಿದೆ.

೨. ಕರ್ನಾಟಕ ರಾಜ್ಯದಲ್ಲಿರುವಂತೆ ಬೇರೆ ಬೇರೆ ರಾಜ್ಯಗಳಲ್ಲಿಯೂ ಅನೇಕ ಬಗೆಬಗೆಯ ಹೆಸರುಗಳಿಂದ ಇವರು ಗುರುತಿಸಲ್ಪಡುತ್ತಿರುವುದು ಮನವರಿಕೆಯಾಯಿತು.

೩. ಈ ಬುಡಕಟ್ಟಿನಲ್ಲಿ ಸಂಘ, ಸಂಸ್ಥೆ ಮತ್ತು ಸಂಘಟನೆಗಳ ಕೊರತೆಗಳಿದ್ದು, ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಇನ್ನೂ ಬಹಳ ಹಿಂದೂಳಿದವರಾಗಿದ್ದಾರೆ.

೪. ಪಾರ್ಧಿ, ಹಕ್ಕಿಪಿಕ್ಕಿ, ಹರಣ್‌ಶಿಕಾರಿ, ಆಡವಿಚೆಂಚರು, ಮೇಲ್‌ಶಿಕಾರಿ, ವಾಘ್ರಿ ಇವೆಲ್ಲವುಗಳು ಒಂದೇ ಬುಡಕಟ್ಟಿನ ಬೇರೆ ಬೇರೆ ಹೆಸರುಗಳಾಗಿವೆ.

೫. ನಗರೀಕರಣ, ಆಧುನೀಕರಣ ಮತ್ತು ಜಾಗತೀಕರಣಗಳು ಕೇವಲ ಮೈಸೂರು ಜಿಲ್ಲೆಯಲ್ಲಿಯ ಹಕ್ಕಿಪಿಕ್ಕಿ (ಪಾರ್ಧಿ)ಯರನ್ನು ಬಿಟ್ಟರೆ, ಬೇರೆಲ್ಲೂ ಇವು ಈ ಬುಡಕಟ್ಟಿನ ಮೇಲೆ ಪ್ರಭಾವಬಿರಿಲ್ಲ.

೬. ಬದಲಾಗುತ್ತಿರುವ ಇಂದಿನ ದಿನಗಳಲ್ಲಿ, ಸರ್ಕಾರದ ಗಿರಿಜನ ಉಪಯೋಜನೆ (ಟಿ.ಎಸ್.ಪಿ.) ಅಡಿಯಲ್ಲಿ ಕೆಲವು ಕಡೆ ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದು ಬರುತ್ತಿರುವುದು ಕಂಡು ಬಂದಿತು.

೭. ಪ್ರಸ್ತುತ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಈ ಬುಡಕಟ್ಟಿನವರು ಗುಡಿಸಲುಗಳ ಬದಲಾಗಿ ಮನೆಗಳು, ಅವಿಭಕ್ತ ಕುಟುಂಬಗಳ ಬದಲಿಗೆ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗುತ್ತಿವೆ.

೮. ಕರ್ನಾಟಕ ರಾಜ್ಯದ ಒಟ್ಟು ೨೭ ಜಿಲ್ಲೆಗಳ ಪೈಕಿ ೧೫ ಜಿಲ್ಲೆಗಳಲ್ಲಿ ಈ ಬುಡಕಟ್ಟಿನವರು ವಾಸಿಸುತ್ತಿದ್ದು, ಉತ್ತರ ಕರ್ನಾಟಕದ ೯ ಜಿಲ್ಲೆಗಳಲ್ಲಿ ಇವರ ಸಂಪೂರ್ಣ ಸಮೀಕ್ಷೆ ಸಾಧ್ಯವಾಗಿದ್ದು, ದಕ್ಷಿಣ ಕರ್ನಾಟಕದ ೬ ಜಿಲ್ಲೆಗಳ ಸಂಪೂರ್ಣ ಸಮೀಕ್ಷೆ ಸಾಧ್ಯವಾಗದಿದಾಗ್ಯೂ, ವೈಯುಕ್ತಿಕವಾಗಿ ಭೇಟಿಯಾಗಿ ಅಲ್ಲಿಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಹರಡಿಕೊಂಡಿರುವ ಪಾರ್ಧಿ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಪ್ರಸ್ತುತ ಈ ಮಹಾಪ್ರಬಂಧ ಮಾರ್ಗಸೂಚಿಯಾಗಬಹುದು. ಒಟ್ಟಿನಲ್ಲಿ ಪಾರ್ಧಿ ಬುಡಕಟ್ಟು: ಒಂದು ಮಾನವಶಾಸ್ತ್ರೀಯ ಅಧ್ಯಯನ ಎಂಬ ವಿಷಯದ ಮಹಾಪ್ರಬಂಧ ನನ್ನ ಪ್ರಮಾಣಿಕ ಪ್ರಯತ್ನವಾಗಿದೆ. ಆದಾಗ್ಯೂ ನನ್ನ ಗಮನಕ್ಕೆ ಬರದೆ ಇರುವ ಸಂಶೋಧನಾಂಶಗಳು ಕಣ್ಣು ತಪ್ಪಿ ಇನ್ನೂ ಉಳಿದಿರುವ ಸಾಧ್ಯತೆಗಳಿವೆ. ಅವುಗಳು ಮುಂದಿನ ಅಧ್ಯಯನಕಾರರ ಅಧ್ಯಯನಕ್ಕೆ ಬಿಡಲಾಗಿದೆ.

ಅನುಬಂಧಗಳು

೧. ಕರ್ನಾಟಕ ರಾಜ್ಯದಲ್ಲಿಯ ಪಾರ್ಧಿ ಬುಡಕಟ್ಟಿನ ನೆಲೆಗಳು

೨. ಸರ್ಕಾರದ ಸುತ್ತೋಲೆ

೩. ಕರ್ನಾಟಕದ ಬುಡಕಟ್ಟುಗಳ ಪಟ್ಟಿ

೪. ಪರಮಾರ್ಶನ ಗ್ರಂಥಗಳು

೫. ಪ್ರಶ್ನಾವಳಿ

೬. ವಕ್ತೃಗಳ ಪಟ್ಟಿ

ಪರಿಶಿಷ್ಟಗಳು

೧. ಅಂಕಿ-ಅಂಶಗಳ ಪಟ್ಟಿ

೨. ಛಾಯಾಚಿತ್ರಗಳು

ಅನುಬಂಧ ೧

ಕರ್ನಾಟಕ ರಾಜ್ಯದಲ್ಲಿಯ ಪಾರ್ಧಿ ಬುಡಕಟ್ಟಿನ ನೆಲೆಗಳು



ಉತ್ತರಕರ್ನಾಟಕ

೧. * ಬಾಗಲಕೋಟೆ

೨. * ಬಳ್ಳಾರಿ

೩. * ಬೀದರ

೪. * ಬಿಜಾಪೂರ

೫. * ಧಾರವಾಡ

೬. * ಗದಗ

೭. * ಗುಲ್ಬರ್ಗ

೮. * ಕೊಪ್ಪಳ

೯. * ಮೈಸೂರು

ದಕ್ಷಿಣ ಕರ್ನಾಟಕ


೧. • ಬೆಂಗಳೂರು

೨. • ಬೆಂಗಳೂರು ಗ್ರಾಮಾಂತರ ಜಿಲ್ಲೆ

೩. • ಶಿವಮೊಗ

೪. • ಹಾಸನ

೫. • ದಾವಣಗೆರೆ



* = [illegible] ಕ್ಷೇತ್ರಕಾರ್ಯ •= ಜಿಲ್ಲೆಗಳ ಅವಲೋಕನ ಕಾರ್ಯ



ಅನುಬಂಧ ೨

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪರಿಶಿಷ್ಟ ಪಂಗಡಗಳ ಜಾತಿಯ ಪಟ್ಟಿಗೆ ಭಾರತ ಸರ್ಕಾರವು ಜಾರಿ ಮಾಡಲಾದ ಹೊಸದಾದ ಪರ್ಯಾಯ/ಸಮಾನಾಂತರ ಪದಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸುವ ಕುರಿತಾದ ಸಂವಿಧಾನತ್ಮಕ ಆದೇಶ ಜಾರಿ ಮಾಡುವ ಕುರಿತು ಆದೇಶ

ಓದಲಾಗಿದೆ

ಕ್ರ.ಸಂ.(೧): SWD 225 BCA 2000, ದಿನಾಂಕ 30.03.2002

ಕ್ರ.ಸಂ.(೨): ಭಾರತ ಸರ್ಕಾರದ ಕಾನೂನು ಮತ್ತು ನ್ಯಾಯಾಧಿಕರಣ ಮಂತ್ರಾಲಯವು ಭಾರತ ಸರ್ಕಾರದ ವಿಶೇಷ ಪತ್ರಿಕೆಯಲ್ಲಿ ದಿನಾಂಕ ೦೮.೦೧.೨೦೦೩ ರಂದು ಪ್ರಕಟಿಸಲಾದ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಆದೇಶಗಳು (ತಿದ್ದುಪಡಿ) ಅಧಿನಿಯಮ ೨೦೦೨, ದಿನಾಂಕ ೦೮.೦೧.೨೦೦೩

ಪ್ರಸ್ತಾವನೆ

ಮೇಲೆ ಓದಲಾದ ಕ್ರ.ಸಂಖ್ಯೆ (೧)ರ ದಿನಾಂಕ ೩೦.೦೩.೨೦೦೨ರ ಆದೇಶದಲ್ಲಿ ಕರ್ನಾಟಕ ಸರ್ಕಾರವು ಶಿಕ್ಷಣ ಸಂಸ್ಥೆಗಳಿಗೆ ಹೊಸದಾಗಿ ಸೇರುವ ಹಾಗೂ ನಾಗರೀಕ ಸೇವೆಯಲ್ಲಿ ನೌಕರಿ ಪಡೆಯುವ ಕುರಿತಂತೆ ಸಮಗ್ರಕೆನೆ ಪದರ ನೀತಿಯನ್ನು ಅನುಸರಿಸಿ ಪ್ರವರ್ಗ-೧, ಪ್ರವರ್ಗ-೨ಎ, ಪ್ರವರ್ಗ-೨ಬಿ, ಪ್ರವರ್ಗ-೩ಎ, ಪ್ರವರ್ಗ-೩ಬಿ ಇವುಗಳಲ್ಲಿ ವಿವಿಧ ಜಾತಿಗಳನ್ನು ವರ್ಗೀಕರಿಸಿ ಮೀಸಲಾತಿ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸದರಿ ಆದೇಶದ ಪ್ರವರ್ಗ-೧ ಕ್ರಮಸಂಖ್ಯೆ 36 (d) GOWRIGA, 36 (I) MEDARI 36-(J) BURUD ಹಾಗೂ ಕ್ರಮಸಂಖ್ಯೆ ೮೮(O)ನಲ್ಲಿ 'HARANSHIKARI' ಹಾಗೂ ಕ್ರಮಸಂಖ್ಯೆರಲ್ಲಿ ಈ ಜಾತಿಗಳು ಪ್ರವರ್ಗ ೧ರಲ್ಲಿ ಸೇರಲ್ಪಟ್ಟಿವೆ.

ಓದಲಾದ ಕ್ರಮಸಂಖ್ಯೆ (೨)ರ ದಿನಾಂಕ ೦೮.೦೧.೨೦೦೩ರ The Scheduled Castes and Scheduled Tribes Orders (Amendment) Act 2002 ಈ ಅಧಿನಿಯಮದಲ್ಲಿ ಭಾರತ ಸರ್ಕಾರವು ಪ್ರವರ್ಗ-೧ 36 (d) ನಲ್ಲಿರುವ GAURIGA, 36-I MEDARI 36-(J) BURUD ಇವುಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಕ್ರಮಸಂಖ್ಯೆ ೩೭ರ ಕೊನೆಯಲ್ಲಿ HARANSHIKARI ಸೇರಿಸಿಕೊಳ್ಳಲು ತಿದ್ದುಪಡಿಯಾಗಿದೆ. ಇದರಂತೆ ಕ್ರಮಸಂಖ್ಯೆ ೪೧ರಲ್ಲಿನ ಹಾಲಿ ಇರುವ ಪರಿಶಿಷ್ಟ ಪಂಗಡಗಳ ಜಾತಿಯ ಕೊನೆಯಲ್ಲಿ ಸೇರಿಸಿಕೊಳ್ಳಲು ಆದೇಶವಾಗಿದೆ. ಇದರಂತೆ ಪರಿಶಿಷ್ಟ ಜಾತಿಗಳ ಪಟ್ಟಿಯ ಕ್ರಮಸಂಖ್ಯೆ ೫೦ರಲ್ಲಿ SIDDI ಜನಾಂಗವನ್ನು (ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಅನ್ವಯಿಸುವಂತೆ) ಸೇರಿಸಿಕೊಳ್ಳಲು ಆದೇಶವಾಗಿದೆ.

ಹಾಲಿ ಜಾರಿಯಲ್ಲಿರುವ ಸರ್ಕಾರಿ ಆದೇಶ ಸಂಖ್ಯೆ: ೨೨೫ ಬಿಸಿಎ ೨೦೦೦ ದಿನಾಂಕ ೩೦.೦೩.೨೦೦೨ರಲ್ಲಿ ಪ್ರವರ್ಗ-೧ರಲ್ಲಿ ಸಮೂದಿಸಲಾದ ಜಾತಿಗಳನ್ನು ಕೈಬಿಟ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದ ಜಾತಿಗಳೆಂದು ಪರಿಗಣಿಸುವ ಹಾಗೂ ಉಳಿದ ಜಾತಿ/ಉಪಜಾತಿಗಳನ್ನು ಪ್ರವರ್ಗ-೧ರಲ್ಲಿಯೇ ಮುಂದುವರಿಸುವಂತೆ ಸರ್ಕಾರ ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಸಕಇ ೧೭೭ ಎಸ್‌ಎಡಿ ೯೯ ಬೆಂಗಳೂರು, ದಿನಾಂಕ ೧೫.೦೬.೨೦೦೩

ಪ್ರಸ್ತಾವನೆಯಲ್ಲಿ ನಮೂದಿಸಲಾದ ಅಂಶಗಳನ್ನು ಸರ್ಕಾರವು ಗಮನಿಸಿದೆ. ಆ ಪ್ರಕಾರವಾಗಿ (೧) ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ ೨೨೫ ಬಿಸಿವಿ ೨೦೦೦, ದಿನಾಂಕ ೩೦.೦೩.೨೦೦೨ರ ಪ್ರವರ್ಗ-೧ರ ಕ್ರ.ಸಂ. 36 GAURIGA, 36-1 MEDARI 36-(J) BURUD ಇವುಗಳನ್ನು ಸದರಿ ಪಟ್ಟಿಯಿಂದ ಕೈಬಿಟ್ಟು ಪರಿಶಿಷ್ಟ ಪಂಗಡಗಳ ಪಟ್ಟಿಯ ಕ್ರಮಸಂಖ್ಯೆ ೩೭ರ ಕೊನೆಯಲ್ಲಿ ಎಂಬುದಾಗಿ ಓದಿಕೊಳ್ಳಲು ಆದೇಶಿಸಿದೆ. (೨) ಸದರಿ ಆದೇಶದ ಕ್ರಮಸಂಖ್ಯೆ ೮೮(O) HARANSHIKARI ನಲ್ಲಿ ಜನಾಂಗವು ಪ್ರವರ್ಗ-೧ರಲ್ಲಿದ್ದು ಭಾರತ ಸರ್ಕಾರವು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿನ ಕ್ರಮಸಂಖ್ಯೆ ೪೧ರಲ್ಲಿ ನಮೂದಿಸಲಾದ ಜಾತಿಯೊಂದಿಗೆ HARANSHIKARI ಎಂಬುದಾಗಿ ಸೇರಿಸಿರುವ ಕಾರಣ ಈ ಜಾತಿHARANSHIKARIಯನ್ನು ಕ್ರಮಸಂಖ್ಯೆ ೮೮ರಿಂದ ಕ್ರಮಸಂಖ್ಯೆ ೮೮ರಲ್ಲಿ ನಮೂದಿತವಾದ ಉಳಿದ ಜಾತಿ/ಉಪಜಾತಿಗಳು ಪ್ರವರ್ಗ ೧ರಲ್ಲಿಯೇ ಮುಂದುವರಿಯುವವು, ಎಂದು ಆದೇಶಿಸಿದೆ. ಪರಿಶಿಷ್ಟ ಪಂಗಡಗಳ ಕ್ರಮಸಂಖ್ಯೆ ೪೧ರ ಕೊನೆಯಲ್ಲಿ HARANASHIKARI ಎಂದು ಸೇರಿಸಲು ಆದೇಶಿಸಿದೆ. (3) ಕ್ರಮಸಂಖ್ಯೆ ೪೭ರಲ್ಲಿ SIDDI ಜನಾಂಗವನ್ನು ಪ್ರವರ್ಗ-೧ರಲ್ಲಿ ಸೇರಿಸಿದ್ದು, ಸದರಿ SIDDI ಜನಾಂಗವನ್ನು ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಅನ್ವಯಿಸುವಂತೆ ಕ್ರಮಸಂಖ್ಯೆ: ೫೧ರಲ್ಲಿ ಪರಿಶಿಷ್ಟ ಪಂಗಡಗಳ ಜಾತಿಗೆ ಸೇರಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆ ಹೊರತುಪಡಿಸಿ, ಉಳಿದೆಲ್ಲಾ ಜಿಲ್ಲೆಗಳಲ್ಲಿನ SIDDI ಜನಾಂಗವು ಪ್ರವರ್ಗ-೧ರಲ್ಲಿಯೇ ಮುಂದುವರಿಯುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-

(ಎಂ.ಎಸ್. ಮರುಳಸಿದ್ದಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜಕಲ್ಯಾಣ ಇಲಾಖೆ

ಗೆ,

ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಿದ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಲಾಗಿದೆ.

ಪ್ರತಿ :

೧. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

೨. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.

ಅನುಬಂಧ ೩

ಕರ್ನಾಟಕದ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿ ಹಾಗೂ ೧೯೮೧, ೧೯೯೧ರ ಜನಸಂಖ್ಯೆ

ಸಂ. ಬುಡಕಟ್ಟು	೧೯೮೧	೧೯೯೧	ಸಂ. ಬುಡಕಟ್ಟು	೧೯೮೧	೧೯೯೧
೧. ಆಡಿಯನ್	೩೮೬	೪೬೦	೧೯. ಕಥೋಡಿ, ಕಟ್‌ಕಾರಿ, ಧೋರ್ ಕಟ್‌ಕಾರಿ, ಸೋನಕಥೋಡಿ, ಸೋನ್ ಕಟ್‌ಗಿರಿ	೯೪೨	೧,೫೨೯
೨. ಬಾರ್ಡಾ	೭೨೯	೧,೧೨೮	೨೦. ಕಾಟ್ಟು ನಾಯಕನ್	೧೦೨	೨೧೪
೩. ಬಾವಚ, ಬಾಮ್ಚೆ,	೭೯೪	೧,೦೪೨	೨೧. ಕೊಕ್ನ, ಕೊಕ್ನಿ, ಕುಕ್ನೆ	೪೧	೯೩
೪. ಭಿಲ್, ಭಿಲ್‌ಗರಾಸಿಯು, ಧೋಳಿ ಭಿಲ್, ಡುಂಗ್ರಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿಭಿಲ್, ರಾವಲ್ ಭಿಲ್, ತಾಡ್ವಿಭಿಲ್, ಭಾಗಾಲಿಯಾ, ಭಿಲಾಲ, ಪಾವರಾ ವಾಸವ, ವಾಸವೆ	೧,೮೬೬	೨,೨೬೧	೨೨. ಕೊಂಡಕಾಪುಸ್	೯೮	೪೩೮
೫. ಚೆಂಚು, ಚೆಂಚವಾರ್	೭೨೬	೪೭೦	೨೩. ಕೋಲಿಧೋರ ಟೋಕರೆಕೋಳಿ ಕೊಲ್ಚಾ, ಕೊಲ್ಲ	೩೯,೧೩೫	೬೯,೦೦೫
೬. ಚೋಧರಾ	೧೪೦	೨೬೫	೨೪. ಕೊರಗ	೧೫,೧೪೬	೧೬,೩೭೨
೭. ಡುಬ್ಲ, ತಲವಿಯ, ಹಲ್ಪತಿ	೨	೮೯	೨೫. ಕೋಟ	೭೫	೮೫
೮. ಗಮಿಟ್, ಗಾಮ್ಟ, ಗವಿಟ್, ಮಾವ್ಚಿ, ಪಡ್ವಿ, ವಾಳ್ವಿ	೩೪	೧೪೮	೨೬. ಕೋಯ, ಭೀನೆಕೋಯಿ ರಾಜಕೋಯಿ	೨೭,೮೦೬	೨,೩೬೬
೯. ಗೊಂಡ್, ನಯ್ಕ್‌ಪೋಡ್, ರಾಜ್‌ಗೊಂಡ್	೬೦,೭೩೦	೧,೨೪,೦೬೫	೨೭. ಕುಡಿಯ, ಮಲಕುಡಿ	೧,೭೭೩	೨,೨೪೬
			೨೮. ಕುರುಬ (ಕೊಡಗು ಜಿಲ್ಲೆ)	೪,೫೯೫	೩,೮೭೯
೧೦. ಗೌಡಲು	೬,೨೨೩	೮,೨೨೨	೨೯. ಕುರಮನ್ಸ್	೧೩೧	೫೧೫
೧೧. ಹಕ್ಕಿಪಿಕ್ಕಿ	೩,೩೮೩	೫,೨೮೭	೩೦. ಮಹಾಮಸಲರ್	೧೪	೧೦೨
೧೨. ಹಸಲರು	೧೦,೬೦೦	೧೬,೭೮೦	೩೧. ಮಲೈಕುಡಿ	೬,೯೬೭	೭,೭೦೪
೧೩. ಇರುಳರ್	೩೧೩	೪೫೬	೩೨. ಮಲಸರ್	೬,೯೬೭	೪೮೭
೧೪. ಇರುಳಿಗ	೫,೫೩೪	೬,೮೪೩	೩೩. ಮಲಯೆಕಂಡಿ	೬೨	೪೨೨
೧೫. ಜೇನುಕುರುಬ	೩೪,೭೪೬	೨೯,೩೭೧	೩೪. ಮಲೇರು	೧೨೯	೧,೮೪೩
೧೬. ಕಾಡುಕುರುಬ	೨,೦೯,೨೭೭	೬೩,೨೮೧	೩೫. ಮರಾಠಿ (ಕೊಡಗು ಜಿಲ್ಲೆ)	೧,೮೪೨	೨,೬೭೮
೧೭. ಕಮ್ಮಾರ (ದ.ಕ.ಜಿಲ್ಲೆ ಮೈಸೂರು ಜಿಲ್ಲೆಯ ಕೊಳ್ಳೆಗಾಲ)	೮೪೪	೬೨೯	೩೬. ಮರಾಠಿ (ದ.ಕ. ಜಿಲ್ಲೆ)	೬೫,೮೨೧	೭೫,೭೦೮
			೩೭. ಮೀನ	೧೮,೬೪೮	೩೧,೦೬೪
೧೮. ಕಣಿಯನ್, ಕಣ್ಯಾನ್ (ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲೂಕು ನಲ್ಲಿ ಮಾತ್ರ)	೫೨೮	೫೫೩	೩೮. ನಾಯಕ್ಡ, ನಾಯಕ, ಚೋಳಿವಾಳ ನಾಯಕ, ಕಪಾಡಿಯ ನಾಯಕ, ಮೋಟನಾಯಕ, ನಾನಾ ನಾಯಕ	೧೨,೬೩,೫೫೦	೧೩,೭೦,೪೫೫

ಸಂ. ಬುಡಕಟ್ಟು	೧೯೮೧	೧೯೯೧	ಸಂ. ಬುಡಕಟ್ಟು	೧೯೮೧	೧೯೯೧
೩೯. ಪಳ್ಳಿಯನ್	೭೪೦	೭೩೩			
೪೦. ಪಣಿಯನ್	೪೮೨	೭೩೩			
೪೧. ಪಾರ್ಧಿ, ಅಡ್ವಿಚಿಂಚೇರ್ ಫಾನ್ಸಿಪಾರ್ಧಿ	೨,೪೨೪	೩,೩೬೭			
೪೨. ಪಟೇಲಿಯ	೫೨	೧೮೧			
೪೩. ರಠವಾ	೧೦	೨೫			
೪೪. ಶೋಲಗ	೧,೯೪೩	೭೯೦			
೪೫. ಸೋಲಿಗರು	೧೬,೩೮೯	೨೩,೯೫೫			
೪೬. ತೋಡ	೧೩೦	೬೧			
೪೭. ವಾರ್ಲಿ	೭	೧೬೫			
೪೮. ವಿಟೋಲಿಯ, ಕೊಟ್ವಾಲಿಯ, ಬರೋಡಿಯ	೧೩	೨೮			
೪೯. ಯೆರವ	೧೯,೨೬೧	೨೧,೯೪೫			
೫೦. ವಿಂಗಡಣೆಯಾಗದ	--	೧೪,೯೫೯			

ಆಧಾರ: ಭಾರತದ ಜನಗಣತಿ ೧೯೮೧, ೧೯೯೧

ಪರಾಮರ್ಶನ ಗ್ರಂಥಗಳು (Bibliography)

Berreman G.D. *" Social Categories and social Interaction in Urban India, "* American Anthropologist Vol. 74, No.3, 1972.

Bhat, Chandrashekar. *" Social Adjustment and Change among the Wadders"* in Misra P.K. and K.C. Malhothra (eds) Indian NOmads, Calcuttsa : Anthropological Survey of India, 1982.

Bose N.K., **The Scheduled Castes and Tribes and Their Present Condition** (B.C. Mazundar Memorial Lectures, University of Calcutta), 1969.

Campbell James M., (ed) Bombay Gazetteer Karnataka (Dharwar), (Bombay : Government of Bombay Presidency, 1884).

Chamanlal B., *Gypsies* (Forgotten Children of India), (New - Delhi : Publications Division, Government of India ; 1962).

Committee on Plan Projects (ed) **Tribal and Peasant Economics**, (New York : Natural History Press, 1967).

Enthoven R.E., **The Tribes and Castes of Bombay**, Vol. III, Bombay : Governament of Bombay Presidency, 1922.

Elwin Verier., **Leaves from The Jungle**, Delhi Oxford University, Press. Bombay, Calcutta, Madras, 1992

Evans Pritchard E.E., **"Kinship and the Local Community among the NUER"** in A.R. Radchiffe - Brown and D.Forde (ed). African Systems of Kinship and Mariage, (Oxford University Press, 1950).

Ghurrye G.S., **The Scheduleds Tribes**, (Bombay : Popular Prakashan, 1959).

Ghurrye G.S., **Caste and Race in India**, (Bombay : Popular Prakashan, 1990).

Governament of Mysore. Mysore Gazetter. Bellary (Dist), 1972.

Griesson, G.A., (ed) **Linguistic Survey of India**. Vol. IX Part III (first Edn. 1907) (Delhi; Motilal Banarasidas, 1968).

Gunda, Bella **"The Cultural Ecology and Service Nomads"**, Eastern Anthropologist, 34-04-1981.

Havanoor L.G., Karnataka Backword Class Commission Report,

Herskovit M.J., **Cultural Anthropology**, Abridged revision of Man and his works, 1974

Hsu, Francis L.K. **" Dominant kinship Relationship"**. American Anthropologist, Vol. 67 , No. 3, 1965.

Iyer A.K., **Tribes and Castes of Cochin**, New Delhi, Cosmo Publication, 1987

Kamaladevi Chattopadhyaya. **Tribalism in India**, New Delhi : Vikas Publishing House, 1978.

Kanak Mital. *Tribes Identity in Changing Industrial Environment* - The Santal Case, New Delhi Ashish Publications, 1986.

Lewis, Oscar **Five Families** : *Mexican Case Studies in the Culture of Poverty*, New York : New American library, 1959.

Malinowski B. A. **Scientific Theory of Culture Chapel Hill** ; North Carolina University Press, 1944.

Mann R.S. **Hakkipikki : Trapper and Seller** (Calcutta) : Anthropological survey of India, 1980.

Mead, Margaret, **New Lives for Old** : *Transformation, Manus* 1928 - 53, London : Gollancz, 1956.

Merdock G P. **Social Structure**, New York : The Free Press, (First Free Press Paperback edn) 1965.

Merit Students Encyclopiedia, 1990, Vol.No.9 New York, Macmillen Educational Company.

Nanjundaiah H V.and L.K. Ananthakrishna Iyer. **The Mysore Tribes and Castes**, Vol. II, " Mysore : University of Mysore Press, 1928.

Naroll, Raoul. **" On Ethnic Unit Clasiffication"** Current Anthropology, Vol. V 1964.

New Encyclopiedia Britannica, 1999 Vol.No.6, Chicago Encyclopiedia Britannica Inc.

Nodel S.F. Malinowski on **Magic and Relision** in R. Firth (ed) Man and Culture, London : Routlrdge and Kegan Paul (Routledge first Paperback ; Orig 1957) 1970.

Orans M. **The Santal** : *A Tribe in search of a Great Tradition, Detroit* : Wayne. State University Press, 1965.

Paniker, K.N., **Culture, Indology, Hegemony,** Tulika - 1995.

Perry J.S., Social web: **An Introduction to Sociology, (ed.)** VI

Piddington R., **Introduction to Social Anthropology,** (London : Oliver and Boyd, 1957) Vol. II,

Pradhan, M.C. **The Political System of the Jats of Northern India**, Bombay : Oxford University Press, 1966.

Radcliffe-Brown, A.R. **Structure and Function in primitive Society**, London. " The English Lnguage Book Society and Cohen and West Ltd., 1964.

Redfield R. A. **Villege that Chose Progress**, Chan Kom Rrevisited, Chicago University Press, 1957.

Ramachandra Guha., **Savaging the Civilized** (Oxford University Press, 2001).

Risley H. **The People of India**, London : W. and Thacker and Co., 1915.

Ruussel R.V. and Hiralal., **The Tribes and Castes of Central Provinance of India** (in four Vols.), Vol.II, London ; Macmillan and Co., 1916.

Saletore R.N, Ed : 1985, Encyclopiedia of Indian culture Vol - V.

Singh K.S. and Others, **People of India** - Kerala Vol.3., and vol.28, G. Anthropological Survey of India - New Delhi. 2002.

Singh K.S. (ed.) **Lama - Kathu in Tribal and Folk Tradition of India,** Birendranath Datta, Anthropological Survey of India - 1998.

Singer, Miton **"Cultural Pattern of India Civilization"**, The Far Eastorn Quarterly, Vol. XV, No.1. 1955.

Singer, Milton, **"Text and Context in the Study of Contemporary Hinduism in Brahma Vidhya"** The Adyar Library Bulletin, Vol.XXV, 1961.

Sharp, Louriston. *"Steel Axes for Stone - Age Australian "* Human Organisation, Vol. II, 1952.

"Shes", Sher. Sing **The Sikligrr of Punjab** (A Gyipsy Tribe), Delhi : Sterling Publishers 1966.

Spicer E.H. (ed). **Perspectives in American Indian Culture Change** : The University of Chicago Press, 1961.

Spindler G.D. (ed) **Being an Anthropologist Field Work in Eleven Cultures**, New York : Holt Rinchart and Row, 1970.

Spoehr A. **"Changing Kinship Systems"** (Anthropolosic Series, Feld MUs. Nat, Hist, XXXIII, No. 1. 1947.

Syied Siraj-Ul-Hussain., **The Caste and Tribes of Nizam's Daminions**, 1989

Thurston Edgar. **Ethnographic Notes in Southern India**, Madras : Governament Press (Second Issue), 1907.

Thurston, Edgar **Ethnographic Notes in Southern India**, Madras : Governament Press, 1909.

Thurston, Edgar **Castes and Tribes of Southern India**, vol.IV, Madras Press, 1909.

Titiev, Mischa. **"A Fresh approch to the problem of Magic and Relision"** in Peter B. Hennand (ed) Cultural and Social Anthropology, New York : Collier and MacMillen Co., 1968.

Tribal World of Verrier Elwin - **An Autobiography**, Oxford University, Third Edition, 1992.

Weber, Max. **The Theory of Economic and Social Organization** (Tr. by A.M Henderson and Talcott Persons). Glencoe : Free Press, 2nd Edn., 1947.

ಕನ್ನಡ ಗ್ರಂಥಗಳು

ಬೋರಲಿಂಗಯ್ಯ ಹಿ.ಚಿ., ೨೦೦೧, 'ವಿಸ್ಮೃತಿ ಮತ್ತು ಸಂಸ್ಕೃತಿ', ಸಿ.ವಿ.ಜಿ. ಪಬ್ಲಿಕೇಷನ್ಸ್. ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ೨೦೦೦, 'ಗೊಂಡರ ರಾಮಾಯಣ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಕಂಬಾರ್, (ಸಂ) ಸಂಪುಟ-೧ ಮತ್ತು ೨, ೧೯೭೩, ಪ್ರಸಾರಾಂಗ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೫.

ಚಿದಾನಂದ ಮೂರ್ತಿ ಎಂ., ೧೯೭೭, 'ಗ್ರಾಮೀಣ', ಬಾಪ್ಕೋ ಪ್ರಕಾಶನ, ಬೆಂಗಳೂರು.

ಚೆನ್ನಬಸಪ್ಪ ಗೋ.ರು., (ಸಂ) ೧೯೭೭, ಪ್ರಸಾರಂಗ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೭.

ಗುರುಮೂರ್ತಿ ಕೆ.ಜಿ., ೨೦೦೪, ಜಾನಪದ ಮಾಹಿತಿಯ ಮರು ಅರ್ಥೈಸುವಿಕೆ, ಬೆಂಗಳೂರು.

ಹಳದಿಪುರ ಎಸ್.ವಿ., ೧೯೧೪, 'ಮುಂಬಯಿ ಇಲಾಖೆಯ ದುರುಳರು',

ಹಿರಿಯಣ್ಣ ಅಂಬಳಿಕೆ., ೧೯೯೩, 'ಕಚ್ಚೆ ಗೌಳಿಗರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಜವರೇಗೌಡ ದೇ., ೨೦೦೧, 'ಜಾನಪದ ಅಧ್ಯಯನ', ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕೃಷ್ಣಶರ್ಮ ಬೇಟಗೇರಿ., ೧೯೭೧, 'ಕರ್ನಾಟಕ ಜನಜೀವನ', ಸಮಾಜ ಪುಸ್ತಕಾಲಯ, ಧಾರವಾಡ.

ಲಕ್ಕಪ್ಪಗೌಡ ಹೆಚ್.ಜೆ., (ಸಂ) ಸಂಪುಟ-೧ ಮತ್ತು ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹೇಶ್ವರಯ್ಯ ಎಚ್.ಎಂ., 'ಗೌಳಿಗರು', ಕರ್ನಾಟಕ ಬುಡಕಟ್ಟುಗಳು, ಭಾಗ-೧.

ಮೈತ್ರಿ ಕೆ.ಎಂ., ೨೦೦೨, 'ಬುಡಕಟ್ಟು ಕುಲ ಕಸುಬುಗಳು' ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ನಂಜಮಣ್ಣಿ ಎಂ., ೧೯೭೪, 'ಮಾನವಶಾಸ್ತ್ರ, ಪರಿಚಯ' ಭಾಗ-೧ (ಮೈಸೂರು ವಿಶ್ವವಿದ್ಯಾಲಯ, ಮೈಸೂರು).

ಪರಮಶಿವಯ್ಯ ಜಿ.ಶಂ., ೧೯೭೯, 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪ್ರಹ್ಲಾದ ಬೇಟಗೇರಿ., 'ಅಡವಿಚೆಂಚರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಜಪ್ಪ ದಳವಾಯಿ., ೧೯೯೩, 'ಹಕ್ಕಿಪಿಕ್ಕಿಯರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಮಣ್ಣ ಯು.ಎಸ್. ೨೦೦೦, 'ಮಲೆನಾಡಿನಲ್ಲಿ ಪ್ರಾಣಿಬೇಟೆ', (ಗ್ರಾಮೀಣ ಬೇಟೆಗಳು ಸಂ. ದೇವೇಂದ್ರಕುಮಾರ್ ಹಕಾರಿ), ಬೆಂಗಳೂರು, ಕನ್ನಡ ಪುಸ್ತಕ ಪ್ರಾದಿಕಾರ, ಕರ್ನಾಟಕ ಸರ್ಕಾರ.

ರಮೇಶ್ ಸ.ಚಿ. ೨೦೦೧, 'ಬೇಟೆ ಸಾಂಸ್ಕೃತಿಕ ಪದಕೋಶ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರನಾರಾಯಣ ತೀ.ನಂ., (ಸಂ) 'ಕರ್ನಾಟಕ ಜನಪದ ಮಹಾಕಾವ್ಯಗಳು', ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್., ೧೯೮೧, ಕರ್ನಾಟಕ ಜಾನಪದ ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ವಿವೇಕರೈ. ಬಿ.ಎ. ೧೯೮೮, 'ಬೇಟೆ ಜಾನಪದ' (ವಿಶಿಷ್ಟ ಜಾನಪದ ವಿಚಾರ ಸಂಕಿರಣದ ಪ್ರಬಂಧಗಳು ಸಂ. ಹೆಚ್.ಜೆ.ಲಕ್ಕಪ್ಪಗೌಡ) ಬಿ.ಆರ್. ಪ್ರಾಜೆಕ್ಟ್ ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ. ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಿಘಂಟುಗಳು

Anthropological Dictionary

ಇಂಗ್ಲೀಶ್ ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾಲಯ, ೧೯೮೫

ಕನ್ನಡ ಕನ್ನಡ ಇಂಗ್ಲೀಷ್ ನಿಘಂಟು, ರೇವರೆಂಡ್ ಎಫ್. ಕಿಟೆಲ್, ಏಷಿಯಾನ್ ಎಜುಕೇಷನ್ ಸರ್ವಿಸಸ್, ನ್ಯೂಡೆಲಿ, ಮದ್ರಾಸ್, ೧೯೯೩

ಕನ್ನಡ ರತ್ನಕೋಶ

ಜ್ಞಾನ ಗಂಗೋತ್ರಿ, ಕನ್ನಡ ವಿಶ್ವಕೋಶ (ಸಂಪುಟ ೧-೨)

ಸಂಕ್ಷಿಪ್ತ ಕನ್ನಡ ನಿಘಂಟು

ಪತ್ರಿಕೆಗಳು

ಜನಪದ

ಪ್ರಜಾವಾಣಿ ೩೦.೧೦.೨೦೦೩

ಪ್ರಬುದ್ಧ ಕರ್ನಾಟಕ

ಸಂಶೋಧನಾ ತರಂಗ

Gezetters

Bellary District Gazetter

Census Hand Book

Dravidian Ethmological Dictionary [D.E.D]

Encyclopiedia of Britanica.

Encyclopiedia of Religion and Ethics

Encyclopiedia of Social Science

English - English Dictionary

India Gazetter

Karnataka State Gazetter

Kannada - English Dictionary

Publications:

Indian Anthropologists.

Indian Economic and Social Review

India Today

Indian Tribes

Journal of Indian Anthropological Survey

Man in India

The Week (Dec.1,2002)

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ – ಹಂಪಿ
ವಿದ್ಯಾರಣ್ಯ – 583 276.

ಪ್ರಶ್ನಾವಳಿ

I. ಸಾಮಾನ್ಯ ಮಾಹಿತಿ

ಅ) ಸಮೀಕ್ಷೆಯ ದಿನಾಂಕ :
ಆ) ಬುಡಕಟ್ಟು / ಜಾತಿ :
ಇ) ಮಾತೃಭಾಷೆ :
ಈ) ಮನೆದೇವರು :
ಉ) ಗೋತ್ರ/ಬೆಡಗು/ಬಳಿ :
ಊ) ಮನೆತನದ ಹೆಸರು :

ಋ) ವಾಸಸ್ಥಾನ :
ೠ) ಹೋಬಳಿ :
ಎ) ತಾಲೂಕು :
ಏ) ಭೂ ಹಿಡುವಳಿ (ಎಕರೆಗಳಲ್ಲಿ)
೧) ಒಣ :
೨) ನೀರಾವರಿ :

ಐ) ಪಶು ಸಂಪತ್ತು (ಸಂಖ್ಯೆಗಳಲ್ಲಿ)
01) ಎತ್ತು :
02) ಹೋರಿ :
03) ಎಮ್ಮ :
04) ಆಕಳು :
05) ಕುರಿ :
06) ಮೇಕೆ :
07) ಕೋಳಿ :
08)

II ವೈಯಕ್ತಿಕ ಮಾಹಿತಿ ಜಿಲ್ಲೆ. ....

ಕ್ರ. ಸಂ	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ವೈವಾಹಿಕ ಸ್ಥಾನಮಾನ	ವಿವಾಹಿತಳ ಬೆಡಗು/ಜಾತಿ	ಶೈಕ್ಷಣಿಕ ಮಟ್ಟ	ಕಸುಬು	ಕುಟುಂಬ ಯೋಜನೆ(✓)	ಸರಕಾರಿ ಸೌಲಭ್ಯಗಳು (✓)			
										ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ
01	02	03	04	05	06	07	08	09	10	11	12	13	14
01		ಮುಖ್ಯಸ್ಥ/ಳು											
02													
03													
04													
05													
06													
07													
08													
09													
10													
11													
12													
13													
14													

ಒ) ಮನೆ ಮಾದರಿ ☑
01) ಗುಡಾರ ☐
02) ಗುಡಿಸಲು ☐
03) ಟಿನ್ ಮನೆ ☐
04) ಧಾಬಾ (ಮಾಳಿಗೆ) ☐
05) ಆರ್.ಸಿ.ಸಿ. ಮನೆ ☐
06) ಹಂಚಿನ ಮನೆ ☐
07) ಜನತಾ / ಆಶ್ರಯ ಮನೆ ☐
08) ಬಾಡಿಗೆ ಮನೆ
09)
10) ನಿವೇಶನ(ಸ್ವ ☐ / ಸ• ☐
11) ಮನೆ(ಸ್ವ ☐/ ಸ• ☐

ಓ) ಸೌಲಭ್ಯಗಳು ☑
01) ಪಡಿತರ ಚೀಟಿ
02) ವಿದ್ಯುತ್ ದೀಪ(ಸ್ವ/☐ ಸ•☐
03) ಬಂಡಿ ☐
04) ಸೈಕಲ್ ☐
05) ಸ್ಕೂಟರ್ ☐
06) ಆಟೋರಿಕ್ಷಾ ☐
07) ಶೌಚಾಲಯ ☐
08) ಸ್ನಾನ ಗೃಹ ☐
09) ಗ್ಯಾಸ್ ☐
10) ನಲ್ಲಿ ☐
11) ರೇಡಿಯೊ ☐
12) ಟೇಪ್ ರಿಕಾರ್ಡರ್ ☐
13) ಟಿ.ವಿ. ☐
14) ವಿ.ಸಿ.ಆರ್ ☐
15) ವಿ.ಸಿ.ಪಿ. ☐
16) ಟೆಲಿಫೋನ್ ☐
17)
18)
19)
20)
21)
22)
23)
24)
25)

ಸ್ವ = ಸ್ವಂತದ್ದು; ಸ• = ಸರಕಾರದ್ದು

ಡಾ. ಕೆ. ಎಂ. ಮೈತ್ರಿ
ಮಾರ್ಗದರ್ಶಕರು ಹಾಗೂ ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ – 583 276.

ಲಕ್ಕಿ ಪೃಥ್ವಿರಾಜ
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ – 583 276.

ವಕ್ತಗಳ ಪಟ್ಟಿ

ವಕ್ತಾರನ ಹೆಸರು ಮತ್ತು ವಿಳಾಸ	ವಯಸ್ಸು	ಬೆಡಗು	ಕಸುಬು	ದಿನಾಂಕ	ಸಮಯ	ಸ್ಥಳ	ಷರಾ
ಬಸಂತಿ ಪಕ್ಷಿರಾಜಪುರ ಹುಣಸೂರು ಮೈಸೂರು	೩೩	ಕಾಳಿವಾಲಾ	ಗೃಹಿಣಿ	೨೯.೦೯.೦೨	೨.೩೦ ಮ.		
ಚೆನ್ನಪ್ಪ ತಂದೆ ಮಲ್ಲಪ್ಪ ನವಲಗುಂದ ಹುಬ್ಬಳ್ಳಿ, ಧಾರವಾಡ	೬೬	ಸಾವಂಡಿಯಾ		೦೯.೦೪.೦೩	೨.೩೦ ಮ.		
ದೇವದಾಸ್ ಸೆಟ್ಲಮೆಂಟ್ ಕಾಲೋನಿ ಬಿಜಾಪುರ್.	೪೦	ಪಿಂಪಳಾಜ	ಆಟೋಚಾಲನೆ ಸಾರಾಯಿ ವ್ಯಾಪಾರ	೦೬.೦೫.೦೨	೯.೩೦ ಬೆಳಿಗ್ಗೆ		
ಈಶ್ವರ್‌ಲಾಲ್ ಕಾಳಿಕರ್ Administrative Asst I.T.I ಮಂಗಳೂರು. ಪಿನ್. [illegible] ಡಿ.ಕೆ.	೫೦	ಕಾಲಿಕರ್	ಸರ್ಕಾರಿ ಅಧಿಕಾರಿ	೦೬.೦೧.೦೨	೬.೩೦ ಸಂಜೆ		
ಈಶ್ವರ್ ಪವಾರ್ ಆರ್.ಎಮ್.ಪಿ. ವೈದ್ಯರು ಕಡ್ಡಿಮಟ್ಟಿ, ಬಾಗಲಕೋಟೆ	೫೪	ಇಕೋತಿಯಾ	ವೈದ್ಯವೃತ್ತಿ	೧೬.೦೪.೦೩	೩.೩೦ ಮ.		

ಈಶ್ವರ್ ತಂದೆ ಮಲ್ಲಪ್ಪ ಚೌಹ್ಹಾಣ ಶಾಹುಪಾರ್ಕ್ ರಾಯಭಾಗ ಬೆಳಗಾವಿ	೬೦	ಸಾವಂಡಿಯಾ	ಭಟ್ಟಿಸರಾಯಿ ಮಾರಾಟ	೧೮.೦೪.೦೩	೪.೫೦ ಸಂ.
ಗಾಯಕವಾಡ್ ಎಸ್.ಎಸ್. ನಿವೃತ್ತ ಟಿ.ಎಸ್.ಡಬ್ಲ್ಯೂ.ಒ ಬಿಜಾಪುರ ೨೫೮೬೮೮	೬೨	ಗಂಟಿಚೋರ್	ನಿವೃತ್ತ ಸರ್ಕಾರಿ ಅಧಿಕಾರಿ	೦೭.೦೫.೦೨	೯.೩೦ ಬೆ.
ಗುಂಡೇಗೌಡ ಎಚ್. ಸಹಾಯಕ ನಿರ್ದೇಶಕರು ಬುಡಕಟ್ಟು, ಅಭಿವೃದ್ಧಿ ನಿರ್ದೇಶನಾಲಯ, ಬೆಂಗಳೂರು ೩೪೦೦೫೮ ದೂ. ೨೨೩೧೫೯	೫೬	ಒಕ್ಕಲಿಗ	ಸರ್ಕಾರಿ ಅಧಿಕಾರಿ	೨೨.೦೪.೦೨	೪.೩೦ ಸಂ.
ಗೌರವ್ವ ದಲ್ಲಪ್ಪ ಕಟ್ಟಿಮನಿ ಗ್ರಾ.ಪಂ. ಸದಸ್ಯರು, ಜೈಭಾರತ ಕಾಲೋನಿ, ಧಾರವಾಡ.	೫೫	ಸಾವಂಡಿಯ	ರಾಜಕೀಯ	೧೦.೦೧.೦೩	೧೧.೩೦ ಮ.
ಇಂದ್ರಾಣಿ ಗಂಡ ಅಮಾಸೆ ಅಧ್ಯಕ್ಷರು, ಹಕ್ಕಿಪಿಕ್ಕಿಯ ವಿವಿದ್ದೋದ್ದೇಶಗಳ ಸಂಘ ಅಂಗಡಿಹಳ್ಳಿ ಬೇಲೂರು ಶಿವಮೊಗ್ಗ ದೂ. ೭೫೮೨೨೨೧	೫೫	ಕೊರಬಿಯಾ	ಗೃಹಿಣಿ ಮುಖಂಡೆ	೧೧.೦೯.೦೩	೧೦.೩೦ ಬೆ.

ಜೈಕೀರ್ತಿ ತಂದೆ ಸೇಣಗಪ್ಪ ಗ್ರಾಮ ಪಂಚಾಯಿತಿ ಸದಸ್ಯರು ಗೌತಂನಗರ, ಚಿಕ್ಕಮಟ್ಟಿ ಶಿವಮೊಗ್ಗ	೩೫	ಇಕೋತಿಯಾ	ರಾಜಕೀಯ	೨೭.೦೨.೦೩	೬.೦೦ ಸಂ.
ಜಾಜಿಬಾಯಿ ಗಂಡ ಜನಪತ್ರಿ ಗ್ರಾಮ ಪಂಚಾಯಿತಿ ಸದಸ್ಯರು ಶಿಕಾರಿಪುರ ತುಪ್ಪದಮಡು ಅಂಚೆ ನಾಗಮಂಗಲ ತಾ. ಮಂಡ್ಯ ಜಿ.	೬೦	ಹರಕತಿಯಾ	ಜನಪ್ರತಿನಿಧಿ	೦೩.೦೮.೦೩	೬.೩೦ ಸಂ.
ಜಾಲ್‌ಗೆರೆ ತಂದೆ ಜಿಲ್‌ಗಾ ಗೋಪನಾಳ್ ಅಂಚೆ ಚೆನ್ನಗಿರಿ ತಾ. ದಾವಣಗೆರೆ ಜಿ.	೭೫	ಇಕೋತಿಯಾ	ಕರಕುಶಲ	೧೦.೦೭.೦೩	೫.೩೦ ಸಂ.
ಜಲಾಲ್ ಚಂದಪ್ಪ ಕಟ್ಟಿಮನಿ ಪಾರ್ಧಿ ಸಮಾಜದ ಅಧ್ಯಕ್ಷರು, ಗಂಗಾಧರ್ ಸೆಟ್ಲಮೆಂಟ್ ಕಾಲೋನಿ, ಹುಬ್ಬಳ್ಳಿ. ದೂ. ೨೪೧೧೦೯ ಮನೆ	೬೦	ಪಿಂಪಳಾಜ	ರಾಜಕೀಯ ಮುಖಂಡ	೦೫.೧೧.೦೩	೮.೩೦ ಬೆ.
ಜಹಂಗೀರ್ ತಂ. ಶಂಕರ್‌ಕಾಳೀ ಸೂಪರ್‌ಮಾರ್ಕೆಟ್ ಹಿಂಭಾಗ, ಗುಲ್ಬರ್ಗಾ.	೫೦	ಪಿಂಪಳಾಜ	ವ್ಯಾಪಾರ	೧೫.೧೨.೦೧	೧೦.೩೦ ಬೆ.

ಕುಮಾರ್ ತಂದೆ ಕೃಷ್ಣಾಜಿ ಚಹಾ ಹೋಟೆಲ್ ಶಕ್ತಿ ಟಾಕೀಸ್ ಎದುರಿಗೆ ಬಾಗಲಕೋಟೆ ದೂ. ೪೨೦೦೭೩ ಮನೆ	೩೫	ಸಾವಂಡಿಯ	ವ್ಯಾಪಾರ	೨೨.೧೦.೦೨	೭.೩೦ ಬೆ.
ಕುಮುದಾ ಸುಶೀಲಪ್ಪ ಬಿ.ಇ. ಪದವಿಧರೆ ಶಿವಮೊಗ್ಗ ದೂ. ೨೫೮೨೧೮ ಮನೆ	೩೦	ಸಾವಂಡಿಯಾ	ಗೃಹಿಣಿ	೨೭.೦೨೩.೦೩	೧೦.೩೦ ಬೆ.
ಶೇಜರ್ ಸಿಂಗ್ ತಂದೆ ಮೈನಪ್ಪ ಮುಖಂಡರು, ಗೋಪನಾಳ್ ಚೆನ್ನಗಿರಿ, ದಾವಣಗೆರೆ	೬೦	ಕೋರ್‌ಬಿಯಾ	ಮುಖಂಡ	೦೯.೦೭.೦೩	೪.೩೦ ಸಂ.
ಮೆಲ್‌ಕಿರಿ ಸೈಕೋಲೊಜಿ ಎಸ್.ಪಿ. ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ	೪೫	ಚಲವಾದಿ	ಪ್ರೊಫೇಸರ್	೧೪.೧೨.೦೧	೪.೩೦ ಸಂ.
ಮೋತಿ ತಂದೆ ರಾಮಪ್ಪ ಯುವ ಮುಖಂಡ ಕಂಪ್ಲಿ	೩೨	ಪಿಂಪಳಾಜ	ನಿರುದ್ಯೋಗಿ	೧೦.೦೯.೦೨	೨.೩೦ ಮ.
ನಾಯಕ್ ಡಿ.ಬಿ. ಕನ್ನಡ ಪ್ರಾಧ್ಯಾಪಕರು	೫೦	ಲಂಬಾಣಿ	ಪ್ರೊಫೆಸರ್	೨೯.೦೬.೦೨	೧೧.೩೦ ಬೆ.

ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ ೪೩೭೯೯೫					
ಪಾಂಡು ತಂದೆ ಕೃಷ್ಣಾಜಿ ದೈಹಿಕ ಶಿಕ್ಷಕರು ಶಕ್ತಿ ಸೆಟ್ಲೆಮಂಟ್ ನಗರ ಬಾಗಲಕೋಟೆ. ದೂ. ೪೨೦೦೭೩ ಮನೆ	೩೩	ಸಾವಂಡಿಯ	ವ್ಯಾಪಾರ	೦೩.೦೧.೦೩	೮.೩೦ ಬೆ.
ಪದ್ಮನಾಭಂ ತಂದೆ ರಾಮು ಹರಿಶ್ಚಂದ್ರ ಕಾಲೋನಿ ಬಳ್ಳಾರಿ.	೩೦	ಕೊಡಿಯಾರ್	ಪೇಂಟರ್	೦೫.೦೩.೦೨	೧೧.೩೦ ಬೆ.
ಪಾರಮ್ಮ ಗಂಡ ಕುಶಪ್ಪ ಮೆಹಕೇರ್ ಭಾಲ್ಕಿ, ಬೀದರ್	೫೦	ರಾಜ್‌ಪಾರ್ಡಿ	ಕೂಲಿಕೆಲಸ	೦೮.೦೫.೦೩	೧೨.೩೦ ಮ.
ಪೂಜಾರಿ ಝುಲ್ಲು ಶಿಕಾರಿ ಕಾಲೋನಿ, ಕಂಪ್ಲಿ, ಜಿ. ಬಳ್ಳಾರಿ.	೮೦	ಕೊರಾಬಿಯ	ಗಿಡಮೂಲಿಕೆ ಔಷಧಿ	೧೦.೦೯.೦೨	೪.೩೦ ಮ.
ಫುಲ್ಯಾ ತಂ. ಲಗ್ಮು ಸೂಪರ್ ಮಾರ್ಕೆಟ್ ಹಿಂಭಾಗ, ಗುಲ್ಬರ್ಗ.	೮೦	ಪವಾರ್	ಕೂಲಿ	೧೫.೧೨.೦೧	೭.೩೦ ಬೆ.

ಪ್ರತಾಪ್ ಶಂಕರ್ ಕಾಳೇ ಸಿದ್ಧಾರೂಢಮಠದ ಎದುರಿಗೆ, ಹುಬ್ಬಳ್ಳಿ. ದೂ. ೨೨೦೫೧೫೨ ಮನೆ	೫೦	ಪಿಂಪಳಾಜ	Dy. S.P	೧೭.೧೧.೦೨	೭.೩೦ ಸಂ.
ಪ್ರೇಮ್ ಸಿಂಗ್ ಮಾಜಿಸೈನಿಕ ಸಿಬ್ಬಂದಿ ಮಂಗಲಪೇಟೆ, ಬೀದರ್. ದೂ. ೨೨೦೨೩೨ ಮನೆ	೭೦	ರಾಜ್‌ಪಾರ್ಧಿ	ವ್ಯಾಪಾರ	೧೭.೧೧.೦೧	೬.೩೦ ಸಂ.
ರಾಧಾಬಾಯಿ ಪ್ರೇಮಸಿಂಗ್ ಮಂಗಲ ಪೇಟ ಬೀದರ್	೫೦	ಪಾರ್ಧಿ	ಗೃಹಿಣಿ	೧೦.೦೫.೦೩	೮.೩೦ ಸಂ.
ರಾಜುಕಾಳಿಕರ್ ಶ್ರೀಸಾಯಿ ನಿವಾಸಿ ಕೆಳಗಿನ ಓಣಿ ನಗರಶೆಟ್ಟಿ ಹುಬ್ಬಳ್ಳಿ ದೂ. ೨೨೮೪೮೧ ಮನೆ	೫೦	ಪಾರ್ಧಿ	ವ್ಯಾಪಾರಿ ಕೊಪ್ಪ	೦೬.೦೧.೦೩	೯.೩೦ ಸಂ.
ರಾಮಚಂದ್ರ ತಂದೆ ರಾಮುಜಿ [illegible] ಗ್ರಾಮ ಕೊರಟಗೆರೆ ತಾ. ತುಮಕೂರು ಜಿ.	೪೮	ಹರಕತಿಯಾ	ಹ್ಯಾಂಡಿಕ್ರಾಫ್ಟ್ ವ್ಯಾಪಾರ	೨೫.೦೩.೦೩	೫.೩೦ ಸಂ.

ರಾಮು ತಂದೆ ಗನ್ನು	೫೦	ಖೋಡಿಯಾರ್	ಸರ್ಕಾರಿ ನೌಕರಿ	೦೭.೦೩.೦೨	೬.೩೦ ಸಂ.
ಬೆಲಿಫ್, ಜಿಲ್ಲಾ ನ್ಯಾಯಾಲಯ,					
ಬಳ್ಳಾರಿ.					
ರೇಣುಕಾ ತಂದೆ ಪರಶುರಾಮ್	೨೮	ಪಿಂಪಳಾಜ	ಗೃಹಿಣಿ	೧೮.೧೧.೦೨	೭.೩೦ ಸಂ.
ಸಾಯಿನಗರ, ಉಣಕಲ್					
ಹುಬ್ಬಳ್ಳಿ					
ಮೊ. ೩೭೭೦೭೩ ಮನೆ					
ರವೀಂದ್ರಕುಮಾರ್	೩೦	ಗುಜರಾತ್ಯೋ	ವ್ಯಾಪಾರ	೨೯.೧೨.೦೨	೨.೩೦` ಮ.
ಪಕ್ಷಿರಾಜ ಕಾಲೋನಿ,					
[illegible]					
ಮೈಸೂರು.					
ರೂಪಚಂದ್	೬೦	ಕಾಳಿವಾಲೆ	ರಾಜಕೀಯ	೦೭.೧೧.೦೧	೧೦.೦೦ ಬೆ.
ಪಟ್ಟಣ ಪಂಚಾಯ್ತಿ ಸದಸ್ಯರು,					
ಬಸವಕಲ್ಯಾಣ ಬೀದರ್.					
ಸಜಿ ಆಗಸ್ಟೈನ್	೩೦	ಕ್ರೈಸ್ತ	ಫಾದರ್	೦೩.೦೮.೦೩	೭.೩೦ ಸಂ.
ಸಂಜೀವಿನಿ, ಶಿಕಾರಿಪುರ					
ಹಕ್ಕಿಪಿಕ್ಕಿ ಕಾಲೋನಿ					
[illegible]					
[illegible]					

ಸಂತರಾಜು ತಂ, ಮಿಂಟೇಗಲ್ ಯುವ ಕಾರ್ಯಕರ್ತ, ಟೈಗರ್‌ಬ್ಲಾಕ್, ಹೆಚ್.ಡಿ.ಕೋಟೆ ತಾಲೂಕು ಜಿಲ್ಲೆ ಮೈಸೂರು.	೩೦	ಗುಜರಾತ್ಯೋ	ಸಮಾಜ ಸೇವೆ	೨೬.೧೨.೦೩	೯.೩೦ ಬೆ.	
ಶಿವಾಜಿ ತಂ, ಎಂಗಪ್ಪ ಚೌಹಾಣ ಹರಿಣಶಿಕಾರಿ ಮುಖಂಡರು, ಸೆಟ್ಲಮೆಂಟ್‌ಏರಿಯಾ ಬಾಗಲಕೋಟೆ.	೭೦	ಸಾವಂಡಿಯ	ರಾಜಕೀಯ	೦೩.೦೧.೦೩	೮.೩೦ ಬೆ.	೩-೪
ಶಿವಾಜಿ ಮಹಾಶಕ್ತಿ ಹೋಟೆಲ್ ಮಾಲಿಕರು ಎಲ್.ಐ.ಸಿ.ಕಛೇರಿ ಎದುರಿಗೆ, ಬಸವಕಲ್ಯಾಣ, ಬೀದರ್.	೫೦	ಸಕತ್‌ವಾಲೆ	ವ್ಯಾಪಾರ	೧೮.೧೧.೦೧	೧೦.೩೦ ಬೆ	
ಶಿವರಾಜ್ ತಂದೆ ಐತಾರ್‌ಸಿಂಗ್ ಚಿಟ್ಟಾ, ಬೀದರ್	೬೫	ಸಕತ್‌ವಾಲೆ	ಮರಗಳ ಗುತ್ತಿಗೆ	೦೯.೦೫.೦೩	೫.೩೦ ಸಂ.	
ಸಿದ್ದಪ್ಪ ತಂದೆ ಚೌಹ್ವಾಣ ಹಮಾಲಿ ಎಪಿಎಮ್‌ಸಿ ಹತ್ತಿರ ಸವದತ್ತಿ, ಬೆಳಗಾವಿ	೪೦	ಸಾವಂಡಿಯಾ	ಕೂಲಿ	೨೧.೦೨.೦೩	೭.೩೦ ಸಂ.	
ಶುಶಿಲಪ್ಪ ತಂದೆ ರಾಮೇಗೌಡ ವಾಗ್ರಿಥಾಂಡಾ, ಅಸ್ತಾಪನಹಳ್ಳಿ ಚೆನ್ನಗಿರಿ, ದಾವಣಗೆರೆ	೪೨	ಹಕ್ಕಿಪಿಕ್ಕಿ	ಸಮಾಜ ಸೇವೆ/ವ್ಯಾಪಾರ	೦೯.೦೭.೦೩	೮.೩೦ ಸಂ.	

ಸುರೇಶ್ ಚೌಹ್ವಾಣ ಇನ್ಸ್‌ಪೆಕ್ಟರ್ ಸೆಟ್ಲಮೆಂಟ್ ಏರಿಯಾ ಬಿಜಾಪೂರ್ ದೂ. ೨೪೪೨೪೫ ಮನೆ	೪೫	ಸಾವಂಡಿಯಾ	ಸರ್ಕಾರಿ ಕೆಲಸ	೦೭.೦೫.೦೨	೧.೩೦ ಮ.
ವೆಂಕಟೇಶ್ ಭೂತಾನ್ ಹಳ್ಳಿ, ಬನ್ನೇರುಘಟ್ಟ ಬೆಂಗಳೂರು	೩೦	ಸಾವಂಡಿಯ	ರಾಜಕೀಯ	೨೭.೦೪.೦೨	೧೨.೩೦ ಮ.
ವಸಂತ್ ಚೌಹ್ವಾಣ ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆಯ ಅಭಿವೃದ್ಧಿ ಅಧಿಕಾರಿ ಡಿ.ಸಿ. ಆಫಿಸ್, ಆವರಣ ಗದಗ. ದೂ. ೫೪೭೩೯೭ ಮನೆ	೪೫	ಸಾವಂಡಿಯ	ಸರ್ಕಾರಿ ಅಧಿಕಾರಿ	೧೨.೦೯.೦೨	
ಉಡಂತಿಅಮ್ಮ ಗಂಡ ಡಿಫೂಸ್ ಭೂತಾನ್ ಹಳ್ಳಿ ಬನ್ನೇರ್‌ಘಟ್ಟ ಬೆಂಗಳೂರು	೪೫	ಹರಕತಿಯಾ	ಗೃಹಿಣಿ	೨೭.೦೪.೦೨	೧.೩೦ ಮ.
ವೀರಭದ್ರಸ್ವಾಮಿ ಜಿ. ಸೂಪರಿಡೆಂಟ್ ಕೇಂದ್ರಬಂಧಿಖಾನೆ ಬಳ್ಳಾರಿ ೨೫೫೦೨೫ ದೂ. ೨೬೭೧೭೦	೪೫	ಚಲವಾದಿ	ಸರ್ಕಾರಿ ಅಧಿಕಾರಿ	೦೧.೦೩.೦೩	೧೧.೩೦ ಬೆ.

ವಿರೂಪಾಕ್ಷ ಜಿಲ್ಲಾ ಅಧಿಕಾರಿ (ಸಮಾಜ ಕಲ್ಯಾಣ ಇಲಾಖೆ) ಬಿಜಾಪೂರ್ ದೂ. [illegible] ಮನೆ [illegible] ಕಚೇರಿ	೩೫	ಕುರುಬರು	ಸರ್ಕಾರಿ ಕೆಲಸ	೦೬.೦೫.೦೨	೧೦.೩೦
ಏಕಾಶಿಬಾಯಿ ಕಾಂಗ್ರೆಸ್ ಕಾರ್ಯಕರ್ತೆ ಗೌತಂನಗರ್ ಹಕ್ಕಿಪಿಕ್ಕಿ ಕಾಲೋನಿ ಚಿಕ್ಕಮಟ್ಟಿ, ತಾ.ಜಿ. ಶಿವಮೊಗ್ಗ. ದೂ. ೨೩೬೦೯೧ ಮನೆ	೪೫	ಇಕೋತಿಯಾ	ಸಮಾಜ ಸೇವೆ	೨೭.೦೨.೦೩	೮.೩೦ ಸಂ
ಎಳವರಸಿ ಗಂಡ ವಿಕ್ರಮ್‌ರೆಡ್ಡಿ ಭದ್ರಾಪೂರ್ ಬಿಡದಿ ಬೆಂಗಳೂರು	೩೫	ಪವಾರ್	ಹ್ಯಾಂಡಿಕ್ರಾಫ್ಟ್ ವ್ಯಾಪಾರ	೨೭.೦೨.೦೩	೨.೩೦ ಮ.

ಪರಿಶಿಷ್ಟಗಳು

೧. ಅಂಕಿ-ಅಂಶಗಳ ಪಟ್ಟಿ

೨. ಛಾಯಾಚಿತ್ರಗಳು

ಅನುಬಂಧಗಳು ೧.೧ ಬಾಗಲಕೋಟೆ ಜಿಲ್ಲೆಯ ಪಾರ್ಧಿ ಬುಡಕಟ್ಟಿನ ಗ್ರಾಮವಾರು, ಲಿಂಗವಾರು ಜನಸಂಖ್ಯೆ ಮತ್ತು ವಯೋಗುಂಪುಗಳು

			ಜನಸಂಖ್ಯೆ			ವಯೋಗುಂಪು														
						೦ - ೪ ವರ್ಷ			೫ - ೧೭ ವರ್ಷ			೧೮ - ೪೦ ವರ್ಷ			೪೧ - ೬೦ ವರ್ಷ			೬೧ರ ಮೇಲ್ಪಟ್ಟು		
